ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು

# KARNATAKA LEGISLATIVE COUNCIL DEBATES

ಅಧಿಕೃತ ವರದಿ

## OFFICIAL REPORT

೧೩೧ ನೇ ಅಧಿವೇಶನ

## 131th SESSION

ಸಂಪುಟ–೪೪೬ ಕ್ರಮಾಂಕ (೨)

**Volume -446 (No. 2)**

( ೩ನೇ ಅಕ್ಟೋಬರ್ ೨೦೧೬)

**(3th  October 2016)**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು

**Karnataka Legislative Council Secretariat, Bangalore**

# ಕರ್ನಾಟಕ ವಿಧಾನ ಪರಿಷತ್ತು

**03 ನೇ ಅಕ್ಟೋಬರ್ 2016**
**ಸೋಮವಾರ**

## ವಿಷಯಾನುಕ್ರಮಣಿಕೆ


1. **ಕಾವೇರಿ ನದಿ ನೀರಿನ ಸಮಸ್ಯೆ ಬಗ್ಗೆ ಚರ್ಚೆ** **2-85**

ಡಾ||ಜಿ.ಪರಮೇಶ್ವರ್(ಸಭಾನಾಯಕರು)
ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
ಶ್ರೀ ಪುಟ್ಟಣ್ಣ
ಶ್ರೀ ರಾಮಚಂದ್ರಗೌಡ
ಶ್ರೀ ಎಸ್.ಆರ್.ಪಾಟೀಲ್
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ವಿ.ಸೋಮಣ್ಣ
ಶ್ರೀ ಐವನ್ ಡಿ'ಸೋಜಾ
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಎಂ.ಎ.ಗೋಪಾಲಸ್ವಾಮಿ
(ನಿರ್ಣಯ ಮಂಡಿಸಲಾಯಿತು)
ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)
**(ನಿರ್ಣಯ ಅಂಗೀಕರಿಸಲ್ಪಟ್ಟಿತು**

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, 03ನೇ ಅಕ್ಟೋಬರ್ 2016**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಮಧ್ಯಾಹ್ನ 12 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ರವರು ಪೀಠದಲ್ಲಿ ಉಪಸ್ಥಿತರಿದ್ದರು.**

***

(ಸದನವು 'ವಂದೇ ಮಾತರಂ' ಗೀತೆಯೊಂದಿಗೆ ಪ್ರಾರಂಭವಾಯಿತು.)

## 1. ಕಾವೇರಿ ನದಿ ನೀರಿನ ಸಮಸ್ಯೆ ಬಗ್ಗೆ ಚರ್ಚೆ

**ಡಾ:ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಕಳೆದ 23ನೇ ತಾರೀಖಿನಂದು ಸದನ ನಡೆದ ನಂತರ ಕಾವೇರಿ ವಿವಾದದ ಬಗ್ಗೆ ಅನೇಕ ಬೆಳವಣಿಗೆಗಳಾಗಿರುತ್ತವೆ. ಅವುಗಳೆಲ್ಲದರ ಕುರಿತು ಚರ್ಚೆ ಮಾಡುವ ಸಲುವಾಗಿ ಈ ಅಧಿವೇಶನವನ್ನು ಕರೆಯಲಾಗಿದೆ. ಈ ಚರ್ಚೆ ಪ್ರಾರಂಭ ಮಾಡುವುದಕ್ಕೆ ಮೊದಲು ನಾವೆಲ್ಲರೂ ಕೆಲವು ನಿಬಂಧನೆಗಳನ್ನು ಹಾಕಿಕೊಳ್ಳಬೇಕಾಗಿದೆ. ಅದರ ಹಿನ್ನೆಲೆಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರನ್ನು ಹಾಗೂ ಫ್ಲೋರ್ ಲೀಡರ್ಸ್‌ಗಳನ್ನು ತಮ್ಮ ಕಛೇರಿಗೆ ಕರೆದು ಅವರ ಜೊತೆಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿರುತ್ತದೆ. ಅದರ ಜೊತೆಗೆ ಇವತ್ತು ಬೆಳಿಗ್ಗೆ ಕೇಂದ್ರಸರ್ಕಾರದವರು ಸುಪ್ರೀಂ ಕೋರ್ಟಿನಲ್ಲಿ ಒಂದು ಪಿಟಿಶನ್ ಹಾಕಿದ್ದಾರೆ. ಆ ದಿವಸ Cauvery Management Board ಅನ್ನು ಮಾಡಬೇಕೆಂದು ಸುಪ್ರೀಂಕೋರ್ಟ್ ಆದೇಶ ಮಾಡಿತ್ತು, ಆ ದಿವಸ Attorney General ಅವರು ಆ ಆದೇಶಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸಿದ್ದರು. ಆದರೆ ಇವತ್ತು ಒಂದು ಪಿಟಿಶನ್ ಹಾಕಿ, ನಾನು ಆ ದಿವಸ ಮಾಡುವುದಕ್ಕೆ ಒಪ್ಪಿಕೊಂಡಿದ್ದು ತಪ್ಪಾಯಿತು, ಆದರೆ ಇವತ್ತು ಯಾವ ಕಾರಣಕ್ಕಾಗಿ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಚರ್ಚೆ ಮಾಡುತ್ತೇವೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಹೇಳಿ ಅವರು ಪಿಟಿಶನ್ ಹಾಕಿದ್ದಾರೆ. ಅದು ನಾಳೆ ದಿವಸ ಬರುತ್ತಿದೆ. ಈ ಮಧ್ಯೆ ರಾಜ್ಯಸರ್ಕಾರದ ಅಡ್ವೋಕೇಟ್‌ಗಳು ಸಹ ಪಿಟಿಶನ್ ಹಾಕಿದ್ದಾರೆ. ನಾವು ಯಾವುದೇ ಕಾರಣಕ್ಕೂ Cauvery Management Board ಅನ್ನ ಮಾಡಬಾರದು ಮತ್ತು ಅದರ ಜೊತೆಗೆ ಒಂದು review petition, ತಾವೇನು 30ನೇ ತಾರೀಖು ಮಾಡಿರುವಂತಹ ಆದೇಶವನ್ನು ಕೂಡ review ಮಾಡಬೇಕೆಂದು ಇವತ್ತು ಪಿಟಿಶನ್ ಹಾಕಿದ್ದಾರೆ ಅದು ನಾಳೆ ಬರುತ್ತಿದೆ. ಹಾಗಾಗಿ ಮಾನ್ಯ ಪ್ರಧಾನ ಮಂತ್ರಿಗಳಿಗೂ ಕೂಡ ಈ ಸಂದರ್ಭದಲ್ಲಿ ನಾನು ಅಭಿನಂದನೆಯನ್ನು ಸಲ್ಲಿಸಲೇ ಬೇಕಾಗುತ್ತದೆ. ಅದರ ಜೊತೆ ಜೊತೆಯಾಗಿ ನಿನ್ನೆ ದಿವಸ ಮಾಜಿ ಪ್ರಧಾನ ಮಂತ್ರಿಗಳಾಗಿದ್ದಂತಹ ಮಾನ್ಯ ಹೆಚ್.ಡಿ.ದೇವೇಗೌಡರು ವಿಧಾನಸೌಧದ ಬಳಿ ಇರುವಂತಹ ಗಾಂಧಿ ಪ್ರತಿಮೆಯ ಮುಂದೆ ಉಪವಾಸ ಸತ್ಯಾಗ್ರಹ ಮಾಡಿ, ಇಡೀ ರಾಜ್ಯದ ಮತ್ತು ಕೇಂದ್ರ ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಿದರು. ಬಹುಶಃ ಅದೂ ಸಹ ಎಲ್ಲೋ ಒಂದು ಕಡೆ ಮಾನ್ಯ ಪ್ರಧಾನ ಮಂತ್ರಿಗಳು ತೆಗೆದುಕೊಳ್ಳುವಂತಹ ತೀರ್ಮಾನ, ಕೇಂದ್ರ ಸರ್ಕಾರ ತೆಗೆದುಕೊಳ್ಳುವಂತಹ ತೀರ್ಮಾನಕ್ಕೆ ಬಹುಶಃ ಸಹಾಯ ಆಗಿರಬಹುದು ಎಂದು ನಾನು ಅಂದುಕೊಳ್ಳುತ್ತೇನೆ. ಹಾಗಾಗಿ ಅವರಿಗೂ ಸಹ ಈ ಸಂದರ್ಭದಲ್ಲಿ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ಇದು ರಾಜ್ಯದ ವಿಚಾರ. ರಾಜ್ಯದ ನೀರಿನ ವಿಚಾರ ಮತ್ತು ಅದನ್ನು ನಾವು ಯಾವ ರೀತಿ ಪಕ್ಷಾತೀತವಾಗಿ ಒಂದು ನಿರ್ಣಯ ಮಾಡಿ, ಇಡೀ ದೇಶಕ್ಕೆ ಒಂದು ಸಂದೇಶವನ್ನು ಕೊಡುವಂತಹ ರೀತಿಯಲ್ಲಿ ನಾವೆಲ್ಲರೂ ಸೇರಿ ಒಟ್ಟಾಗಿ ನಿರ್ಣಯ ಮಾಡಿದ್ದೇವೆ, ಆ ಕಾರಣಕ್ಕಾಗಿ ಇವತ್ತು ನಾವು ಪಕ್ಷಾತೀತವಾಗಿ ಮಾನ್ಯ ಪ್ರಧಾನ ಮಂತ್ರಿಗಳಿಗಿರಬಹುದು, ಮಾನ್ಯ ಹೆಚ್.ಡಿ.ದೇವೇಗೌಡರಿಗೆ ಇರಬಹುದು ಅಭಿನಂದನೆಯನ್ನು ಸಲ್ಲಿಸಬೇಕಾದುದು ನಮ್ಮೆಲ್ಲರ ಕರ್ತವ್ಯ ಎಂದು ನಾನು ಭಾವಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದ್ದಾರೆ. ಸದನವನ್ನು 15-20 ನಿಮಿಷ ಮುಂದಕ್ಕೆ ಹಾಕಿ ತಾವು ಚರ್ಚೆ ಮಾಡಿ ಆನಂತರ ಸಂಪೂರ್ಣವಾದ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅದಕ್ಕೂ ಮೊದಲು 23ನೇ ತಾರೀಖೀನಿಂದ ಇಲ್ಲಿಯವರೆಗೆ ಏನೆಲ್ಲಾ ಕೆಲಸವನ್ನು ಸರ್ಕಾರ ಮಾಡಿದೆ ಎನ್ನುವುದನ್ನು ಸಹ ನಾನು ಸದನದ ಗಮನಕ್ಕೆ ತರುತ್ತೇನೆ. ಆನಂತರ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ವಿಷಯವೇನೆಂದರೆ, ಇವತ್ತು ಯಾವ ಕಾರಣಕ್ಕಾಗಿ ಸಭೆಯನ್ನು ಕರೆದಿದ್ದೇವೆ ಎಂಬ ವಿಷಯವನ್ನು ತಮಗೆಲ್ಲರಿಗೂ ತಿಳಿಸಲಾಗಿದೆ. ಕಾವೇರಿ ನದಿ ನೀರಿನ ಸಮಸ್ಯೆ ಬಗ್ಗೆ ಚರ್ಚೆ. ಬಹಳ ಸೂಕ್ಷ್ಮವಾಗಿ ವಿಷಯಗಳು ಮಂಡನೆ ಆಗಬೇಕು, ಚರ್ಚೆ ಆಗಬೇಕು, ನಿರ್ಣಯ ಆಗಬೇಕು, ರಾಜ್ಯದ ಹಿತ ಕಾಪಾಡುವುದಕ್ಕೆ ನಾವೆಲ್ಲರೂ ಒಂದೇ ಮನಸ್ಸಿನಿಂದ ಮಾತನಾಡಬೇಕಾಗುತ್ತದೆ, ಚರ್ಚೆಯನ್ನು ಮಾಡಬೇಕಾಗುತ್ತದೆ, ತೀರ್ಮಾನಗಳನ್ನು ಮಾಡಬೇಕಾಗುತ್ತದೆ. ಹಾಗಾಗಿ ಕೇವಲ ಚರ್ಚೆ ಎಂದು ಮಾಡುವ ಬದಲು ತೀರ್ಮಾನ ಏನಾದರು ಮಾಡಬೇಕಾಗುತ್ತದೆ. ಏನು ತೀರ್ಮಾನ ಮಾಡಬೇಕು ಎನ್ನುವುದನ್ನು ಸಭೆ ನಡೆಯುತ್ತಿರುವಾಗ ತಾನಾಗಿ ತಾನು evolve ಆದರೆ ಬಹಳ ಒಳ್ಳೆಯದು. ಆದರೆ ಅದು ಬಹಳ ಕಷ್ಟದ ಕೆಲಸ. ಹಾಗಾಗಿ ಸದನವನ್ನು ಸ್ವಲ್ಪ ಹೊತ್ತು ಮುಂದೂಡಿ ನಡೆದಿರುವಂತಹ ಕೆಲವೊಂದು ....

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾ ನಾಯಕರೆ, ಕಳೆದ ಬಾರಿ ಇಡೀ ಕರ್ನಾಟಕ ರಾಜ್ಯ ನೋಡುತ್ತಿರುವಂತಹ ಸಂದರ್ಭದಲ್ಲಿ ನಾವೆಲ್ಲರೂ ಒಟ್ಟಾಗಿ ಸೇರಿಕೊಂಡು ವಿಧಾನ ಮಂಡಲ ಅಧಿವೇಶನವನ್ನು ಕರೆಯುವಂತಹ ಸಂದರ್ಭದಲ್ಲಿ ತಾವು ಜಂಟಿ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯನ್ನು ಕರೆದು, ಅಲ್ಲಿ ಚರ್ಚೆ ಮಾಡಿ, ನಾವು ಐದೈದು ನಿಮಿಷ ಮಾತನಾಡಿದರೆ ಸಾಕು ಎಂಬ ತೀರ್ಮಾನವನ್ನು ಮಾಡಿದೆವು. ಇವತ್ತು ಏಕೆ ಸರ್ಕಾರ ಸ್ವಲ್ಪ ಹಿಂದೇಟು ಹಾಕಿತು ಎಂಬುದು ನನಗೆ ಗೊತ್ತಿಲ್ಲ. ನಾನು ಏಕೆ ಈ ವಿಷಯವನ್ನು ಕೇಳುತ್ತಿದ್ದೇನೆ ಎಂದರೆ, ಇವತ್ತು ಸಹ ಆ ದಿವಸ ಮಾಡಿದಂತೆ ಮಾಡಬಹುದಾಗಿತ್ತು. ಅಧಿವೇಶನ ನಡೆಯುವುದಕ್ಕಿಂತ ಮುಂಚೆಯೇ ಜಂಟಿ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಕರೆದು ಒಟ್ಟಿಗೆ ಚರ್ಚೆ ಮಾಡಿ, ಏನು ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡು ಆ ರೀತಿ ಮಾಡಬಹುದಾಗಿತ್ತು. ಈಗಾಗಲೇ ಸಮಯ 12 ಗಂಟೆ 15 ನಿಮಿಷ ಆಗಿದೆ. ಎಲ್ಲರೂ ಚರ್ಚೆ ಮಾಡುವುದಕ್ಕೆ ಪೂರ್ಣ ಅವಕಾಶ ಕೊಡಬಹುದಾಗಿತ್ತು. ನೀವು ಬೆಳಿಗ್ಗೆ 10.00 ಗಂಟೆಗೆ ಜಂಟಿ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆ ಕರೆದಿದ್ದರೆ ಬಹಳ ಸುಲಭವಾಗಿ ಮಾತನಾಡಿಕೊಂಡು ನಾವು ಸಾಕಷ್ಟು ಸಮಯವನ್ನು ಉಳಿಸಬಹುದಾಗಿತ್ತು. ಸಾಕಷ್ಟು ಚರ್ಚೆಗಳನ್ನು ಮಾಡಬಹುದಾಗಿತ್ತು, ಸರ್ಕಾರಕ್ಕೂ ಸಹ ಬೆಳಕನ್ನು ಚೆಲ್ಲಬಹುದಾಗಿತ್ತು. ಏತಕ್ಕೋಸ್ಕರ ಈಗ ಸದನವನ್ನು ಕರೆದು ಪುನಃ ಸದನವನ್ನು ಮುಂದೂಡಿ, ಪುನಃ ಸದನ ಸೇರುವುದು ಏಕೆ ಎಂದು ನನಗಂತೂ ಅರ್ಥವಾಗುತ್ತಿಲ್ಲ.

**ಡಾ॥ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಏನು ಹಿಂದಕ್ಕೆ ಹೋಗುತ್ತಿಲ್ಲ. ಚರ್ಚೆ ಮಾಡಬೇಕು ಎನ್ನುವ ಕಾರಣಕ್ಕೋಸ್ಕರವೇ ಇವತ್ತು ಅಧಿವೇಶನವನ್ನು ಕರೆದಿರುವುದು. ಇದರಲ್ಲಿ ಹಿಂದಕ್ಕೆ ಹೋಗುವಂತಹ ಪ್ರಶ್ನೆಯೇ ಬರುವುದಿಲ್ಲ. ಆದರೆ ಕೆಲವೊಂದು ವಿಚಾರದಲ್ಲಿ ನಮ್ಮ ಇತಿ–ಮಿತಿಗಳನ್ನು ಹಾಕಿಕೊಳ್ಳಬೇಕೆಂದು ಕೆಳಗಿನ ಮನೆಯಲ್ಲಿಯೂ ಸಹ ಮಾನ್ಯ ಸಭಾಧ್ಯಕ್ಷರು ಸದನವನ್ನು ಮುಂದೂಡಿ, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹಾಗೂ ಎಲ್ಲಾ ಪಕ್ಷದ ಮುಖಂಡರುಗಳನ್ನು ಸಭೆಗೆ ಕರೆದಿದ್ದಾರೆ. ನಾವೂ ಕೂಡ ಅದೇ ರೀತಿ ಒಂದಷ್ಟು ನಿಬಂಧನೆಗಳನ್ನು ಹಾಕಿಕೊಳ್ಳಬೇಕೆಂದು, ಅದನ್ನು ನಾವು ಸದನದಲ್ಲಿ ಚರ್ಚೆ ಮಾಡುವುದಕ್ಕಿಂತ ಮಾನ್ಯ ಸಭಾಪತಿಯವರ ಜೊತೆಯಲ್ಲಿ ಅವರ ಕೊಠಡಿಯಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದಷ್ಟು ಬಿಟ್ಟರೆ ಇದರಲ್ಲಿ ಬೇರೆ ಯಾವುದೇ ಸರ್ಕಾರಕ್ಕೆ ಮುಜುಗರವಾಗಲಿ ಅಥವಾ ಚರ್ಚೆ ಮಾಡಬಾರದು ಎನ್ನುವಂತಹ ಯಾವುದೇ ವಿಚಾರವಿಲ್ಲ. ಮುಚ್ಚಿಡುವಂಥದ್ದು ಯಾವುದು ಇಲ್ಲ. ಅದಕ್ಕಾಗಿ ತಾವು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನನ್ನ point ಏನೆಂದರೆ, ಮಾನ್ಯ ಸಭಾ ನಾಯಕರು ಹೇಳಿದಂತಹ ಮಾತುಗಳನ್ನು ನಾನು ನೂರಕ್ಕೆ ನೂರರಷ್ಟು ಒಪ್ಪುತ್ತೇನೆ. ಕಾವೇರಿ ವಿಚಾರದಲ್ಲಿ ಕರ್ನಾಟಕ ರಾಜ್ಯ ಒಂದಾಗಿದೆ, ಅದಕ್ಕೋಸ್ಕರ ನಾವು ಇವತ್ತಿನ ದಿವಸ ಬದುಕಿದ್ದೇವೆ.

ಇಲ್ಲವೆಂದರೆ, ಇಲ್ಲಿಯೂ ನಾವು ರಾಜಕಾರಣ ಮಾಡಿಕೊಂಡಿದ್ದರೆ ಖಂಡಿತ ನಾವು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದೆವು. ನನ್ನ point ಅದಲ್ಲ, ಇವತ್ತು ನೀವು ಹೇಗಿದ್ದರೂ ವಿಶೇಷ ಅಧಿವೇಶನವನ್ನು ಕರೆದಿದ್ದೀರಿ. ಇಂತಹ ಸಂದರ್ಭದಲ್ಲಿ ಈ ರೀತಿ ವಿಶೇಷ ಅಧಿವೇಶನವನ್ನು ಏಕೆ ಕರೆದಿದ್ದಾರೆ ಎಂಬುದು ನಮಗೂ ಕೂಡ ಗೊತ್ತಿಲ್ಲ. ಈಗ ಸದನವನ್ನು ಪ್ರಾರಂಭ ಮಾಡಿ, ಪುನಃ ಸದನವನ್ನು ಮುಂದೂಡಿ, ಪುನಃ ಸದನ ಸೇರುವುದು ಸರಿಯಷ್ಟೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಇದರ ಬದಲು ಇವತ್ತು ಬೆಳಿಗ್ಗೆ 10.00 ಗಂಟೆಗೆ ಜಂಟಿ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆ ಕರೆದಿದ್ದರೆ ಅಲ್ಲಿಯೇ ಚರ್ಚೆಮಾಡಿಕೊಂಡು 11.00 ಗಂಟೆಗೆ ಸದನವನ್ನು ಪ್ರಾರಂಭ ಮಾಡಬಹುದಾಗಿತ್ತು. ಆದರೆ ಏಕೆ ಈ ರೀತಿ ಮಾಡಿದಿರಿ ಎಂಬುದು ಗೊತ್ತಾಗುತ್ತಿಲ್ಲ. ಕಳೆದ ಬಾರಿ ಮಾಡಿದಂತೆಯೇ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆ ಕರೆದಿದ್ದರೆ ಕುಳಿತು ಚರ್ಚೆ ಮಾಡಿಕೊಂಡು ಇಷ್ಟೊತ್ತಿಗೆ ನಾವು ಸುಮಾರು ಒಂದೂವರೆಗಂಟೆಗಳ ಕಾಲ ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಬಹುದಾಗಿತ್ತು. ಸಮಯ ಏಕೆ ವ್ಯರ್ಥ ಮಾಡಿದಿರಿ ಎಂದು ನನಗೆ ನೋವಾಗಿದೆ ವಿನಾ ಬೇರೇನು ಕಾರಣವಲ್ಲ.

**ಡಾ॥ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಚರ್ಚೆಗೆ ನಾವೇನು restrictions ಹಾಕುತ್ತಿಲ್ಲ. ಅದಕ್ಕೋಸ್ಕರ ಕೆಲವು ವಿಚಾರಗಳಲ್ಲಿ...

**ಶ್ರೀ ಕೆ.ಎಸ್.ಈಶ್ವರಪ್ಪ:–** ಹಾಗಾದರೆ ಈಗ ಅವರು ಬೇರೆ ಚರ್ಚೆ ಮಾಡುವುದು, ನಾವು ಬೇರೆ ಚರ್ಚೆ ಮಾಡುವುದಾ?

**ಡಾ॥ಜಿ.ಪರಮೇಶ್ವರ್:–** ಈಗಾಗಲೇ ಕೆಳಮನೆಯಲ್ಲಿ ಮಾಡಿದ್ದಾರೆ. ಅದಕ್ಕೋಸ್ಕರವೇ ಈಗ ನಾವು 12.00 ಗಂಟೆಗೆ ಚರ್ಚೆ ಮಾಡಬಹುದು ಎಂಬುದಷ್ಟೆ ವಿಷಯ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾ ನಾಯಕರೆ, ದಯವಿಟ್ಟು ನಾನು ಹೇಳುವಂತಹ ಮಾತುಗಳನ್ನು ಗಮನಿಸಿ. ನಮ್ಮದೇನು ಅಭ್ಯಂತರವಿಲ್ಲ. ಈಗ ಕಾವೇರಿ ವಿಚಾರದಲ್ಲಿ ಯಾವ ಕಾರಣಕ್ಕೂ ನಾವು ಹಿಂದೆ ಮುಂದೆ ನೋಡುವುದಿಲ್ಲ, ನಾವು ಎಷ್ಟರ ಮಟ್ಟಿಗೆ ಸರ್ಕಾರದ ಜೊತೆ ಇದ್ದೇವೆ, ಇದನ್ನು ನೀವು ಪೂರ್ಣ ಒಪ್ಪುತ್ತೀರೆಂದು ಭಾವಿಸುತ್ತೇನೆ. ಯಾವ ವಿಚಾರದಲ್ಲಿಯೂ ಸಹ ರಾಜಕಾರಣದ ಪ್ರಶ್ನೆ ಇಲ್ಲ. ಆದರೆ ಇಲ್ಲಿರುವಂತಹ ಪ್ರಶ್ನೆ ಏನೆಂದರೆ, ಸದನವನ್ನು ಹೇಗಿದ್ದರೂ ಕರೆದಿದ್ದೀರಿ, ಆ ದಿವಸ ಕರೆದಂತೆ ಬೆಳಿಗ್ಗೆ 10.00 ಗಂಟೆಗೆ ಜಂಟಿ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆ ಕರೆದಿದ್ದರೆ ಆ ಸಭೆಯಲ್ಲಿ ಅವರು ಏನೇನು ಹೇಳುತ್ತಾರೆ ಎಂದು ಅಲ್ಲಿಯೂ ನಮಗೆ ಒಂದಿಷ್ಟು ಮಾಹಿತಿ ಸಿಗುತ್ತಿತ್ತು. ಅದೇ ರೀತಿ ನಾವು ಹೇಳುವಂತಹ ವಿಷಯದಲ್ಲಿ ಅವರಿಗೂ ಒಂದಷ್ಟು ಮಾಹಿತಿ ಸಿಗುತ್ತಿತ್ತು. ಒಟ್ಟಿಗೆ ಒಂದು ತೀರ್ಮಾನ ಮಾಡಿಕೊಂಡು ಹೋಗಬಹುದಾಗಿತ್ತು. ಈಗ ಪುನಃ ನಾವು ಪ್ರತ್ಯೇಕವಾಗಿ ಸಭೆ ಸೇರಿ ಚರ್ಚೆ ಮಾಡುವಂಥದ್ದು ಎಷ್ಟರ ಮಟ್ಟಿಗೆ ಸೂಕ್ತ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದೇನೆಂದರೆ, ಜಂಟಿ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯನ್ನು ಸದನ ಪ್ರಾರಂಭವಾಗುವುದಕ್ಕೆ ಮೊದಲೆ ಬೆಳಿಗ್ಗೆ 10.00 ಗಂಟೆಗೆ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ಹೇಳುತ್ತಿದ್ದಾರೆ. ಆದರೆ ಅದು ಆಗಲಿಲ್ಲ. ಆದರೆ ಈಗಲೂ ಏನು ತೊಂದರೆ ಇಲ್ಲ. ಏಕೆಂದರೆ ಇದು ಅತ್ಯಂತ ಸೂಕ್ಷ್ಮವಾದಂತಹ ವಿಷಯವಾಗಿರುವುದರಿಂದ ನಾವೆಲ್ಲರೂ ಒಟ್ಟಿಗೆ ಸೇರಿ ತೀರ್ಮಾನ ಮಾಡಬೇಕು. ನಮಗೂ ಸಹ ಇತಿ–ಮಿತಿಯನ್ನು ಹಾಕಿಕೊಳ್ಳಬೇಕು. ಈಗ ನೀವೇನೋ ಇತಿ–ಮಿತಿಯಾಗಿ ಮಾತನಾಡುತ್ತೀರಿ, ಆದರೆ ಆ ವಿಷಯ ನನಗೆ ಗೊತ್ತಿರಬೇಕಲ್ಲವೆ? ಇನ್ನೊಬ್ಬರಿಗೂ ಸಹ

ಗೊತ್ತಿರಬೇಕಲ್ಲವೆ? ಆದುದರಿಂದ ಆದಷ್ಟು ಬೇಗ ಸಭೆಯನ್ನು ಕರೆದು ಚರ್ಚೆ ಮಾಡುವುದು ಒಳ್ಳೆಯದು.

**ಸಭಾಪತಿಯವರು:–** ಒಟ್ಟಿಗೆ ಕರೆಯುವಂತಹ ಅಧಿಕಾರ ನಮಗೆ ಇಲ್ಲ.

**ಡಾ||ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಇದೇನೋ ಒಂದು technical ವಿಚಾರ ಇರಬಹುದು. ಇದೇನು ಅಂತಹ ದೊಡ್ಡ ವಿಚಾರ ಎಂದು ನನಗಂತೂ ಅನ್ನಿಸುವುದಿಲ್ಲ. ನಿಮಗೆ ಯಾವುದಾದರು ರಿಸ್ಟ್ರಿಕ್ಷನ್ಸ್ ಮಾಡಿದ್ದರೆ, ಅಂದರೆ, ನೀವು ಮಾತನಾಡಬೇಡಿ ಎಂದು ಮಾಡಿದ್ದರೆ, ಚರ್ಚೆ ಮಾಡಬೇಡಿ ಎಂದು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕೆಲವೊಂದು ಸೂಕ್ಷ್ಮ ವಿಚಾರಗಳಿವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಹೇಳುವುದೇನೆಂದರೆ, ಒಟ್ಟಿಗೆ ಜಂಟಿ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಕರೆದಿದ್ದರೆ ಚೆನ್ನಾಗಿರುತ್ತಿತ್ತು.

**ಡಾ||ಜಿ.ಪರಮೇಶ್ವರ್:–** ಆ ರೀತಿ ಮಾಡಬಹುದಾಗಿತ್ತು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ನಿರ್ಣಯ ಮಾಡುವಾಗ..

**ಡಾ||ಜಿ.ಪರಮೇಶ್ವರ್:–** ನಿರ್ಣಯ ಮಾಡುವಾಗ ಮಾಡೋಣ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ನಿರ್ಣಯ ಮಾಡುವಾಗ ಅವರು ನಾವೆಲ್ಲರೂ ಸೇರಿ ಒಂದು ನಿರ್ಣಯ ಮಾಡೋಣ. ಆದರೆ ಕಾವೇರಿ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಯಾವ ಯಾವ ಅಂಶಗಳು ಇವೆ, ಯಾವ ಅಂಶಗಳು ಬಿಟ್ಟು ಹೋಗಿವೆ, ಯಾವ ಅಂಶಗಳನ್ನು ಸೇರಿಸಿದರೆ ಅನುಕೂಲವಾಗುತ್ತದೆ, ಇದು ಕಾನೂನುಬದ್ಧವಾಗಿ ಇದೆಯೇ, ಅಥವಾ ಕಾನೂನುಬದ್ಧವಾಗಿ ಇಲ್ಲವೆ ಎನ್ನುವಂತಹ ಅನೇಕ ವಿಚಾರಗಳನ್ನು ನಾವು ರಾಜ್ಯದ ಜನತೆಯ ಗಮನಕ್ಕೆ ತರಬೇಕಾಗಿದೆ. ಅದಕ್ಕಾಗಿಯೇ ಮಾತಿನ ಅವಶ್ಯಕತೆ ಇದೆ. ನೀವು ಏನು ಬೇಕಾದರು ತೀರ್ಮಾನ ಮಾಡಿ. ನಾವು ನಿಮ್ಮ ಜೊತೆಯಲ್ಲಿ ಇರುತ್ತೇವೆ. ಆದುದರಿಂದ ತೀರ್ಮಾನವೇ ಬೇರೆ, ಮಾತುಕತೆಯೇ ಬೇರೆ. ಇವತ್ತು ಅನೇಕ ಅಂಶಗಳಿವೆ. ಇವತ್ತು ಉದಾರಣೆಗೆ ಹೇಳಬೇಕೆಂದರೆ, ಅಲ್ಲಿಯ ಒಬ್ಬ ಅಡ್ವೋಕೇಟ್‌ರವರು ಬೆಂಗಳೂರಿಗೆ ಏಕೆ ನೀರು ಕೊಡಬೇಕೆಂದು ಕೇಳುತ್ತಾರೆ. ಅಂತಹ ವಿಷಯಗಳ ಬಗ್ಗೆ ನಾವು ಮಾತನಾಡಬೇಕಲ್ಲವೆ?

**ಡಾ||ಜಿ.ಪರಮೇಶ್ವರ್:–**ಮಾನ್ಯ ಸಭಾಪತಿಯವರೇ, ಇಂತಹ ವಿಚಾರಗಳನ್ನು ಮಾತನಾಡುವುದಕ್ಕಾಗಿಯೇ ನಾವು ಒಂದು ಚೌಕಟ್ಟು ಹಾಕಿಕೊಳ್ಳಬೇಕು. There are guidelines ಅದಕ್ಕೋಸ್ಕರ ನಾವು ನಾವೇ ಚರ್ಚೆ ಮಾಡಿಕೊಳ್ಳುವಂಥದ್ದಲ್ಲ. ಸ್ವಲ್ಪ ಮಟ್ಟಿಗೆ ನಾವು ಇತಿಮಿತಿಯನ್ನು ತೀರ್ಮಾನ ಮಾಡಿಕೊಳ್ಳಬೇಕು ಎಂಬುದಷ್ಟೇ ಇರುವಂತಹ ವಿಚಾರ.

**ಶ್ರೀ ರಾಮಚಂದ್ರಗೌಡ:–** ಬೆಂಗಳೂರಿಗೆ ಕುಡಿಯುವುದಕ್ಕೆ ನೀರು ಏಕೆ ಕೊಡಬೇಕೆಂದು ಕೇಳಿದರೆ ಅದಕ್ಕೆ ನಾವು ನೀರು ಏಕೆ ಕೊಡಬೇಕೆಂದು ಉತ್ತರ ಕೊಡಬೇಕಲ್ಲವೆ? ನಾವು ಬೆಂಗಳೂರಿನ ನಿವಾಸಿಗಳಾಗಿ ಕಾವೇರಿ ಜಲಾನಯನ ಪ್ರದೇಶದ ಜನರಾಗಿ ನಾವು ಉತ್ತರ ಕೊಡಬೇಕಲ್ಲವೆ?

**ಡಾ.ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ನಿರ್ಣಯ ಮಾಡುವಾಗ ಮಾಡೋಣ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಿರ್ಣಯವನ್ನು ಮಾಡುವಾಗ, ಅವರು ಮತ್ತು ನಾವೆಲ್ಲರೂ ಸೇರಿ ಒಂದು ನಿರ್ಣಯವನ್ನು ಮಾಡೋಣ, ಆದರೆ ಕಾವೇರಿಯ ಬಗ್ಗೆ ಮಾತನಾಡುವುದಕ್ಕೆ ಯಾವ್ಯಾವ ಅಂಶಗಳು ಇದ್ದಾವೆ, ಯಾವ ಅಂಶಗಳು ಬಿಟ್ಟು ಹೋಗಿವೆ, ಯಾವ ಅಂಶಗಳನ್ನು ಸೇರಿಸಿದರೆ ಅನುಕೂಲವಾಗುತ್ತದೆ, ಇದು ಕಾನೂನು

ಬದ್ಧವಾಗಿದೆಯೇ ಅಥವಾ ಕಾನೂನು ಬದ್ಧವಾಗಿಲ್ಲವೇ ಎಂಬ ಅನೇಕ ವಿಚಾರಗಳನ್ನು ನಾವು ರಾಜ್ಯದ ಜನತೆಯ ಗಮನಕ್ಕೆ ತರಬೇಕಾಗಿದೆ. ಅದಕ್ಕಾಗಿಯೇ ಮಾತಿನ ಅವಶ್ಯಕತೆ ಇದೆ. ನೀವು ಏನು ಬೇಕಾದರೂ ತೀರ್ಮಾನವನ್ನು ಮಾಡಿ. ನಾವು ನಿಮ್ಮ ಜೊತೆಯಲ್ಲಿರುತ್ತೇವೆ. ಆದುದರಿಂದ ತೀರ್ಮಾನವೇ ಬೇರೆ, ಅದರ ಮಾತುಕತೆಯೇ ಬೇರೆ, ಇವತ್ತು ಅನೇಕ ಅಂಶಗಳು ಇದ್ದಾವೆ. ಒಂದು ಉದಾಹರಣೆ ಬಗ್ಗೆ ಹೇಳುತ್ತೇನೆ. ಅಲ್ಲಿಯ ಒಬ್ಬ ಅಡ್ವೋಕೇಟ್ ಬೆಂಗಳೂರಿಗೆ ಏಕೆ ನೀರು ಕೊಡಬೇಕು ಎಂದು ಹೇಳುತ್ತಾರೆ. ಅಂತಹ ವಿಚಾರಗಳನ್ನು ನಾವು ಇಲ್ಲಿ ಮಾತನಾಡಬೇಕಾಗುತ್ತದೆ.

**ಡಾ.ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ಇಂತಹ ವಿಚಾರಗಳನ್ನು ಮಾತನಾಡುವುದಕ್ಕೆ ನಾವು ಒಂದು ಚೌಕಟ್ಟು ಹಾಕಿಕೊಂಡಿದ್ದೇವೆ, ಅದಕ್ಕೋಸ್ಕರ ಖುಜಡಿಜ ಜಿಡಿಜ ಠಹುಜಜಟುಟಿಥ ಅದನ್ನು ನಾವು ನಾವೇ ಮಾಡಿಕೊಳ್ಳುವಂತಹದ್ದಲ್ಲ, ಸ್ವಲ್ಪ ಮಟ್ಟಿಗೆ ಇತಿಮಿತಿಯನ್ನು ನಾವು ತೀರ್ಮಾನ ಮಾಡಿಕೊಳ್ಳಬೇಕಾಗುತ್ತದೆ ಎನ್ನುವಂತದ್ದು ಅಷ್ಟೆ.

**ಶ್ರೀ ರಾಮಚಂದ್ರಗೌಡ:–** ಬೆಂಗಳೂರಿಗೆ ಕುಡಿಯಲಿಕ್ಕೆ ನೀರು ಕೊಡಬಾರದು ಎಂದು ಹೇಳಿದರೆ, ಅದಕ್ಕೆ ನಾವು ಏಕೆ ಎಂದು ಉತ್ತರ ಕೊಡಬೇಕಾಗುತ್ತದೆ. ನಾವು ಬೆಂಗಳೂರಿನ ವಾಸಿಗಳಾಗಿ, ಕಾವೇರಿ ಜಲಾನಯನದ ಪ್ರದೇಶದ ಜನರಿಗೆ ನಾವು ಉತ್ತರ ಕೊಡಬೇಕಾಗುತ್ತದೆ.

**ಸಭಾಪತಿಗಳು:–** ಈಗ ಅದರ ಬಗ್ಗೆ ಚರ್ಚೆ ಮಾಡುವುದಕ್ಕಾಗಿಯೇ ನಾವು ಇಲ್ಲಿ ಸೇರಿದ್ದೇವೆ. ಚರ್ಚೆ ಮಾಡುವುದಕ್ಕೆ ಅವಕಾಶಗಳನ್ನು ಕೊಡೋಣ, ಚರ್ಚೆಗಳನ್ನು ಯಾವ ಮಟ್ಟದಲ್ಲಿ ಮಾಡಬೇಕು, ಎಷ್ಟು ಜನ ಸದಸ್ಯರಿಗೆ ಅವಕಾಶ ಕೊಡಬೇಕು, ಎಷ್ಟರತನಕ ನಡೆಸಬೇಕು ಎಂಬುದರ ಬಗ್ಗೆ ನಾವು ಇಲ್ಲಿ ಸದನದಲ್ಲಿ ತೀರ್ಮಾನ ಮಾಡುವುದಕ್ಕೆ ಕಷ್ಟವಾಗುತ್ತದೆ. ಹಾಗಾಗಿ ಎಲ್ಲಾ ತಂಡದ ನಾಯಕರುಗಳನ್ನು ನನ್ನ ಚೇಂಬರ್‌ಗೆ ನಾನು ಕರೆಯುತ್ತಿದ್ದೇನೆ, ಸದನವನ್ನು ಸುಮಾರು 30 ರಿಂದ 35 ನಿಮಿಷಗಳ ಕಾಲ ಮುಂದೂಡಿದ್ದೇನೆ.

(ಮದ್ಯಾಹ್ನ 12 ಗಂಟೆ 21 ನಿಮಿಷಕ್ಕೆ ಸದನವನ್ನು 35 ನಿಮಿಷಗಳ ಕಾಲ ಮುಂದೂಡಲಾಯಿತು)

**(ಸದನವು ಮಧ್ಯಾಹ್ನ 12 ಗಂಟೆ 55 ನಿಮಿಷಕ್ಕೆ ಪುನಃ ಪ್ರಾರಂಭಗೊಂಡಿತು. ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

**ಸಭಾಪತಿಯವರು:–** ನನ್ನ ಕೊಠಡಿಯಲ್ಲಿ ಎಲ್ಲಾ ಫ್ಲೋರ್ ಲೀಡರ್ಸ್‌ಗಳನ್ನು ಕರೆದು ಒಂದು ಸಣ್ಣ ಚರ್ಚೆಯನ್ನು ಮಾಡಿದ ಹಿನ್ನೆಲೆಯಲ್ಲಿ ಅಲ್ಲಿ ನಮಗೆ ನಾವೇ ತೀರ್ಮಾನ ಮಾಡಿಕೊಂಡಿರುವ ಎರಡು ಸಂಗತಿಗಳನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಸರ್ಕಾರ ಮುಂದೆ ಏನು ಮಾಡಬೇಕೆಂದು ಮಾರ್ಗದರ್ಶನ ಅಥವಾ ಸೂಚನೆಯನ್ನು ಕೊಡತಕ್ಕ ಅಧಿಕಾರ ವಿಧಾನಮಂಡಲಕ್ಕೆ ಇರುವ ಹಿನ್ನೆಲೆಯಲ್ಲಿ ಇವತ್ತಿನ ವಿಧಾನಮಂಡಲದ ಅಧಿವೇಶನ ಸೇರಿದೆ. ಸರ್ಕಾರ ಮುಂದೆ ಏನು ಮಾಡಬೇಕೆನ್ನುವಾಗ ಪರಿಸ್ಥಿತಿಯ ಅವಲೋಕನವನ್ನು ಮಾಡಬೇಕಾಗುತ್ತದೆ. ಇರುವ ಪರಿಸ್ಥಿತಿಯ ಬಗ್ಗೆ ನಮ್ಮ ಅನಿಸಿಕೆಗಳನ್ನು ಹೇಳಬೇಕಾಗುತ್ತದೆ. ಆದರೆ ನಮ್ಮ ಅನಿಸಿಕೆಗಳನ್ನು ಹೇಳುವಾಗ ಇದು ಬಹಳ ಸೂಕ್ಷ್ಮವಾದ ವಿಚಾರ. ಏಕೆಂದರೆ ಇನ್ನು ಸುಪ್ರೀಮ್ ಕೋರ್ಟ್ ಮತ್ತು ಕೇಂದ್ರ ಸರ್ಕಾರದ ಮುಂದೆ ನಮ್ಮ ವಿಚಾರಗಳನ್ನು ಮಂಡಿಸಿ, ಅದಕ್ಕೆ ಅವರು ತೀರ್ಮಾನಗಳನ್ನು ನೀಡಬೇಕು. ನಾವು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ನಮಗೆ ಯಾವ ರೀತಿಯ ತೀರ್ಮಾನ ಬೇಕು ಎಂದು ಕೇಳುವ ಅಧಿಕಾರ ನಮಗಿದೆ. ಆದರೆ ತೀರ್ಮಾನ ಮಾಡುವವರು ಅವರು. ಹಾಗಾಗಿ ಇದು ಇಡೀ ರಾಜ್ಯದ ರೈತರ, ಸಾಮಾನ್ಯ ಜನರ ಹಾಗೂ ಬೆಂಗಳೂರಿನಲ್ಲಿ ಸುಮಾರು ಒಂದೂವರೆ ಕೋಟಿ ಜನರ ಜೀವನ್ಮರಣದ ಪ್ರಶ್ನೆಯಾಗಿದೆ. ಹಾಗಾಗಿ ಈ ವಿಚಾರದ ಬಗ್ಗೆ ಮಾತನಾಡಬೇಕೆಂದು ಎಲ್ಲರಿಗೂ ಆಸೆ ಇದೆ. ಇದು ಸ್ವಾಭಾವಿಕ. ಹಾಗೂ ಅವಶ್ಯ ಕೂಡ. ಚರ್ಚೆ ಆಗಲಿ, ಆದರೆ ಚರ್ಚೆಯೂ ಮಿತಿಯಲ್ಲಿ ಇರಬೇಕಾಗುತ್ತದೆ. ಈ ವಿಚಾರವಾಗಿ ಒಂದು ವಿಚಾರವನ್ನು ಮಾತ್ರ ನಾನು ಸಭೆಯ ಗಮನಕ್ಕೆ

ತರಬಯಸುತ್ತೇನೆ. ನಮ್ಮ ರಾಜ್ಯಾಂಗ ಏನಿದೆ ಅದನ್ನು ಉಲ್ಲಂಘನೆ ಮಾಡುವ ಅಧಿಕಾರ ಯಾರಿಗೂ ಇಲ್ಲ. ಆ ರಾಜ್ಯಾಂಗದ ಹೆಸರಿನಲ್ಲಿಯೇ ನಾವು ಪ್ರಮಾಣ ವಚನವನ್ನು ಸ್ವೀಕರಿಸಿ ಈ ಸದನಕ್ಕೆ ಬಂದಿದ್ದೇವೆ. ರಾಜ್ಯಾಂಗದ ಪರಿಚ್ಛೇದ 211ರ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ನಾವು ಎಲ್ಲರಿಗೂ ಸಂವಿಧಾನದ ಪ್ರತಿ ಕೊಟ್ಟಿದ್ದೇವೆ, ತಾವು ತಂದಿಲ್ಲದಿರಬಹುದು. ರಾಜ್ಯಾಂಗದ ಪರಿಚ್ಛೇದ 211ರಲ್ಲಿ ***"ವಿಧಾನಮಂಡಲದಲ್ಲಿ ಸುಪ್ರೀಮ್ ಕೋರ್ಟಿನ ಅಥವಾ ಹೈಕೋರ್ಟಿನ ನ್ಯಾಯಾಧೀಶರ ಬಗ್ಗೆ ಯಾವುದೇ ರೀತಿಯ ಟೀಕೆ ಸಲ್ಲದು"*** ಎಂದು ಬಹಳ ಸ್ಪಷ್ಟವಾಗಿ ಎರಡು ವಾಕ್ಯಗಳನ್ನು ಹೇಳಲಾಗಿದೆ. ಈ ರೀತಿಯ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಂಡು ಜೊತೆಗೆ ನಮ್ಮ ರಾಜ್ಯದ ಅನುಕೂಲತೆಗೆ ತಕ್ಕ ಹಾಗೆ ಮಾತನಾಡಬೇಕು. ನಾವು ಏನಾದರೂ ಕೋಪದ ಭರದಲ್ಲಿ ಮಾತನಾಡಿದಲ್ಲಿ ಅದು counter-productive ಆಗಬಹುದು. ಅದನ್ನು ಮಾಡಿಕೊಳ್ಳದೇ ನಾವು ಇಲ್ಲಿ ಚರ್ಚೆಯನ್ನು ಮಾಡಬೇಕಾಗುತ್ತದೆ. ಇವತ್ತು ಇಡೀ ರಾಜ್ಯದ ಜನತೆ ನಮ್ಮ ವಿಧಾನಮಂಡಲದ ಅಧಿವೇಶನದ ಕಡೆಗೆ ಏಕೆ ಅಧಿವೇಶನ ಕರೆದಿದ್ದಾರೆ, ಯಾವ ತೀಮಾನವನ್ನು ಕೈಗೊಳ್ಳುತ್ತಾರೆಂದು ಬಹಳ ಕಾತುರದಿಂದ ನೋಡುತ್ತಿದ್ದಾರೆ. ಹಾಗಾಗಿ ಇಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಆಗಬೇಕು. ಚರ್ಚೆ ಮಾಡುವುದಕ್ಕಾಗಿಯೇ ಈ ವೇದಿಕೆ ಇದೆ. ಇಲ್ಲಿ ಸದಸ್ಯರು ಮಾತನಾಡುವಾಗ ಸ್ವಲ್ಪ ಈ ಕೆಲವೊಂದು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡೋಣ. ಬಹಳ ಉದ್ದ ಮಾತನಾಡುವ ಅವಶ್ಯಕತೆ ಇಲ್ಲವೆಂದು ನನಗನಿಸುತ್ತದೆ. ಏಕೆಂದರೆ ನಮ್ಮ ಮನಸ್ಸಿನಲ್ಲಿರುವ ಭಾವನೆಗಳನ್ನು ಸ್ವಲ್ಪ ಸಮಯದಲ್ಲಿಯೇ ಸ್ವಲ್ಪ ಮಾತುಗಳಲ್ಲಿ ಸ್ಪಷ್ಟವಾದ ಪದಗಳಲ್ಲಿ ಹೇಳುವುದಕ್ಕೆ ಅವಕಾಶವಿದೆ. ಉದ್ವೇಗಕ್ಕೆ ಒಳಗಾಗದೇ ಸ್ವಾಭಾವಿಕವಾಗಿ ನಮ್ಮ ಮನಸ್ಸಿನಲ್ಲಿರುವ ವಿಚಾರಗಳನ್ನು ಮಂಡಿಸುವುದಕ್ಕೆ ನಮಗೆಲ್ಲರಿಗೂ ಅಧಿಕಾರವಿದೆ. ಈಗ ನಾನು ನಾಯಕರುಗಳ ಜೊತೆಯಲ್ಲಿ ಮಾತನಾಡುವಾಗ ಒಂದು ವಿಚಾರ ಬಂತು, ನಮ್ಮಲ್ಲಿ 3 ಪಕ್ಷಗಳು ಅಧಿಕೃತವಾಗಿವೆ, 3–4 ಜನ Independents ಇದ್ದಾರೆ. ಒಂದೊಂದು ತಂಡದಿಂದ 3 ಅಥವಾ 4 ಜನರು ಮಾತನಾಡಿದರೆ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ವಿಷಯಗಳು ಹೇಳಿದಂತಾಗುತ್ತದೆ. ಮತ್ತು ಹೇಳಿದ್ದನ್ನೇ ಹೇಳುವುದರಿಂದ ಏನೂ ಆಗುವುದಿಲ್ಲ. ಈ ರೀತಿಯಾಗಿ ಚರ್ಚೆ ನಡೆಸೋಣ ಎಂದುಕೊಂಡಿದ್ದೇವೆ. ಚರ್ಚೆಯನ್ನು ಬಹಳ ದೀರ್ಘವಾಗಿ ನಡೆಸುವುದಕ್ಕೆ ಅವಕಾಶ ಕೊಡಬೇಕೆನ್ನುವುದು ಸಹ ನನ್ನ ಮನಸ್ಸಿನಲ್ಲಿದೆ. ಕಳೆದ ಸಲ ನಡೆದ ಅಧಿವೇಶನದಲ್ಲಿ ನೀವೆಲ್ಲರೂ ಸೇರಿ ತೀರ್ಮಾನ ಕೈಗೊಂಡಿದ್ದನ್ನು ನಾನು ಅನುಷ್ಠಾನಗೊಳಿಸಿದ್ದೆನು. ಕಳೆದ ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ನೀಡಲಿಲ್ಲವೆನ್ನುವ ದುಃಖ ನನಗೂ ಸಹ ಇದೆ. ನಮಗೆ ಮಾತನಾಡಲು ಅವಕಾಶ ಸಿಗಲಿಲ್ಲವೆನ್ನುವ ನೋವು ತಮಗೂ ಸಹ ಇರಬಹುದು. ಆದರೆ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅರ್ಥಮಾಡಿಕೊಂಡು ನಾವೆಲ್ಲರೂ ಚರ್ಚೆಯನ್ನು ಮಾಡೋಣ. ಆ ಸಂದರ್ಭದಲ್ಲಿ ಈ ವಿಚಾರಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಹಾಗೆಯೇ ಚರ್ಚೆ ಮಾಡುವಾಗ ನಾವು ಬೇರೆಯವರಿಗೂ ಸಹ ಅವಕಾಶವನ್ನು ಮಾಡಿಕೊಡಬೇಕು. ಸರ್ವೇಸಾಧಾರಣವಾಗಿ ಇಲ್ಲಿ ನಡೆಯತಕ್ಕ ಚರ್ಚೆಯ ಬಗ್ಗೆ ಸಂಜೆ ಐದೂವರೆ ಗಂಟೆಯ ಒಳಗೆ ಸರ್ಕಾರಕ್ಕೆ ಒಂದು ಮಾರ್ಗಸೂಚಿಯ ರೂಪದಲ್ಲಿ ಮಾರ್ಗದರ್ಶನವನ್ನು ನೀಡಿ ಒಂದು ಹಂತದಲ್ಲಿ ಸದನವನ್ನು ಮುಗಿಸಬೇಕೆನ್ನುವ ಒಂದು ಧ್ವನಿ ಬಂದಿದೆ. ಈ ಹಿನ್ನೆಲೆಯಲ್ಲಿ ಚರ್ಚೆಯನ್ನು ಪ್ರಾರಂಭ ಮಾಡೋಣ. ಮಧ್ಯಾಹ್ನ ಒಂದೂವರೆ ಗಂಟೆಗಳ ಕಾಲ ಊಟಕ್ಕೆ ಮೂಂದೂಡಿ ಬಾಕಿ ಎಲ್ಲಾ ಸಮಯದಲ್ಲಿಯೂ ನಾವು ಚರ್ಚೆಯನ್ನು ಮಾಡಬಹುದು. ಚರ್ಚೆಯ ಪ್ರಾರಂಭದಲ್ಲಿ ಸರ್ಕಾರದ ಪರವಾಗಿ ಮಾತುನಾಡುವವರಿದ್ದರೆ ಮೊದಲಿಗೆ ಅವರಿಗೆ ಅವಕಾಶ ನೀಡಲಾಗುವುದು. ಅದಾದ ಮೇಲೆ ಬೇರೆಯವರು ಮಾತನಾಡಬಹುದು.

**ಶ್ರೀ ಕೆ.ಬಿ.ಶಾಣಪ್ಪ:–** ಸಭೆಯನ್ನು ಕರೆದಿರುವುದೇ ಸಂವಿಧಾನದ ಪರಿಚ್ಛೇದ 211ರ ಬಗ್ಗೆ ಮಾತನಾಡುವುದಕ್ಕೆ.

**ಸಭಾಪತಿಯವರು:–** ಇಲ್ಲಿ ಪರಿಚ್ಛೇದ 211ರ ಬಗ್ಗೆ ಮಾತನಾಡುವುದಕ್ಕೆ ಬರುವುದಿಲ್ಲ. That is the Constitution. We cannot talk about that. I will not allow for that.

**Sri K.B.SHANAPPA**:- Then what should we talk here? Today, this situation has come because of that only.

**ಸಭಾಪತಿಯವರು:–** ಪರಿಚ್ಛೇದ 211ರ ಬಗ್ಗೆ ಮಾತನಾಡುವುದಕ್ಕೆ ನಾನು ಅಲೋ ಮಾಡುವುದಿಲ್ಲ. ಬಾಕಿ ಯಾವುದರ ಬಗ್ಗೆ ಬೇಕಾದರೂ ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, ಆರ್ಟಿಕಲ್ 262 ಬಗ್ಗೆ ಮಾತನಾಡಬಹುದೇ?

**ಸಭಾಪತಿಯವರು:–** ನೀವು ಪರಿಚ್ಛೇದ 211 ಅನ್ನು ಬಿಟ್ಟು ಯಾವುದರ ಬಗ್ಗೆ ಬೇಕಾದರೂ ಮಾತನಾಡಿ.

**Sri V.S.UGRAPPA**:- Then, no problem.

**ಸಭಾಪತಿಯವರು:–** ಪರಿಚ್ಛೇದ 262, 256 ಯಾವುದು ಬೇಕಾದರೂ ಮಾತನಾಡಿ, ಪರಿಚ್ಛೇದ 211ರ ಮೇಲೆ ಮಾತನಾಡುವುದಕ್ಕೆ ನಾನು ಅವಕಾಶ ನೀಡುವುದಿಲ್ಲ. ಮಾತನಾಡುವುದಾದರೆ ತಮ್ಮನ್ನು ತಾವೇ ನಿಯಂತ್ರಿಸಿಕೊಂಡು ಮಾತನಾಡಿ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಗಳೇ, ...

**ಶ್ರೀ ಕೆ.ಬಿ.ಶಾಣಪ್ಪ:–** ಹಾಗಾದರೆ, Executive power ಗೆ ಸಂಬಂಧಿಸಿದಂತೆ ಇಡೀ ಸದನವನ್ನು ತಾವು ಇನ್‌ವಾಲ್ವ್ ಮಾಡಿದ್ದೀರಿ. Was it necessary ಎನ್ನುವ ಪ್ರಶ್ನೆಯನ್ನು ಮಾಡುತ್ತಿದ್ದೇನೆ. You are not supposed to involve all of us.

**ಸಭಾಪತಿಯವರು:–** ನಿಮಗೆ ಮಾತನಾಡಲು ನಾನು ಅಲೋ ಮಾಡುತ್ತೇನೆ.

**Sri K.B.SHANAPPA**:- Under which Article you have passed the resolution ಎಂದು ಅವರು ಕೇಳಿದರು. ಮತ್ತೆ ನಾವು ಏನನ್ನು ಮಾತನಾಡಬೇಕು. This is a very ticklish problem.

**ಶ್ರೀ ವಿ.ಸೋಮಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ವಿಧಾನಮಂಡಲದ ಈ ಒಂದು ವಿಶೇಷ ಅಧಿವೇಶನ ಕರೆದಿರುವಂತಹ ಸಂದರ್ಭದಲ್ಲಿ ಕಳೆದ ಸಲ ತಾವು ನೀಡಿದ ಸೂಚನೆಯಂತೆ ನಾವು ನಡೆದುಕೊಂಡಿದ್ದು, ತಮ್ಮ ಸೂಚನೆಯಿಂದ ಒಂದಿಂಚು ನಾವು ಆಚೀಚೆ ಸರಿದಿರುವುದಿಲ್ಲ. ಈ ಸಲವೂ ಕೂಡ ರಾಜ್ಯದ ಹಿತವನ್ನು ಕಾಪಾಡುವ ಜವಾಬ್ದಾರಿ ಈ ಸದನಕ್ಕೂ ಸಹ ಇರುವುದರಿಂದ ತಮ್ಮ ಅನುಭವವನ್ನು ಸಹ ನಾವು ಗಣನೆಗೆ ತೆಗೆದುಕೊಂಡು ನಾವು ಮಾತನಾಡಬೇಕಾಗುತ್ತದೆ. ಮಾನ್ಯ ಉಗ್ರಪ್ಪನವರು ಆರ್ಟಿಕಲ್ 262 ಬಗ್ಗೆ ಹೇಳಿದರು. ಸ್ಪಷ್ಟವಾಗಿ ಇರುವ ಕೆಲವೊಂದು ಅಂಶಗಳನ್ನು ಕೂಡ ನಾವು ನಾಗರೀಕ ಸಮಾಜದಲ್ಲಿ ಆಗುವುದಿಲ್ಲ ಎಂದು ಹೇಳುವುದು ಕಷ್ಟವಾಗುವುದರಿಂದ ದಯಮಾಡಿ ಇದು ಒಂದು ಒಳ್ಳೆಯ ಅವಕಾಶ ಎಂದು ಹೇಳುವುದಕ್ಕಿಂತ ಹೆಚ್ಚಾಗಿಈ ರಾಜ್ಯದಲ್ಲಿರುವ ಇಂತಹ ಕ್ಲಿಷ್ಟ ಪರಿಸ್ಥಿತಿಯನ್ನು ಯಾವ ರೀತಿ ಹೋಗಲಾಡಿಸಬೇಕೆನ್ನುವುದಕ್ಕೆ ತಮ್ಮ ಚಿಂತನೆಯ ಜೊತೆಯಲ್ಲಿ ತಮ್ಮ ಅನುಭವವನ್ನು ಹಂಚಿಕೊಂಡು ಮಾತನಾಡುವುದಕ್ಕೆ ಎಲ್ಲೋ ಒಂದು ಕಡೆ ರಾಮಬಾಣವನ್ನು ಎಳೆದು ಜೊತೆಗೆ ಒಂದು ಲಕ್ಷ್ಮಣರೇಖೆಯನ್ನು ಹಾಕಿ ಎಲ್ಲರನ್ನು ಕಟ್ಟಿಹಾಕುವುದು ಎಷ್ಟರಮಟ್ಟಿಗೆ ಸಮಂಜಸ?

**ಸಭಾಪತಿಯವರು:–** ಇಲ್ಲಿ ಲಕ್ಷ್ಮಣರೇಖೆಯನ್ನು ನಮಗೆ ನಾವೇ ಹಾಕಿಕೊಳ್ಳಬೇಕು. Article 211 ವಿಚಾರದಲ್ಲಿ ಎಲ್ಲರ ಮನಸ್ಸಿನಲ್ಲಿ ಭಾವನೆಗಳಿರುವುದು ಸ್ವಾಭಾವಿಕ. ಹಾಗಾಗಿ ಅದರ ಬಗ್ಗೆ ನಾನು ಉಲ್ಲೇಖ ಮಾಡಿದೆನು. ರಾಜ್ಯಾಂಗದ Article 211 ಬಗ್ಗೆ ಚರ್ಚೆ ಮಾಡುವುದಕ್ಕೆ this is not the forum. ನಮಗೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅಧಿಕಾರವಿಲ್ಲ. ಪಾರ್ಲಿಮೆಂಟಿನಲ್ಲಿ ಮಾತ್ರ ಇದರ ಬಗ್ಗೆ ಮಾತನಾಡಬಹುದು. We do not have the power. ಪಾರ್ಲಿಮೆಂಟಿನಲ್ಲಿ ಮಾತನಾಡಬಹುದು, ಹಾಗೆಯೇ ಸಂವಿಧಾನಕ್ಕೂ ಸಹ ತಿದ್ದುಪಡಿಯನ್ನು ತರಬಹುದು.

**Sri K.B.SHANAPPA**:- Even, ಪಾರ್ಲಿಮೆಂಟಿನಲ್ಲಿಯೂ ಸಹ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಸಭಾಪತಿಯವರು:– ಅದು ನನಗೆ ಸರಿಯಾಗಿ ತಿಳಿದಿಲ್ಲ.

**Sri K.B.SHANAPPA**:- Unless, they bring an amendment to the Constitution, even the Parliament cannot discuss about Article 211.

**Sri S.R.PATIL**:- Even in Parliament, they cannot speak about the conduct of the Judges; they cannot make a comment on the Judgment. They have also got the restriction.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, ತಾವು ಆರ್ಟಿಕಲ್ 211ರ restriction ಬಗ್ಗೆ ಹೇಳಿದಿರಿ. ಉದಾಹರಣೆಗೆ ನಾನು ಒಬ್ಬ ಲಾಯರ್. ಮಾನ್ಯ ಸಭಾಪತಿಯವರೆ, ಈಗ ನಾನು ಯಾವುದೋ ಒಂದು ರಾಜ್ಯದ ವಕೀಲನಾಗಿ ವಕಾಲತ್ತನ್ನು ವಹಿಸಿದ್ದೇನೆ. ನಾಳೆ ಅದೇ ಸರ್ಕಾರದ ವಿರುದ್ದ, ಅದೇ ರೀತಿಯ ಸ್ವರೂಪ ಹೊಂದಿರತಕ್ಕಂತಹ ವಿಷಯದಲ್ಲಿ ನ್ಯಾಯಾಧೀಶನಾಗಿ ಸುಪ್ರೀಂ ಕೋರ್ಟ್‌ನಲ್ಲಿ ಕುಳಿತುಕೊಂಡು ನ್ಯಾಯದ ಬಗ್ಗೆ ತೀರ್ಪು ಕೊಡುವುದು ಸರಿಯೋ ಅಥವಾ ತಪ್ಪೋ?

**ಸಭಾಪತಿಯವರು:–** ಆ ವಿಷಯ ಬಂದಾಗ ನೋಡೋಣ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇದರಲ್ಲಿರುವ ಪ್ರಶ್ನೆ ಏನೆಂದರೆ, ದಯಮಾಡಿ ಪೂರ್ವಭಾವಿಯಲ್ಲಿ ಈಗ ಹಿಂದೆ ತಮಿಳುನಾಡಿನ ಪರವಾಗಿ ವಕಾಲತ್ತು ವಹಿಸಿದ್ದಂತಹ ವಕೀಲರು ಇಂದು ಕರ್ನಾಟಕ ಮತ್ತು ತಮಿಳುನಾಡಿನ ಕಾವೇರಿ ನೀರಿನ ವ್ಯಾಜ್ಯದ ಬಗ್ಗೆ ಇರುವ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠದಲ್ಲಿ ಒಬ್ಬರು ನ್ಯಾಯಾಧೀಶರು ತಮಿಳುನಾಡಿನ ಪರವಾಗಿ ಹಿಂದೆ ವಕೀಲರಾಗಿದ್ದಾಗ ವಕಾಲತ್ತು ವಹಿಸಿದ್ದರು. ಇವತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಕುಳಿತಿರುವಂತಹದ್ದು, ಸಂವಿಧಾನ ಬದ್ಧವಾಗಿ ಸರಿ ಇದೆಯೇ ಅಥವಾ ನ್ಯಾಯಾಂಗ judicial conduct ರೀತಿಯಲ್ಲಿ ಹೌದೋ ಅಥವಾ ಇಲ್ಲವೋ ಎಂಬುವುದನ್ನು ಜನ ಪ್ರತಿನಿಧಿಗಳಾಗಿ ನಾವು ಅದರ ಬಗ್ಗೆ ಬೆಳಕು ಚೆಲ್ಲಬೇಕೋ ಅಥವಾ ಬೇಡವೋ ಎಂಬುವುದನ್ನು ತಾವು ತಿಳಿಸಿ.

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ತಾವುಗಳು ಬಹಳ ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ರಾಮಚಂದ್ರಗೌಡರೆ ದಯಮಾಡಿ ಕುಳಿತುಕೊಳ್ಳಿ. ಇಲ್ಲಿ ಪ್ರಶ್ನೆ ಇರುವಂಥದ್ದು ಒಂದು ಕಾನೂನಾತ್ಮಕವಾದಂತಹ ಪ್ರಶ್ನೆ. ಆದರೆ ಈ ಪ್ರಶ್ನೆಯನ್ನು ತೀರ್ಮಾನ ಮಾಡಬೇಕಾಗಿರುವುದು ಸರ್ವೋಚ್ಚ ನ್ಯಾಯಾಲಯವೇ ಹೊರತು ನಮ್ಮ ವಿಧಾನ ಮಂಡಲವಲ್ಲ. ಅಲ್ಲಿ ನಮ್ಮ ಸರ್ಕಾರದ ವಕೀಲರಿಗೆ ಹೇಳಿ ಅವರ ಹತ್ತಿರ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ ವಾದ ಮಾಡುವುದಕ್ಕೆ ಸರ್ಕಾರಕ್ಕೆ ಹೇಳಿ. ಅಲ್ಲಿ ಆ ಕೆಲಸವನ್ನು ಮಾಡಬೇಕು ಆ ರೀತಿಯಾಗಿ ಸರ್ಕಾರ

ಒಂದು ವೇಳೆ ಆ ಕೆಲಸವನ್ನು ರಾಜ್ಯ ಸರ್ಕಾರದವರು ಮಾಡಿಲ್ಲವೆಂದಾಗ ಸರ್ಕಾರವನ್ನು ಬೇಕಾದರೆ ಟೀಕೆ ಮಾಡಿ. ಸರ್ಕಾರಕ್ಕೆ ಸಲಹೆಯನ್ನು ಕೊಡಿ, ಬುದ್ಧಿಯನ್ನು ಹೇಳಿ. ನೀವು ಆ ರೀತಿಯಾಗಿ ಮಾಡಿಲ್ಲ ಆ ಕೆಲಸವನ್ನು ವಕೀಲರಿಂದ ಮಾಡಿಸಿ ಎಂದು ಹೇಳಿ. ಇಲ್ಲಿ ಆ ವಿಷಯದ ಬಗ್ಗೆ ಚರ್ಚೆ ಮಾಡುವುದು ಬೇಡ. ಈ ಬಗ್ಗೆ ಸರ್ಕಾರ ಏನು ಮಾಡಬೇಕು ಎನ್ನುವುದನ್ನು ಮಾತ್ರ ಹೇಳಿ. You have got a right to argue your case there, not here. ಏಕೆಂದರೆ ನಿಮ್ಮ ವಿರೋಧವಾಗಿ ನಾನು ಹೋರಾಟ ಮಾಡುವ ಹಾಗಿಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ದಯಮಾಡಿ ನಾನು ಇಲ್ಲಿ ಯಾರ ಪರ ಅಥವಾ ಯಾರ ವಿರುದ್ಧ ಎಂದು ಹೇಳುವುದಕ್ಕೆ ಹೊರಟಿಲ್ಲ. ಆದರೆ ನಮ್ಮ ಸದನದ ಹಕ್ಕುಗಳನ್ನು ನಾವೇ ಮೊಟಕುಗೊಳಿಸಿಕೊಳ್ಳುವಂತಹ ಅವಶ್ಯಕತೆ ಇಲ್ಲ. ಸಂವಿಧಾನಕ್ಕೆ ತಿದ್ದುಪಡಿಗಳನ್ನು ತರತಕ್ಕಂತಹ ಹಕ್ಕು ಅಥವಾ ಅಧಿಕಾರ ನಮ್ಮ ಸದನಗಳಿಗೆ ಇಲ್ಲ. ಆದರೆ ಸಂವಿಧಾನವನ್ನು ಎತ್ತಿ ಹಿಡಿಯುತ್ತೇವೆಂದು ನಾವು ಆಯ್ಕೆಯಾಗಿ ಬಂದಾಗ ಪ್ರಮಾಣವನ್ನು ಸ್ವೀಕರಿಸಿರುವಂಥದ್ದು. ನಾವು ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಿರತಕ್ಕಂಥದ್ದರ ಬಗ್ಗೆ ಬೆಳಕು ಚೆಲ್ಲುವುದರ ಮೂಲಕ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು ಈ ಸದನಗಳು ಮಾಡಬೇಕಾಗಿದೆ. ಆ ದಿಕ್ಕಿನಲ್ಲಿ ನಮ್ಮ ಹಕ್ಕುಗಳಿವೆ, ಆ ದಿಕ್ಕಿನಲ್ಲಿ ನಾವುಗಳು ಚಿಂತನೆಗಳನ್ನು ಮತ್ತು ವ್ಯಾಖ್ಯಾನಗಳನ್ನು ಮಾಡಬೇಕಾಗುತ್ತದೆಂದು ಹೇಳುತ್ತಿದೇನೆ.

**ಸಭಾಪತಿಯವರು:–** ಈಗ ಮಾನ್ಯ ಸಭಾನಾಯಕರು ಮಾತನಾಡುತ್ತಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ನಾನು ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಇವತ್ತು ತಮಿಳುನಾಡು ಸರ್ಕಾರದ ಇಡೀ ವಕೀಲರ ತಂಡದ ನಾಯಕರಾದಂತಹ Sri Shekhar Naphade ಯವರು ಮಾನ್ಯ ಉಗ್ರಪ್ಪನವರು ಹೇಳಿದ ಹಾಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ದ್ವಿಸದಸ್ಯ ಪೀಠದ ಗೌರವಾನ್ವಿತ ನ್ಯಾಯಮೂರ್ತಿಗಳ ಜೊತೆ ಒಂದೇ ಕಚೇರಿಯಲ್ಲಿ ಒಟ್ಟಿಗೆ ಸುಮಾರು ಹದಿನಾರು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಾವು ಹೇಗೆ ಸದನದಲ್ಲಿ ಬೆಳಕು ಚೆಲ್ಲಬೇಕು ಮತ್ತು ಚರ್ಚೆ ಮಾಡಬೇಕು ಎನ್ನುವುದರ ಬಗ್ಗೆ ನಿಮ್ಮಿಂದಲೇ ಮಾರ್ಗದರ್ಶನವನ್ನು ಕೋರುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಅಂತಹ ವ್ಯಕ್ತಿಯೊಬ್ಬರು ಅಲ್ಲಿ ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತಾಗ, was it not a duty of our Lawyer to object on that point? It is their duty. ಇದೆಲ್ಲಾ ಈಗ ಹತ್ತು ವರ್ಷಗಳ ನಂತರ ನೆನಪು ಬಂತಾ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರು ಹೇಳಿದಂತಹ ವಿಚಾರದ ಬಗ್ಗೆ ನಾನು ತುಂಬಾ ಆಳವಾಗಿ ಹೋಗುವುದಿಲ್ಲ. ಆದರೆ **'ಸಾಮಾನ್ಯ ನ್ಯಾಯ'** (principles of natural justice) ಎನ್ನುವುದಿದೆ. ಒಂದು ನಿಯಮವಿದೆ. The first principle of 'principles of natural justice' is no man can be a judge in his own case. The second principle is, no man should be condemned unheard. Whether the 'principles of natural justice' is adhered or not - ಇದು ಕಾನೂನಾತ್ಮಕವಾಗಿರುವಂಥದ್ದು. ಬಹುಶಃ ಆ ಕಾರಣದಿಂದಲೇ ಮಾನ್ಯ ಉಗ್ರಪ್ಪನವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. Here, the first principle of 'principles of natural justice' is,

no man can be a judge in his own case. A person, if he has got a vested interest in a particular case, should not sit as a Judge. ಈ ಹಿಂದೆ ನಾನು ಒಂದು High Level Clearance Committee ಯಲ್ಲಿ ಸದಸ್ಯನಾಗಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ಸದರಿ ಸಮಿತಿಗೆ ಅಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ನನಗೆ ಸಂಬಂಧಿಸಿದಂತಹ ಸಂಸ್ಥೆ ಬಗ್ಗೆ ಚರ್ಚೆ ಬಂತು. ಆಗ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ವಿಚಾರದ ಬಗ್ಗೆ ವಿನಂತಿ ಮಾಡಿಕೊಂಡೆ. ಅದೇನೆಂದರೆ "I have got an interest in that Institute. That case has come up before this High Level Clearance Committee. I will not sit here, sir. I will go outside for a minute, until it is resolved." ಆದರೆ ನಾನೇನು ನ್ಯಾಯಾಧೀಶನಲ್ಲ, ಒಬ್ಬ ಮಂತ್ರಿಯಾಗಿದ್ದೆನು ಅಷ್ಟೇ. By virtue of myself becoming IT/BT Minister, I was made a member of the High Level Clearance Committee. ಆದರೆ, ಸದರಿ ಸಮಿತಿ ಮುಂದೆ ನಾನು ಅಧ್ಯಕ್ಷನಾಗಿದ್ದಂತಹ ಸಂಸ್ಥೆಯ ವಿರುದ್ಧ ಒಂದು ಪ್ರಶ್ನೆ ಬಂತು. ಆಗ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ "I will not participate, if at all I participate, it violates the principles of natural justice that no man should be a Judge in his own case. Therefore, I will go out and come back afterwards or otherwise, I will not participate" ಎಂದು ಹೇಳಿದ್ದೆ. ಆದರೆ ಇದು ಕಾನೂನಾತ್ಮಕ ವಿಚಾರವಾಗಿದೆ. Whether it is going to violate the provisions of Article 211 of the Constitution of India or not –ಎನ್ನುವ ಬಗ್ಗೆ ತಾವು ಬೆಳಕು ಚೆಲ್ಲಬೇಕು.

**ಡಾ: ಜಿ.ಪರಮೇಶ್ವರ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಸೆಪ್ಟೆಂಬರ್ 23ನೇ ತಾರೀಖು ಎರಡು ಸದನಗಳು ಒಂದು ತೀರ್ಮಾನವನ್ನು ತೆಗೆದುಕೊಂಡಿತು. ಅದೇನೆಂದರೆ ಕಾವೇರಿ ನೀರಿನ ವಿವಾದ ಇವತ್ತು ಹೊಸದೇನಲ್ಲ. ನಾನು ಅದರ ಹಿಂದಿನ ಇತಿಹಾಸಕ್ಕೆ ಹೋಗುವುದಿಲ್ಲ. ಏಕೆಂದರೆ ಈ ವಿಚಾರದ ಬಗ್ಗೆ ಬಹಳ ದೊಡ್ಡ ಪ್ರಮಾಣದ ಚರ್ಚೆ ಆಗಬೇಕಾಗುತ್ತದೆ. ಆದರೆ ಈ ವಿವಾದದ ಹಿನ್ನೆಲೆಯಲ್ಲಿ ಏನು 2007ನೇ ಇಸವಿಯಲ್ಲಿ ಅಂತಿಮವಾಗಿ Tribunal ಏನು ಒಂದು ತೀರ್ಪನ್ನು ಕೊಟ್ಟಿತ್ತು, ಆ ತೀರ್ಪನ್ನು ಪ್ರಶ್ನೆ ಮಾಡಿ ದಿನಾಂಕ: 05.02.2007ರಲ್ಲಿ ತಮಿಳುನಾಡು ಸರ್ಕಾರದವರು ಪುನರ್ ಪರಿಶೀಲನಾ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಹಾಕುತ್ತಾರೆ. ಅಲ್ಲಿಂದ ನಡೆದುಕೊಂಡು ಬಂದಿರತಕ್ಕಂತಹ ಅನೇಕ ತೀರ್ಪುಗಳು, ಅನೇಕ ವಿಚಾರಗಳ ಹಿನ್ನೆಲೆಯಲ್ಲಿ ನಾವು ಸೆಪ್ಟೆಂಬರ್ 23ನೇ ತಾರೀಖಿನಂದು ಎರಡು ಸದನಗಳು ಸೇರಿ ಒಂದು ಅಭಿಪ್ರಾಯಕ್ಕೆ ಬರುತ್ತೇವೆ. ನಾವು ಆ ಸಂದರ್ಭದಲ್ಲಿ ಏನು ನಿರ್ಣಯವನ್ನು ಮಾಡಿದ್ದೇವೆಂದು ಮತ್ತೊಂದು ಸಾರಿ ಅದನ್ನು ನೆನಪು ಮಾಡುವುದಕ್ಕೆ ನಾನು ಬಯಸುತ್ತೇನೆ. ಅದೇನೆಂದರೆ:

"RESOLUTION

This House notes: that in the water yar 2016-17 there has been an acute situation of distress, but the short fall in the basin will become known only at the end of the season (31.01.2017);

This House further seriously notes that the combined storages in the four reservoirs viz., Krishna Raja Sagara,

Hemavathy, Harangi and Kabini have reached alarmingly low levels with only 27.6 TMC of water; and

It is now resolved to direct that in this state of acute distress it is imperative that the Government ensures that no water from the present storages be drawn, save and except for meeting drinking water requirements of the villages and town in the Cauvery basin and for the entire city of Bruhat Bangalore.

The above resolution is unanimously passed after carefully considering the needs of the inhabitants of the State of Karnataka whose interests are likely to be gravely jeopardized if water in the four reservoirs is in any way reduced – other than for meeting the drinking water requirements of inhabitants in the Cauvery basin including the entire city of Bangalore."

ಈ ನಿರ್ಣಯವನ್ನು ಮಾಡಿದ ಮೇಲೆ ನಮ್ಮ ಸರ್ಕಾರ ಮತ್ತೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಹೋದಂತಹ ಸಂದರ್ಭದಲ್ಲಿ, ಅದಕ್ಕೂ ಮೊದಲು ಸರ್ವೋಚ್ಚ ನ್ಯಾಯಾಲಯ ಒಂದು ತೀರ್ಪನ್ನು ಕೊಟ್ಟಿತ್ತು. ಅದರಲ್ಲಿ ಕೇಂದ್ರ ಸರ್ಕಾರ ಮಧ್ಯಸ್ಥಿಕೆಯನ್ನು ವಹಿಸಿ ಎರಡು ರಾಜ್ಯದ ಎಕ್ಸಿಕ್ಯೂಟಿವ್ ಹೆಡ್ಸ್, ಅಂದರೆ ಎರಡು ರಾಜ್ಯಗಳ ಮಾನ್ಯ ಮುಖ್ಯಮಂತ್ರಿಗಳ ಒಂದು ಸಭೆಯನ್ನು ಕರೆದು ಏನಾದರು ತೀರ್ಮಾನವನ್ನು ಮಾಡಬೇಕೆಂದು ಸೂಚನೆಯನ್ನು ಕೊಟ್ಟಿತ್ತು. ಇದಕ್ಕೆ ಆ ದಿನ ಕೇಂದ್ರ ಸರ್ಕಾರದ ಪರವಾಗಿದ್ದಂತಹ ಅಟಾರ್ನಿ ಜನರಲ್‌ರವರು ಒಪ್ಪಿಗೆಯನ್ನು ಸೂಚಿಸುತ್ತಾರೆ. ಅದೇ ರೀತಿ ತಮಿಳುನಾಡು ಸರ್ಕಾರದ ಪರ ವಕೀಲರು ಮತ್ತು ಕರ್ನಾಟಕ ಸರ್ಕಾರದ ಪರವಾಗಿದ್ದ ವಕೀಲರು ಒಪ್ಪಿಕೊಳ್ಳುತ್ತಾರೆ. ನಾವುಗಳು ಎರಡು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಕಾವೇರಿ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆಂದು ಹೇಳಿ ಒಪ್ಪಿಗೆಯನ್ನು ಸೂಚಿಸುತ್ತವೆ. ಅದೇ ರೀತಿ ದಿನಾಂಕ 28.09.2016 ರಂದು ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಮಂತ್ರಿಗಳು ಒಂದು ಸಭೆಯನ್ನು ಕರೆಯುತ್ತಾರೆ. ಆ ಸಭೆಯಲ್ಲಿ ಕಾವೇರಿ ನೀರಿನ ಸಮಸ್ಯೆ ಬಗ್ಗೆ ಚರ್ಚೆಯಾಗುತ್ತದೆ. ತಮಿಳುನಾಡು ಸರ್ಕಾರದ ಪರವಾಗಿ ಸಭೆಗೆ ಹಾಜರಾಗಿದ್ದಂತಹ ಮಾನ್ಯ ಲೋಕೋಪಯೋಗಿ ಮಂತ್ರಿಗಳು ತಮ್ಮ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಇಡುತ್ತಾರೆ. ಜೊತೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆ ಸಭೆಯಲ್ಲಿ ಭಾಗವಹಿಸಿ ನಮ್ಮ ಅಭಿಪ್ರಾಯವೇನು, ಪರಿಸ್ಥಿತಿ ಏನು ಇದೆ ಎನ್ನುವುದನ್ನು ತಿಳಿಸುತ್ತಾರೆ. Ground reality ಏನು ಎನ್ನುವುದನ್ನು ಅಲ್ಲಿ ಪ್ರಸ್ತಾಪ ಮಾಡುತ್ತಾರೆ. ಮಾರನೇ ದಿವಸ ಕೇಂದ್ರದ Water Resources Ministry ಹಾಗೂ Attorney General ರವರು ನಿನ್ನೆ ಸಭೆಯಲ್ಲಿ ಏನೇನು ನಡೆಯಿತು, ಯಾವ-ಯಾವ Heads of the Government ಏನೇನು ಅಭಿಪ್ರಾಯಗಳನ್ನು ತಿಳಿಸಿದರು ಎನ್ನುವುದನ್ನು ಸುಪ್ರಿಮ್ ಕೋರ್ಟ್ ಮುಂದೆ ಇಡುತ್ತಾರೆ. 30ನೇ ತಾರೀಖು ಸುಪ್ರಿಮ್ ಕೋರ್ಟ್‌ನಿಂದ ಒಂದು ಆದೇಶ ಬರುತ್ತದೆ, ಇದರ legality ಬಗ್ಗೆ ನಾನು ಹೇಳುವುದಿಲ್ಲ. ಅದರ ಅವಶ್ಯಕತೆ ನಮ್ಮ ಸದನದಲ್ಲಿ ಇಲ್ಲ ಎಂದು ನಾನು ಅಂದುಕೊಳ್ಳುತ್ತೇನೆ. ಆದರೆ ಏನು ಆದೇಶ ಮಾಡಿದ್ದಾರೆ ಎನ್ನುವ ಬಗ್ಗೆ ನಾಲ್ಕೈದು sentences

ಗಳನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ. ಹಿಂದಿನ ಆದೇಶಗಳ ಪ್ರಕಾರ ನಾವು ತಮಿಳುನಾಡಿಗೆ ನೀರನ್ನು ಬಿಡಲಿಲ್ಲ. ಕಾರಣ ಎಂದರೆ ನಮ್ಮ ಹತ್ತಿರ ನೀರು ಇರಲಿಲ್ಲ. The order which was passed earlier is an unimplementable order. ಜಾರಿಗೆ ತರಲು ನಮಗೆ ಸಾಧ್ಯವೆ ಇಲ್ಲ ಎನ್ನುವ ವಿಚಾರವನ್ನು ಅವರ ಗಮನಕ್ಕೆ ತರಲಾಗಿತ್ತು. ಇಷ್ಟಾದರೂ ಕೂಡಾ ಆದೇಶಗಳ ಮೇಲೆ ಆದೇಶಗಳು ಬರುತ್ತಿವೆ. ಸೆಪ್ಟಂಬರ್ 2ನೇ ತಾರೀಖಿಗೆ ಒಂದು ಆದೇಶವಾಗುತ್ತದೆ ಅದು ನಮ್ಮ ಪರವಾಗಿರುವುದಿಲ್ಲ, ಸೆಪ್ಟಂಬರ್ 5ನೇ ತಾರೀಖಿನಂದು ಒಂದು ಆದೇಶವಾಗುತ್ತದೆ ಅದು ನಮ್ಮ ಪರವಾಗಿ ಇರುವುದಿಲ್ಲ. Modification ಗಾಗಿ ಹಾಕುತ್ತೇವೆ, ಮತ್ತೆ 12ನೇ ತಾರೀಖಿನಂದು ಆದೇಶವಾಗುತ್ತದೆ ಅದು ನಮ್ಮ ಪರವಾಗಿ ಇರುವುದಿಲ್ಲ. ಮತ್ತೆ 20ನೇ ತಾರೀಖು ಸುಪ್ರಿಮ್ ಕೋರ್ಟ್ ಸೇರುತ್ತದೆ, ಆ ಆದೇಶವು ನಮ್ಮ ಪರವಾಗಿ ಆಗುವುದಿಲ್ಲ. ನಂತರ 27ನೇ ತಾರೀಖಿನಂದು ಒಂದು ಆದೇಶವಾಗುತ್ತದೆ ಅದು ನಮ್ಮ ಪರವಾಗಿ ಇರುವುದಿಲ್ಲ. 30ನೇ ತಾರೀಖಿನಂದು ಬಂದ ಆದೇಶವು ನಮ್ಮ ಪರವಾಗಿರುವುದಿಲ್ಲ. ಯಾವುದೆ ರಾಜ್ಯವಾಗಲಿ ತನ್ನ ರಾಜ್ಯದ ಜನರಿಗೆ ಕುಡಿಯುವ ನೀರನ್ನು ಒದಗಿಸಬೇಕೆಂದು ನೀರನ್ನು ಇಟ್ಟುಕೊಳ್ಳುವುದರಲ್ಲಿ ನನಗೇನು ತಪ್ಪು ಕಾಣುತ್ತಿಲ್ಲ. ಎರಡು ಸದನದಲ್ಲಿ ನಿರ್ಣಯ ಮಾಡುತ್ತವೆ, ನಮ್ಮಲ್ಲಿಯೇ ಕುಡಿಯಲು ನೀರು ಇಲ್ಲ, ಇನ್ನು ತಮಿಳು ನಾಡಿಗೆ ಹೇಗೆ ನೀರು ಬಿಡುವುದು? ನಮ್ಮ ಕಷ್ಟು ಹೀಗೆ ಇದೆ , this is a distress situation, this is not a normal situation, ಅದಕ್ಕಾಗಿ ನಮಗೆ ರಕ್ಷಣೆ ಕೊಡಬೇಕು ಎಂದು ಕೇಳಿದಾಗ, ಅವರು ಮಾಡಿರುವ ಆದೇಶ ಎಂದರೆ:

> “We would have proceeded to have taken steps for strict compliance of our order, but as we are directing the Cauvery Management Board to study the ground reality and give us a report forthwith, we reiterate our earlier direction that the State of Karnataka shall release 6000 cusecs of water from 1st October, 2016 till 6th October, 2016. We are granting this opportunity as the last chance and we repeat at the cost of repetition that we are passing this order despite the resolution passed by the Joint Houses of State Legislature of the State of Karnataka. ...”

ನಾವು ಇಲ್ಲಿ ಎರಡು ಸದನದಲ್ಲಿ ನಿರ್ಣಯ ಮಾಡಿದ್ದರೂ ಕೂಡಾ, ಅವರೇನು ಅದನ್ನು ignore ಮಾಡಿದ್ದಾರೆ ಎಂದು ಅಲ್ಲ. Taking that Resolution into cognizance, they have passed this order. ಅಂದರೆ ಈ ನಿರ್ಣಯಕ್ಕೆ ಅಲ್ಲಿ ಯಾವುದೆ ಬೆಲೆ ಇಲ್ಲ ಎನ್ನುವ ದೃಷ್ಟಿ ಅವರಲ್ಲಿ ಇದೆ. ಅಲ್ಲಿಂದ ಎಷ್ಟು ಕಠಿಣವಾಗಿದೆ ಎಂದರೆ, the said order further reads thus:

> “The State of Karnataka should not bent upon maintaining an obstinate stand of defiance.......”

ಅಂದರೆ, ನೀವು ಪದೇ ಪದೇ ಮಾಡುತ್ತಲೇ ಇದ್ದೀರಿ, you have taken that stand. It is an obstinate stand ಎಂದಿದ್ದಾರೆ. The said order further reads thus:"...... for one knows not when the wrath of law shall fall on one."

ಇಂತಹ ನಿರ್ಣಯ ಇವತ್ತು ಆಗಿಬಿಟ್ಟಿದೆ. ಇದು ಆದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಸರ್ವಪಕ್ಷಗಳ ಸಭೆಯನ್ನು ಕರೆದರು. ಈ ಸಾರಿ ನಡೆದಿರುವಷ್ಟು ಸರ್ವ ಪಕ್ಷ ಸಭೆ ಹಿಂದೆ ಯಾವತ್ತು ನಡೆದಿರಲಿಲ್ಲ. ಎಲ್ಲರೂ ಸೇರಿ ರಾಜ್ಯದ ಹಿತವನ್ನು ಕಾಪಾಡಬೇಕಾಗಿದೆ. ಸರ್ವ ಪಕ್ಷಗಳು ಪಕ್ಷಾತೀತವಾಗಿ ನಿರ್ಣಯ ಮಾಡಬೇಕಾಗಿರುವಂತಹ ವಿಚಾರ, ತೀರ್ಮಾನ ಮಾಡಬೇಕಾಗಿರುವಂತಹ ವಿಚಾರ. ಅದಕ್ಕಾಗಿ ನಾಲ್ಕು ಬಾರಿ ಆದೇಶಗಳು ಬಂದ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರ್ವಪಕ್ಷಗಳ ಸಭೆಯನ್ನು ಕರೆದಿದ್ದಾರೆ. ಏನು ಪರಿಸ್ಥಿತಿ ಇದೆ, what is the ground reality? ನಾವು ground reality ಎಂದು ಹೇಳುತ್ತೇವೆ. ಸುಪ್ರಿಮ್ ಕೋರ್ಟ್‌ನಲ್ಲಿಯು ground reality ಏನು ಇದೆ ಎನ್ನುವುದನ್ನು ನೋಡಲು ಸಮಿತಿಯನ್ನು ಕಳುಹಿಸಿ ಕೊಡಿ ಎಂದು ಕೇಳಿದ್ದೆವೆ. Supervisory Committee ಮುಂದೆಯು ನೀವೆ ಬಂದು ನೋಡಿ ಎಂದು ಹೇಳಿದ್ದೆವೆ. ಇಷ್ಟಾದರೂ ಕೂಡಾ ಅವರು ನಮ್ಮ ಪರಿಸ್ಥಿತಿಯನ್ನು ಪರಿಗಣಿಸಲಿಲ್ಲ. ಅದಕ್ಕಾಗಿ what is the ground reality ಎನ್ನುವುದನ್ನು ಸರ್ವ ಪಕ್ಷಗಳ ಸಭೆಯ ಮುಂದೆ ಇಡಲಾಗಿತ್ತು. ನಾವು ನಿರ್ಣಯ ಮಾಡಿದ ದಿವಸ 27.6 ಟಿಎಂಸಿ ನೀರು ನಮ್ಮಲ್ಲಿ ಇತ್ತು. ನಾಲ್ಕು reservoirs, ನಾಲ್ಕು ಪ್ರಮುಖವಾದ ಜಲಾಶಯಗಳಲ್ಲಿ 27.6 ಟಿಎಂಸಿ ನೀರು ಇತ್ತು. ಇದು ಆದಮೇಲೆ ಅಲ್ಲಿ-ಇಲ್ಲಿ ಸ್ವಲ್ಪ ಮಳೆಯಾಗಿದೆ. ಅದರ ಪ್ರಯುಕ್ತ ಒಳಹರಿವಿನಿಂದ inflow ಸ್ವಲ್ಪಮಟ್ಟಿಗೆ ಜಾಸ್ತಿಯಾಗಿದೆ. ಒಟ್ಟಾರೆ 10 ದಿನಗಳಲ್ಲಿ ನಮಗೆ ಸರಾಸರಿ 7000ಕ್ಯೂಸೆಕ್ಸ್ ಒಳಹರಿವು ಬಂದು ಇವತ್ತಿಗೆ ನಮ್ಮ reservoirs ನಲ್ಲಿ ಇರುವ ನೀರು 34.12 ಟಿಎಂಸಿ. ನಿರ್ಣಯ ಮಾಡಿರುವ ದಿವಸ 27.6 ಟಿಎಂಸಿ ನೀರು ಇತ್ತು. ಇವತ್ತು 31.12 ಟಿಎಂಸಿ ನೀರು ನಮ್ಮ ನಾಲ್ಕು reservoirs ನಲ್ಲಿ ಇದೆ. ಸರಾಸರಿ 7000 ಕ್ಯೂಸೆಕ್ಸ್ ನೀರು. As on today, 5851 ಕ್ಯೂಸೆಕ್ಸ್ ನೀರು ಒಳಹರಿವು ಇದೆ. ಬಿಳಿಗುಂಡ್ಲು ಜಲಮಾಪನ ಕೇಂದ್ರದಲ್ಲಿ 53.2 ಟಿಎಂಸಿ ನೀರು ಇಲ್ಲಿಯವರೆಗೆ ಹರಿದು ಹೋಗಿರುವುದು ದಾಖಲಾಗಿದೆ. ಅಂದರೆ ಆರುವರೆ ಟಿಎಂಸಿ ನೀರು ನಾವು ನಿರ್ಣಯ ಮಾಡಿದ ದಿವಸದಿಂದ ಇವತ್ತಿನವರೆಗೆ ಜಾಸ್ತಿಯಾಗಿದೆ. ಇಲ್ಲಿ ಚರ್ಚೆ ಮಾಡುವ ಸಂದರ್ಭದಲ್ಲಿ ಅನೇಕ ಜನ ಶಾಸಕರು, ಸಂಸದರು ನಮ್ಮ ವಿರೋಧ ಪಕ್ಷದ ನಾಯಕರು ನಮ್ಮ ರಾಜ್ಯದ ಸ್ಥಿತಿ ಏನು ಎಂದು ಕೇಳಿದ್ದಾರೆ. ನಾವು ರೈತರಿಗೆ ಹೇಳಿರುವುದು, ಈ ಬಾರಿ ಮಳೆ ಇಲ್ಲ, ಇರುವ ನೀರನ್ನು ಬೆಳೆಗೆ ಹರಿಸಿದರೆ ಕಷ್ಟವಾಗುತ್ತದೆ. ಆದ್ದರಿಂದ restrained cultivation ಎಂದು ಒಂದು ಸುತ್ತೋಲೆ ಹೊರಡಿಸಿ ನಾಲ್ಕು ಜಿಲ್ಲೆಯ ಎಲ್ಲ ರೈತರಿಗೆ ತಿಳಿಸಿದ್ದೆವೆ. ಆದರೂ ಕೂಡಾ ಆರುವರೆ ಲಕ್ಷ ಎಕರೆ ಭೂಮಿಯಲ್ಲಿ ನಮ್ಮ ರೈತರು ಬೆಳೆಯನ್ನು ಹಾಕಿದರು. ಯಾವಾಗ ನೀರು ಕೊಡಲು ಆಗುವುದಿಲ್ಲ, ಕುಡಿಯುವ ನೀರಿಗಾಗಿ ಮಾತ್ರ ಇರುವ ನೀರನ್ನು ಇಟ್ಟುಕೊಳ್ಳುತ್ತೇವೆ ಎಂದು ನಿರ್ಣಯ ಮಾಡಿದ ಮೇಲೆ ಎರಡು ಲಕ್ಷ ಎಕರೆ ಭೂಮಿಯಲ್ಲಿ ಬೆಳೆಯನ್ನು ಬೆಳೆಯದೆ ರೈತರು ಹಾಗೆ ಬಿಟ್ಟರು. ಈಗ ಅಂದಾಜು ಸುಮಾರು ನಾಲ್ಕುವರೆ ಲಕ್ಷ ಎಕರೆ ಮಾತ್ರ ಉಳಿದಿದೆ. ಈಗ ಇರುವ ಪ್ರಶ್ನೆ ಎಂದರೆ, ನಾಲ್ಕುವರೆ ಎಕರೆ ಭೂಮಿಯನ್ನು ಬಿಟ್ಟುಬಿಡಬೇಕಾ? ಸರ್ವ ಪಕ್ಷಗಳ ಸಭೆಯಲ್ಲಿ, ಹೊರಗಡೆ ನಮ್ಮ ಶಾಸಕರು ಈಗ ನಿಮ್ಮ ಹತ್ತಿರ ನೀರು ಇದೆ ನಮ್ಮ ರೈತರ ಭೂಮಿಗೆ ನೀರು ಬಿಡಿ,ಜ ನಾಲ್ಕುವರೆ ಲಕ್ಷ ಭೂಮಿಯಲ್ಲಿ ಬೆಳೆಯನ್ನು ಬೆಳೆದು ಭೂಮಿಯನ್ನು ಉಳಿಸಿಕೊಳ್ಳಬಹುದು ಎಂದು ಕೇಳುತ್ತಿದ್ದಾರೆ, ನಮ್ಮ ರೈತರು ಕೇಳುತ್ತಿದ್ದಾರೆ. ಆದರೆ ಹೇಗೆ ಬಿಡುವುದು? 27 ಟಿಎಂಸಿ ಮಾತ್ರ ನೀರು ಇದೆ, ಅದಕ್ಕಿಂತ ಹೆಚ್ಚಿಗೆ ನೀರು ಬಂದರೆ ಏನು ಮಾಡಬೇಕು ಎನ್ನುವ

ನಿರ್ಣಯವನ್ನು ನಾವು ಮಾಡಿರುವುದಿಲ್ಲ. ಇರುವ ನೀರನ್ನು ಕುಡಿಯುಲು ಉಪಯೋಗಿಸುವುದು ಎನ್ನುವ ನಿರ್ಣಯವನ್ನು ಮಾತ್ರ ಸದನದಲ್ಲಿ ಮಾಡಲಾಗಿದೆ. ಅದಕ್ಕಾಗಿ ನಾವು ಏನು ಮಾಡಬೇಕು ಎನ್ನುವುದಕ್ಕೆ ಅನೇಕ ಸಲಹೆಗಳು ಬಂದವು. ಕ್ಯಾಬಿನೆಟ್‌ನಲ್ಲಿ ನಾವು ಮತ್ತೆ ಸದನವನ್ನು ಕರೆದು ವಸ್ತು ಸ್ಥಿತಿಯನ್ನು ಸದನದಲ್ಲಿ ಮುಂದೆ ಇಡುವುದು ಎನ್ನುವ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಸದನ ಏನು ತೀರ್ಮಾನ ಕೊಡುತ್ತದೆ ಎನ್ನುವುದು ನಮಗೆ ಗೊತ್ತಿಲ್ಲ. ಮಾನ್ಯ ಸಭಾಪತಿಯವರೆ, ಸದನ ಏನು ತೀರ್ಮಾನ ಕೊಡುತ್ತದೆ ಎಂಬುದು ನಮಗೆ ಗೊತ್ತಿಲ್ಲ. ವಸ್ತುಸ್ಥಿತಿಯನ್ನು ಸದನದ ಮುಂದೆ ಇಡಬೇಕು. ಸದನ ಏನು ತೀರ್ಮಾನ ಕೊಡುತ್ತದೆ ಆ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ರೈತರ ಹಿತದೃಷ್ಟಿ ಒಂದು ಕಡೆಯಾದರೆ, ಕುಡಿಯುವ ನೀರಿನ ರಕ್ಷಣೆ ಮಾಡತಕ್ಕದ್ದು ಇನ್ನೊಂದು ಕಡೆ. ಸುಪ್ರೀಂ ಕೋರ್ಟ್‌ನ ಆದೇಶ ಮತ್ತೊಂದು ಕಡೆ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಆಗಲೇ ಹೇಳಿದ ಹಾಗೆ ಸುಪ್ರೀಂ ಕೋರ್ಟ್‌ನಲ್ಲಿ ಆದಂತ ಬೆಳವಣಿಗೆ, ಅಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಗಳು ಹೇಳಿದರು. ಹೌದು ಕಾವೇರಿ ಮ್ಯಾನೇಜ್‌ಮೆಂಟ್ ಬೋರ್ಡ್ ಅನ್ನು ಮಾಡುವುದಕ್ಕಾಗುವುದಿಲ್ಲ ನಮ್ಮ ಕಡೆಯಿಂದ ತಪ್ಪಾಗಿದೆ. ಆ ಸಂದರ್ಭದಲ್ಲಿ ಸರಿಯಾಗಿ ನಾನು ಗಮನಿಸಲಿಲ್ಲ. ಅದಕ್ಕಾಗಿ reconsider ಮಾಡಬೇಕು ಎಂದು ಅವರು ಒಂದು ಕಡೆ ಹೇಳಿದ್ದಾರೆ. ನಮ್ಮ ಸರ್ಕಾರದ ಪ್ರತಿನಿಧಿಗಳು ಮತ್ತು ವಕೀಲರು ಕೂಡಾ ಇಲ್ಲ ಸಿಎಂಬಿ ಮಾಡಲೇ ಕೂಡದು ಎಂದು ನಾವು ಮೊದಲಿನಿಂದ ಸ್ಟ್ಯಾಂಡ್ ತೆಗೆದುಕೊಂಡಿದ್ದೇವೆ. ಅದನ್ನು ಮಾಡಬಾರದು review ಮಾಡಬೇಕು ಎಂದು ಅವರು ಕೂಡಾ ಹೇಳಿದ್ದಾರೆ. ಈ ಸಂದರ್ಭದ ಹಿನ್ನೆಲೆಯಲ್ಲಿ ನಾವು ಏನು ತೀರ್ಮಾನ ತೆಗೆದುಕೊಳ್ಳಬೇಕು? ಆವಾಗ ಒಂದು comment ಮಾಡಿದ್ದಾರೆ. ಅಂದರೆ ಇದು oral comment ಆಗಿದೆ. ಈ ಬಗ್ಗೆ ಇನ್ನು ಆದೇಶ ಬಂದಿಲ್ಲ. ಅದೇನೆಂದರೆ ನೀವು review petition ಹಾಕುತ್ತಿದ್ದೀರಿ, ಆದರೆ ನಾವು ಆ review petition ಹಾಕುವುದಕ್ಕೆ ಮೊದಲು ಸ್ವಲ್ಪವಾದರೂ ನೀರು ಬಿಡಿ ಎನ್ನತಕ್ಕ ಮಾತನ್ನು ಕೂಡಾ ಹೇಳಿದ್ದಾರೆ. ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಇಲ್ಲಿ ಏನು ನಿರ್ಣಯ ಮಾಡಬೇಕು ಎನ್ನತಕ್ಕಂಥಾದ್ದು ಬಹಳ ಮುಖ್ಯ. ಅದಕ್ಕಾಗಿ ನಾವು ಏತಕ್ಕಾಗಿ ಸದನ ಕರೆದಿದ್ದೇವೆ ಎಂದರೆ, ರಾಜ್ಯದ ಹಿತವನ್ನು ಮತ್ತು ರಾಜ್ಯದ ರೈತರನ್ನು ಕಾಪಾಡುವುದಕ್ಕೋಸ್ಕರವಾಗಿ ಈ ಸದನವನ್ನು ಕರೆದಿದ್ದೇವೆ. ರಾಜ್ಯದ ಜನರಿಗೆ ಕುಡಿಯುವ ನೀರನ್ನು ನೀಡುವ ಸಲುವಾಗಿ ಮೈಸೂರು, ಮಂಡ್ಯ, ರಾಮನಗರ, ಚೆನ್ನಪಟ್ಟಣ, ಬೆಂಗಳೂರು ಈ ಭಾಗಗಳಿಗೆ ಕೊಡತಕ್ಕಂಥ ಕುಡಿಯುವ ನೀರನ್ನು ರಕ್ಷಣೆ ಮಾಡತಕ್ಕದು ಹೇಗೆ ಮತ್ತು ಅದಕ್ಕೆ ನಾವು ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನಾವು ನಿರ್ಣಯ ಮಾಡಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಈ ಸದನ ಕರೆದಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಚರ್ಚೆ ಮಾಡಬೇಕು. ಎಲ್ಲ ವಿಷಯಗಳು ಕೂಡಾ ಬರಬೇಕು. ಎಲ್ಲರಿಗೂ ಅದರ ಹಕ್ಕು ಇದೆ ಮತ್ತು ಅವಶ್ಯಕತೆಯೂ ಕೂಡಾ ಇದೆ. ಆದರೆ ಎಲ್ಲೋ ಒಂದು ಕಡೆ ಅಕ್ಟೋಬರ್ 18ರಂದು ನಮ್ಮ review petition ಏನು ಸರ್ವೋಚ್ಚ ನ್ಯಾಯಾಲಯದ ಮುಂದೆ ಬರುತ್ತಿದೆ ಅದನ್ನು ಗಮನದಲ್ಲಿಟ್ಟುಕೊಂಡು ನಾವು ಕೆಲವು ತೀರ್ಮಾನಗಳನ್ನು ಮಾಡಬೇಕಾಗುತ್ತದೆ. ಏಕೆಂದರೆ ನಮಗೆ ನೂರಾರು ವರ್ಷಗಳಿಂದ ಅನ್ಯಾಯವಾಗುತ್ತಿದೆ. ಎಲ್ಲೋ ಒಂದು ಕಡೆ ಒಂದಿಷ್ಟು ನ್ಯಾಯ ಸಿಗಬಹುದೆಂಬ ಆಸೆಯನ್ನು ಕೂಡಾ ನಾವು ಇಟ್ಟುಕೊಂಡಿದ್ದೇವೆ. ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸಾಧ್ಯತೆ ಇದೆ. ಈ ಭಾರಿ ಸರ್ವೋಚ್ಚ ನ್ಯಾಯಾಲಯ ನ್ಯಾಯ ದೊರಕಿಸಿಕೊಡುತ್ತದೆ ಎನ್ನುವ ವಿಶ್ವಾಸ ಕೂಡಾ ಇದೆ. ಈ ಹಿನ್ನೆಲೆಯಲ್ಲಿ ನಮ್ಮ ಚರ್ಚೆ ಯಾವ ರೀತಿ ಹೋಗಬೇಕು. ಯಾವ ರೀತಿ ಯಾವ ರೂಪ ತೆಗೆದುಕೊಳ್ಳಬೇಕು. ಒಂದು ವೇಳೆ ನಾವು ಆದೇಶದ ಬಗ್ಗೆ ಚರ್ಚೆ ಮಾಡಬೇಕೇ? ಅಥವಾ ಆದೇಶ ಕೊಟ್ಟವರ ಮೇಲೆ ಚರ್ಚೆ ಮಾಡಬೇಕೇ? ಅವರ conduct ಬಗ್ಗೆ ಚರ್ಚೆ ಮಾಡಬೇಕೇ? ಅವರ ಹಿನ್ನೆಲೆ ಬಗ್ಗೆ ಚರ್ಚೆ ಮಾಡಬೇಕೇ? ಅಥವಾ ಅವರ ethics ಬಗ್ಗೆ ಚರ್ಚೆ ಮಾಡಬೇಕೇ? ನನ್ನ

ಪ್ರಕಾರ ಮಾನ್ಯ ಸಭಾಪತಿಯವರೆ, ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು let us have a restraint discussion. ನಮಗೆ ಇರುವಂತಹ ಅವಕಾಶವನ್ನು ಕೂಡಾ ನಾವು ಕಳೆದುಕೊಳ್ಳುವುದು ಬೇಡ. ಏಕೆಂದರೆ ರಾಜ್ಯದ ಹಿತ ಮುಖ್ಯ. ಇಲ್ಲಿ ನಾವು just to score a point ನಾವು ಏನೋ ಮಾತನಾಡಬಹುದು ಅದು ಆಗುವುದು ಬೇಡ. ರಾಜ್ಯದ ಹಿತ ಬಹಳ ಮುಖ್ಯ. ಮಾನ್ಯ ಸಭಾಪತಿಯವರೆ, within the framework of the law, within the framework of the rules ನಾವು ಮಾತನಾಡಿದ್ದರೆ ಒಳ್ಳೆಯದಾಗುತ್ತದೆ ಎನ್ನತಕ್ಕಂಥದ್ದು ನನ್ನ ಉದ್ದೇಶ. ಏಕೆಂದರೆ ಸರ್ಕಾರ ಬದ್ಧವಾಗಿದೆ. ಸದನದ ಮುಂದೆ ತೆಗೆದುಕೊಳ್ಳಲಾಗುವ ತೀರ್ಮಾನಕ್ಕೂ ಸರ್ಕಾರ ಬದ್ಧವಾಗಿದೆ. ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅದಕ್ಕೆ ಎಲ್ಲ ಪಕ್ಷದವರು ಕೂಡಾ ಸಹಕರಿಸಿದ್ದಾರೆ. ಮುಂದೆಯೂ ಕೂಡಾ ಅದೇ ರೀತಿ ಸಹಕರಿಸಬೇಕೆಂದು ಈ ಸಂದರ್ಭದಲ್ಲಿ ಎಲ್ಲಾ ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಮನವಿ ಮಾಡಿಕೊಳ್ಳುತ್ತೇನೆ. ಇದರಿಂದ ಇವತ್ತು ಏನು ನಿರ್ಣಯವಾಗುತ್ತದೆ ಅದು ಬಹಳ ಮುಖ್ಯ. ತಾವು ಏನು ಆದೇಶವನ್ನು ಅಥವಾ ನಿರ್ದೇಶನವನ್ನು ಸರ್ಕಾರಕ್ಕೆ ಕೊಡುತ್ತೀರಿ, ಸರ್ಕಾರ ಆ ಚೌಕಟ್ಟಿನೊಳಗೆ ರಾಜ್ಯದ ಹಿತ ಕಾಪಾಡುವುದಕ್ಕೆ ನಾವು ಕೂಡಾ ತೀರ್ಮಾನ ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಕೂಡಾ ಸದನದ ಗಮನಕ್ಕೆ ತೆಗೆದುಕೊಂಡು ಬರುತ್ತೇವೆ. ಈ ಚೌಕಟ್ಟಿನಲ್ಲಿ ಚರ್ಚೆಯಾದರೆ ಬಹಳ ಒಳ್ಳೆಯದು. ಚರ್ಚೆ ಮುಂದುವರೆದ ನಂತರ ಸರ್ಕಾರ ಒಂದು resolutionನ್ನು ಮಂಡಿಸುತ್ತದೆ. ಆ ನಿರ್ಣಯವನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಚರ್ಚೆ ಆದ ಮೇಲೆ ನಿರ್ಣಯ ಮಂಡನೆ ಮಾಡುವುದು ಎಷ್ಟರಮಟ್ಟಿಗೆ ಸೂಕ್ತವೋ ನನಗೆ ಗೊತ್ತಿಲ್ಲ. ನಿರ್ಣಯ ಇಟ್ಟುಕೊಂಡು ಚರ್ಚೆ ಮಾಡಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಆ ಒಂದು ನಿರ್ಣಯದ ಮೇಲೆ ಏನು ಬೇರೆ ಬೇರೆ ಸಲಹೆಗಳನ್ನು ಕೊಡಬಹುದಾಗಿತ್ತೋ ಇಲ್ಲವೇ ಅದಕ್ಕೆ ಏನು ತಿದ್ದುಪಡಿ ಮಾಡಬಹುದಾಗಿತ್ತೋ ಅದನ್ನು ಮಾಡಬಹುದಾಗಿತ್ತು. ಆದರೆ ಸರ್ಕಾರ ಕಾವೇರಿ ವಿಚಾರಕ್ಕೆ ತೆಗೆದುಕೊಳ್ಳುತ್ತಿರುವ ತೀರ್ಮಾನಕ್ಕೆ ಅನುಗುಣವಾಗಿ ನಾವೂ ಕೂಡ ಸರ್ಕಾರದ ಜೊತೆ ಜೊತೆಗೆ ನಮ್ಮ ಹೆಗಲು ಕೊಟ್ಟುಕೊಂಡು ಬಂದಿದ್ದೇವೆ. ಇದರಲ್ಲಿ ರಾಜಕಾರಣದ ಪ್ರಶ್ನೆಯೇ ಬರುವುದಿಲ್ಲ. ಆದರೆ ಇಲ್ಲಿ ಪ್ರಶ್ನೆ ಬಂದಿರುವುದು ನಮಗೆ ಕುಡಿಯುವ ನೀರನ್ನು ಇಟ್ಟುಕೊಳ್ಳುವುದು ಅವಶ್ಯವಿದೆ. ಈಗ ಸುಮಾರು 7 ಟಿಎಂಸಿ ನೀರು ಹೆಚ್ಚುವರಿಯಾಗಿ ಬಂದಿದೆ ಎನ್ನುವ ವಿಚಾರವನ್ನು ಮಾನ್ಯ ಸಭಾನಾಯಕರು ಪ್ರಸ್ತಾಪ ಮಾಡಿದರು ತಮಗೆ 6.5 ಲಕ್ಷ ಎಕರೆಯಲ್ಲಿ 2 ಲಕ್ಷ ರೈತರು ಬಿತ್ತನೆಯನ್ನು ಮಾಡಲೇ ಇಲ್ಲ. ಈ 2 ಲಕ್ಷ ರೈತರು ಬಿತ್ತನೆಯನ್ನು ಮಾಡಿಲ್ಲವೆಂದರೆ, ಆ 2 ಲಕ್ಷ ರೈತರು ಹೇಗೆ ಜೀವನ ಮಾಡಬೇಕು ಎನ್ನುವುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಈ ಒಂದು ಪ್ರಮುಖ ಅಂಶವನ್ನು ಕೂಡಾ ಯಾರು ತೀರ್ಪನ್ನು ಕೊಡುತ್ತಾರೆಯೋ, ನ್ಯಾಯಾಧೀಶರು ಇರಬಹುದು. ಸರ್ವೋಚ್ಚ ನ್ಯಾಯಾಲಯ ಇರಬಹುದು. ಅವರು ಕೂಡ ಈ ಒಂದು ಅಂಶವನ್ನು ಗಮನಿಸಿದ್ದರೆ ಚೆನ್ನಾಗಿರುತ್ತಿತ್ತು. ಇನ್ನು ಉಳಿದ 4.5 ಲಕ್ಷ ರೈತರು ಬಿತ್ತನೆಯನ್ನು ಮಾಡಿದ್ದಾರೆ. ಅವರು ಈ ಬಿತ್ತನೆ ಮಾಡಲು ಅಗತ್ಯವಾಗಿ ಬೇಕಾದಂತಹ ಬೀಜ, ಗೊಬ್ಬರವನ್ನು ನಾವೇ ಸಬ್ಸಿಡಿ ರೂಪದಲ್ಲಿ ಕೊಟ್ಟಿದ್ದೇವೆ. ಅವರು ಬಿತ್ತನೆಯನ್ನು ಕೂಡ ಮಾಡಿದ್ದಾರೆ. ಸಭಾನಾಯಕರೆ, ಈಗ ಇಲ್ಲಿ ಎರಡು ಅಂಶಗಳು ಮಾತ್ರ ಉಳಿದಿವೆ. ಈಗ ನಮ್ಮ ಹತ್ತಿರ ಸ್ವಲ್ಪ ನೀರು ಇರುವುದನ್ನು ಆ ರೈತರಿಗೆ ಅವರು ಬೆಳೆದಿರತಕ್ಕಂಥ ಬೆಳೆಗೋಸ್ಕರ ಬಿಡಲೇಬೇಕು. ಇಲ್ಲವಾದಲ್ಲಿ ನೀರು ಇಲ್ಲವೆಂದರೆ ಆ 4.5 ಲಕ್ಷ ರೈತರು ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ. 2.5 ಲಕ್ಷ ರೈತರು ಬೆಳೆ ಬಿತ್ತನೆ ಮಾಡದೇ ಇರುವಂಥಹವರು ಹೇಗೋ

ಜೀವನ ಮಾಡಿಕೊಂಡು ಹೋಗುತ್ತಾರೆ. ಆದರೆ ಬಿತ್ತನೆ ಮಾಡಿರುವಂತಹ ಉಳಿದ 4.5 ಲಕ್ಷ ರೈತರ ಗತಿ ಏನು ಎಂಬುದನ್ನು ವಿಚಾರ ಮಾಡುವುದು ಅಗತ್ಯವಾಗಿದೆ. ಇದನ್ನು ಇಡೀ ಕರ್ನಾಟಕ ರಾಜ್ಯ ನೋಡಬೇಕು. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೊಡುವಂತಹ ಸಂದರ್ಭದಲ್ಲಿ ಅದನ್ನು ಕೂಡಾ ಅವರು ಗಮನಿಸಬೇಕಾಗಿತ್ತು. ನಿಮಗೆ ಗೊತ್ತಿರುವ ಹಾಗೆ 2007ರ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ 270 ಟಿಎಂಸಿ ನೀರು. 192 ಟಿಎಂಸಿ ನೀರು ತಮಿಳುನಾಡಿಗೆ. ಅಂದರೆ 3:2 ಈ ಪ್ರಕಾರದಲ್ಲಿ ನೀರನ್ನು ಬಳಸಬಹುದಾಗಿತ್ತು. ಈಗಾಗಲೇ 53 ಟಿಎಂಸಿ ನೀರನ್ನು ಬಿಟ್ಟಿದ್ದೇವೆ.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ತಮಿಳುನಾಡಿಗೆ 419 ಟಿ.ಎಂ.ಸಿ. ಷೇರು. ಅದರಲ್ಲಿ 192 ನಮ್ಮ ಕರ್ನಾಟಕದಿಂದ ಕೊಡಬೇಕಾಗಿತ್ತು. 270 – 192 ಅನ್ನು compare ಮಾಡಿದರೆ ನಮ್ಮದೇ ಜಾಸ್ತಿ ಕಾಣಿಸುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಇಂತಹ ಸಂದರ್ಭದಲ್ಲಿ ನಮಗೆನೇ . . . . .

**ಶ್ರೀ ವಿ.ಎಸ್.ಉಗ್ರಪ್ಪ(ನಾಮ ನಿರ್ದೇಶನ):–** ಮಾನ್ಯ ಸಭಾಪತಿಯವರೆ, 182 ಟಿಎಂಸಿ ತಮಿಳುನಾಡಿಗೆ, 10 TMC environmental hazardous ಗೆ. ಹಾಗಾಗಿ 192 ಟಿ.ಎಂ.ಸಿ. ಆಗುತ್ತದೆ. ಅವರಿಗೆ total allocation 419 ಟಿಎಂಸಿ ನಮಗೆ 270 ಟಿಎಂಸಿ, ಕೇರಳಕ್ಕೆ 30 ಟಿಎಂಸಿ, ಪಾಂಡಿಚೇರಿಗೆ 7 ಟಿಎಂಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಹೇಳಿದ್ದು ಸಹ ಅದನ್ನೇ, ನಾನು ಕೇರಳ, ಪಾಂಡಿಚೇರಿ ಸುದ್ದಿಗೆ ಹೋಗಲಿಲ್ಲ. 270 ಟಿಎಂಸಿ, 192 ಟಿಎಂಸಿ allocation ನೀರು ಇರುವಂತಹ ಈ ಸಂದರ್ಭದಲ್ಲಿ ನಮಗೆ ಕುಡಿಯುವುದಕ್ಕೆ ನೀರು ಇಲ್ಲ. ನಮ್ಮ ಬೆಳೆಗಳಿಗೂ ಇಲ್ಲ. ಅಂತಹ ಪರಿಸ್ಥಿತಿ ನಮ್ಮದಾಗಿದೆ. ನಮ್ಮ ಹಿರಿಯರು ಆಗಿನ ಮಹಾರಾಜರು ಕೆಆರ್‌ಎಸ್ ಡ್ಯಾಂನ್ನು ಕಟ್ಟಿದ್ದು ನಮ್ಮ ರೈತರಿಗೆ ಕುಡಿಯುವ ನೀರನ್ನು ಕೊಡುವುದಕ್ಕೆ ಅಲ್ಲ. ರೈತರಿಗೆ ಕುಡಿಯುವ ನೀರು ಇದೆ ಎಂದು ತೋರಿಸುವುದಕ್ಕೆ. ನೋಡಿ ನೀರು ಇದೆ, ನೀರು ಇದೆ, ನೀರು ಇದೆ ಅಂತ. ಸುಪ್ರೀಂ ಕೋರ್ಟ್ ಹೇಳುತ್ತಿದೆ ನೀರು ಕೊಡಬೇಡಿ, ನೀರು ತೋರಿಸಿ ಎಂದು. ನಮ್ಮ ಬೆಳೆಗಳಿಗೆ ನೀರು ಕೊಡುವ ಹಾಗೆ ಇಲ್ಲ. ಬೆಳೆಯತನಕ ನೀರನ್ನು ತೆಗೆದುಕೊಂಡು ಹೋಗುವುದಷ್ಟೇ ನಮ್ಮ ಕೆಲಸ. ಆದರೆ, ಆ ನೀರನ್ನು ಬಳಸುವ ಹಾಗಿಲ್ಲ. ಇದಕ್ಕಾಗಿ ಕೆ.ಆರ್.ಎಸ್ ಜಲಾಶಯವನ್ನು ಕಟ್ಟಿರುವುದು!. ಈ ತೀರ್ಪುಗಳ ಬಗ್ಗೆ ಏನು ಹೇಳಬೇಕು ಎಂದು ನನಗೆ ಗೊತ್ತಿಲ್ಲ.

**ಸಭಾಪತಿಯವರು:–** ತೀರ್ಪಿನ ಬಗ್ಗೆ ಹೇಳಬಹುದು, ಆದರೆ ನ್ಯಾಯಾಧೀಶರ ಬಗ್ಗೆ ಮಾತನಾಡುವಂತಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಆ ನ್ಯಾಯಾಧೀಶರುಗಳೇ ತೀರ್ಪುಗಳನ್ನು ಕೊಟ್ಟಿದ್ದಾರೆ, ಇನ್ಯಾರು ಬೇರೆ ತೀರ್ಪು ಕೊಡುತ್ತಾರೆ? ತೀರ್ಪುಗಳ ಬಗ್ಗೆ ಹೇಳಬಹುದು, ಆದರೆ ನ್ಯಾಯಾಧೀಶರ ಬಗ್ಗೆ ಹೇಳುವಂತಿಲ್ಲ ಎಂಬ ವಾದ ಬಹಳ ಚೆನ್ನಾಗಿದೆ. ಆರ್ಟಿಕಲ್ 211ರ ಬಗ್ಗೆ ಮಾತನಾಡುವಂತಿಲ್ಲ. ಕರ್ನಾಟಕದಲ್ಲಿ ಆರ್ಟಿಕಲ್ 111 ಅನ್ನು ಹಾಕಿಕೊಳ್ಳಿ, ಆದರೆ ಆರ್ಟಿಕಲ್ 211ರ ಬಗ್ಗೆ ಮಾತನಾಡಬೇಡಿ ಎನ್ನುವಂತೆ ಆಯಿತು.

**ಶ್ರೀ ಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, Article 211 is only in respect of conduct of a Judge of Supreme Court or High Court. This is with regard to their character only. CªÀgÀÄ violate ಮಾಡಿದ್ದರೆ ಮಾತನಾಡಬಹುದು. ಈ ದೇಶದ ಪ್ರಸಿದ್ಧವಾದ ಕಾನೂನನ್ನು ಅವರು ತುಂಟಚಿಣಜ ಮಾಡಿದಾಗ ಮಾತನಾಡಬಹುದು. ಅವರ conduct ಬಗ್ಗೆ, ದುಡ್ಡು ತೆಗೆದುಕೊಂಡು ತೀರ್ಪು ನೀಡಿದ್ದಾರೆ ಎಂದು

ಹೇಳಿದರೆ, it is wrong. You should not talk about a conduct of a Judge during discharge of his duties.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅವರು ದುಡ್ಡು ತೆಗೆದುಕೊಂಡು ಜಡ್ಜ್‌ಮೆಂಟ್ ಕೊಟ್ಟಿದ್ದಾರೆಂದು ನಾನು ಬಾಯಿ ಬಿಟ್ಟು ಹೇಳುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಕಡತದಲ್ಲಿ ಬೇರೆ ಯಾವುದೇ ರೀತಿಯಲ್ಲಿ ಹೋಗಬಾರದು. Supreme Court and High Court judge conduct §UÉÎ, during their discharge of duties ಮಾತನಾಡಲೇಬಾರದು ಎಂದಿದೆ. I will go through that provision**.**

> *"Article 211 of Indian Constitution:* ***No discussion shall take place in the Legislature of a State with respect to the conduct of any Judge of the Supreme Court or of a High Court in the discharge of his duty."***

**In respect of conduct of a particular judge when he is discharging his duties as a judge; when he is delivering a judgement; if at all a judge has violated some existing laws you can only throw light on such things.**

**ಡಾ: ಜಿ. ಪರಮೇಶ್ವರ್:–** ಹಣದ ವಿಚಾರ ಬಂದದ್ದು ಕಡತದಲ್ಲಿ ಇರುವುದು ಬೇಡ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಬೇಡ, ತೆಗೆದುಹಾಕಲಿ. ನಾನು ಬಾಯಿಬಿಟ್ಟು ಹೇಳಿಲ್ಲ, ಈಗಲೂ ಹೇಳುವುದಿಲ್ಲ. ಪೂರ್ಣ ಅಧಿಕಾರ ಅವರಿಗೆ ಇದೆ.

**Sri S.R.PATIL**:- Conduct ಎಂದಾಗ ಅದರ ಬಗ್ಗೆ ಮಾತನಾಡಬಾರದು.

ಶ್ರೀ ಕೆ.ಎಸ್. ಈಶ್ವರಪ್ಪ:**– ಇಡೀ ರಾಜ್ಯ, ದೇಶ ಏನು ಹೇಳುತ್ತಿದೆ ಎಂದು ಅವರಿಗೆ ಗೊತ್ತಿದೆ, ಅದನ್ನು ನಾನು ಹೇಳುವುದಿಲ್ಲ.**

Sri S.R.PATIL:- **Sir, Please expunge that word.**

ಸಭಾಪತಿಯವರು:**– ಅದನ್ನು ಕಡತದಿಂದ ತೆಗೆಯುತ್ತೇನೆ.**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾವು ಕೆ.ಆರ್.ಎಸ್ ಅಣೆಕಟ್ಟನ್ನು ಕಟ್ಟಿಕೊಂಡಿದ್ದೇವೆ, ಕಾವೇರಿ ನಮ್ಮ ಹತ್ತಿರ ಇದೆ. ಆದರೆ ನಮ್ಮ ಕೆಲಸ ಏನು? ಪ್ರತಿ ಬಾರಿ ತೀರ್ಪು ಬಂದಾಗ ಹೋರಾಟ–ಹೋರಾಟ ಎನ್ನುವಂತೆ ಆಗಿದೆ. ಇದು ಹೇಗಿದೆ ನೋಡಿ ಮಜಾ!. ನಮ್ಮ ನೀರು, ನಮ್ಮ ಹಣ, ನಮ್ಮ ಭೂಮಿ ಮತ್ತು ನಮ್ಮ ನದಿ. ಪ್ರತಿ ತೀರ್ಪಿನಲ್ಲಿಯೂ ಹೋರಾಟ–ಹೋರಾಟ ಎಂದಾಗ ಇದು ಎಲ್ಲಿಯವರೆಗಿನ ಹೋರಾಟ? ಸಂವಿಧಾನ, ಕಾನೂನುಗಳೆಲ್ಲವೂ ರೈತರನ್ನು ಬದುಕಿಸಲು ಇರಬೇಕಾಗಿತ್ತು. ಈ ಸುಪ್ರೀಂಕೋರ್ಟ್, ಸಂವಿಧಾನ, ಕಾನೂನುಗಳೆಲ್ಲವೂ ನನಗೆ ಅನಿಸಿದಂತೆ ರೈತನ ಜೀವ ತೆಗೆಯಲು ಇವೆಯೇನೋ ಎಂದನಿಸುತ್ತಿದೆ. ನಾನೇನೂ ಕಾನೂನು ತಜ್ಞನಲ್ಲ. ಈ ಮಾತನ್ನು ಬಹಳ ನೊಂದು ಹೇಳುತ್ತಿದ್ದೇನೆ. ಬಹಳ ತಜ್ಞರು, ದೊಡ್ಡದೊಡ್ಡವರು, ಸಂವಿಧಾನ ಶಿಲ್ಪಿಗಳೆಲ್ಲರೂ ಮಾಡಿದ್ದಾರೆ. ನಾನು ಸಂವಿಧಾನ ಶಿಲ್ಪಿಗಳ ಬಗ್ಗೆ ಅಗೌರವ ತೋರುವುದಿಲ್ಲ. ಆದರೆ ನಮ್ಮ ಹಳ್ಳಿಯ ರೈತ ಏನೇಳುತ್ತಾನೆ? ತಮಿಳುನಾಡಿನವರು ಹಾಗೂ ನಾವು ಅಣ್ಣ–ತಮ್ಮಂದಿರಿದ್ದ ಹಾಗೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆ ಇರುವವರೆಲ್ಲರೂ ಅಣ್ಣ–ತಮ್ಮಂದಿರಿದ್ದ ಹಾಗೆ. ' ಭಾರತ ಜನನಿಯ ತನುಜಾತೆ, ಜಯಯೇ ಕರ್ನಾಟಕ ಮಾತೆ' ಎಂದು ಶ್ರೀಯುತ ಕುವೆಂಪುರವರು ಹೇಳಿದರು. ಆದರೆ ಇವತ್ತಿನ ಪರಿಸ್ಥಿತಿ ಏನು? ನಮಗೆ ಕುಡಿಯುವುದಕ್ಕೆ ನೀರಿಲ್ಲದೇ...... ಮೆಟ್ಟೂರು

ಜಲಾಶಯದಲ್ಲಿ ಸಾಕಷ್ಟು ನೀರಿದೆ, ನಾವು ಇಲ್ಲಿಂದ ನೀರು ಬಿಟ್ಟ ಮೇಲೆ ಮಳೆ ಬಂದರೆ ನಾವು ಬಿಟ್ಟ ನೀರು ತಮಿಳುನಾಡು ರೈತರಿಗೆ ಹೋಗುವುದಿಲ್ಲ, ಸಮುದ್ರಕ್ಕೆ ಹೋಗುತ್ತದೆ. ಅಷ್ಟೊಂದು ನೀರು ಅಲ್ಲಿದೆ. ನಮಗೆ ಕುಡಿಯುವುದಕ್ಕೆ ನೀರಿಲ್ಲದೇ ಒದ್ದಾಡುತ್ತಿರುವ ಸಂದರ್ಭದಲ್ಲಿ ತಮಿಳುನಾಡಿಗೆ ಸಮುದ್ರಕ್ಕೆ ಹೋಗಲು ನೀರು ಬಿಡಬೇಕು ಎನ್ನುವಂತಹ ರೀತಿಯ ತೀರ್ಪುಗಳು ಬಂದುಬಿಟ್ಟರೆ, ಸುಪ್ರೀಂಕೋರ್ಟ್ ಬಗ್ಗೆ, ನ್ಯಾಯಾಧೀಶರ ಬಗ್ಗೆ ಮತ್ತು ಸಂವಿಧಾನದ ಬಗ್ಗೆ ಯಾವ ರೈತನಿಗೆ ಗೌರವ ಬರುತ್ತದೆ? ರೈತ ಏನು ಹೇಳುತ್ತಾನೆ? ' ಅಪ್ಪಾ, ಇಲ್ಲಿಗೆ ಬಂದು ನೋಡಿ ವಾಸ್ತವ ಪರಿಸ್ಥಿತಿ ಅರ್ಥಮಾಡಿಕೊಳ್ಳಿ, ನಮ್ಮಲ್ಲಿ ನೀರು ಎಷ್ಟಿದೆ, ತಮಿಳುನಾಡಿನಲ್ಲಿ ಎಷ್ಟು ನೀರು ಇದೆ ಎಂಬುದನ್ನು ನೋಡಿ, ನಮ್ಮಲ್ಲಿ ನೀರು ಜಾಸ್ತಿ ಇದ್ದರೆ ನೀರು ಕೊಡಿ, ಅವರಲ್ಲಿ ನೀರು ಜಾಸ್ತಿ ಇದ್ದರೆ ನೀರು ಕೊಡುವುದನ್ನು ನಿಲ್ಲಿಸಿ' ಎಂದು ಹಳ್ಳಿಯಲ್ಲಿರುವ ರೈತ ಹೇಳುತ್ತಾನೆ. ಆದರೆ ಸುಪ್ರೀಂಕೋರ್ಟ್‌ನಲ್ಲಿರುವ ನ್ಯಾಯಾಧೀಶರಿಗೆ ಇದು ಅರ್ಥವಾಗದಿದ್ದರೆ ಏನು ಮಾಡಲಿಕ್ಕಾಗುತ್ತದೆ? ವಾಸ್ತವ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಜನರನ್ನು ಕಳುಹಿಸಿದರೆ ಗಂಟೇನು ಹೋಗುತ್ತದೆ? ಸಾಮಾನ್ಯ ಹಳ್ಳಿಯ ರೈತನಿಗೆ ಅರ್ಥವಾಗುವ ಪರಿಸ್ಥಿತಿ ಸುಪ್ರೀಂಕೋರ್ಟ್ ನ್ಯಾಯಾಧೀಶರಿಗೆ ಅರ್ಥವಾಗದಿದ್ದರೆ ಯಾವ ಭಾಷೆಯಲ್ಲಿ ಹೇಳಬೇಕೋ ನನಗಂತೂ ಅರ್ಥವಾಗುವುದಿಲ್ಲ.

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಹಳ್ಳಿಯ ರೈತನಿಗೆ ಗೊತ್ತಿದೆ, ಹೈಕೋರ್ಟ್‌ನಲ್ಲಿ ಯಾವುದೋ ಒಂದು ಬೆಂಚ್‌ನಲ್ಲಿ ಕೇಸ್ ಹೋದರೆ ' ಸ್ವಾಮಿ, ಆ ಕೇಸ್ ಆ ಬೆಂಚ್‌ಗೆ ಬೇಡ, ಬೇರೆ ಬೆಂಚ್‌ಗೆ ಹಾಕಿಸಿಕೊಡಿ' ಎಂದು ಆ ರೈತ ಕೇಳುತ್ತಾನೆ. ಇದು ಆ ರೈತನಿಗೆ ಗೊತ್ತಿದೆ. ಆದರೆ ನಮ್ಮ ರಾಜ್ಯದ ವಕೀಲರಿಗೆ ಆ ಬೆಂಚ್‌ಗೆ ಹಾಕಬೇಕೋ, ಬೇಡವೋ ಎಂದು ಗೊತ್ತಿರಲಿಲ್ಲವೇ? ಇದು ಬಹಳ ಪ್ರಮುಖವಾದ ಪ್ರಶ್ನೆ. ಆ ರೈತನಿಗೆ ಗೊತ್ತಿದೆ. ಇವರ ಹತ್ತಿರ ಹೋದರೆ ಅವನ ಕೆಲಸ ಆಗುವುದಿಲ್ಲ, ಆ ಬೆಂಚ್‌ಗೆ ಹಾಕಿ ಎಂದು ಹೇಳುತ್ತಾನೆ. ಯಾವುದೇ ಕಾರಣ ಇರಬಹುದು, ಅದು ಬೇರೆ ವಿಚಾರ. ಆದರೆ ಈ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರ ಮೊದಲಿನಿಂದಲೂ ಏಕೆ ಹೇಳಲಿಲ್ಲ? ನಮಗೆ ಈ ಬೆಂಚ್ ಬೇಕಿಲ್ಲ ಎಂದು ಹೇಳಬೇಕಾಗಿತ್ತು. ಅದನ್ನು ಏಕೆ ಹೇಳಲಿಲ್ಲ? ಇದು ಪ್ರಮುಖವಾದ ಪ್ರಶ್ನೆಯಾಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾವು ಅನೇಕ ಅಂಶಗಳನ್ನು ಓದುತ್ತೇವೆ. " ರಾಷ್ಟ್ರೀಯ ಜಲನೀತಿ", ಸರ್ವೋಚ್ಚ ನ್ಯಾಯಾಲಯದ ತೀರ್ಪುನನ್ವಯ ಕುಡಿಯುವ ನೀರು ಪ್ರತಿಯೊಬ್ಬರಿಗೂ ಜೀವಜಲವಾಗಿರುವುದರಿಂದ, ಕುಡಿಯುವ ನೀರಿಗೆ ಮೊದಲನೆ ಆದ್ಯತೆ ನೀಡಬೇಕಾಗುತ್ತದೆ ಎಂದು ಇದ್ದು, ಇದು ಪುಸ್ತಕದಲ್ಲಿ ಮಾತ್ರ ಇರಬೇಕೇ? ತೀರ್ಪು ಕೊಡಬೇಕಾದರೆ ಇದರ ಜ್ಞಾನ ಬೇಡವೆ? ಇದು ಹೇಗೆ? ಒಂದು ರೀತಿ ಗಿಳಿಶಾಸ್ತ್ರದಂತೆ 3,000 ಛಿಣಜಛಿ ನೀರು ಬಿಡಿ, 6,000 ಛಿಣಜಛಿ ನೀರು ಬಿಡಿ, 12,000 ಛಿಣಜಛಿ, 15,000 ಛಿಣಜಛಿ ನೀರು ಬಿಡಿ ಎನ್ನುವುದು. ಇದನ್ನು ಎಲ್ಲಿಂದ ಬಿಡುವುದು? ಏಕೆ ಬಿಡಬೇಕು? ಈ ಕಾನೂನುಗಳ ಬಗ್ಗೆ ನನಗೆ ತುಂಬಾ ಆಶ್ಚರ್ಯವಾಗುತ್ತದೆ. "ಸಂಕಷ್ಟ ಪರಿಸ್ಥಿತಿ", ಕರ್ನಾಟಕ ರಾಜ್ಯದಲ್ಲಿ ಪ್ರಕೃತಿ ವಿಕೋಪ ಇದ್ದಾಗ ಎರಡೂ ರಾಜ್ಯಗಳಿಗೆ ಪರಿಣಿತರ ತಂಡವನ್ನು ಕಳುಹಿಸಿ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿದ ಮೇಲೂ ತಟಸ್ಥರಾಗಿರುವ ಪರಿಣಿತರ ತಂಡವನ್ನು ಕಳುಹಿಸುವುದಕ್ಕೆ ಏನು ತೊಂದರೆ? ಏಕೆ ಕಳುಹಿಸುತ್ತಿಲ್ಲ? ಅದಕ್ಕೆ ನಾನು ಹೇಳುವುದೇನೆಂದರೆ, ಈ ತೀರ್ಪುಗಳನ್ನು ಕೊಡುತ್ತಿರುವ ಸಂದರ್ಭದಲ್ಲಿಯೇ ಲೋಪ ಇದೆ. ತೀರ್ಪು ಕೊಡುವಂತಹ ಸಂದರ್ಭದಲ್ಲಿ ಲೋಪ ಇದೆ. ಯಾರು, ಏನು, ಏಕೆ ಎಂದು ನನಗೆ ಗೊತ್ತಿಲ್ಲ. ಮಾನ್ಯ ಉಗ್ರಪ್ಪನವರು ಹೇಳಿದ ಕಾರಣವೋ ಎಂದು ಗೊತ್ತಿಲ್ಲ. ಅದರ ಬಗ್ಗೆ ಏನು ಎಂದು ಚರ್ಚೆಯಾಗಬೇಕಲ್ಲವೇ? ಅವರು ನೀರು ಬಿಡಿ ಎಂದು ತೀರ್ಪು ಕೊಡುತ್ತಾರೆ. ಮೊನ್ನೆ ನಡೆದ ಹೋರಾಟದಲ್ಲಿ ಅನೇಕ ನಷ್ಟ ಉಂಟಾಯಿತು. ಮಾನ್ಯ ಪರಮೇಶ್ವರ್‌ರವರು ಗೃಹ ಮಂತ್ರಿಗಳಾಗಿದ್ದಾರೆ. ಆಗ ಕರ್ನಾಟಕ ರಾಜ್ಯ 40

ಸಾವಿರ ಕೋಟಿ ರೂಪಾಯಿಗಳ ನಷ್ಟ ಉಂಟಾಯಿತು. ಇದು ಯಾರ ದುಡ್ಡು? ನಮ್ಮ ರೈತನ ದುಡ್ಡು. ಹೊಟ್ಟೆಯಲ್ಲಿ ಬೆಂಕಿ ಬಿದ್ದ ಸಂದರ್ಭದಲ್ಲಿ ಆ ಬೆಂಕಿಯನ್ನು ರೈತ ಹೊರಹಾಕಿದಾಗ ಲಾರಿ, ಬಸ್ಸು, ಜನರು ಸುಟ್ಟುಹೋಗುತ್ತಾರೆ. ಮತ್ತೆ ಅವನಿಗೆ ನಷ್ಟ. ಆತ ತೆರಿಗೆ ಕಟ್ಟಬೇಕು. ಇಂತಹ ದಾರುಣ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಬಂದಿರುವಾಗ ಏನು ಮಾಡಬೇಕು ಎನ್ನುವುದರ ಬಗ್ಗೆ....

**ಡಾ: ಜಿ. ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣಪ್ಪನವರು ಮಾನ್ಯ ವಸತಿ ಸಚಿವರನ್ನಾಗಿ ಮಾನ್ಯ ಮುಖ್ಯಮಂತ್ರಿಯವರು ನೇಮಕ ಮಾಡಿದ್ದಾರೆ. ಅವರ ಪರಿಚಯವನ್ನು ಸದನಕ್ಕೆ ಮಾಡಿಕೊಡುತ್ತೇನೆ.

(ಈ ಹಂತದಲ್ಲಿ ಸದನದ ಸದಸ್ಯರೆಲ್ಲರೂ ಮೇಜು ಕುಟ್ಟಿ ಸ್ವಾಗತಿಸಿದರು)

**ಶ್ರೀ ಕೆ.ಎಸ್. ಈಶ್ವರಪ್ಪ:–** ಇಲ್ಲಿ ನ್ಯಾಯಾಧೀಶರು ಮತ್ತು ತೀರ್ಪುಗಳ ಬಗ್ಗೆ ನಮ್ಮ ಆಕ್ರೋಶ ಇದೆ. ನಾವು ವಕೀಲರನ್ನು ನೇಮಕ ಮಾಡಿದೆವು. ಒಂದು ಬಾರಿಯಾದರೂ ನೀರು ಬಿಡಬಾರದು ಎಂದು ತೀರ್ಪು ಬಂದಿದೆಯೇ? ನೀರು ಬಿಡಿ, ನೀರು ಬಿಡಿ ಎಂದು ಸುಪ್ರೀಂಕೋರ್ಟ್ ಹೇಳುವಾಗ ವಕೀಲರು ಇದಕ್ಕೋಸ್ಕರ ವಾದ ಮಾಡುತ್ತಿದ್ದಾರೆಯೇ? ನಾರಿಮನ್ ತಂಡದ ಬಗ್ಗೆ ಮಾತನಾಡಿದರೆ ದೇವರ ಮೇಲೆಯೇ ಟೀಕೆ ಮಾಡಿದಂತೆ, ' ಅಯ್ಯೋ, ನಾರಿಮನ್ ಬಗ್ಗೆ ಮಾತನಾಡಬೇಡಿ, ನಾರಿಮನ್ ಬಗ್ಗೆ ಮಾತನಾಡಬೇಡಿ' ಎಂದು ಹೇಳುತ್ತಾರೆ. ಆಯಿತು, ನಾರಿಮನ್ ಬಗ್ಗೆ ಮಾತನಾಡುವುದಿಲ್ಲ. ಅವರಿಗೆ ಎಷ್ಟು ದುಡ್ಡು ಸ್ವಾಮಿ ಕೊಟ್ಟಿರುವುದು? ಅವರಿಗೆ ರೂ.76 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ ಆ ಹಣವನ್ನು ನಾರಿಮನ್ ಒಬ್ಬರಿಗೆ ಕೊಟ್ಟಿದ್ದಾರೆ ಎಂದು ನಾನು ಹೇಳುತ್ತಿಲ್ಲ. ಅವರ ತಂಡಕ್ಕೆ ಒಟ್ಟಾರೆಯಾಗಿ ಅಂದರೆ ಸೀನಿಯರ್ ಅಡ್ವೋಕೇಟ್ ಅಥವಾ ಜ್ಯೂನಿಯರ್ ಅಡ್ವೋಕೇಟ್ ಇರಬಹುದು, ನನ್ನ ಕೇಸ್ ಬಗೆಹರಿಸಿಕೊಡಿ ಎಂದು ಸಾಲ–ಸೋಲ ಮಾಡಿ ವಕೀಲರಿಗೆ ಹಣ ತೆಗೆದುಕೊಂಡು ಕೊಟ್ಟರೆ ಆ ವಕೀಲರ ಬಗ್ಗೆ ಮಾತನಾಡಲು ನಮಗೆ ಅಧಿಕಾರ ಇಲ್ಲ ಎಂದರೆ ಹೇಗೆ? ನಾರಿಮನ್ ಬಗ್ಗೆ ಮಾತನಾಡಿದರೆ ಏನೋ ಪಾಪ ಬಂದುಬಿಡುತ್ತದೆ ಎನ್ನುವಂತೆ ಆಗಿದೆ.

**ಶ್ರೀ ರಾಮಚಂದ್ರ ಗೌಡ:–** ನಮ್ಮ ವಕೀಲರ ಒಟ್ಟಾರೆ ತಂಡಕ್ಕೆ ನೀಡಿರುವ ಈ 76 ಕೋಟಿ ರೂಪಾಯಿಗೆ ತಮಿಳುನಾಡಿನಲ್ಲಿ ನಮ್ಮ ಕಾವೇರಿ ನೀರು ಹೋಗುತ್ತದೆಯಲ್ಲ, ಆ ಜಮೀನುಗಳನ್ನು ನಾವು ಕೊಂಡುಕೊಳ್ಳಬಹುದಾಗಿತ್ತು. ಅವರಿಗೆ 76 ಕೋಟಿ ರೂಪಾಯಿ ಏನು ಖರ್ಚು ಮಾಡಿದ್ದೇವೆ ಆ ಹಣದಿಂದ ನಮ್ಮ ಮಂಡ್ಯ ಜಿಲ್ಲೆಯ ರೈತರೇ ಆ ಜಮೀನುಗಳನ್ನು ಕೊಂಡುಕೊಳ್ಳಬಹುದಾಗಿತ್ತು. ಅಲ್ಲದೆ ಇದರಿಂದ ಮುಂದೆ ಯಾವುದೇ ತೊಂದರೆ ಬರುತ್ತಿರಲಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ :–** ಇದನ್ನು ವಿದ್ಯಾವಂತರು, ಅವಿದ್ಯಾವಂತರು ಇಲ್ಲವೇ ಆ ಪಕ್ಷ, ಈ ಪಕ್ಷ ಅಥವಾ ಇದರ ಬಗ್ಗೆ ಎಲ್ಲಾ ಕಡೆ ಸರ್ಕಸ್ ಮಾಡಿದರೂ, ಕೂಡ ಯಾವುದೇ ತಕ್ಕಡಿಯಲ್ಲಿಟ್ಟು ತೂಗಿದರೂ ಕೂಡ ಯಾಕೆ ಇಂತಹ ಈ ತೀರ್ಪುಗಳು ಬರುತ್ತದೆ ಎಂಬುದು ಯಾರಿಗೂ ಗೊತ್ತಾಗುತ್ತಿಲ್ಲ. ಪ್ರತಿಯೊಂದು ತೀರ್ಪು ಬರುವಂತಹ ಸಂದರ್ಭದಲ್ಲಿ ನಮ್ಮ ಕರ್ನಾಟಕದ ಜನಗಳಿಗೆ ಸ್ವಲ್ಪವಾದರೂ ನಮ್ಮ ಪರವಾಗಿ ತೀರ್ಪು ಬರಬಹುದು ಎಂಬ ಒಂದು ಆಸೆ ಇರುತ್ತದೆ. ಈಗ ಅಕ್ಟೋಬರ್ 18 ರಂದು ತೀರ್ಪು ಬರುತ್ತದೆಂಬ ಒಂದು ಆಸೆಯನ್ನು ಇಟ್ಟುಕೊಂಡು ಕುಳಿತಿದ್ದೇವೆ. ಅಕ್ಟೋಬರ್ 18 ನೇ ತಾರೀಖು ಅಂತಿಮ ತೀರ್ಪು ಬರುತ್ತಿದೆ. ಹಾಗಾಗಿ ಇಲ್ಲಿ ಚರ್ಚೆ / ವಾದ ಮಾಡುವಂತಹ ಸಂದರ್ಭದಲ್ಲಿ ಅವರ ಬಗ್ಗೆ ಹೇಳಬೇಡಿ, ಇವರ ಬಗ್ಗೆ ಹೇಳಬೇಡಿ, ಟೀಕೆ ಮಾಡಬೇಡಿ ಎಂಬ ವಿಚಾರ ಕೇಳಿ ಬರುತ್ತಿದೆ. ಆದರೆ ಇಲ್ಲಿಂದ ತಮಿಳುನಾಡಿಗೆ ಮಾತ್ರ ನೀರು ಹೋಗುತ್ತಲೇ ಇದೆ. ಅದೇ ರೀತಿ ವಕೀಲರುಗಳಿಗೆ ದುಡ್ಡು ನೀರಿನ ತರಹ ಹರಿದು ಹೋಗುತ್ತಿದೆ ಮಾನ್ಯ ಸಭಾ ನಾಯಕರೇ, ಇದು ನನ್ನ ವೈಯಕ್ತಿಕ ಅಭಿಪ್ರಾಯ ಅಪ್ಪಾ. ನೀವು ಏನಾದರೂ

ಅಂದುಕೊಳ್ಳಿ ನಾನು ತಮಗೆ ಕೈಮುಗಿಯುತ್ತೇನೆ ದಯವಿಟ್ಟು ನಮ್ಮ ಕರ್ನಾಟಕದ ಪರವಾಗಿ ವಾದ ಮಾಡುತ್ತಿರುವ ಹಿರಿಯ ನ್ಯಾಯವಾದಿಗಳಾದ ಶ್ರೀ ಫಾಲಿ ಎಸ್. ನಾರಿಮನ್ ಅವರನ್ನು ಬದಲಾಯಿಸಿ ಬಿಡಿ, ಆಗಲೇ ಅವರು ಪಲಾಯನ ವಾದ ಮಾಡಿ ಆಯಿತು. ಸರ್ವೋಚ್ಚ ನ್ಯಾಯಾಲಯದ ತೀರ್ಪು ಬರುತ್ತಿದ್ದ ಹಾಗೆಯೇ ಅವರು ನಾನು ಇಂತಿಷ್ಟು ವರ್ಷ ವಾದ ಮಾಡಿಕೊಂಡು ಬಂದಿದ್ದೇನೆ. ನನಗೆ ವಿಶ್ವಾಸವಿದೆ. ಅಕ್ಟೋಬರ್ 18 ನೇ ತಾರೀಖು ಬರುವಂತಹ ತೀರ್ಪಿನಲ್ಲಿ ಕರ್ನಾಟಕದ ಪರ ಬರುತ್ತದೆ ನೀವೇನು ತಲೆ ಕೆಡಿಸಿಕೊಳ್ಳಬೇಡಿ ಎಂದು ಅವರಿಗೆ ಕೆಲವು ಒಳ್ಳೆಯ ಮಾತಾಡುವುದಕ್ಕೂ ಬರುವುದಿಲ್ಲ. ಪುಸ್ತಕ ಬಿಸಾಕಿ ಹೋಗುವುದಕ್ಕೆ ಈ ವಕೀಲರೇ ಆಗಬೇಕಾಗಿತ್ತೇನು? ಇಂತಹ ವಕೀಲರನ್ನು ನಾವು ಇಟ್ಟುಕೊಳ್ಳಬೇಕೇನು? ನನಗೆ ಅನಿಸುತ್ತದೆ ಮಾನ್ಯ ಸಭಾಪತಿಗಳೇ ಇನ್ನು ಬೇಕಾದಷ್ಟು ಜನ ಮೇಧಾವಿಗಳು ಹುಟ್ಟಿಕೊಂಡು ಬರುತ್ತಾರೆ. ಈ ಮೇಧಾವಿತನ ಎನ್ನುವುದು ಯಾರೇ ಒಬ್ಬರ ಕೈಯಲ್ಲಿ ಇರುವುದಿಲ್ಲ. ಹಿರಿಯ ನ್ಯಾಯವಾದಿಗಳಾದ ಶ್ರೀ ಫಾಲಿ ಎಸ್. ನಾರಿಮನ್ ಅವರಿಗೆ ಆ ಒಂದು ಅವಕಾಶ ಸಿಕ್ಕಿತು ನಾರಿಮನ್, ನಾರಿಮನ್ ಅಂತಾ ಅವರಿಗೆ ಅವಕಾಶ ಸಿಕಿದ್ದಕ್ಕೆ ಅವರು ಈ ಕೇಸಿನಲ್ಲಿ ಇಲ್ಲಿಯ ತನಕ ಬಂದರು. ಕರ್ನಾಟಕ ರಾಜ್ಯಕ್ಕೆ ಇವತ್ತಿನ ತನಕ ಏನೇನು ಉಪಯೋಗವಾಗಿಲ್ಲ. ಇನ್ನೂ ಅನೇಕ ಯುವಕರು ಇರುತ್ತಾರೆ ಅವರಿಗೂ ಅವಕಾಶವನ್ನು ಮಾಡಿಕೊಡಿ. ಯಾಕಾಗುವುದಿಲ್ಲ ನೋಡೋಣ. ಈ ರೀತಿ ಯಾವುದೋ ಒಬ್ಬ ವ್ಯಕ್ತಿ ಬಗ್ಗೆ ಈ ರೀತಿ ಮಾತನಾಡುತ್ತಾ ಕುಳಿತುಕೊಂಡರೆ ಏನು ಉಪಯೋಗವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಅವರು ತಮ್ಮ ನೋವನ್ನು ತೋಡಿಕೊಂಡಿದ್ದಾರೆ. “125 ವರ್ಷಗಳ ಇತಿಹಾಸವುಳ್ಳ ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಆರು ಆದೇಶಗಳು ರಾಜ್ಯಕ್ಕೆ ಮಾರಕವಾಗಿವೆ. ಸುಪ್ರೀಂ ಕೋರ್ಟ್ ಕೂಡ ರಾಜ್ಯಕ್ಕೆ ಆದ ಗಾಯದ ಮೇಲೆ ಬರೆ ಎಳೆದಿದ್ದು, ಕಾವೇರಿ ವಿಚಾರದಲ್ಲಿ ರಾಜ್ಯ ಬಲಿಪಶುವಾಗಿದೆ” ಎಂದು ಮಾನ್ಯ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ. ಎಲ್ಲಿಯ ತನಕ ಈ ರೀತಿ ಆಸಹಾಯಕತೆಯನ್ನು ತೋಡಿಕೊಳ್ಳಬೇಕು. ಕಳೆದ 125 ವರ್ಷದಿಂದ ಕರ್ನಾಟಕ ರಾಜ್ಯದಲ್ಲಿ ಕಾವೇರಿ ವಿಚಾರದಲ್ಲಿ ಯಾವುದೇ ಪಕ್ಷ ರಾಜಕಾರಣ ಮಾಡಿಲ್ಲ ನಾವು ಒಟ್ಟಾಗಿಯೇ ಇದ್ದೆವು ಮುಂದೆ ಕೂಡ ಅದೇ ರೀತಿ ಇರಬೇಕಾಗುತ್ತದೆ. ಆದರೆ ಎಲ್ಲೋ ಒಂದು ಕಡೆಯಲ್ಲಿ ನಾವು ವಾದ ಮಾಡುವುದರಿಂದ fail ಆಗಿರಲೇಬೇಕು ಅಲ್ಲವೇ? ಇದು ಬಹಳ ಮುಖ್ಯ. ನಾನು ಇದನ್ನು ಮೇಲ್ನೋಟಕ್ಕೆ ಹೇಳುತ್ತಿದ್ದೇನೆ. ಅದನ್ನು ಮತ್ತೆ ಮತ್ತೆ repeat ಮಾಡುವುದಿಲ್ಲ. ಇಲ್ಲಿ ನೀರು ಇಲ್ಲದಿದ್ದರೂ ಅವರಿಗೆ ನೀರನ್ನು ಬಿಟ್ಟುಕೊಡಬೇಕು. ನಿಮಗೆ ನೀರು ಇಲ್ಲದಿದ್ದರೂ ಪರವಾಗಿಲ್ಲ, ನೀವು ಸತ್ತರೂ ಪರವಾಗಿಲ್ಲ. ನಿಮಗೆ ಕುಡಿಯುವುದಕ್ಕೆ ನೀರು ಇಲ್ಲದಿದ್ದರೂ ಪರವಾಗಿಲ್ಲ, ತಮಿಳುನಾಡಿಗೆ ನೀರು ಕೊಡಿ. ಇದು ಯಾವ ಸೀಮೆ ತೀರ್ಪು? ಇದಕ್ಕೋಸ್ಕರ ಇವತ್ತು ನಾವು ಒಟ್ಟಾಗಿ ಈ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟುಕೊಂಡು ಬಂದಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಪ್ರಾರಂಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನೀರು ಬಿಡುವುದಿಲ್ಲ ಎಂದರು. ಆಮೇಲೆ ನೀರು ಬಿಡುತ್ತೇವೆ ಅಂದರು. ಯಾಕೆ? ಏನು? ಎನ್ನುವುದು ಗೊತ್ತಿಲ್ಲ. ಸರ್ವ ಪಕ್ಷ ಸಭೆ ಕರೆದಿದ್ದರು ಆ ಸಭೆಯಲ್ಲಿ ನಾವೆಲ್ಲಾ ಇದ್ದಾಗ, ನೀರು ಬಿಡಬೇಡಿ ಬಿಡಬೇಡಿ ಬಿಡಬೇಡಿ ಎಂದು ಹೇಳಿದ್ದೆವು. ಎರಡನೇ ಸಭೆ ಕರೆದಾಗ ನಾವು ಹೋಗಿ, ನಾವು ತಮಿಳು ನಾಡಿಗೆ ನೀರು ಬಿಡಬೇಡಿ ಎಂದು ಹೇಳಿದರೂ ಕೂಡ ನೀರು ಬಿಟ್ಟರು. ಮೂರನೇ ಸಭೆ ಕರೆದಾಗ ನಾವು ಹೋಗಲಿಲ್ಲ. ಯಾಕೆ ಸುಮ್ನೆ ಸಭೆಗೆ ಹೋಗಿ ಅಲ್ಲಿ ಸುಮ್ಮನೆ ನಾವು ಹೇಳಿ ಬರುವುದಕ್ಕಿಂತಲೂ ಸುಮ್ನೆ ಮನೆಯಲ್ಲಿ ಕುಳಿತುಕೊಳ್ಳಬಹುದು ಅಲ್ಲವೇ? ನಾಲ್ಕನೇ ಸಭೆ ಮತ್ತೆ ಕರೆದಾಗ ನಾವು ಹೇಳಿರುವ ಮಾತನ್ನು ಕೇಳಿದರು ದಿಟ್ಟ ಹೆಜ್ಜೆಯನ್ನು ಇಟ್ಟರು. ನೀರು ಬಿಡುವುದಿಲ್ಲ ಎಂದು ಹೇಳಿದರು. ನಮಗೆ ಕುಡಿಯುವ ನೀರಿನ ಪರಿಸ್ಥಿತಿಗೆ ತೀವ್ರ ತೊಂದರೆ ಬಂದಿರತಕ್ಕಂತಹ ಆ ಒಂದು ಹಿನ್ನೆಲೆಯಲ್ಲಿ ಸರ್ವಾನುಮತದಿಂದ ಈ ತೀರ್ಮಾನವನ್ನು

ತೆಗೆದುಕೊಂಡಿದ್ದೇವೆ. ಈಗ ಸುಪ್ರೀಂ ಕೋರ್ಟ್ ಏನು ಹೇಳುತ್ತೇ? ನೀವು ತುರ್ತಾಗಿ Cauvery Management Committee ಮಾಡಿ ಎಂದು ಹೇಳಿದೆ. Cauvery Management Committee ಮಾಡಿ ಎಂದು ಸುಪ್ರೀಂ ಕೋರ್ಟ್ ತೀರ್ಪು ಕೊಡಬೇಕಾದರೆ, ಆ ತೀರ್ಪು ಕೊಡುವುದಕ್ಕೆ ಅದರಲ್ಲೇನಾದರೂ sanctity ಇದೆಯೇ? ಏನು ನೋಡಬೇಕಿತ್ತು ತಾನೇ. ಇಂತಹ ತೀರ್ಪು ಕೊಡಬೇಕು ಅನ್ನುವ ಸಂದರ್ಭದಲ್ಲಿ 2013 ರಲ್ಲಿ ಏನಾಗಿತ್ತು ಎನ್ನುವ ಆ ಕಲ್ಪನೆ ಕೂಡ ಆ ತೀರ್ಪುಗಳನ್ನು ಕೊಡುವ ವ್ಯಕ್ತಿಗಳಿಗೆ ಇರಬಾರದೇ? 2013 ರಲ್ಲಿ ತುಂಬಾ ಸ್ಪಷ್ಟವಾಗಿದೆ ಯಾವುದೇ ಕಾರಣಕ್ಕೂ ಕೂಡ ಈ ರೀತಿ Management Committee ಮಾಡಬೇಕಾದರೆ ಒಂದು, ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿರಬೇಕು. ಇದನ್ನೆಲ್ಲವನ್ನೂ quote ಮಾಡಿಕೊಂಡು ಹೋಗಿ ಅಲ್ಲಿ ಕೊಟ್ಟಾಗ, ಅದಕ್ಕೆ ತಡೆಯಾಜ್ಞೆ ಸಿಕ್ಕಿದೆ. ಇವರು ಏನು ತೀರ್ಪು ಕೊಡುತ್ತಾರೆ. ನಮ್ಮ ಅಟಾರ್ನಿ ಜನರಲ್ ಆಗಿರುವ ಶ್ರೀ ಮುಕುಂದರಾವ್ ರೋಹಟ್ಗಿಯವರು ಅಲ್ಲಿ ಒಪ್ಪಿಕೊಂಡು ಬರುತ್ತಾರೆ. ಒಪ್ಪಿಕೊಂಡು ಬಂದ ನಂತರ ಇದು ಬಹಳ ದೊಡ್ಡ ಸಮಸ್ಯೆಯಾಗುತ್ತಿತ್ತು. ಕರ್ನಾಟಕ ರಾಜ್ಯದಲ್ಲಿ ಒಟ್ಟಾಗಿದ್ದೇವೆ ಇದಕ್ಕೋಸ್ಕರ ಕೇಂದ್ರ ಸರ್ಕಾರವು ಕೂಡ ಬಗ್ಗಬೇಕಾಯಿತು. ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಮಾನ್ಯ ದೇವೇಗೌಡರವರಿಗೆ ಸರ್ಕಾರ ಅಭಿನಂದಿಸಿರುವುದನ್ನು ನಾನು ಒಪ್ಪುತ್ತೇನೆ. ಜೊತೆಗೆ ನಮ್ಮ ಕರ್ನಾಟಕ ರಾಜ್ಯದ ಮಂತ್ರಿಗಳಾದ ಶ್ರೀ ಅನಂತ್ ಕುಮಾರ್, ಶ್ರೀ ಸದಾನಂದಗೌಡ ಮತ್ತು ಶ್ರೀ ರಮೇಶ ಜಿಗಜಿಣಗಿ ಅವರು ಹೋಗಿ ಕುಳಿತು ಮಾತನಾಡಿ, 2013 ರಲ್ಲಿ ಹೀಗಾಗಿದೆ ಕೊಡುವುದಕ್ಕೆ ಬರುವುದಿಲ್ಲ ಎಂದು ತಿಳಿಸಿದ್ದಾರೆ. ಶ್ರೀ ನರೇಂದ್ರ ಮೋದಿಯವರು ಇದರ ಮಧ್ಯೆ intervene ಆಗಿ ಇವತ್ತು ಬೆಳಿಗ್ಗೆ 11.00 ಗಂಟೆಗೆ ಅಫಿಡವಿಟ್ ಅನ್ನು ಹಾಕಿದ್ದಾರೆ. ಈ ರೀತಿ ಅಫಿಡವಿಟ್ ಅನ್ನು ಹಾಕಬೇಕು. ಅವರು 20 ಸಾವಿರ ಕ್ಯೂಸೆಕ್ ನೀರು ಬಿಡಬೇಕು ಎಂದು ತಮಿಳುನಾಡಿನವರು ಕೇಳಿದರೆ, 10 ಸಾವಿರ ಕ್ಯೂಸಕ್ ಕೊಡುತ್ತೇವೆ ಎಂದು ನಮ್ಮವರು ಅಫಿಡವಿಟ್ ಅನ್ನು ಹಾಕುತ್ತಾರಲ್ಲಾ ಈ ರೀತಿಯಾದ ಅಫಿಡವಿಟ್ ಅನ್ನು ಹಾಕಬೇಕೋ ಇಲ್ಲವೆ ಮಾನ್ಯ ಪ್ರಧಾನ ಮಂತ್ರಿಯವರು ಅಫಿಡವಿಟ್ ಅನ್ನು ಹಾಕಿದ್ದಾರಲ್ಲಾ ಅಂತಹ ಅಫಿಡವಿಟ್ ಅನ್ನು ಹಾಕಬೇಕೋ ತಾವೇ ವಿಚಾರ ಮಾಡಿ. ಇವತ್ತು ಕೇಂದ್ರ ಸರ್ಕಾರ ಮಧ್ಯೆ ಬಂದಿದೆ ತುಂಬಾ ಸಂತೋಷ. ಇದೇ ರೀತಿ ಒಗ್ಗಟ್ಟಾಗಿದ್ದರೆ ನನಗೆ ಅನಿಸುತ್ತದೆ, ಮಹಾದಾಯಿ ಬಗ್ಗೆ ಕೂಡ ಕೇಂದ್ರ ಸರ್ಕಾರ ಮಧ್ಯೆ ಬರುತ್ತದೆ. ನಮ್ಮ ನಮ್ಮ ಮಧ್ಯೆ ರಾಜಕಾರಣ ಮಾಡಿಕೊಂಡರೆ ಇದು ಆಗುವುದಿಲ್ಲ. ಗೋವಾದಲ್ಲಿ ಕಾಂಗ್ರೆಸ್ ಸರ್ಕಾರವಿತ್ತು. ಅವರು ಬಿಡುವುದಿಲ್ಲ ಅಂದರು. ಗೋವಾದಲ್ಲಿ ಈಗ ಬಿಜೆಪಿ ಸರ್ಕಾರ ಬಂತು ಈಗ ಅವರು ಬಿಡುವುದಿಲ್ಲ ಅನ್ನುತ್ತಾರೆ. ಗೋವಾದಲ್ಲಿ ಆಗ ಕಾಂಗ್ರೆಸ್ ಸರ್ಕಾರ, ಕೇಂದ್ರದಲ್ಲಿ ಆಗ ಯುಪಿಎ ಸರ್ಕಾರವಿತ್ತು ಅವರು ಬಿಡುವುದಿಲ್ಲ ಅಂದರು ಈಗ ಎನ್‌ಡಿಎ ಸರ್ಕಾರ ಇದೆ ಈಗ ನಾವು ಬಿಡುವುದಿಲ್ಲ ಅನ್ನುವಂತಹ ಪರಿಸ್ಥಿತಿ ಇದೆ. ಇದೇ ಪರಿಸ್ಥಿತಿ ಮಹಾದಾಯಿ ನೀರಾವರಿ ಯೋಜನೆಗೂ ಕೂಡ ಬರುತ್ತದೆ. ಅದೂ ಕೂಡ ನಮ್ಮ ನೀರು, ನಮ್ಮ ಭೂಮಿ, ನಮ್ಮ ದುಡ್ಡು. ಇಲ್ಲಿ ನಾವು ರಾಜಕಾರಣ ಮಾಡುತ್ತಾ ಹೋದರೆ ಖಂಡಿತವಾಗಿ ಮುಂದೆ ಇದರಲ್ಲಿ ಕೂಡ ಬಹಳ ದೊಡ್ಡ ಪೆಟ್ಟು ತಿನ್ನಬೇಕಾಗುತ್ತದೆ.

**ಶ್ರೀ ವಿ.ಸೋಮಣ್ಣ:-** ತಮ್ಮ ಮೂಲಕ ಸಭೆಯಲ್ಲಿ ವಿನಂತಿ ಮಾಡುವುದೇನೆಂದರೆ, ಇವತ್ತು ಸುಪ್ರೀಂ ಕೋರ್ಟ್‌ಗೆ ನಮ್ಮ ಭಾರತ ಸರ್ಕಾರದ ಆಟಾರ್ನಿ ಜನರಲ್‌ರವರು ಒಂದು ಅರ್ಜಿಯನ್ನು ಹಾಕಿರತಕ್ಕಂತಹ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನವರು Inter-State Water Disputes Act ಪ್ರಕಾರ, ಸೆಕ್ಷನ್ 6(ಎ), ಸಬ್-ಸೆಕ್ಷನ್ (7) ರಲ್ಲಿ ಬಹಳ ಕ್ಲಿಯರ್ ಆಗಿ ಹೇಳಿದ್ದಾರೆ. ಪಾರ್ಲಿಮೆಂಟ್‌ನ ಎರಡೂ ಸದನಗಳಲ್ಲಿ ಈ ಕಾಯಿದೆಯನ್ನು ಮಂಡನೆ ಮಾಡಬೇಕಾಗುತ್ತದೆ. ನಂತರ ಈ ಕಾಯಿದೆಯನ್ನು ಜಾರಿ ಮಾಡುವುದಕ್ಕೆ ಪಾರ್ಲಿಮೆಂಟ್‌ನ ಎರಡು ಸದನಗಳಲ್ಲೂ ಕೂಡ ಚರ್ಚೆಯಾಗಿ ಅದಕ್ಕೆ ಅಂಗೀಕಾರ ದೊರೆಯಬೇಕಾಗುತ್ತದೆ. ಅದರ ನಂತರ ನಾವು ಕಾಯಿದೆ

ಮಾಡಬೇಕಾಗುತ್ತದೆ. ಈ ಬಗ್ಗೆ ಸಮಗ್ರವಾಗಿ ಚರ್ಚೆಯಾದ ಮೇಲೆ ನಾವು ಇದಕ್ಕೇನಾದರೂ ಮಾಡುವುದಕ್ಕೆ ಅವಕಾಶವಿದೆಯೇ ವಿನಃ, ನಾವು ಇವತ್ತು ಇದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿರತಕ್ಕಂತಹ ಒಂದು ಅಪರೂಪದ ಸಂಗತಿ. ಮೊದಲಬಾರಿಗೆ ಭಾರತ ಸರ್ಕಾರ ಇವತ್ತು ಕೈಗೊಂಡಿರತಕ್ಕಂತಹ ನಿರ್ಣಯ ಸ್ವಾಗತಾರ್ಹವಾಗಿದೆ. ಸನ್ಮಾನ್ಯ ದೇವೇಗೌಡರು ಬೆಳಗಿನಿಂದ ಸಂಜೆಯವರೆವಿಗೂ ವಿಧಾನಸೌಧದ ಗಾಂಧೀಜಿ ಪ್ರತಿಮೆಯ ಬಳಿ ಉಪವಾಸ ಕುಳಿತಿರತಕ್ಕಂಥಾದ್ದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅಂದು ಸಂಜೆ ಹೊತ್ತು ಕೇಂದ್ರ ಸಚಿವರಾಗಿರತಕ್ಕಂತಹ ಸನ್ಮಾನ್ಯ ಆನಂತ್‌ಕುಮಾರ್, ಮಾನ್ಯ ಸದಾನಂದಗೌಡರು, ಮಾನ್ಯ ಜಗದೀಶ್ ಶೆಟ್ಟರ್ ಅವರೆಲ್ಲರೂ ಕೂಡಿ ಅವರ ಬಳಿ ಹೋಗಿ ಮಾತನಾಡಿಸಿ ಹೋದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಆ ಸ್ಥಳಕ್ಕೆ ಹೋಗಿ ಪ್ರಾಯಶ: ಆವತ್ತು ಮಾನ್ಯ ಮಾಜಿ ಪ್ರಧಾನ ಮಂತ್ರಿಯವರು ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸುವ ಸಂದರ್ಭದಲ್ಲಿ ಅವರಿಗೆ ಎಳನೀರನ್ನು ನೀಡಿ ನಂತರ, ಇನ್ನೊಂದು ಮಾತನ್ನು ಹೇಳಿದ್ದಾರೆ ಸನ್ಮಾನ್ಯ ಸಭಾಪತಿಗಳೇ. 2007 ರಲ್ಲಿ ಈಗಾಗಲೇ ತ್ರಿ ಸದಸ್ಯ ಪೀಠಕ್ಕೆ ತಮಿಳುನಾಡು ಮತ್ತು ಕರ್ನಾಟಕ ಎರಡು ರಾಜ್ಯಗಳೂ ಕೂಡ ಅರ್ಜಿ ಹಾಕಿದೆ. ಏನು ಇವತ್ತು ಕಾವೇರಿ ನಿರ್ವಹಣಾ ಮಂಡಳಿಯನ್ನು ರಚನೆ ಮಾಡಬೇಕು ಎಂದು ಇದ್ದೀರಿ ಇದರ ಬಗ್ಗೆ ಒಪ್ಪಿಗೆ ಇಲ್ಲ ಎಂದು ನಮ್ಮ ರಾಜ್ಯದವರು ತಿಳಿಸಿದ್ದಾರೆ. ಈ ಎಲ್ಲಾ ಗೊಂದಲಗಳ ಮಧ್ಯದಲ್ಲಿ ಪ್ರಾಯಶ: ನನಗೆ ತಿಳಿದ ಮಟ್ಟಿಗೆ ಸನ್ಮಾನ್ಯ ಸಿದ್ಧರಾಮಯ್ಯನವರು ದೂರ ದೃಷ್ಟಿ ಇರಬಹುದು. ಸನ್ಮಾನ್ಯ ದೇವೇಗೌಡರವರ ಅನುಭವದ ಚಿಂತನೆ ಇರಬಹುದು ಮತ್ತೆ ಕೇಂದ್ರ ಸರ್ಕಾರದ ಪ್ರಧಾನಿ ಮಂತ್ರಿಗಳಾಗಿರತಕ್ಕಂತಹ ಸನ್ಮಾನ್ಯ ನರೇಂದ್ರ ಮೋದಿಯವರು ತೆಗೆದುಕೊಂಡಿರತಕ್ಕಂತಹ ಕಾರ್ಯಕ್ರಮ, ಒಂದು ಹಂತಕ್ಕೆ ಕರ್ನಾಟಕದಲ್ಲಿ ಇವತ್ತು ಏನು ಆಗಬೇಕಾಗಿತ್ತೋ ಅಂತಹ ಒಂದು ದೊಡ್ಡ ಗಂಡಾಂತರವನ್ನು ಎಲ್ಲೋ ಒಂದು ಕಡೆ ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡರು ಎನ್ನುವಂತಹ ಪರಿಸ್ಥಿತಿ ತಂದುಕೊಂಡ ಹಾಗಾಗಿದೆ. ಇವತ್ತು ಈಗಾಗಲೇ ಆಟಾರ್ನಿ ಜನರಲ್‌ರವರು ಅರ್ಜಿ ಹಾಕಿದ್ದಾರೆ. ಆದುದರಿಂದ, ಸನ್ಮಾನ್ಯ ಸಭಾಪತಿಗಳೇ ಇದಕ್ಕೆ ಕಾರಣವಾಗಿರತಕ್ಕಂತಹ ಇವತ್ತು ನಮ್ಮ ಪಕ್ಷದ ಕಾರ್ಯಕಾರಿ ಸಮಿತಿ ನಡೆಯುತ್ತಿದೆ. ಸನ್ಮಾನ್ಯ ಆನಂತ್‌ಕುಮಾರ್ ನಿನ್ನೆಯೇ ಹೋಗಿ ಪ್ರಧಾನಿ ಮಂತ್ರಿಗಳನ್ನು ಭೇಟಿ ಮಾಡಿ ಇಲ್ಲಿನ ಪರಿಸ್ಥಿತಿಯ ವಾಸ್ತವ ಸಂಗತಿಯನ್ನು ಅವರಿಗೆ ಮನದಟ್ಟು ಮಾಡಿದ್ದಾರೆ. ಆಟಾರ್ನಿ ಜನರಲ್ ಅವರು ಏನು ಹಿಂದೆ ಹೇಳಿದ್ದರು, ಅದರ ಬದಲಾವಣೆಯನ್ನು ಮಾಡಿ ಕರ್ನಾಟಕ ರಾಜ್ಯಕ್ಕೆ ಒಂದು ಹೊಸ ವ್ಯವಸ್ಥೆ ತರತಕ್ಕಂಥಾದ್ದಕ್ಕೆ ಕೇಂದ್ರ ಸರ್ಕಾರವು ಕೂಡ ರಾಜ್ಯ ಸರ್ಕಾರದ ಜೊತೆಯಲ್ಲಿ ಸ್ಪಂದಿಸಿದೆ. ಸನ್ಮಾನ್ಯ ಸಭಾಪತಿಯವರೇ, ಇದಕ್ಕೆ ಸನ್ಮಾನ್ಯ ದೇವೇಗೌಡರ ಸಮ್ಮತಿಯ ಜೊತೆಗೆ ಪಕ್ಷಾತೀತವಾಗಿ ಎಲ್ಲ ಸದಸ್ಯರು ಇದಕ್ಕೆ ಕೈಜೋಡಿಸಿದ ಫಲವಾಗಿ ಒಳ್ಳೆಯ ಅಂತಿಮ ತೀರ್ಮಾನಕ್ಕೆ ಬರುವ ಶುಭ ಸೂಚನೆಯನ್ನು ಕಾಣುವಂತಹ ಸಂದರ್ಭವನ್ನು ನಾವು ನೋಡಬಹುದಾಗಿದೆ.

**ಡಾಃಜಿ.ಪರಮೇಶ್ವರ್‌ಃ–** ಸನ್ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ್ದೇನೆ. ಆದರೆ, ಅಟಾರ್ನಿ ಜನರಲ್ ಅವರಿಗೆ ಸೆಕ್ಷನ್ 6(ಎ), ಸಬ್–ಸೆಕ್ಷನ್ (7) ಬಗ್ಗೆ ಗೊತ್ತಿರಲಿಲ್ಲವೇ? ಕಾವೇರಿ ನಿರ್ವಹಣಾ ಮಂಡಳಿ ರಚನೆಗೆ ಸುಪ್ರೀಂ ಕೋರ್ಟ್ ನಾಲ್ಕು ವಾರಗಳ ಸಮಯವನ್ನು ಕೊಟ್ಟಿದ್ದರೂ ಸಹ ಅಟಾರ್ನಿ ಜನರಲ್‌ರವರು ಏಕಾಏಕಿಯಾಗಿ 'ಮೂರೇ ದಿವಸದಲ್ಲಿ ನಿರ್ವಹಣಾ ಮಂಡಳಿ ರಚನೆ ಮಾಡುತ್ತೇವೆ' ಎಂದು ಹೇಳುವಂತಹ ಅಗತ್ಯತೆ ಇರಲಿಲ್ಲ. ಅವರು ಪ್ರಜ್ಞಾವಂತರು ಮತ್ತು ಕಾನೂನಿನ ಬಗ್ಗೆ ಅರಿವಿರುವವರು. ಆ ದಿನವೇ 'ಈ ಸೆಕ್ಷನ್ ಪ್ರಕಾರ ಕಾವೇರಿ ನಿರ್ವಹಣಾ ಮಂಡಳಿ ರಚನೆ ಮಾಡುವುದಕ್ಕೆ ಬರುವುದಿಲ್ಲ' ಎಂದು ಹೇಳಬಹುದಾಗಿತ್ತು. 'My Lord, this is the situation' ಎಂದು ಹೇಳಿದ್ದರೆ ಈ ರೀತಿಯ ಗೊಂದಲವುಂಟಾಗುತ್ತಿರಲಿಲ್ಲ. ಆದರೂ ಕೂಡ ಈಗ ತಡವಾಗಿ ಜ್ಞಾನೋದಯವಾಗಿದೆ. ಇದನ್ನು ಮಾನ್ಯ ನಾರಿಮನ್‌ರವರು ಸಹ ಹೇಳಿದ್ದಾರೆ. ಆದರೆ, ಅಟಾರ್ನಿ ಜನರಲ್‌ರವರೇ ಮಂಡಳಿ ರಚನೆಯ

ಬಗ್ಗೆ ಒಪ್ಪಿಕೊಂಡು ಬಂದ ಮೇಲೆ ಬೇರೆ ಏನು ಹೇಳುವುದಕ್ಕೆ ಸಾಧ್ಯವಿದೆ? ಮಧ್ಯ ಪ್ರವೇಶ ಮಾಡಿ ಕೇಂದ್ರ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದೆ ಅದು ಸರಿ. ಒಂದು ಮಿತಿಯವರೆಗೂ ಪ್ರಶಂಸೆ ಮಾಡಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅವರು ಇನ್ನೊಬ್ಬ ನಾರಿಮನ್ ಆಗಿದ್ದಾರೆ. ನಾರಿಮನ್ ನೂರು ಬಾರಿ ತಪ್ಪು ಮಾಡಿಕೊಂಡು ಬಂದರೂ ಸಹ ಈ ಸರ್ಕಾರ ಸುಮ್ಮನೆ ಕುಳಿತುಕೊಂಡಿದ್ದು, ಅಟಾರ್ನಿ ಜನರಲ್ ಒಂದು ಸಾರಿ ತಪ್ಪು ಮಾಡಿದ ಕೂಡಲೇ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶ ಮಾಡಿ ತಕ್ಷಣ ಇವತ್ತು ಅಫಿಡವಿಟ್ ಹಾಕಿದೆ. ಇದಕ್ಕಾಗಿ ನಾವೆಲ್ಲರೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.

**ಡಾ:ಜಿ.ಪರಮೇಶ್ವರ್:–** ಸನ್ಮಾನ್ಯ ಸಭಾಪತಿಯವರೇ, ಅವರಿಗಿಂತಲೂ ಮೊದಲೇ ನಾನು ಕೇಂದ್ರ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸೋಮಣ್ಣನವರು ಬಹಳ ಸ್ಪಷ್ಟವಾಗಿ ಈ ಬಗ್ಗೆ ಹೇಳಿದ್ದಾರೆ. ರಾಜ್ಯ ಸರ್ಕಾರ ಈ ವಿಚಾರವಾಗಿ ಒಂದಿಷ್ಟು ಬುದ್ಧಿವಂತಿಕೆಯನ್ನು ಪ್ರದರ್ಶನ ಮಾಡುತ್ತಿದೆ. ಕಾವೇರಿ ನೀರನ್ನು ಉಳಿಸಿಕೊಳ್ಳಬೇಕೆಂದು ಸರ್ಕಾರ ಪ್ರಯತ್ನ ಮಾಡುತ್ತಿದ್ದಾಗ, ನಾವೆಲ್ಲರೂ ಪಕ್ಷಾತೀತವಾಗಿ ಅವರ ಆ ಪ್ರಯತ್ನಕ್ಕೆ ಎಂದೂ ಅಡ್ಡಿಪಡಿಸಿಲ್ಲ. ನಾವುಗಳು ಅವತ್ತಿನಿಂದಲೂ 'ನಾರಿಮನ್ ಅವರನ್ನು ನಂಬಬೇಡಿ' ಎಂದು ಒಂದು ಸಾರಿಯಲ್ಲ, ನೂರು ಸಾರಿ ಸರ್ಕಾರಕ್ಕೆ ಹೇಳುತ್ತಲೇ ಬಂದಿದ್ದೇವೆ. ಯಾವುದೇ ತೀರ್ಪು ನಮ್ಮ ರಾಜ್ಯದ ಪರವಾಗಿ ಬಂದಿಲ್ಲ. ಮೊನ್ನೆ ಅಕ್ಟೋಬರ್ 18ರಂದು ಹೊರಬಂದ ತೀರ್ಪಿನ ಬಗ್ಗೆ ಮಾತನಾಡುವುದಕ್ಕೆ ಹೋದರೆ, 'ಸುಮ್ಮನಿರಿ, ಮಾತನಾಡಲೇಬೇಡಿ' ಎಂದು ಮೇಲಿನ ಚಂದ್ರವನ್ನು ತೋರಿಸಿದರು. ನಾವು ಕಳ್ಳತನ ಮಾಡುತ್ತಿದೆವೆಯೇ? ನಾರಿಮನ್ ತಪ್ಪು ಮಾಡುತ್ತಿದ್ದಾರೆಂದು ಮಾನ್ಯ ವಿ.ಎಸ್.ಉಗ್ರಪ್ಪನವರು ಒಂದು ಬಾರಿ ಜೋರಾಗಿ ಹೇಳಿದರು. ಅದು ಸರ್ಕಾರದ ನಿಲುವು ಹೌದೋ ಅಲ್ಲವೋ ಎನ್ನುವ ಪ್ರಶ್ನೆ ಬೇರೆ. ನಾನು ಸಹ ಒಮ್ಮೆ ಈ ಬಗ್ಗೆ ಮಾತನಾಡಿದ್ದೇನೆ. ನಮ್ಮ ಪಕ್ಷದ ಬಹಳ ಜನರು 'ಯಾಕೆ ತಾವು ನಾರಿಮನ್ ಬಗ್ಗೆ ಮಾತನಾಡುತ್ತೀರಿ?' ಎಂದು ಹೇಳಿದರು. ಯಾಕೆ ನಾರಿಮನ್ ಬಗ್ಗೆ ಮಾತನಾಡಬಾರದೇ? ನಾರಿಮನ್ ದೇವರೇ? ಈಗ ಅಟಾರ್ನಿ ಜನರಲ್ ಅವರು ಮಾಡಿರುವ ಕೆಲಸದ ಬಗ್ಗೆ ರಾಜ್ಯ ಸಂಸದರುಗಳು ಹಾಗೂ ಕೇಂದ್ರ ಸಚಿವರುಗಳಾದ ಮಾನ್ಯ ಅನಂತ್‌ಕುಮಾರ್‌ರವರು, ಶ್ರೀ ಡಿ.ವಿ.ಸದಾನಂದ ಗೌಡರು ಮತ್ತು ಮಾನ್ಯ ರಮೇಶ್ ಜಿಗಜಿಣಗಿಯವರು ಹೋಗಿ ಪ್ರಧಾನಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರಿಗೆ ಹೇಳಿದಂತೆ, 'ನಾರಿಮನ್ ಕರ್ನಾಟಕವನ್ನು ಹಾಳು ಮಾಡುತ್ತಿದ್ದಾನೆ' ಎಂದು ಹೇಳುವುದಕ್ಕೆ ಇವರಿಗೆ ಏನು ತೊಂದರೆಯಾಗಿತ್ತು?

ಸನ್ಮಾನ್ಯ ಸಭಾಪತಿಯವರೇ, ನಿನ್ನೆಯವರೆಗೆ ನಾನು ಬೇರೆ ಬೇರೆ ಕೆಲಸಗಳಲ್ಲಿ ವ್ಯಸ್ತನಾಗಿದೆ. ಇವತ್ತು ಬೆಳಿಗ್ಗೆ 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ **"ಕಾವೇರಿ – ಕಡೆಗೂ ಮೋದಿ ಆಸಕ್ತಿ"** ಎಂಬ ಶಿರೋನಾಮೆಯಡಿಯಲ್ಲಿ ಅಚ್ಚಾಗಿರುವ ಒಂದು ಲೇಖನವನ್ನು ಓದಿದೆ. ಅದರಲ್ಲಿ;

> **"ಕಾವೇರಿ ಬಿಕ್ಕಟ್ಟು ಇತ್ಯರ್ಥ ಪಡಿಸಲು ಪ್ರಧಾನ ನರೇಂದ್ರ ಮೋದಿ ಆಸಕ್ತಿ ವಹಿಸಿದ್ದು, ಕೇಂದ್ರ ಸರ್ಕಾರ ಈ ದಿಸೆಯಲ್ಲಿ ಗಂಭೀರ ಹೆಜ್ಜೆ ಇರಿಸುವ ಸುಳಿವು ಸಿಕ್ಕಿದೆ. ಆದರೆ, ಪ್ರಧಾನಿ ನೇರವಾಗಿ ಸಂದಾನಕಾರನ ಪಾತ್ರ ವಹಿಸುವ ಸಾಧ್ಯತೆಗಳಿಲ್ಲ. ಬದಲಾಗಿ ಒಕ್ಕೂಟ ವ್ಯವಸ್ಥೆಯ ಹಿತದೃಷ್ಟಿಯಿಂದ ಮೋದಿ ಮಾರ್ಗದರ್ಶನದಲ್ಲಿ ನ್ಯಾಯಾಂಗದ ಚೌಕಟ್ಟಿನಲ್ಲೇ ವ್ಯವಹರಿಸುವ ಜಾಣ್ಮೆಯ ನಡೆಯನ್ನು ಕೇಂದ್ರ ಅನುಸರಿಸಲಿದೆ. ನ್ಯಾಯಾಂಗ ನಿಂದನೆಯ ತೂಗುಗತ್ತಿಯಿಂದ ರಾಜ್ಯ ಸರ್ಕಾರವನ್ನು ಪಾರು ಮಾಡುವ ವಿಷಯದಲ್ಲೂ ಕೇಂದ್ರ ತನ್ನ**

**ಕರ್ತವ್ಯವನ್ನು ಪ್ರಜ್ಞಾಪೂರ್ವಕವಾಗಿ ನಿಭಾಯಿಸಲಿದೆಯೆಂದು ಉನ್ನತ ಮೂಲಗಳಿಂದ ತಿಳಿದು ಬಂದಿದೆ"**

ಎಂದು ಪ್ರಕಟವಾಗಿದೆ. ನಾನು ಈ ವಿಚಾರವನ್ನು ಯಾಕೆ ಉಲ್ಲೇಖ ಮಾಡಿದ್ದೇನೆಂದರೆ, ಪ್ರಯತ್ನಗಳು ನಡೆಯುತ್ತಿರುವುದರ ಬಗ್ಗೆ ನನಗೆ ತಿಳಿದಿತ್ತು. ಸಂಸದರುಗಳಾದ ಮಾನ್ಯ ಅನಂತ್‌ಕುಮಾರ್‌ರವರು, ಶ್ರೀ ಡಿ.ವಿ.ಸದಾನಂದ ಗೌಡರು ಮತ್ತು ಮಾನ್ಯ ರಮೇಶ್ ಜಿಗಜಿಣಗಿಯವರು ಹೋಗಿ ಪ್ರಧಾನಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರನ್ನು ಭೇಟಿ ಮಾಡಿರುವುದು, ಅದೇ ರೀತಿಯಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ದೇವೇಗೌಡರು ಮೊನ್ನೆ ದಿನ ವಿಧಾನಸೌಧದ ಗಾಂಧಿಪ್ರತಿಮೆ ಬಳಿ ಉಪವಾಸ ಸತ್ಯಾಗ್ರಹ ಕುಳಿತ ವಿಚಾರ ತಿಳಿದಿತ್ತು. ಆದರೆ, ಇವತ್ತು ಸುಪ್ರೀಂ ಕೋರ್ಟಿನಲ್ಲಿ ಅಫಿಡವಿಟ್ ಬಿದ್ದೇ ಬೀಳುತ್ತದೆ ಎನ್ನುವ ಖಾತರಿ ನಮಗೆ ಇರಲಿಲ್ಲ. 'ವಿಜಯ ಕರ್ನಾಟಕ' ದಿನಪತ್ರಿಕೆಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಬಹಳ ಸ್ಪಷ್ಟವಾಗಿ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಸುದ್ಧಿಯನ್ನು ಪ್ರಕಟಿಸಿದ್ದಾರೆ. ಇದನ್ನು ಓದಿದ ಮೇಲೆ ನನಗೆ ಸ್ವಲ್ಪ ಧೈರ್ಯ ಬಂತು. ಈ ದಿನ ಬೆಳಿಗ್ಗೆ 11 ಗಂಟೆ ನಾವು ಶಾಸಕರೆಲ್ಲರೂ ಒಟ್ಟಿಗೆ ಸೇರಿದಂತಹ ಸಂದರ್ಭದಲ್ಲಿ ಅಫಿಡವಿಟ್ ಫೈಲ್ ಮಾಡಲಾಗಿದೆ ಎನ್ನುವುದರ ಬಗ್ಗೆ ಮಾನ್ಯ ಅನಂತಕುಮಾರ್ ಅವರಿಂದ ಫೋನ್ ಸಹ ಬಂತು. ಪ್ರಜಾವಾಣಿ ದಿನಪತ್ರಿಕೆಯಲ್ಲಿ 'ನೀರು ಬಿಡುವುದು ಒಳ್ಳೆಯದು' ಎಂದು ಪ್ರಕಟವಾಗಿದೆ. ಅದರಲ್ಲಿ ಮಾನ್ಯ ಎಂ.ಬಿ.ಪಾಟೀಲ್‌ರವರು ಹೇಳಿರುವ ವಿಚಾರಗಳ ಬಗ್ಗೆ ನಾನು ಖಂಡಿತವಾಗಿಯೂ ಋಣಾತ್ಮಕವಾಗಿ ಯೋಚನೆ ಮಾಡಲಿಲ್ಲ. 'ನೀರು ಯಾರಿಗೆ ಬಿಡುವುದು' ಎನ್ನುವ ಪ್ರಶ್ನೆ ಬರುತ್ತದೆ. ಅದಕ್ಕಾಗಿಯೇ ನಿರ್ಣಯ ಮಾಡುವ ಮೊದಲು ನಿರ್ಣಯ ಏನು ಎನ್ನುವ ವಿಚಾರವನ್ನು ತಿಳಿಸಿ ನಂತರ ಚರ್ಚೆ ಮಾಡುತ್ತಿರುವುದು ಉತ್ತಮ ಕಾರ್ಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕುಡಿಯುವುದಕ್ಕೆ ಅಗತ್ಯವಾಗಿರುವ ನೀರನ್ನು ಬಿಟ್ಟು ಹೆಚ್ಚುವರಿಯಾಗಿರುವ ನೀರನ್ನು ಇಂತಹ ಬೆಳೆಗಾಗಿ ನಮ್ಮ 4.5 ಲಕ್ಷ ರೈತರಿಗಾಗಿ ಬಳಸಿಕೊಳ್ಳುತ್ತೇವೆ ಎನ್ನುವುದನ್ನು ನಿರ್ಣಯದಲ್ಲಿ ಸ್ಪಷ್ಟವಾಗಿ ಉಲ್ಲೇಖ ಮಾಡಿದರೆ ಮಾತ್ರ ನಮ್ಮ ರೈತರಿಗೂ ಸಹ ಸ್ವಲ್ಪ ಸಮಾಧಾನವಾಗುತ್ತದೆ. ಈ ರೀತಿ ಮಾಡಿದರೆ ವಿಧಾನಮಂಡಲದ ಅಧಿವೇಶನದಲ್ಲಿ ಎಲ್ಲರೂ ಒಟ್ಟಿಗೆ ಸೇರಿಕೊಂಡು ನಮಗೆ ಉಪಯೋಗ ಮಾಡುತ್ತಿದ್ದಾರೆಂದು ರೈತರು ಭಾವಿಸುತ್ತಾರೆ. Seepage water ನಲ್ಲಿ ಸ್ವಲ್ಪ ಪ್ರಮಾಣ ತಮಿಳುನಾಡಿಗೆ ಹೋಗುತ್ತದೆ. ಅದನ್ನು ಸಹ ಲೆಕ್ಕ ತೋರಿಸಬೇಕಾಗುತ್ತದೆ. 'ತಮಿಳುನಾಡಿಗೆ ನೀರು ಬಿಟ್ಟಿಲ್ಲ ಬಿಟ್ಟಿಲ್ಲ' ಎಂದು ಅವರು ರಾತ್ರಿ ಹಗಲು ಜಪ ಮಾಡುತ್ತಿದ್ದಾರೆ. ಹೌದು ನಾವು ನೀರು ಬಿಟ್ಟಿದ್ದೇವೆಂದು seepage water ನ ಲೆಕ್ಕವನ್ನು ತೋರಿಸಬಹುದು. ಪ್ರಾಮಾಣಿಕವಾಗಿ ನಾವು ನೀರನ್ನು ಬಿಟ್ಟಿರುವುದರಿಂದ ಕೋರ್ಟಿಗೂ ಸಹ ಆ ಲೆಕ್ಕವನ್ನು ತೋರಿಸಬಹುದಾಗಿದೆ. ಆದರೆ, ನಮ್ಮ ರಾಜ್ಯದ ಜನರ ಕುಡಿಯುವ ನೀರಿಗೆ ಮೊದಲನೆ ಆದ್ಯತೆ ನೀಡಬೇಕು.

**ಶ್ರೀ ವಿ.ಸೋಮಣ್ಣ:-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕದ ಕಾವೇರಿ ಕಣಿವೆಯಿಂದ ತಮಿಳುನಾಡಿಗೆ ಪ್ರತಿದಿನ ಕನಿಷ್ಠ ಒಂದು ಸಾವಿರ ಕ್ಯೂಸೆಕ್ ನೀರು ಹರಿದು ಹೋಗುತ್ತಿದೆ. ಅದು ಯಾವ ನೀರು ಎನ್ನುವುದರ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವುದು ಬೇಡವೆನ್ನುವುದು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ಮನವಿಯಾಗಿದೆ. ಇವತ್ತಿಗೂ ಕೂಡ ಒಂದು ಸಾವಿರ ಕ್ಯೂಸೆಕ್ ನೀರು ಕಾವೇರಿ ಕಣಿವೆಯಿಂದ ಬಿಳಿಗೊಂಡ್ಲುವಿನ ಮುಖಾಂತರ ಹೋಗುತ್ತಿದೆ. ಇದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದು ಸರಿಯಾಗಿದೆ. ಒಳ್ಳೆಯ ನೀರೇ ಹರಿದು ಹೋಗುತ್ತಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಹೇಗಿದ್ದರೂ ನೀರು ಹರಿದು ಹೋಗುತ್ತಿದೆ. ಅದು ಖಂಡಿತವಾಗಿಯೂ seepage water ಆಗಿದೆ. ನಾನು ಸರ್ಕಾರದ ಬಗ್ಗೆ ಟೀಕೆ ಮಾಡುವುದಿಲ್ಲ. ಹೊರಗಡೆ ಒಂದು ಹೇಳುತ್ತೀರಿ, ಇಲ್ಲಿ ಒಂದು ಮಾಡುತ್ತೀರಿ ಎಂದು ಟೀಕೆ ಮಾಡುವುದಕ್ಕೆ ಇದು ಸಮಯವಲ್ಲ. ಇನ್ನೊಂದೆರಡು ವರ್ಷಗಳ ನಂತರ ಸಮಯ ಬರುತ್ತದೆ. ಆಗ ಅವರು ಏನು ಮಾತನಾಡುತ್ತಾರೆ, ನಾವು ಏನು ಮಾತನಾಡುತ್ತೇವೆ ಎನ್ನುವುದನ್ನು ನೋಡೋಣ. ಈಗ ರೈತರನ್ನು ಉಳಿಸಬೇಕಾಗಿದೆ. ಇಂತಹ ಸಂದರ್ಭದಲ್ಲಿ ಕುಡಿಯುವ ನೀರಿನ ಅಗತ್ಯತೆಗಾಗಿ ನೀರನ್ನು ಇಟ್ಟುಕೊಂಡು, ಒಂದು ವಾರದಲ್ಲಿ ಬಂದಿರುವ ಸ್ವಲ್ಪ ಮಟ್ಟಿನ ಹೆಚ್ಚುವರಿ ನೀರನ್ನು ನಮ್ಮ ರೈತರ ಬೆಳೆಗಾಗಿ ಬಳಸಿಕೊಳ್ಳಬೇಕಾಗಿದೆ. ಇಲ್ಲದಿದ್ದರರೆ ಸುಮಾರು 4.5 ಲಕ್ಷ ಜನ ರೈತರು ಸಂಕಷ್ಟಕ್ಕೀಡಾಗುತ್ತಾರೆ. ಕಳೆದ ವರ್ಷ ಸುಮಾರು 150 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರ ನಂತರ 350 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗ ರೈತರ ಬೆಳೆಗೆ ನೀರನ್ನು ಬಿಡಲಿಲ್ಲವೆಂದರೆ ರೈತರ ಆತ್ಮಹತ್ಯೆಯ ಪ್ರಮಾಣ ನೂರಕ್ಕೆ ಸೀಮಿತಗೊಳ್ಳದೇ ಸಾವಿರಗಟ್ಟಲೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು. ಆದ್ದರಿಂದ ಕುಡಿಯುವ ಉದ್ದೇಶಕ್ಕಾಗಿ ಬಳಕೆಯಾಗುವ ನೀರನ್ನು ಬಿಟ್ಟು ಉಳಿದಿರುವ ಅಲ್ಪ ಪ್ರಮಾಣದ ನೀರನ್ನು ನಮ್ಮ ರೈತರು ಬೆಳೆ ಬೆಳೆಯುವುದಕ್ಕಾಗಿ ಬಳಸಿಕೊಳ್ಳಲು ನಿರ್ಣಯದಲ್ಲಿ ಸ್ಪಷ್ಟವಾಗಿ ಉಲ್ಲೇಖ ಮಾಡಬೇಕಾಗುತ್ತದೆ. ನನಗೆ ಇವರ ಕಾನೂನು, ಸಂವಿಧಾನ, ಜಡ್ಜ್‌ಗಳು ಇದು ಯಾವುದೂ ಗೊತ್ತಿಲ್ಲ. ನನಗೆ ಗೊತ್ತಿರುವುದು ನಮ್ಮ ರೈತರಿಗೆ ಕುಡಿಯುವುದಕ್ಕೆ ಮತ್ತು ಅಲ್ಪ ಪ್ರಮಾಣದಲ್ಲಿ ಅವರ ಬೆಳೆಗಳಿಗೆ ನೀರನ್ನು ಕೊಡಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ನಿರ್ಣಯವನ್ನು ಮಾಡಬೇಕಾಗಿದೆ. ನಿರ್ಣಯ ಮಂಡನೆ ಮಾಡುವುದಕ್ಕೂ ಮೊದಲು ಸಾಧ್ಯವಾದರೆ ಮತ್ತೊಮ್ಮೆ ಕೆಲವರನ್ನು ಕರೆದು ಚರ್ಚೆ ಮಾಡುವುದರ ಬಗ್ಗೆ ಸರ್ಕಾರ ಯೋಚಿಸಬೇಕಾಗಿದೆ. ಏಕೆಂದರೆ, ನಿರ್ಣಯ ಸರಿ ಇಲ್ಲದಿದ್ದರೆ ಪುನಃ ನಾವು ಸದನದಲ್ಲಿ ತಿದ್ದುಪಡಿ ತರಬೇಕೆಂದು ಚರ್ಚೆ ಮಾಡಬೇಕಾಗುತ್ತದೆ. 23ನೇ ದಿನಾಂಕದಂದು ನಡೆದ ಅಧಿವೇಶನದಲ್ಲಿ ಎಲ್ಲರೂ ಒಟ್ಟಿಗೆ ಕುಳಿತು ಚರ್ಚೆ ಮಾಡಿ ನಿರ್ಣಯ ಕೈಗೊಂಡಂತಹ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ 'ಇದರ ಬಗ್ಗೆ ಚರ್ಚೆ ಮಾಡುವುದು ಬೇಡ. ಕೋರ್ಟಿನ ಮುಂದೆ ವಿಚಾರ ಇದೆ. ಎಲ್ಲ ಫ್ಲೋರ್ ಲೀಡರ್ಸ್ 5 ನಿಮಿಷಗಳ ಕಾಲ ಮಾತನಾಡಿ' ಎಂದು ಹೇಳಿದ್ದರು. ತಾವು ಮಧ್ಯಾಹ್ನದೊಳಗೆ ಸದನವನ್ನು ಮುಕ್ತಾಯ ಮಾಡಿದಿರಿ. ಅದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. ಈಗಲೂ ಕೂಡ ನಿರ್ಣಯವನ್ನು ಮಂಡನೆ ಮಾಡುವ ಸಂದರ್ಭದಲ್ಲಿ ನಮ್ಮ ರೈತರಿಗೆ ಕುಡಿಯುವುದಕ್ಕೆ ನೀರು ಸಿಗಬೇಕು ಮತ್ತು ನಮ್ಮ ರೈತರ ಬೆಳೆಗೆ ನೀರು ಸಿಗುವಂತಾಗಬೇಕು ಈ ದಿಕ್ಕಿನಲ್ಲಿ ಸರ್ಕಾರ ನಿರ್ಣಯವನ್ನು ಮಂಡನೆ ಮಾಡಬೇಕೆನ್ನುವ ಸಲಹೆಯನ್ನು ಮಾಡುತ್ತಾ, ಈ ವಿಚಾರವಾಗಿ ಕರ್ನಾಟಕ ರಾಜ್ಯದ ಆರೂವರೆ ಕೋಟಿ ಜನ ಸರ್ಕಾರದ ಜೊತೆಗೆ ನಿಂತಿದೆ. ಯಾವುದೇ ಕಾರಣಕ್ಕೂ ಈ ರೀತಿಯ ನಿರ್ಣಯ ಕೈಗೊಳ್ಳುವುದಕ್ಕೆ ಸರ್ಕಾರ ಹಿಂದೆಮುಂದೆ ನೋಡಬಾರದು. ಕಳೆದ ತಿಂಗಳ 23ನೇ ತಾರೀಖಿಗೂ ಇವತ್ತಿಗೂ ಸಾಕಷ್ಟು ವ್ಯತ್ಯಾಸಗಳಾಗಿವೆ. ನಾವು ನ್ಯಾಯಬದ್ಧವಾಗಿರುವುದರಿಂದ ಕರ್ನಾಟಕ ರಾಜ್ಯದ ಪರವಾಗಿ ಕೇಂದ್ರ ಸರ್ಕಾರ ನಿಂತಿದೆ. ಆದ್ದರಿಂದ ರಾಜ್ಯದ ಜನರ ಹಿತದೃಷ್ಟಿಯಿಂದ ಕುಡಿಯುವ ನೀರಿಗೆ ಮತ್ತು ರೈತರ ಬೆಳೆಗೆ ಅನುಕೂಲವಾಗುವ ದಿಕ್ಕಿನಲ್ಲಿ ನಿರ್ಣಯವಿರಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರು:–** ಇನ್ನೂ ಕೆಲವು ಸದಸ್ಯರು ಈ ವಿಚಾರದ ಬಗ್ಗೆ ಮಾತನಾಡಬೇಕೆಂದು ತಮ್ಮ ಹೆಸರುಗಳನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ. ಈಗ ಭೋಜನ ಸಮಯವಾಗಿರುವುದರಿಂದ ಭೋಜನ ವಿರಾಮದ ನಂತರ ಎಲ್ಲ ಸದಸ್ಯರಿಗೂ ಅವಕಾಶವನ್ನು ನೀಡಲಾಗುತ್ತದೆ. ಪ್ರತಿಯೊಬ್ಬ ಸದಸ್ಯರು 5 ರಿಂದ 8 ನಿಮಿಷಗಳ ಕಾಲ ಮಾತನಾಡಬಹುದು. ಈಗ ಭೋಜನಕ್ಕಾಗಿ ಸದನವನ್ನು 3 ಗಂಟೆ 30 ನಿಮಿಷಗಳವರೆಗೆ ಮುಂದೂಡಲಾಗುತ್ತಿದೆ.

**(ಭೋಜನ ವಿರಾಮಕ್ಕಾಗಿ ಸದನವನ್ನು 2 ಗಂಟೆ 10 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ 3 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು.)**

**(ಭೋಜನ ವಿರಾಮದ ನಂತರ ಸದನವು ಮತ್ತೆ 3.46 ಗಂಟೆಗೆ ಸೇರಿತು. ಸಭಾಪತಿಗಳಾದ ಮಾನ್ಯ ಶ್ರೀ ಡಿ.ಹೆಚ್.ಶಂಕರಮೂರ್ತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಗಳು:–** ಈಗ ಮಾನ್ಯ ಪುಟ್ಟಣ್ಣನವರು ಮಾತನಾಡುತ್ತಾರೆ.

**ಶ್ರೀ ಪುಟ್ಟಣ್ಣ:–**ಮಾನ್ಯ ಸಭಾಪತಿಗಳೆ, ನಾನು 10 ನಿಮಿಷ ಮಾತನಾಡುತ್ತೇನೆ, ನಂತರ, ಮಂಡ್ಯದವರಾದ ಮಾನ್ಯ ಶ್ರೀಕಂಠೇಗೌಡರು ಮಾತನಾಡುತ್ತಾರೆ.

**ಸಭಾಪತಿಗಳು:–** ಈಕಡೆಯಿಂದ ಒಬ್ಬರು ಮಾತನಾಡಿದ ಮೇಲೆ ಆಕಡೆಯಿಂದ ಒಬ್ಬರಿಗೆ ಅವಕಾಶ ಕೊಟ್ಟು ಮತ್ತೆ ಈ ಭಾಗದವರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–**ಮಾನ್ಯ ಸಭಾಪತಿಗಳೆ, ನಾವು ಹುಟ್ಟಿದಾಗಿನಿಂದಲೂ ಕಾವೇರಿ ಸಮಸ್ಯೆ ನೋಡುತ್ತಿದ್ದೇವೆ, ಹುಟ್ಟುವುದಕ್ಕೆ ಮುಂಚಿನಿಂದಲೂ ಇತ್ತು. . . .

**ಸಭಾಪತಿಗಳು:–** ಮಾನ್ಯ ಪುಟ್ಟಣ್ಣನವರೇ, ನಾನು ಮೊನ್ನೆ ನಾನು ಆರ್ಟಿಕಲ್ ಓದಿದೆ. ಅದರಲ್ಲಿ, 700 ವರ್ಷಗಳ ಕೆಳಗೆ, ನಮಗೂ ಮತ್ತು ತಮಿಳುನಾಡಿನವರಿಗೆ ಗಡಿಬಿಡಿಯಾಗಿ, ಆವತ್ತಿನ ಇಲ್ಲಿನ ರಾಜರು ಒಂದು ಒಡ್ಡನ್ನು ಕಟ್ಟಿದಾಗ, ಅಲ್ಲಿಂದ ಚೋಳರ ಒಬ್ಬ ರಾಜ ಬಂದು ಆ ಒಡ್ಡನ್ನು ಒಡೆದು ಹಾಕಿದ ಎಂಬ ವಿಷಯವನ್ನು ಓದಿದೆ. ಈ ಅಂಶವನ್ನು ಸುಮ್ಮನೆ ನಿಮ್ಮ ಗಮಕ್ಕೆ ತಂದೆ. ಈ ಸಮಸ್ಯೆ ಇಂದು–ನಿನ್ನೆಯದಲ್ಲ, 700 ವರ್ಷಗಳು ಹಳೆಯದ್ದು.

**ಶ್ರೀ ಪುಟ್ಟಣ್ಣ:–** ನನ್ನ ವ್ಯಥೆ ಏನೆಂದರೆ, ಇಷ್ಟು ದಿವಸವಾದರೂ . . .ಕಾವೇರಿ ನೀರಿನ ಸಮಸ್ಯೆ ಬಂದಂಥ ಸಂದರ್ಭದಲ್ಲಿ ಒಂದಷ್ಟು ದಿನ ಚಳುವಳಿ ಆಗುತ್ತದೆ. ನಂತರ ನೀರು ಬಿಡವುದೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ತೀರ್ಮಾನವಾಗುತ್ತದೆ. ಒಂದೆರಡು ತಿಂಗಳ ನಂತರ ಇದರ ಬಗ್ಗೆ ಆಡಳಿತದಲ್ಲಿದ್ದವರು ಚಕಾರ ಎತ್ತಲೇ ಇಲ್ಲ. ಆಗಲೇ ಇದಕ್ಕೆ ಸರಿಯಾದ ರೀತಿಯಲ್ಲಿ ಸ್ಪಂದಿಸಿದ್ದಿದ್ದರೆ ಪರಿಸ್ಥಿತಿ ಇಷ್ಟೊಂದು ಬಿಗಡಾಯಿಸುತ್ತಿರಲಿಲ್ಲವೇನೋ ಎಂದು ನನಗನಿಸುತ್ತಿದೆ. ಇವತ್ತಿನ ಸಂದರ್ಭದಲ್ಲಿ ರಾಜಕೀಯವನ್ನು ಬದಿಗಿಟ್ಟು ನಮ್ಮ ಎಲ್ಲಾ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಒಟ್ಟಿಗೆ ತೀರ್ಮಾನ ತೆಗೆದುಕೊಂಡು ಒಟ್ಟಿಗೆ ಹೋಗಬೇಕು ಎಂದು ನಿರ್ಧರಿಸಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಮಾನ್ಯ ದೇವೇಗೌಡರನ್ನು ವಿಶ್ವಾಸಕ್ಕೆ ತೆಗೆದುಕೊಂಡರು. ಅಲ್ಲದೇ, ಕೋರ್ಟ್‌ನಲ್ಲಿ ನಮ್ಮ ವಿರುದ್ಧ ಏನೇ ತೀರ್ಪು ಬಂದರೂ ರಾಜ್ಯದ ಹಿತದೃಷ್ಟಿಯ ದಿಸೆಯಲ್ಲಿ ಒಳ್ಳೆಯ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನಾನು ಮಾನ್ಯ ಸಿದ್ಧರಾಮಯ್ಯನವರನ್ನು ಮತ್ತು ಹೆಚ್.ಡಿ.ದೇವೇಗೌಡರನ್ನು ಅಭಿನಂದಿಸುತ್ತೇನೆ. ಉಪವಾಸ ಕುಳಿತುಕೊಳ್ಳುವುದಕ್ಕೆ ಮುಂಚೆ ಮತ್ತು ಉಪವಾಸ ಕುಳಿತುಕೊಂಡ ನಂತರ ಮಾನ್ಯ ದೇವೇಗೌಡರು ಏನು ಮಾನ್ಯ ಪ್ರಧಾನ ಮಂತ್ರಿಗಳಾದ ಮೋದಿಯವರ ಹತ್ತಿರ ಮಾತನಾಡಿದಾಗ ಅವರೂ ಕೂಡ ಅದಕ್ಕೆ ಸಕಾರಾತ್ಮಕ ಸ್ಪಂದನೆ ನೀಡಿದ್ದಾರೆ. ಅವರಿಗೂ ಕೂಡ ನಾನು ಅಭಿನಂದನೆ ಸಲ್ಲಿಸುತ್ತೇನೆ. ಮಾನ್ಯ ಸಭಾಪತಿಗಳೆ, ಇತ್ತೀಚಿನ ದಿನಗಳಲ್ಲಿ ಜನರಿಗೆ, ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವ ಬಗ್ಗೆ ನಂಬಿಕೆ ಇರಲಿಲ್ಲ. ರಾಜಕಾರಣಿಗಳ ಮೂಲಕ ಹೋದರೆ ಕೆಲಸ ಮಾಡುತ್ತಾರೆ ಎಂಬ ಭಾವನೆ ಇತ್ತು. ಅದರಲ್ಲೂ ಈಗೀಗ ರಾಜಕಾರಣಿಗಳ ಮೇಲಿನ ನಂಬಿಕೆಯನ್ನು ಜನತೆ ಕಳೆದುಕೊಂಡಿತ್ತು. ರಾಜಕಾರಣಿಗಳಾದ ನಾವು ಅಷ್ಟೋ ಇಷ್ಟೋ ನಂಬಿಕೆಯನ್ನು ಕಳೆದುಕೊಂಡುಬಿಟ್ಟಿದ್ದೇವೆ. ಈಗ ಎಂತಹ ಪರಿಸ್ಥಿತಿ ಬಂದಿದೆ ಎಂದರೆ, ಅಧಿಕಾರಿಗಳು ಮಾಡುವುದಿಲ್ಲ, ರಾಜಕಾರಣಿಗಳೂ ಮಾಡುವುದಿಲ್ಲ. ಕೋರ್ಟ್‌ನಲ್ಲಿ

ಕೆಲಸವನ್ನು ಮಾಡಿಸಿಕೊಳ್ಳೋಣವೆಂದರೆ, ನ್ಯಾಯಾಧೀಶರ ಮೇಲೂ ಕೂಡ ಅಪನಂಬಿಕೆ ಇವತ್ತಿನ ದಿವಸ ಬಂದು ಬಿಟ್ಟಿದೆ. ಜನಗಳು ಎಲ್ಲಿ ನ್ಯಾಯಾಂಗದ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟುಕೊಂಡಿದ್ದರೋ ಅಲ್ಲಿಯೂ ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ. ಅಂದರೆ ಎಲ್ಲೋ ಒಂದು ಕಡೆ ಪ್ರಜಾಪ್ರಭುತ್ವದಲ್ಲಿ ರಾಜಕಾರಣ ಅಥವಾ ಕಾರ್ಯಾಂಗ ಸರಿಯಾದ ರೀತಿಯಲ್ಲಿ ಹೋಗದಿದ್ದ ಸಂದರ್ಭದಲ್ಲಿ ಯಾರು ಸರಿಪಡಿಸಬೇಕಾಗಿತ್ತೋ ಅವರೂ ಸಹಾ ಇವತ್ತಿನ ದಿವಸ ತಪ್ಪು ಹೆಜ್ಜೆಗಳನ್ನು ಇಡುತ್ತಿದ್ದಾರೆನ್ನುವ ವ್ಯವಸ್ಥೆ ಸೃಷ್ಟಿಯಾಗುತ್ತಿದೆ. ಇದು ಒಳ್ಳೆಯದಲ್ಲ. ನಮ್ಮ ರಾಜ್ಯದ ಪರವಾಗಿರುವಂತಹ ವಕೀಲರಾದ ಶ್ರೀ ನಾರಿಮನ್ ಅವರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರು. ನಮ್ಮ ಸಭಾನಾಯಕರು, ಕೇಂದ್ರದ ಅಟಾರ್ನಿ ಜನರಲ್‌ರವರ ಬಗ್ಗೆ ಮಾತನಾಡಿದರು. ಅವರ ತಪ್ಪೋ, ಇವರ ತಪ್ಪೋ ಅದು ನಮಗೆ ಬೇಕಾಗಿಲ್ಲ. ಆದರೆ ನಮ್ಮ ಸರ್ಕಾರ ಸರಿಯಾದ ಹೆಜ್ಜೆಯನ್ನು ಇಡಬೇಕು. ಜೊತೆಗೆ ಅದಕ್ಕೆ ಕೇಂದ್ರ ಸರ್ಕಾರ ಸಹಕಾರ ಕೊಡಬೇಕು. ನಾವು ತಮಿಳುನಾಡಿಗೆ ನೀರನ್ನು ಬೀಡದೇ ನಮಗೆ ನೀರು ಕೊಡಿ ಎಂದು ಕೇಳುವುದಿಲ್ಲ. ಅದೇ ರೀತಿಯಲ್ಲಿ ನಮ್ಮ ರೈತರಿಗೆ ನೀರನ್ನು ಬಿಟ್ಟು ತಮಿಳುನಾಡಿಗೆ ನೀರನ್ನು ಬಿಡಬೇಡಿ ಎಂದು ಹೇಳುವುದಿಲ್ಲ. ನಮ್ಮ ರಾಜ್ಯದವರಿಗೂ ಕೂಡ ಕುಡಿಯುವುದಕ್ಕೆ ನೀರು ಬೇಕಾಗಿದೆ. ಆದರೆ ಇವತ್ತು ತಮಿಳುನಾಡಿನವರಿಗೆ ಕುಡಿಯುವುದಕ್ಕೂ ಇದೆ, ವ್ಯವಸಾಯಕ್ಕೂ ಕೂಡ ಇದೆ. ಆದರೆ ನಾವು ಕೇಳುತ್ತಿರುವುದೇನೆಂದರೆ, ನಮ್ಮ ರಾಜ್ಯದ ಜನರಿಗೆ ಕುಡಿಯುವ ನೀರು ಬಿಡಿ ಎಂದು. ಕಳೆದ ತಿಂಗಳು 23ನೇ ತಾರೀಖಿನ ನಂತರ 3–4 ಟಿಎಂಸಿ ಹೆಚ್ಚುವರಿಯಾಗಿ ನೀರಿದೆ ಅದನ್ನು ಏನು ಮಾಡಬೇಕೆಂದು ಕೇಳಿದರು. ಈಗಾಗಲೇ ಕಾವೇರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಸುಮಾರು 4–4.5 ಲಕ್ಷ ಹೆಕ್ಟೇರಿನಲ್ಲಿ ಬಿತ್ತನೆ ಮಾಡಿರುವಂತಹ ಬೆಳೆ ಬೆಳೆಯುತ್ತಿದ್ದಾರೆ. ಅದಕ್ಕೆ ದಯಮಾಡಿ ನೀರು ಕೊಡಿ. ತಮಿಳುನಾಡಿನಲ್ಲಿ ಬೆಳೆಗಳಿಗೆ ನೀರು ಬೇಕಾಗಿಲ್ಲ. ಇಲ್ಲಿ ಕುಡಿಯುವುದಕ್ಕೆ ನೀರನ್ನು ಬಿಟ್ಟು ಹೆಚ್ಚುವರಿಯಾಗಿ ನೀರಿದ್ದರೆ ಅದನ್ನು ದಯಮಾಡಿ ರೈತರ ಬೆಳೆಗಳಿಗೆ ಕೊಡುವಂತ ತೀರ್ಮಾನ ತೆಗೆದುಕೊಳ್ಳಿ. ಸರ್ಕಾರ ರೈತರ ಪರವಾಗಿ, ರಾಜ್ಯದ ಪರವಾಗಿ ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ಅದಕ್ಕೆಲ್ಲಾ ಮಾನ್ಯ ಹೆಚ್.ಡಿ.ದೇವೇಗೌಡರು ಹೇಳಿದಂತೆ ನಾವು ಬದ್ಧ, ಬೆಂಬಲ ಕೊಡುತ್ತೇವೆಂದು ಹೇಳಿದ್ದಾರೆ. ಆದೇ ರೀತಿಯಲ್ಲಿ ನಾವು ಕೂಡ ಬೆಂಬಲವನ್ನು ಕೊಡುತ್ತೇವೆ. ಜೊತೆಗೆ ಮೈಸೂರು ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಚಿನ್ನ ಮಾರಿ, ಚಿನ್ನ ಒತ್ತೆ ಇಟ್ಟು ಕೆ.ಆರ್.ಎಸ್. ಅನ್ನು ಕಟ್ಟಿಸಿದರು. ಅದನ್ನು ಸರಿಯಾದ ರೀತಿಯಲ್ಲಿ ನಾವು ಇದುವರೆಗೂ ಬಳಸಿಕೊಳ್ಳುವುದಕ್ಕಾಗಲಿಲ್ಲ. ಮೇಕೆದಾಟು ಹತ್ತಿರ ನಮ್ಮ ಸರ್ಕಾರ ಒಂದು ಡ್ಯಾಂ ಕಟ್ಟಿದ್ದರೆ ನಮಗೆ ಈ ರೀತಿಯ ಸಮಸ್ಯೆಯೇ ಬರುತ್ತಿರಲಿಲ್ಲ ಅಥವಾ ಬೆಂಗಳೂರಿನಲ್ಲಿ ಮಳೆನೀರಿಗೆ ಪರ್ಯಾಯವಾಗಿ ಒಂದು ವ್ಯವಸ್ಥೆ ಮಾಡಿಕೊಂಡಿದ್ದರೆ ಅದು ಕೂಡ ನಮಗೆ ಅನುಕೂಲವಾಗುತ್ತಿತ್ತು. ಆದರೆ ಸರ್ಕಾರಗಳು ಇದರ ಬಗ್ಗೆ ಸರಿಯಾದ ರೀತಿಯಲ್ಲಿ ವೈಜ್ಞಾನಿಕವಾಗಿ ಚಿಂತನೆ ಮಾಡಲಿಲ್ಲ. ಇತ್ತೀಚೆಗೆ ನಾವು ನೋಡುತ್ತಿದ್ದೇವೆ ನೇತ್ರಾವತಿ ನದಿ ನೀರನ್ನು ಆರು ಜಿಲ್ಲೆಗಳಿಗೆ ಕುಡಿಯುವುದಕ್ಕೆ ನೀರನ್ನು ತರುತ್ತೇವೆಂದು ಹೇಳಿ ಈಗಾಗಲೇ ಯು ಟರ್ನ್ ಹೊಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಅಲ್ಲಿ ನೀರು ಸಿಗುವುದೇ ಕಡಿಮೆ. 6 ಟಿಎಂಸಿ, 8 ಟಿಎಂಸಿ ನೀರನ್ನು ಎಲ್ಲಿಂದ ಕೊಡುತ್ತೀರಿ ಎಂದು ಪ್ರಾರಂಭ ಮಾಡಿದ್ದಾರೆ. ಆದರೆ ಎಲ್ಲೋ ಒಂದು ಕಡೆ ನಾವು ಒಂದು ಸ್ಟೆಪ್ ಮೇಲೆ ಹೋದರೆ, ಇನ್ನೊಂದು ಕಡೆ ನಮ್ಮ ರಾಜ್ಯದವರೆ ಕಾಲೆಳೆಯುವ ಕೆಲಸ ಮಾಡುತ್ತಿದ್ದಾರೆ. ದಯವಿಟ್ಟು ಇದು ನಿಲ್ಲಬೇಕು. ನಮ್ಮ ಕಾವೇರಿ ಸಮಸ್ಯೆಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಕಾವೇರಿ ನಿರ್ವಹಣಾ ಮಂಡಳಿಯನ್ನು ರಚನೆ ಮಾಡಬೇಕೆಂದು ಆದೇಶ ಮಾಡಿದೆ ಅದಕ್ಕೆ ಪ್ರತಿಯಾಗಿ ಈ ದಿನ ನಮ್ಮ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಸರಿಯಾದ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆದರೆ ಒಂದೇ ಒಂದು ವಿನಂತಿಯೆಂದರೆ, ಇದರಲ್ಲಿ ರಾಜಕಾರಣ ಬೇಡ. ನಾನು ಮಾನ್ಯ ಸಭಾಪತಿಯವರ ಕಛೇರಿಯಲ್ಲಿ ಕುಳಿತುಕೊಂಡಾಗಲೂ ಕೂಡ ಇದೇ ಹೇಳಿದ್ದೇನೆ. ನಾವು ನ್ಯಾಯಾಧೀಶರ ಬಗ್ಗೆಯಾಗಲಿ, ವಕೀಲರುಗಳ ಬಗ್ಗೆಯಾಗಲಿ ಮಾತನಾಡುವ, ಚರ್ಚೆ ಮಾಡುವ ಅಗತ್ಯವಿಲ್ಲ. ಅವರನ್ನು ಚೇಂಜ್

ಮಾಡಿದರೆ ಅದು ಉಪಯೋಗವಿಲ್ಲ. ಹಾಗಾಗಿ ವಕೀಲರಾದ ಶ್ರೀ ನಾರಿಮನ್‌ರವರು ಕಳೆದ 25–30 ವರ್ಷಗಳಿಂದ ನಮ್ಮ ರಾಜ್ಯಕ್ಕೆ ಬಹಳಷ್ಟು ಸಂದರ್ಭಗಳಲ್ಲಿ ನ್ಯಾಯವನ್ನು ಒದಗಿಸಿದ್ದಾರೆ. ಆದರೆ ಈಗ ಎಲ್ಲೋ ಒಂದು ಕಡೆ ಅವರ ಬಗ್ಗೆ ಅವರು ಸರಿಯಾಗಿ ವಾದ ಮಾಡುತ್ತಿಲ್ಲ ಎಂದು ಜನ ಮಾತನಾಡುತ್ತಿದ್ದಾರೆ. ಆದರೆ ಒಳಗಡೆ ಮಾಹಿತಿ ನಿಜವಾಗಿಯು ಶ್ರೀ ಫಾಲಿ ನಾರಿಮನ್ ರವರು ಬಹಳ ಚೆನ್ನಾಗಿ ವಾದ ಮಾಡಿದರು ಎನ್ನುವಂಥದ್ದು ಕೂಡ ಇದೆ. ಆದರೆ ನಾನು ಹೇಳುವುದೇನೆಂದರೆ, ಸರ್ಕಾರ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಸರ್ಕಾರ ಸರ್ಕಾರದ ಪರವಾಗಿ ವಾದ ಮಾಡಲು ಶ್ರೀ ಫಾಲಿ ನಾರಿಮನ್ ರವರನ್ನು ನೇಮಿಸುತ್ತೀರೋ, ಶ್ರೀ ಕಪಿಲ್ ಸಿಬಲ್ ರವರನ್ನು ನೇಮಕ ಮಾಡಿಕೊಳ್ಳುತ್ತಾರೋ ನಮಗೆ ಗೊತ್ತಿಲ್ಲ. ಆದರೆ ನಮ್ಮ ಕೇಂದ್ರ ಸಚಿವರಾದ ಶ್ರೀ ಅನಂತ್‌ಕುಮಾರ್ ರವರು, ಶ್ರೀ ಡಿ.ವಿ. ಸದಾನಂದ ಗೌಡರವರು ಎಲ್ಲರೂ ವಿಶ್ವಾಸವನ್ನು ಇಟ್ಟುಕೊಳ್ಳುವಂಥ ಪ್ರಯತ್ನಗಳನ್ನೂ ಮಾನ್ಯ ಮುಖ್ಯಮಂತ್ರಿಯವರು ಮಾಡಿದ್ದಾರೆ. ಅವರೆಲ್ಲರನ್ನೂ ಇಟ್ಟುಕೊಂಡು ಪ್ರಧಾನಮಂತ್ರಿಯವರಾದ ಶ್ರೀ ಮೋದಿಯವರ ಮೇಲೆ ಒತ್ತಡ ತಂದು ನಮ್ಮ ರಾಜ್ಯಕ್ಕೆ ಏನು ಅನ್ಯಾಯವನ್ನು ತಪ್ಪಿಸುವ ಕೆಲಸವನ್ನು ಮಾಡಿ. ನಾವು ನಮ್ಮಿಂದಾಗುವ ಎಲ್ಲಾ ಸಹಕಾರವನ್ನೂ ಕೂಡ ನಿಮಗೆ ಕೊಡುತ್ತೇವೆ. ಮಾನ್ಯ ಹೆಚ್.ಡಿ. ದೇವೇಗೌಡರು ಸಂಜೀವಿನಿಯ ಹಾಗೆ ಬಂದರು. ಇಲ್ಲದಿದ್ದರೆ ಸರ್ಕಾರದ ಕಥೆ ಏನಾಗುತ್ತಿತ್ತೋ ಗೊತ್ತಿಲ್ಲ. ಎಲ್ಲಿಲ್ಲಿ ತಪ್ಪು ಮಾಡಿ ಸಿಕ್ಕಿಹಾಕಿಕೊಳ್ಳುತ್ತಿದ್ದಿರೋ ನಮಗೆ ಗೊತ್ತಿಲ್ಲ. ಆದರೆ ಎಲ್ಲವನ್ನೂ ಅವರ ಅನುಭವದ ಆಧಾರದ ಮೇಲೆ ಅತ್ಯಂತ ಸೂಕ್ಷ್ಮವಾಗಿ ಪರಿಹರಿಸುವ ಕೆಲಸವನ್ನು ಅವರು ಮಾಡಿದ್ದಾರೆ. ಇದು ಸತ್ಯ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಸರ್ವಪಕ್ಷ ಸಭೆಗೆ ಬಿಜೆಪಿಯವರು ಬರಲಿಲ್ಲ. ಆದರೆ ಅವರು ಶ್ರೀ ಕೆ.ಎಸ್.ಈಶ್ವರಪ್ಪ ರವರ ಹತ್ತಿರ, ಶ್ರೀ ಬಿ.ಎಸ್.ಯಡಿಯೂರಪ್ಪರವರ ಹತ್ತಿರ ಫೋನ್ ಮಾಡಿ ಮಾತನಾಡಿ ಅವರುಗಳು ಸಭೆಗೆ ಬರುವಂತೆ ಮಾಡಿದರು. ಅವರ ಅನುಭವಕ್ಕೆ ತಕ್ಕ ಹಾಗೆ ಅತ್ಯಂತ ಸೂಕ್ಷ್ಮವಾಗಿ ಇದನ್ನು ನಿಭಾಯಿಸುವ ರೀತಿಯಲ್ಲಿ ಮಾಡುತ್ತಿದ್ದಾರೆ. ಅದಕ್ಕೆ ಮಾನ್ಯ ಹೆಚ್.ಡಿ. ದೇವೇಗೌಡರಿಗೆ ಮತ್ತೆ ನಿಮಗೆ ಅಭಿನಂದಿಸಿ ರಾಜ್ಯದ ಪರವಾಗಿ ತೆಗೆದುಕೊಳ್ಳುವ ತೀರ್ಮಾನಕ್ಕೆ ನಾನು ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು, ಗೋಪಾಲಸ್ವಾಮಿ .....

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿರ್ಣಯದ ಕಥೆ ಏನು? ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಮಾತನಾಡಬೇಕಾದರೆ ಯಾವುದರ ಬಗ್ಗೆ ಮಾತನಾಡಬೇಕು? ನಾವು ಹರಿಕಥೆ ಮಾಡಬೇಕೇ? ನಿರ್ಣಯ ಕೊಡಿ. ನಿರ್ಣಯದ ಮೇಲೆ ಚರ್ಚೆ ಮಾಡಬೇಕಲ್ಲವೇ. ಸರ್ಕಾರಕ್ಕೆ ಏನಾಗಿದೆ? ವಿಧಾನಸಭೆಯಲ್ಲಿ ನಿರ್ಣಯ ಕೊಡುವವರೆಗೆ ನಾವು ಚರ್ಚೆಯನ್ನು ಮಾತನಾಡುವುದಿಲ್ಲ ಎಂದು ನಡೆಯುತ್ತಿಲ್ಲ. ನಿಮ್ಮ ಮಾತಿಗೆ ಗೌರವ ಕೊಟ್ಟು ನಾವು ನಿರ್ಣಯ ತರುತ್ತೇವೆ ಎಂದರು. ಮಾನ್ಯ ಐವನ್ ಡಿ'ಸೋಜಾರವರು ನಿರ್ಣಯವನ್ನು ಕೇಳಿದ್ದಕ್ಕೆ ಈಗ ಬರುತ್ತದೆ ಎಂದರು. ಆದರೆ ಈ ನಿಮಿಷದವರೆಗೂ ನಿರ್ಣಯ ಇಲ್ಲ. ನಿರ್ಣಯ ಇಡುವುದಕ್ಕೆ ನಿಮಗೇನು ತೊಂದರೆ? dictation ಆಗುತ್ತಿದೆಯೇ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಈಗ issue ಮೇಲೆ ಸರ್ಕಾರದಿಂದ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಮಾಡಿದ್ದಾರೆ. ವಿಶೇಷವಾದ ಅಧಿವೇಶನವನ್ನು on a particular issue ಕರೆದಿದ್ದಾರೆ. ನಮ್ಮೆಲ್ಲರ ಅಭಿಪ್ರಾಯದ ಹಿನ್ನೆಲೆಯಲ್ಲಿ ಒಂದು ನಿರ್ಣಯವನ್ನು ಸರ್ಕಾರ ಮಂಡಿಸುವುದು ಸೂಕ್ತ ಎನ್ನಿಸುತ್ತದೆ. ಈ ಹಂತದಲ್ಲೇ ಮಂಡಿಸಿದರೆ ಬಹುಶಃ ನಮ್ಮೆಲ್ಲರ ಭಾವನೆಗಳು ಏನು ಎನ್ನುವುದು ಸರ್ಕಾರಕ್ಕೆ ಗೊತ್ತಾಗದಿರುವಂತಹ ಚಾನ್ಸಸ್ ಇದೆ. ಬಹುಶಃ ನಮ್ಮೆಲ್ಲರ ಭಾವನೆಗಳ ಹಿನ್ನೆಲೆಯಲ್ಲಿ ಸರ್ಕಾರ ನಿರ್ಣಯ ಮಂಡಿಸುವುದು ಸೂಕ್ತವೆಂದು ನನಗನಿಸುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ನಿರ್ಣಯ ದಯವಿಟ್ಟು ಮಂಡಿಸಿ.

**ಡಾ॥ಜಿ. ಪರಮೇಶ್ವರಪ್ಪ (ಸಭಾನಾಯಕರು):–** ಮಾನ್ಯ ಸಭಾಪತಿಯರೇ ನಿರ್ಣಯದ ಬಗ್ಗೆ ಕೆಳಮನೆಯಲ್ಲಿ ವಿರೋಧಪಕ್ಷದ ನಾಯಕರು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ನೀರಾವರಿ ಮಂತ್ರಿಗಳೆಲ್ಲಾ ಚರ್ಚೆ ಮಾಡುತ್ತಿದ್ದಾರೆ. ಅವರು ಅಂತಿಮಗೊಳಿಸಿದ ಮೇಲೆ ನಮಗೆ ಕಳಿಸಿಕೊಡುತ್ತಾರೆ. ಅದನ್ನು ನಾನು ಇಲ್ಲಿ ಮಂಡನೆ ಮಾಡುತ್ತೇನೆ. ಅಲ್ಲಿಯವರೆಗೂ ಚರ್ಚೆ ಮುಂದುವರಿಯಲಿ. ಅವರ ಭಾವನೆಗಳು ಕೂಡ ಅರ್ಥವಾಗಲಿ. ಇವತ್ತೇ ಆಗಬೇಕು. ಕೆಳಮನೆಯಲ್ಲಿ ಚರ್ಚೆಯಾಗುತ್ತಿದೆ. ಸರ್ಕಾರ ಮಂಡನೆ ಮಾಡುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧಪಕ್ಷದ ನಾಯಕರು):–** ಬೆಳಿಗ್ಗೆಯಿಂದ ನಿಮ್ಮ ಮಾತನ್ನು ನಂಬಿ ನಾವು ಚರ್ಚೆ ಪ್ರಾರಂಭ ಮಾಡಿದ್ದೇವೆ. ಯಾವಾಗ ಮಂಡನೆ ಮಾಡುತ್ತೀರಿ?

**ಡಾ. ಜಿ. ಪರಮೇಶ್ವರಪ್ಪ (ಸಭಾನಾಯಕರು):–** ನಂಬಿದ್ದಕ್ಕೆ ಬಹಳ ಧನ್ಯವಾದಗಳು.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿರ್ಣಯ ಮಂಡನೆ ಮಾಡದೇ ಚರ್ಚೆ ಮಾಡುವುದು ಯಾವ ನ್ಯಾಯ? ಸರ್ಕಾರ ನಿರ್ಣಯ ಮಂಡನೆ ಮಾಡಲಿ ಅದರಲ್ಲಿ ಏನಾದರೂ ತಿದ್ದುಪಡಿಗಳಿದ್ದರೆ ನಾವು ತಿಳಿಸುತ್ತೇವೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಬಹುಶಃ ನಮ್ಮೆಲ್ಲರ ಅಭಿಪ್ರಾಯಗಳು ವ್ಯಕ್ತವಾದ ಮೇಲೆ ನಮ್ಮ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ನಿರ್ಣಯ ಬಂದರೆ, ಈ ಸದನದ ಅಭಿಪ್ರಾಯದ ಹಿನ್ನೆಲೆಯಲ್ಲಿ ನಿರ್ಣಯ ಬಂದಿದೆ, ದಯಮಾಡಿ ನಮ್ಮೆಲ್ಲರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ತಾವು ಮೊದಲು ಅವಕಾಶ ಕಲ್ಪಿಸಬೇಕು. ನಮ್ಮ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಸರ್ಕಾರ ನಿರ್ಣಯ ಮಂಡಿಸಿದರೆ, ಅದಕ್ಕೊಂದು ಅರ್ಥವಿರುತ್ತದೆ ಎಂದು ಹೇಳುತ್ತಿದ್ದೇನೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ನಾನು ಮತ್ತು ಉಗ್ರಪ್ಪ ರವರು ಇದನ್ನು ಅನುಮೋದಿಸುತ್ತೇವೆ. ಅದರಲ್ಲಿ ತಪ್ಪಿಲ್ಲ. ನಮ್ಮ ಸದನದ್ದಲ್ಲ. ಆದರೆ ಕೆಳಮನೆಯಲ್ಲಿ ನಿರ್ಣಯವನ್ನು ಯಾವರೀತಿ ಮಂಡನೆ ಮಾಡುತ್ತೀರಿ, ಅದರ ಸಾಧಕ–ಬಾಧಕಗಳೇನು? ನಿರ್ಣಯವನ್ನು ದಯವಿಟ್ಟು ತೆಗೆದುಕೊಂಡು ಬನ್ನಿ ಎಂದು ಹೇಳಿ ಸದನವನ್ನು ಮುಂದೂಡಿದ್ದು ಇನ್ನು ಬೆಳಿಗ್ಗೆಯಿಂದ ಅಲ್ಲಿ ಸದನವನ್ನೇ ಪ್ರಾರಂಭ ಮಾಡುವುದಕ್ಕಾಗಲಿಲ್ಲ. ಇಲ್ಲಿ ತೆಗೆದುಕೊಳ್ಳುವ ನಿರ್ಣಯ ಅದೇ ಪೂರ್ತಿ ಎನ್ನುವುದಾದರೆ ನಮ್ಮದ್ದು ಏನೂ ಅಭ್ಯಂತರವೇನೂ ಇಲ್ಲ. ಆದರೆ, ಎರಡು ಸದನಗಳಲ್ಲಿ ಬರುವ ಏಕಾಭಿಪ್ರಾಯದ ಮೇಲೆ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಈಗಾಗಲೇ ಅವರು ನಿರ್ಣಯ ಮಂಡನೆ ಮಾಡುವುದಕ್ಕೆ ತಾವು ಹೇಳಿದ್ದೀರಿ. ಅದನ್ನು ಅವರು ಮಂಡನೆ ಮಾಡಲಿ ಅದು ಬಂದ ಮೇಲೆ ಚರ್ಚೆ ಮಾಡೋಣ. ಅಲ್ಲಿಯವರೆಗೆ ತಾವು ಸದನವನ್ನು ಮುಂದಕ್ಕೆ ಹಾಕಿ. ಅಲ್ಲಿ ಮಂಡನೆ ಮಾಡಿದ ನಿರ್ಣಯವನ್ನು ಸಭಾನಾಯಕರು ಇಲ್ಲಿ ಮಂಡಿಸಲಿ ಆಗ ಚರ್ಚೆ ಮಾಡೋಣ. ಏಕೆಂದರೆ, ಅಲ್ಲೊಂದು ಇಲ್ಲೊಂದು ಮಾಡುವುದಕ್ಕೆ ಹೋದರೆ ಇದು ಎಡವಟ್ಟಾಗುತ್ತದೆ. ಎರಡನೆಯದು, ನಾವೇನೇ ಮಾತನಾಡಿದರೂ ಕೂಡ ಅದು ಸರಿ ಹೋಗುವುದಿಲ್ಲ. ತಾವು ಅನುಭವವುಳ್ಳವರು. ನಾನು ತಮಗೆ ವಿನಂತಿ ಮಾಡುತ್ತೇನೆ. ಮಾನ್ಯ ಸಭಾನಾಯಕರು ಕೆಳಮನೆಯಲ್ಲಿ ಹೋಗಿ ಕುಳಿತುಕೊಳ್ಳಲಿ. ಅಲ್ಲಿ ಏನು ನಿರ್ಣಯವನ್ನು ಮಾಡುತ್ತಿದ್ದಾರೆ ಆ ನಿರ್ಣಯವನ್ನೇ ನಾವೂ ಮಾಡಬೇಕಾಗುತ್ತದೆ. ನಾವು ಮಾಡುವ ನಿರ್ಣಯವನ್ನು ಅವರು ಒಪ್ಪುವುದಕ್ಕೆ ತಯಾರಿರುವುದಿಲ್ಲ. ಆದ್ದರಿಂದ ಮಾನ್ಯ ಸಭಾಪತಿಗಳೇ, ಕೆಳಮನೆಯಲ್ಲಿ ನಿರ್ಣಯ ಮಾಡುವುದಕ್ಕೆ ಈಗಾಗಲೇ ಡಿಕ್ಟೇಷನ್ ಕೊಡುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದೀರಿ. ಆ ನಿರ್ಣಯ ಬರುವವರೆಗೆ ಸದನವನ್ನು ಮುಂದೂಡಿ. ಆ ನಿರ್ಣಯದ ಮೇಲೆ ಚರ್ಚೆ ಮಾಡಿದರೆ ಅದರ ಸಾಧಕಬಾಧಕಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ಚರ್ಚೆ ಸಾರ್ಥಕತೆಯಾಗುತ್ತದೆ. ಕೇಂದ್ರದ ಅಟಾರ್ನಿ ಜನರಲ್‌ರವರು ಇವತ್ತು

ಸುಪ್ರಿಮ್‌ಕೋರ್ಟ್‌ಗೆ ಏನು ಅಫಿಡವಿಟ್ ಕೊಟ್ಟಿದ್ದಾರೆ ಆ ಕಾಪಿಯನ್ನು ಈಗಾಗಲೇ ಕಳುಹಿಸಿಕೊಟ್ಟಿದ್ದಾರೆ. ಇವೆಲ್ಲಾ ನಾವು ಪರಿಗಣನೆಗೆ ತೆಗೆದುಕೊಂಡು ಚರ್ಚೆ ಮಾಡಬೇಕಾಗುತ್ತದೆ. ನಾನು ತಮ್ಮ ಮೂಲಕ ಮಾನ್ಯ ಸಭಾನಾಯಕರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿಂದ ಬರತಕ್ಕಂಥ ನಿರ್ಣಯದ ಮೇಲೆ ನಾವು ಚರ್ಚೆ ಮಾಡುವುದರಿಂದ ಅದಕ್ಕೆ ಉಪಯುಕ್ತವಾದ ವ್ಯವಸ್ಥೆಯಾಗುತ್ತದೆಯೇ ಹೊರತು ನಾವೇನೇ ಚರ್ಚೆ ಮಾಡಿದರೂ ಕೂಡ ಬರತಕ್ಕಂಥ ನಿರ್ಣಯ ಮತ್ತೊಂದಾದರೆ, ಮಾನ್ಯ ಉಗ್ರಪ್ಪನವರು ಎಲ್ಲೋ ಒಂದು ಕಡೆ ಮಾನಸಿಕವಾಗಿ, ನಾವು ಏನೆಲ್ಲಾ ಹೇಳಿದೆವು, ಆದರೆ ಎಲ್ಲಿ ಬಂತು ಎನ್ನುವಂತಾಗುತ್ತದೆ. ಆದ್ದರಿಂದ ರಾತ್ರಿಯೆಲ್ಲಾ ರಾಮಾಯಣ ಕೇಳಿ ಬೆಳಿಗ್ಗೆ ಎದ್ದು ರಾಮನಿಗೂ ಸೀತೆಗೂ ಏನು ಸಂಬಂಧ ಎನ್ನುವ ಪರಿಸ್ಥಿತಿ ಬರುವುದು ಬೇಡ. ದಯವಿಟ್ಟು ಚರ್ಚೆಯಾಗುವುದಕ್ಕಿಂತ ಮುಂಚೆ ಆ ನಿರ್ಣಯ ಬರಲಿ, ಆ ನಿರ್ಣಯ ಬಂದ ಮೇಲೆ ಚರ್ಚೆ ಮಾಡುವುದು ಸಮಂಜಸ. ಅದು ತಮ್ಮ ವಿವೇಚನೆಗೆ ಬಿಟ್ಟದ್ದು. ಇಲ್ಲವೆಂದರೆ ಮತ್ತೆ ಗೊಂದಲವಾಗುತ್ತದೆ. ಮತ್ತೆ ಎಲ್ಲರೂ ಮಾತನಾಡಬೇಕಾಗುತ್ತದೆ. ಮತ್ತೆ ವಿರೋಧ ಪಕ್ಷದ ನಾಯಕರು ಮಾತನಾಡಬೇಕಾಗುತ್ತದೆ. ನಿರ್ಣಯವಿಲ್ಲದೆ ಈ ಸದನದಲ್ಲಿ ನಾವು ಏನೇ ಚರ್ಚೆ ಮಾಡಿದರೂ ಕೂಡ ಅದು ಅರ್ಥಪೂರ್ಣವಲ್ಲ ಎಂಬುದು ನನ್ನ ಅಭಿಪ್ರಾಯ.

**ಶ್ರೀ ರಾಮಚಂದ್ರಗೌಡ(ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸರ್ಕಾರ ಏನೇ ನಿರ್ಣಯ ತರಲಿ ಆ ನಿರ್ಣಯದಲ್ಲಿ ನಮ್ಮ ರಾಜ್ಯದಲ್ಲಿ ಯಾವ ರೈತರಿಗೆ ನೀರು ಕೊಡುವುದಕ್ಕಾಗಲಿಲ್ಲ, ಯಾವ ರೈತರ ಬೆಳೆ ನಾಶವಾಗಿದೆ, ಅವರಿಗೆ ಎಕರೆಗೆ 25,000 ರೂಪಾಯಿ ಪರಿಹಾರ ಕೊಡುತ್ತೇವೆ ಎನ್ನುವ ನಿರ್ಣಯವನ್ನು ಸರ್ಕಾರ ತೆಗೆದುಕೊಂಡು ಬರುವುದಾದರೆ ನಾವು ಸ್ವಾಗತ ಮಾಡುತ್ತೇವೆ.

**ಡಾ:ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಈಗಾಗಲೇ ಚರ್ಚೆಯನ್ನು ಪ್ರಾರಂಭ ಮಾಡಿದ್ದೇವೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಂತಿಮವಾದ ನಿರ್ಣಯ ಮಾಡಬೇಕು, ಇದರಲ್ಲಿ ಯಾವುದೇ ರಾಜಕೀಯ ಬೇಡ. ನಮ್ಮ ನಿಲುವುಗಳು ಏನೇ ಇರಲಿ, ರಾಜ್ಯದ ಹಿತದೃಷ್ಟಿಯಿಂದ ಎಲ್ಲರೂ ಒಟ್ಟಾಗಿ ಹೋಗಬೇಕು ಎನ್ನುವುದರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವ ಮಾತು ಇರಬಹುದು, ಪುಟ್ಟಣ್ಣನವರು ಹೇಳಿರುವ ಮಾತು ಇರಬಹುದು ಅಥವಾ ಬೇರೆ ಎಲ್ಲಾ ಸದಸ್ಯರು ಹೇಳಿರುವ ಮಾತು ಇರಬಹುದು. ನಾವು ಇವತ್ತು ರಾಜ್ಯದ ಹಿತವನ್ನು ಕಾಪಾಡಬೇಕಾಗಿದೆ. ಇದರಲ್ಲಿ ಕಾಂಗ್ರೆಸ್ ಪಕ್ಷ ಏನೋ ತನ್ನ ಬೇಳೆ ಬೇಯಿಸಿಕೊಳ್ಳುವುದಕ್ಕೆ ತೀರ್ಮಾನ ಮಾಡುತ್ತದೆ, ವಿರೋಧ ಪಕ್ಷದ ನಾಯಕರು ಅವರ ಪಕ್ಷಕ್ಕೆ ಏನೋ ಮಾಡುತ್ತಿದ್ದಾರೆ, ಪುಟ್ಟಣ್ಣ ಅವರೇನೋ ಮಾಡುತ್ತಾರೆ ಎನ್ನುವ ಮಾತಲ್ಲ. ಒಟ್ಟಾರೆ ಇವತ್ತು ಅಂತಿಮವಾಗಿ ಒಂದು ನಿರ್ಣಯ ಆಗಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಅಧಿವೇಶನವನ್ನು ಕರೆದಿರುವಂಥದ್ದು. ಹಾಗಾಗಿ ಚರ್ಚೆ ಪ್ರಾರಂಭವಾಗಿದೆ. ಅವರು ಮಾತನಾಡಲಿ. ಅವರನ್ನು ಬಿಟ್ಟು ನಾವೇನು ತೀರ್ಮಾನ ಮಾಡುತ್ತೇವೆ? ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಪ್ರತಿಯೊಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ನಿರ್ಣಯ ಮಾಡಬೇಕೆಂದು ನಾವು ಅವರ ಮುಂದೆ ಬಂದಿರುವಾಗ ಅವರನ್ನು ಬಿಟ್ಟು ನಾವು ಹೇಗೆ ತೀರ್ಮಾನ ಮಾಡುವುದಕ್ಕಾಗುತ್ತದೆ? ಅದಕ್ಕಾಗಿ ನಾವು ಚರ್ಚೆ ಮಾಡೋಣ. ಚರ್ಚೆ ಮುಂದುವರೆಯಲಿ. ಅಂತಿಮವಾಗಿ ನಾವು ನಿರ್ಣಯ ಮಾಡುವಾಗ ನಿಮ್ಮ ಮುಂದೆ ತಂದು ಹೇಳಬೇಕಾಗುತ್ತದೆ. ನಿಮ್ಮ ಮುಂದೆಯೇ ನಾವು ನಿರ್ಣಯವನ್ನು ಮಂಡನೆ ಮಾಡುತ್ತೇವೆ. ಅವರು ಏನಾದರು ಸಲಹೆ ಕೊಡಲಿ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಚರ್ಚೆ ಮುಂದುವರೆಯಲಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರ ಮಾತಿಗೆ ನಾನು ಇಲ್ಲ ಎಂದು ಹೇಳುವುದಿಲ್ಲ. ಬೆಳಿಗ್ಗೆ ತಮ್ಮ ಕೊಠಡಿಯಲ್ಲಿ ಚರ್ಚೆಯಾದಂತಹ ಸಂದರ್ಭದಲ್ಲಿ ಇನ್ನೇನು ನಿರ್ಣಯ ಬಂದುಬಿಡುತ್ತದೆ ಎಂದು ಹೇಳಿದಿರಿ.

ಆಯಿತು ಎಂದು ನಾವು ಹೇಳಿದೆವು. ಆದರೆ ಒಂದು ದಿನ ಮುಗಿಯುತ್ತಾ ಬಂದರೂ ಕೂಡ ಇನ್ನೂ ನಿರ್ಣಯ ಬಂದಿಲ್ಲ ಎಂದರೆ ನಿರ್ಣಯ ಮಂಡನೆ ಮಾಡುವುದಕ್ಕೆ ಸರ್ಕಾರ ಏಕೆ ಹಿಂದೆ–ಮುಂದೆ ನೋಡುತ್ತಿದೆ? ಇದಕ್ಕೆ ಏನು ಕಾರಣ? ನಿರ್ಣಯದ ಮೇಲೆ ನಾವು ಚರ್ಚೆ ಮಾಡಬೇಕೋ, ಬೇಡವೋ?

**ಡಾ:ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಸರ್ಕಾರ ಏನೋ ನಿರ್ಣಯವನ್ನು ಮುಂದೆ ಇಟ್ಟುಬಿಡುತ್ತದೆ ಎನ್ನುವುದಾದರೆ ನಾವು ಏನಾದರೂ ಮಾಡಬಹುದಾಗಿತ್ತು. ಎಲ್ಲರ ವಿಶ್ವಾಸವನ್ನು ತೆಗೆದುಕೊಂಡು ಪಕ್ಷಾತೀತವಾಗಿ ಮಾಡುತ್ತಿರುವಂತಹ ನಿರ್ಣಯ. ಅದಕೋಸ್ಕರ ದಯವಿಟ್ಟು ಚರ್ಚೆ ಮುಂದುವರೆಯಲಿ. ಚರ್ಚೆ ಮುಂದುವರೆಯುವುದಕ್ಕೆ ಅವಕಾಶ ಮಾಡಿಕೊಡಿ. ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ಈ ಹಂತದಲ್ಲಿ ಚರ್ಚೆಯನ್ನು ಹೇಗೆ ನಿಲ್ಲಿಸುವುದಕ್ಕಾಗುತ್ತದೆ?

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಚರ್ಚೆ ನಡೆಯುತ್ತಿರುವಂತಹ ಸಂದರ್ಭದಲ್ಲಿ ರಾಜಕಾರಣ ಮಾಡುವುದಕ್ಕೆ ನಮಗೆ ಖಂಡಿತವಾಗಿಯೂ ಆಸಕ್ತಿ ಇಲ್ಲ. ಕಾವೇರಿ ವಿಚಾರದಲ್ಲಿ ರಾಜಕೀಯದ ಪ್ರಶ್ನೆ ಎಲ್ಲಿ ಬರುತ್ತದೆ? ಈಗ ಬರುತ್ತದೆ, ಆಗ ಬರುತ್ತದೆ ಎಂದು ಮಾನ್ಯ ಸಭಾನಾಯಕರು ಹೇಳಿದರು. ಮಾನ್ಯ ಗೋವಿಂದರಾಜುರವರಿಗೆ 'ಆಯಿತೆ' ಎಂದು ಮಾನ್ಯ ಸಭಾನಾಯಕರು ಕೇಳಿದರು. 'ಹೋಗಿದ್ದೆ, ಈಗ ಬರುತ್ತಿದೆ' ಎಂದು ಅವರು ಹೇಳಿದರು. ಇದು ಅವರ ಎದುರಿಗೆ ನಡೆದಿರುವಂಥದ್ದು. ಹಾಗಾದರೆ ಬೆಳಿಗ್ಗೆಯಿಂದ ಒಂದು ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ಸರ್ಕಾರಕ್ಕೆ ಇಷ್ಟು ಹೊತ್ತು ಬೇಕೆ? ಇದರಲ್ಲೇನಾದರೂ ಮುಚ್ಚುಮರೆ ನಡೆಯುತ್ತಿದೆಯೇ ಎನ್ನುವ ಅನುಮಾನಗಳು ನಮಗೆ ಬರುತ್ತಿವೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಬೆಳ್ಳಿಗ್ಗೆ ತಮ್ಮ ಕೊಠಡಿಯಲ್ಲಿ ಮಾತನಾಡುವಾಗ ನಾವು ಏನು ಹೇಳಿದ್ದೇವೆಂದರೆ, ಕಾವೇರಿ ಬಿಕ್ಕಟ್ಟಿನ ಬಗ್ಗೆ ಚರ್ಚೆ ಮಾಡೋಣ. ಕಳೆದ ಬಾರಿ ಸಮಾವೇಶಗೊಂಡಾಗ ನಮಗೆ ಮಾತನಾಡುವುದಕ್ಕೆ ಅವಕಾಶ ಆಗಲಿಲ್ಲ. ಏಕೆಂದರೆ ನಾವು ಕಳೆದ ಬಾರಿ ನೇರವಾಗಿ ನಿರ್ಣಯವನ್ನು ಮಂಡನೆ ಮಾಡಿದೆವು, ಅದರ ಮೇಲೆ ಒಂದಿಬ್ಬರು ಮಾತನಾಡಿ ಮುಗಿಸಿದೆವು. ಆದರೆ ಕೆಳಗಿನ ಮನೆಯಲ್ಲಿ ಬಹಳ ವಿಸ್ತಾರವಾಗಿ ಚರ್ಚೆ ಆಯಿತು, ಇಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ ಎನ್ನುವ ಮಾತನ್ನು ಗಮನದಲ್ಲಿಟ್ಟುಕೊಂಡು ಈಗ ಮಧ್ಯಾಹ್ನ ಸದನ ಪ್ರಾರಂಭವಾಗುವುದಕ್ಕಿಂತ ಮುಂಚೆ ಕೆಳಮನೆಗೆ ಹೋಗಿ ನಾನು ಅವರ ಜೊತೆ ಮಾತನಾಡಿದೆ. ಆ ಸಂದರ್ಭದಲ್ಲಿ ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಎಲ್ಲರೂ ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ಕುಳಿತು ನಿರ್ಣಯವನ್ನು ಅಂತಿಮ ಸ್ವರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದು ತಿಳಿದುಬಂತು. ಹಾಗಾಗಿ ನಾವು ಏನು ಸಲಹೆ ಮಾಡಿದೆವು ಎಂದರೆ, ಈಗಾಗಲೇ ಯಾರ್ಯಾರು ಮಾತನಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಮ್ಮ ನಮ್ಮ ಅಭಿಪ್ರಾಯವನ್ನು ಹೇಳಬೇಕೆಂದು ತೀರ್ಮಾನ ಮಾಡಿದ್ದೇವೆ. ಹಾಗಾಗಿ ಅಭಿಪ್ರಾಯ ತಿಳಿಸುವುದಕ್ಕೆ ಅವಕಾಶ ಆಗಲಿ, ನಿರ್ಣಯ ಬಂದ ಮೇಲೆ ಎಲ್ಲರೂ ಮಾತನಾಡುವುದಕ್ಕೆ ಅವಕಾಶ ಇದೆ ಎನ್ನುವುದು ನನ್ನ ಅಭಿಪ್ರಾಯ. ಹಾಗಾಗಿ ಸದನವನ್ನು ಸುಮ್ಮನೆ ಮುಂದೂಡುವುದಕ್ಕಿಂತ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಆಗಲಿ, ಸದನವನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇಲ್ಲಿ ಸಮಸ್ಯೆ ಇರುವುದೇನೆಂದರೆ, ಇಲ್ಲಿ ನಿರ್ಣಯ ಮಂಡನೆಯಾದ ಮೇಲೆ ಮತ್ತೆ ಇವರೆಲ್ಲಾ ಮಾತನಾಡಬೇಕು, ನಾವೆಲ್ಲಾ

ಮಾತನಾಡಬೇಕು ಎನ್ನುವುದು ಎಲ್ಲರ ಆತಂಕ. ಆದರೆ ನಿರ್ಣಯವನ್ನು ಮಂಡನೆ ಮಾಡಿದ ಮೇಲೆ ಯಾರಾದರೂ ಒಬ್ಬರು ಮಾತನಾಡಲಿ ಎಂದು ತೀರ್ಮಾನ ಮಾಡಲಿ. ನಿರ್ಣಯದ ಮೇಲೆ ವಿರೋಧ ಪಕ್ಷದ ನಾಯಕರೊಬ್ಬರು ಮಾತನಾಡಿದರೆ ಸಾಕು. ಕೆಳಮನೆಯಲ್ಲಿ ಎರಡು–ಮೂರು ಪಕ್ಷದವರು ಸೇರಿ ತೀರ್ಮಾನ ಮಾಡಿದ ಮೇಲೆ ಎಲ್ಲರೂ ಮಾತನಾಡುವಂಥದ್ದೇನೂ ಇರುವುದಿಲ್ಲ. ಈಗ ಎಲ್ಲರೂ ಮಾತನಾಡಿ ನಿರ್ಣಯ ಬಂದ ಮೇಲೆ ನಾನು ಮಾತನಾಡಬೇಕು ಎಂದು ಹೇಳುವುದಾದರೆ ಅದು ಆಗುವುದಿಲ್ಲ. ಕಳೆದ ಬಾರಿ ಮಾನ್ಯ ಬಸವರಾಜ ಹೊರಟ್ಟಿಯವರು, ವಿರೋಧ ಪಕ್ಷದ ನಾಯಕರು ಮಾತನಾಡಿದರು, ಅಲ್ಲಿಗೆ ಮುಗಿಯಿತು. ನಿರ್ಣಯ ಮಂಡನೆ ನಂತರ ವಿರೋಧ ಪಕ್ಷದ ನಾಯಕರು ಮಾತನಾಡಲಿ, ನಮ್ಮಲ್ಲಿ ಯಾರಾದರೂಬ್ಬರು ಮಾತನಾಡುತ್ತೇವೆ, ಅವರಲ್ಲಿ ಯಾರಾದರು ಮಾತನಾಡಿದ ನಂತರ ಕ್ಲೋಸ್ ಮಾಡಿ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಈ ನಿರ್ಣಯವನ್ನು ಸರ್ಕಾರ ಮಂಡಿಸಬೇಕು ಎಂದೇನೂ ಇಲ್ಲ. ಏಕೆಂದರೆ, ಕಳೆದ ಬಾರಿ ಕೆಳಗಿನ ಮನೆಯಲ್ಲಿ ನಿರ್ಣಯ ಮಂಡನೆ ಮಾಡಿದ್ದು ಅಧಿಕೃತ ವಿರೋಧ ಪಕ್ಷದ ನಾಯಕರು. ಅದನ್ನು ಅನುಮೋದನೆ ಮಾಡಿದ್ದು ಜೆಡಿಎಸ್ ಪಕ್ಷದ ಉಪನಾಯಕರು. ಹಾಗಾಗಿ ಇಡೀ ರಾಜ್ಯದ ಸಮಸ್ಯೆಯಾಗಿರುವಂತಹ ಹಿನ್ನೆಲೆಯಲ್ಲಿ ನಾವೆಲ್ಲರೂ ಕೂಡ ಅವಿರೋಧವಾಗಿ ನಿರ್ಣಯ ಮಂಡನೆ ಮಾಡುತ್ತಿದ್ದೇವೆಯೇ ಹೊರತು ಸರ್ಕಾರದ ನಿರ್ಣಯ ಎಂದು ನಾವು ಯಾರು ಭಾವಿಸುವ ಅವಶ್ಯಕತೆ ಇಲ್ಲ. ಹಾಗಾಗಿ ನಮ್ಮೆಲ್ಲರ ಅಭಿಪ್ರಾಯಗಳು ವ್ಯಕ್ತವಾದ ಮೇಲೆ ಅದರ ಹಿನ್ನೆಲೆಯಲ್ಲಿ ಸರ್ವಸಮ್ಮತವಾದ ನಿರ್ಣಯವನ್ನು ತರತಕ್ಕಂಥದ್ದು ಸೂಕ್ತ ಎಂದು ನಾನು ಭಾವಿಸುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರೇ ನಿರ್ಣಯವನ್ನು ಮಂಡನೆ ಮಾಡಿ ಎಂದು ಹೇಳಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಆ ರೀತಿ ಹೇಳಲಿಲ್ಲ. ನಮ್ಮೆಲ್ಲರ ಅಭಿಪ್ರಾಯದ ಮೇಲೆ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಅಭಿಪ್ರಾಯದ ಮೇಲೆ ಹೇಗೆ ಮಾಡುತ್ತಾರೆ, ಮೊದಲೇ ಮಾಡಬೇಕಾಗಿತ್ತು. ಅಲ್ಲಿಂದ ಏನು ನಿರ್ಣಯ ಬರುತ್ತದೆ ಅದನ್ನು ನಾವು ಒಪ್ಪಿಕೊಳ್ಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇಲ್ಲಿ ಪ್ರಶ್ನೆ ಇರುವುದೇನೆಂದರೆ, ಕಾವೇರಿ ವಿಚಾರದಲ್ಲಿ ನಾವು ರಾಜಕಾರಣ ಮಾಡುತ್ತೇವೆ, ನೀವು ರಾಜಕಾರಣ ಮಾಡುತ್ತೀರಿ ಎಂದಲ್ಲ. ಬೆಳಿಗ್ಗೆಯಿಂದ ನಾವು ಅವರ ಮಾತನ್ನು ನಂಬಿ ಈಗ ನಿರ್ಣಯ ಬಂದುಬಿಡುತ್ತದೆ ಎಂದು ನಾವು ಚರ್ಚೆಯನ್ನು ಪ್ರಾರಂಭ ಮಾಡಿದ್ದೇವೆ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ನಿರ್ಣಯ ಬರಲಿಲ್ಲ. ಅಲ್ಲಿ ಬೆಳಿಗ್ಗೆಯಿಂದ ಅಧಿವೇಶನವೇ ಪ್ರಾರಂಭವಾಗಿಲ್ಲ. ಇನ್ನು ಚರ್ಚೆಯೇ ಆಗುತ್ತಿದೆ. ನಿರ್ಣಯ ಮಂಡನೆ ಮಾಡಿ ಚರ್ಚೆ ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆಯಾಗುತ್ತಿದೆ. ಇಲ್ಲಿ ಅವರನ್ನು ನಂಬಿ ಈಗ ಚರ್ಚೆ ಪ್ರಾರಂಭ ಮಾಡಿ, ನಿರ್ಣಯ ಬಂದುಬಿಡುತ್ತದೆ ಎಂದು ಹೇಳಿದ ಮೇಲೆ ನಾವು ಚರ್ಚೆ ಪ್ರಾರಂಭ ಮಾಡಿದೆವು. ಆದರೆ ಈ ನಿಮಿಷದವರೆಗೂ ನಿರ್ಣಯ ಬಂದಿಲ್ಲ ಎಂದರೆ ಏಕೆ ಇವರು ಹೀಗೆ ಮಾಡುತ್ತಿದ್ದಾರೆಂದು ಸರ್ಕಾರದ ಮೇಲೆ ಅನುಮಾನ ಬರುತ್ತದೆಯೋ, ಇಲ್ಲವೋ? ನಮ್ಮದೇನೂ ಅಭ್ಯಂತರ ಇಲ್ಲ. ನಿರ್ಣಯ ಏನು ಎಂದು ನಮ್ಮ ಮುಂದೆ ಇಟ್ಟರೆ ಅದರ ಮೇಲೆ ಚರ್ಚೆ ಮಾಡುವುದಕ್ಕೆ ಸುಲಭವಾಗುತ್ತದೆ. ಇದರಲ್ಲಿ ಇನ್ನೇನು ಬೇರೆ ಕಾರಣ ಇಲ್ಲ. ಮಾನ್ಯ ಸಭಾನಾಯಕರು ಗೃಹ ಸಚಿವರಾಗಿದ್ದಾರೆ, ಅವರು ಅಲ್ಲಿಗೆ ಹೋಗಿ ಚರ್ಚೆ ಮಾಡಿಕೊಂಡು ಬರಲಿ. ಸ್ವಾಭಾವಿಕವಾಗಿ ಕಾರ್ಯಕಲಾಪ ಸಲಹಾ ಸಮಿತಿ ಸಭೆಯಲ್ಲಿ ಎರಡು ಸದನವನ್ನು ಒಟ್ಟಿಗೆ ಕರೆದು

ಚರ್ಚೆ ಮಾಡಿ ಆ ಚರ್ಚೆಯಲ್ಲೇ ತೀರ್ಮಾನ ತೆಗೆದುಕೊಂಡಿದ್ದರೆ ಆಗುತ್ತಿತ್ತು. ಅದೇ ಪ್ರಕಾರ ನಾವು ಕಳೆದ ಬಾರಿ ನಿರ್ಣಯವನ್ನು ಕೈಗೊಂಡ ಸಂದರ್ಭದಲ್ಲೂ ಕೂಡ ಕಾರ್ಯಕಲಾಪ ಸಲಹಾ ಸಮಿತಿ ಸಭೆಯನ್ನು ಎರಡು ಸದನದವರನ್ನು ಒಟ್ಟಿಗೆ ಸೇರಿಸಿ ಕರೆದಿರಿ. ಅದರಲ್ಲಿ ಚರ್ಚೆ ಮಾಡಿದೆವು, ಅದು ಒಂದು ರೂಪಕ್ಕೆ ಬಂತು. ಇಲ್ಲಿ ಬೆಳಿಗ್ಗೆಯಿಂದ ಅನುಮಾನ ಬರುವ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳುತ್ತಿದೆ. ನಾವು ಅವರನ್ನು ನಂಬಿದ್ದೇವೆ, ಅವರನ್ನು ನಂಬಿ ಚರ್ಚೆಯನ್ನು ಪ್ರಾರಂಭ ಮಾಡಿದ್ದೇವೆ. ಒಂದು ದಿನ ಮುಗಿಯುತ್ತಾ ಬಂದರೂ ಕೂಡ ನಿರ್ಣಯ ಬರಲಿಲ್ಲವೆಂದರೆ ಹೇಗೆ? ಈಗ ನಿರ್ಣಯ ಬರುತ್ತದೆ ಎಂದು ಹೇಳಿದರೆ ಅದು ಹೊಸ ಮಾತು, ಚರ್ಚೆಯ ಮೇಲೆ ಏನು ಬರುತ್ತದೆ ನೋಡಿಕೊಂಡು ಆಮೇಲೆ ನಿರ್ಣಯ. ಸರ್ಕಾರ ನೀವು ಚರ್ಚೆಯನ್ನು ಮಾಡಿಬಿಡಿ ನಂತರ ನಿರ್ಣಯ ಮಾಡೋಣ ಎಂದು ಹೇಳಬೇಕಾಗಿತ್ತು. ಆದರೆ ಈಗ ನಿರ್ಣಯ ಬರುತ್ತದೆಂದು ಹೇಳಿ ಚರ್ಚೆಯನ್ನು ಪಾರಂಭ ಮಾಡಿ ಬಿಡಿ ಎಂದು ಹೇಳಿ ಈಗ ನಿರ್ಣಯ ಬರುತ್ತದೆ ಎಂದು ಹೇಳಿ ಈಗ ಇನ್ನು ನಿರ್ಣಯ ಬಂದಿಲ್ಲ. ತಕ್ಷಣ ನಿರ್ಣಯ ತರಬೇಕಾಗಿತ್ತು. ಇಲ್ಲ ಬೆಳಿಗ್ಗೆಯೇ ಈ ರೀತಿ ಮಾತನಾಡಬೇಕಿತ್ತು. ನೀವು ಪೂರ್ತಿ ಚರ್ಚೆ ಮಾಡಿ ಬಿಡಿ ಚರ್ಚೆ ಪೂರ್ಣಗೊಂಡ ಮೇಲೆ ಕೊನೆಗೆ ಒಂದು ನಿರ್ಣಯ ಮಂಡನೆ ಮಾಡಿ ಬಿಡೋಣ ಎನ್ನುವುದಾದರೂ ಆಗಬೇಕಿತ್ತು. ಒಂದೊಂದು ನಿಮಿಷಕ್ಕೂ ಒಂದೊಂದು ಸ್ವರೂಪದಲ್ಲಿ ಸರ್ಕಾರ ಚರ್ಚೆ ಮಾಡುವುದು ಖಂಡಿತ ಸೂಕ್ತವಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ವಿಷಯವನ್ನು ಮಂಡನೆ ಮಾಡಿದ ಮೇಲೆ ಅವರು ಈ ರೀತಿ ಹೇಳುವುದು ಸರಿಯಲ್ಲ. ಅವರು ಮಾತನಾಡಿದ ಮೇಲೆ ಬೇರೆ ಯಾರೂ ಮಾಡನಾಡುವುದು ಬೇಡ. ನಿರ್ಣಯ ಮಾಡಿ ಎಂದು ಹೇಳಿ ವಿರೋಧ ಪಕ್ಷದ ನಾಯಕರು ಈ ರೀತಿ dictate ಮಾಡುವುದು ಸರಿಯಲ್ಲ.

**ಡಾ॥ ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಚರ್ಚೆ ಪ್ರಾರಂಭ ಮಾಡಿ ಬಿಟ್ಟಿದ್ದೇವೆ. ನಾನು ಅಲ್ಲಿ ಹೇಳಿದ್ದು, ಇದು ನಮ್ಮ resolution ಸರ್ಕಾರದ resolution ಅಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಕೆಳಮನೆಯನ್ನು ನಾವು ಏಕೆ ಮಾದರಿ ಮಾಡಿಕೊಳ್ಳಬೇಕೆನ್ನುವುದು ನನ್ನ ಪ್ರಶ್ನೆಯಾಗಿದೆ. ಕಳೆದ ಬಾರಿಯ ಜಂಟಿ "ಕಾರ್ಯಕಲಾಪಗಳ ಸಲಹಾ ಸಮಿತಿ"ಯಲ್ಲಿ ಏನು ಚರ್ಚೆಯಾಯಿತು? ನಾನು ಮಂಡ್ಯ ಜಿಲ್ಲೆಯಿಂದ ಬಂದವನು. ನನಗೆ ಬುದ್ಧಿ ಬಂದಾಗಿನಿಂದ ನಾನು ಚಳುವಳಿಯನ್ನು ಭಾಗವಹಿಸಿರುವೆನು. ದಿನಾಂಕ: 23/09/2016 ರಂದು ವಿಶೇಷ ಅಧಿವೇಶದಲ್ಲಿ ಮಾತನಾಡಬೇಕೆಂದು ಎಲ್ಲಾ ಸಿದ್ದತೆ ಮಾಡಿಕೊಂಡು ಬಂದೆನು. ಆದರೆ, ತಾವು ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲ. ಆದರೆ ವಿಧಾನಸಭೆಯಲ್ಲಿ ಸುಧೀರ್ಘವಾದ ಚರ್ಚೆಯಾಯಿತು. ಇವತ್ತು ಆ ಲೋಪ ಆಗುವುದು ಬೇಡ. ಕಾವೇರಿ ವಿಚಾರದಲ್ಲಿ ಎಲ್ಲರೂ ಒಟ್ಟಾಗಿದ್ದೇವೆ. ರಾಜಕಾರಣ ಖಂಡಿತ ಬೇಡ. ನಮ್ಮ ಸಮಸ್ಯೆಗಳೇನಿದೆ ಅವುಗಳನ್ನು ಈ ರಾಜ್ಯದ ಗಮನಕ್ಕೆ, ಈ ದೇಶದ ಗಮನಕ್ಕೆ ತರಬೇಕಾದಂತಹ ಅನಿವಾರ್ಯತೆ ನಮ್ಮೆದುರು ಇದೆ. ನಾವು ಚರ್ಚೆಯನ್ನು ಮಾಡಲೇ ಬೇಕೆನ್ನುವುದು ನನ್ನ ಆಗ್ರಹ. ಅವತ್ತೂ ಕೂಡ ನಮಗೆ ಅನ್ಯಾಯವಾಗಿದೆ. ಇವತ್ತು ಈ ಸದನಕ್ಕೆ ಅನ್ಯಾಯವಾಗುವುದು ಬೇಡ. ನಿರ್ಣಯದ ಅಂತಿಮ ಜವಾಬ್ದಾರಿಯನ್ನು ಹೊರುವುದು ಸರ್ಕಾರ ಇದ್ದೆ ಇರುತ್ತದೆ. ತಪ್ಪು ನಿರ್ಧಾರ ಮಾಡಿದರೆ, ಸರ್ಕಾರ ಕೆಟ್ಟು ಹೆಸರು ಪಡೆಯುತ್ತದೆ. ನಮಗೇಕೆ ಆ ಆತಂಕ. ನಾವು ನಮ್ಮ ಸಮಸ್ಯೆ ಏನು ಇದೆ ಎನ್ನುವುದುನ್ನು ಹೇಳಲೇಬೇಕು. ಇನ್ನು ಎಷ್ಟು ದಿನ ಹೇಳದೇ ಇರುತ್ತೀರಿ. ಅವತ್ತು ಕರೆದ ವಿಶೇಷ ಅಧಿವೇಶನದಲ್ಲಿ ಮಾತನಾಡಲಿಕ್ಕೆ ಅವಕಾಶ ಆಗಲಿಲ್ಲ. ಈ ಹಿಂದಿನ ವಿಶೇಷ ಅಧಿವೇಶನದಲ್ಲೂ ನಮಗೆ ಮಾತನಾಡುವುದಕ್ಕೆ ಆಗಲಿಲ್ಲ. ಇವತ್ತಿನ ದಿವಸದ ವಿಶೇಷ ಅಧಿವೇಶನದಲ್ಲಿಯೂ ಮಾತನಾಡುವುದಕ್ಕೆ ಆಗಲಿಲ್ಲ ಎಂದರೆ ಮತ್ತೆ ಏಕೆ ಸದನ? ಈಗಾಗಲೇ ನಮ್ಮ ಸದನದಲ್ಲಿ ಚರ್ಚೆ ಆರಂಭವಾಗಿ ಹೋಗಿದೆ. ಮಧ್ಯದಲ್ಲಿ ನಿಲ್ಲಿಸುವುದು ಬೇಡ.

ಚರ್ಚೆಯನ್ನು ಮುಂದುವರೆಸೋಣ. ಅಂತಿಮವಾಗಿ ನಿರ್ಣಯ ಬರಲಿ. ಆ ನಿರ್ಣಯದ ಮೇಲೂ ನಾವು comments ಬೇಕೋ ಅದನ್ನೂ ಕೂಡ ಮಾಡೋಣ. ಆದರೆ, ಅಂತಿಮವಾಗಿ ಜವಾಬ್ದಾರಿಯನ್ನು ಸರ್ಕಾರವೇ ಹೊರಬೇಕಾಗುತ್ತದೆ ಎನ್ನುವ ಎಚ್ಚರಿಕೆ ಅವರಲ್ಲಿ ಇರುತ್ತದೆ. ಇರಲೇ ಬೇಕಾಗುತ್ತದೆ. ಹಾಗಾಗಿ ದಯಮಾಡಿ ಚರ್ಚೆಯನ್ನು ಮುಂದುವರೆಸಬೇಕೆಂದು ನಾನು ಆಗ್ರಹಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಈಗ ಮತ್ತೆ ಸಭೆಯನ್ನು ಹಾಳುಮಾಡಿಕೊಳ್ಳುವುದಕ್ಕೆ ನಾನು ತಯಾರಿಲ್ಲ. ಈಡೀ ಸದನ ಸರ್ಕಾರದ ಮೇಲೆ ಬೆಳಕು ಚೆಲ್ಲಲಿ. ಸರ್ಕಾರ ನಿರ್ಣಯವನ್ನು ಮಂಡನೆ ಮಾಡಿದ ಮೇಲೆ ಆ ನಿರ್ಣಯವನ್ನು ತಿದ್ದುಪಡಿ ಮಾಡುವುದಕ್ಕೆ ಅವಕಾಶವಿದ್ದರೆ ಒಂದೊಂದು ಪಕ್ಷದಿಂದ ಒಬ್ಬಬ್ಬೊರು ಫ್ಲೋರ್ ಲೀಡರ್‌ಗೆ ಮಾತನಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

**ಸಭಾಪತಿಗಳು:–** ಆಗಬಹುದು. ಈಗ ಶ್ರೀ ಗೋಪಾಲ ಸ್ವಾಮಿಯವರು ತಾವು ಮಾತನಾಡುವುದಕ್ಕೆ ಮುಂಚೆ ನಾನು ಬೆಳಿಗ್ಗೆಯಿಂದ ಹೇಳುತ್ತಿದ್ದೇನೆ ಯಾರೇ ಮಾತನಾಡುವವರಿದ್ದರೆ, ಬಹಳಷ್ಟು ವಿಷಯಗಳಿವೆ ಎಲ್ಲರಿಗೂ ಮಾತನಾಡಬೇಕೆಂಬ ಆಸೆ ಇದೆ, ಆ ಒಂದು ಭಾವನೆಯೂ ಸರಿ. ಹಾಗಾಗಿ ಮಾತನಾಡುವವರು ಒಂದು ರೀತಿ bullet points ತರಹ ನಾಲ್ಕೈದು ನಿಮಿಷಗಳಲ್ಲಿ ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರೆ, ಹೆಚ್ಚಿನ ಸದಸ್ಯರಿಗೆ ಮಾತನಾಡಲು ಅವಕಾಶ ಮಾಡಿಕೊಡಲು ಅವಕಾಶವಾಗುತ್ತದೆ. ಪ್ರತಿಯೊಬ್ಬರು ಭಾಷಣ ಪ್ರಾರಂಭ ಮಾಡುವಾಗ ನಿಮಗೆ ಐದೇ ನಿಮಿಷ ಸಮಯ ಎಂದು ಹೇಳುತ್ತೇನೆ. ಭಾಷಣ ಪ್ರಾರಂಭ ಮಾಡುವವರು ನಾನು 55 ನಿಮಿಷ ಮಾತನಾಡಬಹುದು ಇನ್ನುಳಿದ ಐದು ನಿಮಿಷದಲ್ಲಿ ಉಳಿದ ಬೇರೆಯವರೆಲ್ಲೂ ಮಾತನಾಡಬಹುದು ಎಂದು ಭಾವಿಸುತ್ತಾರೆ. ಪ್ರತಿಯೊಬ್ಬರಿಗೂ ಹಾಗೆಯೇ ಅನ್ನಿಸುತ್ತದೆ. ಅದು ಸರಿಯಲ್ಲ. ಐದಾರು ನಿಮಿಷಗಳಲ್ಲಿ ಬಲವಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸುವುದಕ್ಕೆ ಅವಕಾಶ ಇದೆ. ಖಂಡಿತ ಮಾಡಬೇಕು.

**(ಗೊಂದಲ)**

**ಸಭಾಪತಿಯವರು:–** ನನ್ನದೇನೂ ಭಿನ್ನಾಭಿಪ್ರಾಯವಿಲ್ಲ. ಸಭೆ ಬೇಗ ಮುಗಿಸಬೇಕೆಂದರೆ. .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಹಾಗಾದರೆ ನಾನು ಪ್ರಾರಂಭ ಮಾಡಲೇ?

**ಸಭಾಪತಿಯವರು:–** ನಾನು ಈಗ ಶ್ರೀ ಗೋಪಾಲ ಸ್ವಾಮಿಯವರಿಗೆ ಮಾತನಾಡುವುದಕ್ಕೆ ಕರೆದಿದ್ದೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಶ್ರೀ ಗೋಪಾಲ ಸ್ವಾಮಿ ರವರು ಹೊಸ ಸದಸ್ಯರಾಗಿ ಬಂದಿದ್ದಾರೆ.

**ಸಭಾಪತಿಯವರು:–** ಹೌದು. ಸಭೆಯನ್ನು ಯಾವಾಗ ಮುಗಿಸಬೇಕೆಂದು ತೀರ್ಮಾನವನ್ನು ಮಾಡಿ. ರಾತ್ರಿ 8 ಗಂಟೆಗೆ ಮುಗಿಸಬೇಕೋ ಇಲ್ಲ ರಾತ್ರಿ 11ಗಂಟೆ ಯವರೆಗೆ ನಡೆಸಬೇಕೋ ಅಥವಾ ಸಂಜೆ 6 ಗಂಟೆಗೆ ಮುಗಿಸಬೇಕೊ ಇದನ್ನು ಸಭೆ ತೀರ್ಮಾನ ಮಾಡಬೇಕು. ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇದು ರಾಜ್ಯದ ಸಮಸ್ಯೆ. ದಯಮಾಡಿ ಈ ರೀತಿ ಸಮಯ ನಿರ್ಬಂಧನೆ ಮಾಡಿದರೆ ಕಷ್ಟವಾಗುತ್ತದೆ. ಯಾರೆಲ್ಲಾ ಬೆಳಕು ಚೆಲ್ಲುತ್ತಾರೋ ಚೆಲ್ಲಲಿ, ಬೆಳಗ್ಗೆ 5 ಗಂಟೆಯವರೆಗೆ ಸದನವನ್ನು ನಡೆಸಿರುವುದು ಇದೆ.

**ಸಭಾಪತಿಯಗಳು:–** ನೀವುಗಳು ಎಲ್ಲಾ ಒಪ್ಪುದಾದರೆ, ನನ್ನದೇನೂ ಭಿನ್ನಾಭಿಪ್ರಾಯವಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ರಾಜ್ಯದ ಹಿತದೃಷ್ಟಿಯಿಂದ ನಾವೆಲ್ಲರೂ ಎಷ್ಟು ಹೊತ್ತು ಬೇಕಾದರೂ ಕುಳಿತುಕೊಳ್ಳುವುದಕ್ಕೆ ತಯಾರು ಇದ್ದೇವೆ.

**ಸಭಾಪತಿಗಳು:–** ನೀವು ತಯಾರು ಇದ್ದರೆ, ಸಭೆ ತಯಾರಿರಬೇಕು. ನೀವು ಒಬ್ಬರೆ ಕುಳಿತುಕೊಂಡರೆ, ನಾನು ಏನು ಮಾಡಲಿ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನೊಬ್ಬನೇ ಅಲ್ಲ. ಎಲ್ಲಾ ಸದಸ್ಯರು ತಯಾರು ಇದ್ದಾರೆ.

**ಶ್ರೀ ಗೋಪಾಲ ಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಾವು ಕೊಟ್ಟಂತಹ ಸಮಯದಲ್ಲಿಯೇ ಮಾತನಾಡಿ ಮುಗಿಸುತ್ತೇನೆ. ನಾನು ಕೂಡ ಕಾವೇರಿ ಕೊಳ್ಳದ ಭಾಗದ ಹಾಸನ ಕ್ಷೇತ್ರದಿಂದ ಆಯ್ಕೆಯಾಗಿ ಬಂದವನು. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೂ ಮತ್ತು ಸಭಾನಾಯಕರಿಗೂ, ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾವೆಲ್ಲರೂ ಕೂಡ ಈ ಕಂಟಕದಿಂದ ಪಾರಾಗಲೇಬೇಕಾಗಿದೆ. ಏಕೆಂದರೆ, ಕರ್ನಾಟಕದ ಆರು ಕೋಟಿ ಜನರ ಬಗ್ಗೆ ನಾವೆಲ್ಲರೂ ಕೂಡ ಜವಾಬ್ದಾರಿಯಿಂದ ವಿಧಾನ ಮಂಡಲದಲ್ಲಿ ಚರ್ಚೆ ನಡೆಸುತ್ತಿದ್ದೇವೆ, ಈಗ ನಮ್ಮ ಸಭಾನಾಯಕರು, ವಿರೋಧ ಪಕ್ಷದ ನಾಯಕರು ಹಾಗೂ ಜೆ.ಡಿ.ಎಸ್.ಪಕ್ಷದ ನಾಯಕರು ಬೆಳಿಗ್ಗೆಯಿಂದ ಮಾಡಿದ ಚರ್ಚೆಯನ್ನು ನಾವು ಕೂಡ ಆಲಿಸುತ್ತಿದ್ದೇವೆ. ನಾನು ಆಯ್ಕೆಗೊಂಡು 9 ತಿಂಗಳುಗಳಾಗಿದ್ದು, ಆದರೂ ಕೂಡ ನಾನು ಒಂದು ಸಂದರ್ಭದಲ್ಲಿ ಮಾತನಾಡುವುದಕ್ಕೆ ಹೊರಟಾಗ ಸಭಾಪತಿಯವರು ಬೈದಿದ್ದರು ಆದರೆ ಈಗ ಒಂದು ಅವಕಾಶ ಕೊಟ್ಟಿದ್ದೀರಿ.

**ಸಭಾಪತಿಯವರು:–** ಬೈಯುವ ಹಾಗಿಲ್ಲ. ಬೈದಿದ್ದಲ್ಲ ನಾವು restrict ಮಾಡುತ್ತೇವೆ.

**ಶ್ರೀ ಗೋಪಾಲ ಸ್ವಾಮಿ:–** ಮಾನ್ಯ ಸಭಾಪತಿಯವರೆ, ತಾವು ಬುದ್ಧಿವಾದ ಹೇಳಿದ್ದೀರಿ. ಕ್ಷಮೆ ಇರಲಿ ನಮ್ಮ ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ನಾವು ಎಲ್ಲಾ ರೈತ ಕುಟುಂಬದಿಂದ ಬಂದವರು. ನಾನು ಕೂಡ ಬಡ ಕುಟುಂಬದಿಂದ ಬೆಳೆದು ಬಂದವನು ಮತ್ತು ಸಮಸ್ಯೆಗಳನ್ನು ತಿಳಿದುಕೊಂಡಿದ್ದವನು. ಕಾವೇರಿ ನೀರಿನ ಜಲಾಶಯಗಳಾದ ಹೇಮಾವತಿ, ಹಾರಂಗಿ, ಕೆ.ಆರ್.ಎಸ್. ಕಬಿನಿ ಜಲಾಶಯಗಳ ಈ ಭಾಗದಲ್ಲಿನ ನೋವು ನಲಿವುಗಳನ್ನು ನಾವು ನೋಡಿಕೊಂಡು ಬಂದಿದ್ದೇವೆ. ಈಗಾಗಲೇ ರೈತರು ಬೆಳೆಗಳನ್ನು ಅರ್ಧಂಬರ್ಧ ಬೆಳೆದು ಅನ್ಯಾಯದಲ್ಲಿದ್ದಾರೆ ಅವರಿಗೆ ಒಂದು ಎಕರೆಗೆ 50,000 ರೂಪಾಯಿಗಳನ್ನು ಪರಿಹಾರದ ಧನವನ್ನಾಗಿ ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗಾಗಲೇ ನಮ್ಮ ಸಭಾನಾಯಕರು 27 ಟಿ.ಎಂ.ಸಿ. ನೀರಿನ ಜೊತೆಗೆ 4 ಟಿ.ಎಂ.ಸಿ. ನೀರು ಬಂದಿದೆ ಎಂದು ತಿಳಿಸಿದ್ದಾರೆ. ಆ ನೀರಿನಲ್ಲಿ ನಮ್ಮ ರೈತರಿಗೆ ವ್ಯವಸಾಯಕ್ಕೆ ನೀರು ಬಿಡಬೇಕು. ಹಾಸನ ಜಿಲ್ಲೆಗೆ ಮತ್ತು ತುಮಕೂರು ಜಿಲ್ಲೆಗೆ ಬೆಳೆಗೆ ಸುಮಾರು 3,200 ಕ್ಯೂಸೆಕ್ಸ್ ನೀರನ್ನು ಬಿಟ್ಟರೆ ಅನುಕೂಲವಾಗುತ್ತದೆ. 1 ಟಿ.ಎಂ.ಸಿ. ನೀರು ಒಂದು ವಾರದಲ್ಲಿ ಕೊಟ್ಟರೆ, ಅಲ್ಲಿನ ಕೆರೆ ಕಟ್ಟೆಗಳಿಗೆ ನೀರು ಬರುತ್ತದೆ, ಪ್ರಾಣಿ ಪಕ್ಷಿಗಳಿಗೆ ನೀರು ಇಲ್ಲದಂತಾಗಿದೆ. ಮಂಡ್ಯ ಮತ್ತು ಹಾಸನದ ರೈತರ ಗೋಳುಗಳನ್ನು ನಾವು ಸರಿಪಡಿಸಬೇಕಾಗಿದೆ. ಇಂತಹ ಸಂದರ್ಭದಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಒಳ್ಳೆಯ ಕೆಲಸ ಮಾಡುತ್ತಿವೆ. ಮೊನ್ನೆ ಸರ್ವ ಪಕ್ಷಗಳ ಸಭೆ ನಡೆದಂತಹ ಸಂದರ್ಭದಲ್ಲಿ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆರವರು ಒಂದು ಮಾತನ್ನು ಹೇಳಿದ್ದಾರೆಂದರೆ, ಕಳೆದ ವಿಧಾನ ಮಂಡದಲ್ಲಿ ತೆಗೆದುಕೊಂಡ ನಿರ್ಣಯದನ್ವಯ ನೀರನ್ನು ಬಿಡುವುದಿಲ್ಲ ಎಂದು ಹೇಳಿಲ್ಲ. ನಮಗೆ ನೀರು ಕುಡಿಯುವುದಕ್ಕೆ ಮಾತ್ರ ನೀರು ಇದೆ ಆದ್ದರಿಂದ ನೀರನ್ನು ಬಿಡುವುದಕ್ಕೆ ಆಗುವುದಿಲ್ಲ. ಈಗ ಬಂದಿರತಕ್ಕಂತಹ ನೀರನ್ನು ಶೀಘ್ರವಾಗಿ ನಮ್ಮ ರಾಜ್ಯದ ರೈತರಿಗೆ ಬಿಡುವಂತಹ ಕೆಲಸವಾಗಬೇಕು. ಅದರ ಜೊತೆಗೆ ಬೆಂಗಳೂರಿಗೆ ಕುಡಿಯುವ

ನೀರಿನ ಸಮಸ್ಯೆ ಇದೆ, ಇದರ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದಾರೆ ಅದರ ಬಗ್ಗೆ ಎಲ್ಲರೂ ಕೂಡ ಸವಿಸ್ತಾರವಾಗಿ ಮಾತನಾಡಿ ನಾವೆಲ್ಲರೂ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಹಾಗೇಯೇ ಕೇಂದ್ರ ಸಚಿವರೂ ಸಹಾ ಈ ಬಗ್ಗೆ ಚರ್ಚೆಯನ್ನು ಮಾಡಿ ಅಟಾರ್ನಿ ಜನರಲ್ ರವರೊಂದಿಗೆ ಮಾತನಾಡಿದ್ದಾರೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಅದೇ ರೀತಿ ಎಲ್ಲಾ ಶಾಸಕರುಗಳು ಪ್ರಧಾನ ಮಂತ್ರಿಗಳನ್ನು ಮತ್ತು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ನಮ್ಮ ಸರ್ಕಾರದ ಜವಾಬ್ದಾರಿಗಳನ್ನು ಉಳಿಸಿಕೊಳ್ಳಬೇಕಾಗಿರುವುದರಿಂದ ನಿರ್ಣಯವನ್ನು ಕೈಗೊಳ್ಳಬೇಕೆಂದು ಹೇಳಿ ತಮಗೆ ಮತ್ತು ವಿರೋಧ ಪಕ್ಷದ ನಾಯಕರಿಗೆ ಹಾಗೂ ಸಭಾನಾಯಕರಿಗೆ ಅಭಿನಂದಿಸಿ, ನನಗೆ ನೀಡದಂತಹ ಸಮಯಕ್ಕಿಂತಲೂ ಇನ್ನೂ ಒಂದು ನಿಮಿಷ ಮುಂಚೆ ನನ್ನ ಭಾಷಣವನ್ನು ಮುಗಿಸುತ್ತಿದ್ದೇನೆ.

**ಸಭಾಪತಿಯವರು:–** ಧನ್ಯವಾದಗಳು. ಒಂದು ನಿಮಿಷ. ಕಾವೇರಿ ಬಗ್ಗೆ ನಮ್ಮೆಲ್ಲರ ಮನಸ್ಸಿನಲ್ಲಿ ದುಗುಡ ಇದೆ. ಆದರೆ, ಇದರ ಮಧ್ಯೆ ಕೆಲವೊಂದೆರೆಡು ಒಳ್ಳೆಯ ಸಂಗತಿಗಳನ್ನು ನಾವು ನೆನಪು ಮಾಡಿಕೊಳ್ಳುವಂತಹದು. ಸದನದ ಗಮನಕ್ಕೆ ತರಬೇಕಾದದ್ದು ನನ್ನ ಜವಾಬ್ದಾರಿ.

ಕೇಂದ್ರ ಸರ್ಕಾರ ನಮ್ಮ ರಾಜ್ಯ ಸರ್ಕಾರಕ್ಕೆ ಈ ಬಾರಿ ಮೂರು ಪ್ರಶಸ್ತಿಗಳನ್ನು ಕೊಟ್ಟಿದೆ. ಅವು ಯಾವುದು ಎಂದು ನಾನು ಓದಿ ಹೇಳುತ್ತೀನಿ. ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು ಕರ್ನಾಟಕ ಸರ್ಕಾರದ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಗೆ ಈ ರೀತಿ ಕೊಟ್ಟಿದೆ. ***'Best State in implementing the maintenance and welfare of parents and senior citizens at 2007 and providing services and facilities to senior citizens'*** ಎಂಬ ಪ್ರಶಸ್ತಿ ಕೊಟ್ಟಿದೆ. ನಮ್ಮ ರಾಜ್ಯದ ಸಚಿವರಾಗಿರುವಂತಹ ಶ್ರೀಮತಿ ಉಮಾಶ್ರೀ ರವರು ರಾಷ್ಟ್ರಪತಿಗಳಿಂದ ಈ ಪ್ರಶಸ್ತಿಯನ್ನು ಸ್ವೀಕಾರ ಮಾಡಿದ್ದನ್ನು ಈ ಸದನದ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನೆರೆಡು ಪ್ರಶಸ್ತಿಗಳು ನಮ್ಮ ರಾಜ್ಯಕ್ಕೆ ಬಂದಿವೆ. ತಮಗೆಲ್ಲರಿಗೂ ಗೊತ್ತಿರುವಂತೆ, ನಮ್ಮ ರಾಜ್ಯದಲ್ಲಿ ಗಾಂಧೀ ಭವನ ಇದೆ. ಅದರ ಅಧ್ಯಕ್ಷರಾಗಿರುವ ಹಿರಿಯ ಗಾಂಧೀವಾದಿಗಳಾದ ಡಾ॥ ಹೋ. ಶ್ರೀನಿವಾಸಯ್ಯ ರವರು ಈ ಕ್ಷೇತ್ರದಲ್ಲಿ ಮಾಡಿರುವ ಅನನ್ಯ ಸಾಧನೆಗೆ ಅವರಿಗೆ ರಾಷ್ಟ್ರಮಟ್ಟದಲ್ಲಿ ವೈಯಕ್ತಿಕ ಪ್ರಶಸ್ತಿಯನ್ನು ನೀಡಲಾಗಿದೆ. ಅವರಿಗೂ ಸಹ ನಾನು ಅಭಿನಂದಿಸುತ್ತೇನೆ.

ಇನ್ನೊಂದು NIMHANS ಸಂಸ್ಥೆ, ಬೆಂಗಳೂರು ಇವರಿಗೂ ಸಹ ಅವರ ಕ್ಷೇತ್ರದಲ್ಲಿ ಮಾಡಿರುವ ಸಂಶೋಧನೆ ಮತ್ತು ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ಪ್ರಶಸ್ತಿ ಬಂದಿರುತ್ತದೆ. ಇವರಿಗೂ ಸಹ ನಾನು ಅಭಿನಂದನೆಯನ್ನು ಸದನದ ಮೂಲಕ ದಾಖಲೆ ಮಾಡಲು ಇಷ್ಟಪಡುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ನದಿಗಳ ವಿಚಾರಕ್ಕೆ ಬಂದರೆ, ಭಾರತದ ದೇಶದ ನದಿಗಳಿಗೂ ವಿದೇಶದಲ್ಲಿರತಕ್ಕಂತಹ ನದಿಗಳಿಗೂ ತುಲನೆ ಮಾಡಿದರೆ, ಅದು ಥೇಮ್ಸ್, ನೈಲ್ ಮತ್ತು ಅಮೇಝಾನ್ ನದಿಗಳಿರಬಹುದು ಅವು ಕೇವಲ ವ್ಯಾಪಾರ ಮತ್ತು ಆರ್ಥಿಕ ದೃಷ್ಟಿಯಿಂದ ಕಾಣುತ್ತಾರೆ. ಆದರೆ, ನಮ್ಮ ದೇಶದಲ್ಲಿ ನದಿಗಳಿಗೆ ಒಂದು ಪುಣ್ಯ ಭಾವನೆ ಇದೆ, ಭಾವನಾತ್ಮಕವಾಗಿದೆ. ಅದು ಗಂಗಾ ಆಗಬಹುದು, ಯಮುನಾ ಆಗಬಹುದು, ಸರಸ್ವತಿ ಆಗಬಹುದು, ಕೃಷ್ಣೆ ಆಗಬಹುದು, ಗೋದಾವರಿ ಆಗಬಹುದು. ಶ್ರೀಯುತ ಉಗ್ರಪ್ಪನವರು ಇಲ್ಲಿ ಗಮನಿಸಬೇಕು. ಪುರಾಣದಲ್ಲಿ ಒಂದು ಮಾತು ಇದೆ. **"ಗಂಗೆಯಲಿ ಮಿಂದಲು ಒಂದು ದಿನದಲ್ಲಿ ಪಾಪ ನಾಶನಿ. ಕೃಷ್ಣೆಯಲಿ ಮಿಂದಲು 7 ದಿನಗಳಲ್ಲಿ ಪಾಪ ನಾಶನಿ. ಯಮುನೆಯಲ್ಲಿ ಮಿಂದಲು 3 ದಿನಗಳಲ್ಲಿ ಪಾಪ ನಾಶನಿ. ಕಾವೇರಿ ನದಿಯಲ್ಲಿ ಮಿಂದಲು ಕ್ಷಣ ಮಾತ್ರದಲ್ಲಿ ಪಾಪ ನಾಶನಿ"**. ಅಂತಹ ಪವಿತ್ರವಾದ ಕಾವೇರಿ ನದಿಯ ನೀರನ್ನು ಹಂಚಿಕೊಳ್ಳುವಾಗ ನಾವು ಇಷ್ಟೊಂದು ಗೊಂದಲ

ಮಾಡಿಕೊಳ್ಳುತ್ತಿದ್ದೇವೆ. ನಮ್ಮ ದೇಶದಲ್ಲಿ ನಾವು ಪರಸ್ಪರ ಅನ್ಯೋನ್ಯವಾಗಿ ಬದುಕಬೇಕು. ಈಗ ವಿರೋಧ ಪಕ್ಷದವರೆಲ್ಲರೂ ಸೇರಿ ಒಟ್ಟಾಗಿ ಹೋರಾಟ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಸ್ವಲ್ಪವೂ ಭಿನ್ನಾಭಿಪ್ರಾಯವಿಲ್ಲ. ಆ ರೀತಿಯಾಗಿ ಅಕ್ಕ-ಪಕ್ಕದ ರಾಜ್ಯದಲ್ಲೂ ಕೂಡ ಯಾವ ರೀತಿಯಾಗಿ ಇರಬೇಕೆನ್ನುವ ತಿಳುವಳಿಕೆಗಳು ಬರಬೇಕಾದಂತಹ ಬಹಳ ಅವಶ್ಯಕತೆ ಇದೆ. ಅದು ಯಾವ ರೀತಿಯಲ್ಲಿ ಆಗಬೇಕಾಗಿತ್ತೋ ಆ ರೀತಿಯಲ್ಲಿ ಆಗಲಿಲ್ಲ. ಇದಕ್ಕೆ ಕಾರಣ, ನಮ್ಮನ್ನು ಆಳಿದಂತಹ ಬ್ರಿಟಿಷರು. 1794 ರಲ್ಲಿ ಮೈಸೂರಿನ ಮೇಲೆ ಪ್ರಭುತ್ವ ಇಟ್ಟುಕೊಂಡಿದ್ದರು. ತಮಿಳುನಾಡಿನ ಚೆನ್ನೈ ಮೇಲೆ ಪ್ರಭುತ್ವ ಇಟ್ಟುಕೊಂಡಿದ್ದರು. ನಮ್ಮಿಬ್ಬರನ್ನು ಒಡೆದು ಆಳುವ ನೀತಿಯನ್ನು ಅವರು ಅನುಸರಿಸಿದ್ದರು. ಒಡೆದು ಆಳುವ ನೀತಿಯನ್ನು ಅನುಸರಿಸಿದ್ದರಿಂದಾಗಿ ಅಂದಿನಿಂದ ಇಲ್ಲಿಯವರೆಗೆ ನಮ್ಮ ಈ ಸಮಸ್ಯೆ ಬಗೆಹರಿಯಲಿಲ್ಲ. 1924 ರಲ್ಲಿ ಬ್ರಿಟಿಷರ ಕಾಲದಲ್ಲಿ ಈ ಕೆಲಸವನ್ನು ಮಾಡಿದರು. ಅದಕ್ಕೆ ನಾವು ಬದ್ಧರಾ? ಅಣ್ಣ-ತಮ್ಮಂದಿರು ಯಾರಾದರೂ ಭಾಗ ಮಾಡಿಕೊಂಡಿದ್ದರೆ ಸರಿ. ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಮಾಡಿದಂತಹ ಒಂದು agreement. ಅಂದಿನ ಮೈಸೂರೇ ಬೇರೆ. ಇವತ್ತಿನ ಕರ್ನಾಟಕವೇ ಬೇರೆ. ಅಂದಿನ ತಮಿಳುನಾಡು ಬೇರೆ. ಅಂದಿನ ಮದ್ರಾಸ್ ಪ್ರಾಂತ್ಯವೇ ಬೇರೆ. ಈ ರೀತಿ ಆದ ಮೇಲೆ ಕಾನೂನು ತಜ್ಞರಾದ ತಾವು ಈ ಬಗ್ಗೆ ಯೋಚನೆ ಮಾಡಬೇಕು. 1924 ರಲ್ಲಿ ಬ್ರಿಟಿಷರ ಹಿಡಿತದಲ್ಲಿ ಮಾಡಿದಂತಹ ಏನು ಒಪ್ಪಂದ ಇದೆ, ಅದಕ್ಕೆ ಅರ್ಹತೆ ಇದೆಯೇ ಇಲ್ಲವೇ ಎನ್ನುವುದು ಬಹಳ ಪ್ರಮುಖವಾದ ವಿಚಾರ ಒಂದು. ತಾವು ಬಹಳ ಒಳ್ಳೆಯ ವಿಚಾರವನ್ನು ಹೇಳಿದಿರಿ. ಕನ್ನಡದಲ್ಲಿ ಒಂದು ಮಾತು ಇದೆ. **"ಕುರಿ ಕಾಯುತ್ತೀಯ ತೋಳ ಎಂದರೆ, ಕೂಳು ಇಲ್ಲದೇ ಕಾಯುತ್ತೇನೆ ಎಂದು ಹೇಳುತ್ತದೆ."** ಆ ರೀತಿಯಲ್ಲಿ ಇವತ್ತು ಅವರ ಪರವಾಗಿ ವಕೀಲ ಆಗಿದ್ದವನು, ಜಡ್ಜ್ ಆಗಿ ಜಡ್ಜ್‌ಮೆಂಟ್ ಕೊಟ್ಟರೆ ಅದರಲ್ಲಿ ನ್ಯಾಯ ಸಿಕ್ಕುತ್ತದೆಯೇ? ನ್ಯಾಯ ಸಿಕ್ಕುವುದಿಲ್ಲ.

**ಡಾ॥ ಜಿ.ಪರಮೇಶ್ವರ :-** ಮಾನ್ಯ ಸಭಾಪತಿಯವರೆ, ಶ್ರೀಯುತ ರಾಮಚಂದ್ರಗೌಡರು ತಮ್ಮ ಭಾಷಣವನ್ನು ಸ್ವಲ್ಪ ಸಮಯ ನಿಲ್ಲಿಸಬೇಕು. ಈಗ ನಿರ್ಣಯ ಅಂತಿಮವಾಗಿ ತಯಾರಾಗಿದೆ. ತಾವು ಇಷ್ಟೊಂದು ಒತ್ತಡ ಹಾಕಿ, ಆಗಲೇ ಬೇಕೆಂದು ಹೇಳಿದ ಮೇಲೆ ನಿರ್ಣಯ ತಯಾರಾಗಿದೆ. ಆದ್ದರಿಂದ, ಆ ನಿರ್ಣಯವನ್ನು ನಾನು ಮಂಡನೆ ಮಾಡುತ್ತೇನೆ. ನಂತರ ಚರ್ಚೆಯನ್ನು ಮುಂದುವರಿಸಬಹುದು. ಅದರ ಬಗ್ಗೆ ಸಲಹೆಗಳನ್ನು ಕೊಡಬಹುದು.

**ಶ್ರೀ ಎಸ್.ನಾಗರಾಜ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ನಿರ್ಣಯವನ್ನು ಮಂಡನೆ ಮಾಡುತ್ತೇನೆಂದು ಹೇಳುತ್ತಿದ್ದಾರೆ. ಆದರೆ, ಮಾನ್ಯ ಸದಸ್ಯರಾದ ಶ್ರೀಯುತ ಉಗ್ರಪ್ಪನವರು ಈ ವಿಚಾರವಾಗಿ ಬಹಳ ವಾದವನ್ನು ಮಾಡಿದರು. ಈಗ ಅವರಿಗೆ ತೊಂದರೆಯಾಗುತ್ತದಲ್ಲಾ?

**ಡಾ॥ ಜಿ. ಪರಮೇಶ್ವರ:-** ತೊಂದರೆಯಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-**ಮಾನ್ಯ ಸಭಾಪತಿಯವರೆ, ರಾಜ್ಯದ ಹಿತದೃಷ್ಟಿಯಿಂದ ಸದನ ಬಯಸಿದರೆ, ನಿರ್ಣಯ ಮಂಡನೆ ಆದ ಮೇಲೆ ಚರ್ಚೆ ಮಾಡೋಣ. ಬಯಸಿದರೆ, ಅಂತಿಮವಾಗಿ ತಿದ್ದುಪಡಿಗೆ ಅವಕಾಶ ಇದೆ.

**ಡಾ॥ ಜಿ.ಪರಮೇಶ್ವರ:-** ರಾಜ್ಯದ ಹಿತದೃಷ್ಟಿಯಿಂದ ಅಗುವಂತಹದ್ದಾಗಿದೆ ಎನ್ನುವುದನ್ನು ಶ್ರೀಯುತ ನಾಗರಾಜು ಅವರು ಗಮನಿಸಬೇಕು. ಆದ್ದರಿಂದ, ಈ ನಿರ್ಣಯವನ್ನು ಮಂಡಿಸುತ್ತಿದ್ದೇನೆ:

## ನಿರ್ಣಯ

1. **ಕಾವೇರಿ ಕೊಳ್ಳದ ಪ್ರದೇಶದ ಜಲಾಶಯಗಳಾದ ಹಾರಂಗಿ, ಹೇಮಾವತಿ, ಕೃಷ್ಣರಾಜ ಸಾಗರ, ಕಬಿನಿಯಲ್ಲಿ ಹಾಲಿ ಇರುವ 27.60 ಟಿ.ಎಂ.ಸಿ. ಜಲಸಂಗ್ರಹವನ್ನು ಬೆಂಗಳೂರು ಮಹಾನಗರವೂ ಸೇರಿದಂತೆ, ಕಾವೇರಿ ಜಲಾನಯನ ಪ್ರದೇಶದಲ್ಲಿನ ಪಟ್ಟಣಗಳು ಹಾಗೂ ಹಳ್ಳಿಗಳ ಕುಡಿಯುವ**

**ನೀರಿನ ಅವಶ್ಯಕತೆಗಳಿಗಾಗಿ ಮಾತ್ರ ಬಳಸಿಕೊಳ್ಳತಕ್ಕದ್ದೆಂದು ದಿನಾಂಕ: 23–09–2016 ರಂದು ಈ ಸದನವು ನಿರ್ಣಯಿಸಿತ್ತು.**

2. **ಮೇಲ್ಕಂಡ ನಿರ್ಣಯದ ನಂತರ, ನಾಲ್ಕು ಜಲಾಶಯಗಳಲ್ಲಿನ ನೀರಿನ ಸಂಗ್ರಹ 27.60 ಟಿಎಂಸಿ ಯಿಂದ ಈ ದಿನದವರೆಗೆ 34.13 ಟಿ.ಎಂ.ಸಿ.ಗಳಿಗೆ ಏರಿಕೆಯಾಗಿರುವುದನ್ನು ಈ ಸದನವು ಗಮನಿಸಿದೆ.**

3. **ಕರ್ನಾಟಕದಲ್ಲಿನ ಕಾವೇರಿ ಕೊಳ್ಳದ ಪ್ರದೇಶದ ರೈತರು ಬೆಳೆದು ನಿಂತ ತಮ್ಮ ಬೆಳೆಗೆ ಅವಶ್ಯಕವಾದ ನೀರನ್ನು ಬಿಡಲು ಒತ್ತಾಯಿಸುತ್ತಿರುವುದನ್ನು ಕೂಡ ಈ ಸದನವು ಗಮನಿಸಿದೆ.**
4. **ಮೇಲ್ಕಂಡ ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ದಿನಾಂಕ 23–09–2016 ರಂದು ಈ ಸದನವು ನಿರ್ಣಯಿಸಿದಂತೆ ಸರ್ಕಾರವು ಕುಡಿಯುವ ನೀರಿನ ಅವಶ್ಯಕತೆಗೆ ನೀರಿನ ಲಭ್ಯತೆಯನ್ನು ಖಚಿತಪಡಿಸಿಕೊಂಡು ರೈತರ ಬೆಳೆಗಳಿಗೆ ನೀರು ಬಿಡುಗಡೆಗೊಳಿಸುವ ಬಗ್ಗೆ ಹಾಗೂ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದು ಈ ಸದನವು ನಿರ್ಣಯಿಸುತ್ತದೆ.**

**ಸಭಾಪತಿಯವರು:–** ಈ ನಿರ್ಣಯದ ಪ್ರತಿಯನ್ನು ಎಲ್ಲರಿಗೂ ಕೊಡಿಸುತ್ತೇನೆ. ಆದರೆ, ಈ ನಿರ್ಣಯದ ಹಿನ್ನೆಲೆಯಲ್ಲಿ ಮಾತನಾಡುವವರು ತಮ್ಮ ಮಾತನ್ನು ಸೀಮಿತಗೊಳಿಸಿಕೊಂಡು ಮಾತನಾಡುವುದು ಒಳ್ಳೆಯದು. ಈಗ ಶ್ರೀಯುತ ರಾಮಚಂದ್ರಗೌಡ ರವರು ತಮ್ಮ ಭಾಷಣವನ್ನು ಮುಂದುವರಿಸಬಹುದು.

**(ಈ ಹಂತದಲ್ಲಿ ಆ ನಿರ್ಣಯದ ಪ್ರತಿಯನ್ನು ಮಾನ್ಯ ಸದಸ್ಯರೆಲ್ಲರಿಗೂ ನೀಡಲಾಯಿತು)**

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ನಿರ್ಣಯವನ್ನು ಮಾಡಿದ್ದಾರೆ. ಈ ನಿರ್ಣಯದಲ್ಲಿ ಸಮಸ್ಯೆ ಪರಿಹಾರಕ್ಕಾಗಿ ಕೇಂದ್ರ ಸರ್ಕಾರ ಹಾಗೂ ರಾಜ್ಯದ ಮಾಜಿ ಪ್ರಧಾನ ಮಂತ್ರಿಗಳ ಪಾತ್ರವೂ ಇದೆ. ಅವರಿಗೆ ಅಭಿನಂದನೆಗಳನ್ನು ಹೇಳುತ್ತೇವೆ ಎನ್ನುವ ಮಾತನ್ನು ಹೇಳಿದರೆ ಅನುಕೂಲವಾಗಬಹುದು. ಇದು ಒಂದು ವಿಚಾರ. ಇವತ್ತು ನಾನು ಮಾತನಾಡಬೇಕಾಗಿರುವ ಬಹಳ ಪ್ರಮುಖ ವಿಚಾರ ಏನೆಂದರೆ, ನಾವು ಧೀರ್ಘವಾಗಿ ಚರ್ಚೆ ಮಾಡಬೇಕಾದರೆ ಅವರು ಏನೇನು objection ಹಾಕಿದ್ದಾರೆ, ಏನೇನು ಕಾಪಿಗಳನ್ನು ಕೊಟ್ಟಿದ್ದಾರೆ, ಆ ಕಾಪಿಗಳು ನಮಗೆ ಬೇಕು. ಅದಕ್ಕೆ ನಾವು ಏನು ಉತ್ತರ ಕೊಟ್ಟಿದ್ದೇವೆ, ಆ ಕಾಪಿಗಳು ನಮಗೆ ಬೇಕು. ಏಕೆಂದರೆ, ಅವರು ಏನು ಕೇಳಿದ್ದಾರೆನ್ನುವುದು ನಮಗೆ ಗೊತ್ತಿಲ್ಲದೆ, ನಾವು ಇಲ್ಲಿ ಏನು ಮಾತನಾಡುವುದು? ಅದಕ್ಕೆ ನಾವು ಇಲ್ಲಿ ಏನು ಉತ್ತರ ಕೊಡಬೇಕು? ನಿಮ್ಮ ಜಡ್ಜ್‌ಮೆಂಟ್‌ಗಳು, ನಿಮ್ಮ ಲಾಯರ್‌ಗಳು, ನಿಮ್ಮ ಮಂತ್ರಿಗಳು ಏನು ಉತ್ತರವನ್ನು ಕೊಟ್ಟಿದ್ದೀರಿ, ನೀವು ಏನು ಉತ್ತರ ಕೊಟ್ಟಿದ್ದೀರಿ ಎನ್ನುವುದು ಬೇಕಲ್ಲವೇ? ಇವತ್ತು ಜಡ್ಜ್‌ಮೆಂಟ್‌ನ ಪ್ರತಿಯನ್ನು ಕೊಟ್ಟಿದ್ದೀರಿ. ಇದು ಸುಪ್ರೀಂ ಕೋರ್ಟಿನ jurisdiction ಗೆ ಬರುವುದೇ ಇಲ್ಲ. This does not come under the jurisdiction of the Supreme Court. ಏತಕ್ಕೆ ಬರುವುದಿಲ್ಲವೆಂದರೆ Cauvery Tribunal Award ಬಗ್ಗೆಯೇ ನಾವು ಪ್ರಶ್ನೆ ಮಾಡಿದ್ದೇವೆ. ಯಾವ Tribunal ತೀರ್ಪನ್ನು objection ಮಾಡಲಾಗಿದೆಯೋ ಅದರಲ್ಲಿ ಏನು ಅಂಶ ಇದೆಯೋ ಆ ಅಂಶದ ಮೇಲೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೊಡಲಿಕ್ಕೆ ಬರುವುದಿಲ್ಲ because, it is not a final judgment. ಈ ವಿಚಾರವನ್ನು ಶ್ರೀಯುತ ಉಗ್ರಪ್ಪನವರು ಗಮನಿಸಬೇಕು. Tribunal Award final ಆಗಿ ಬಿಟ್ಟಿದ್ದರೆ ಅದರಲ್ಲಿ ಇರುವಂತಹ

ಅಂಶವನ್ನು ಉಪಯೋಗಿಸಿಕೊಂಡು ಸುಪ್ರೀಂಕೋರ್ಟ್‌ನವರು ಜಡ್ಜ್‌ಮೆಂಟ್ ಕೊಡಬಹುದು. But still it is pending. 18ನೇ ತಾರೀಖು ಅದರ hearing ಇದೆ.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇಲ್ಲಿ ನಮಗೆ violation ಎನ್ನುವುದು 1924 ರಿಂದ ಕಂಡು ಬರುತ್ತಿದೆ. 2–3 ಬಾರಿ ಬರುತ್ತಿದೆ. 1983 ರಿಂದ 1991 ರವರೆಗೆ the petition was pending. Recently ಯಾವಾಗ ನೀರು ಬಿಡಲಿಕ್ಕೆ ನಮ್ಮಲ್ಲಿ ನೀರು ಇರಲಿಲ್ಲವೋ ಆಗ ನಾವು ವಾಸ್ತವ ಸ್ಥಿತಿಯನ್ನು ಹೇಳಿದಾಗ ತಮಿಳುನಾಡು ಸರ್ಕಾರವೇ ಅಲ್ಲಿ Supreme Court ಗೆ I.A. ಹಾಕಿದಾಗ, ನಮಗೆ ನೋಟೀಸ್ ಬಂದಾದ ಮೇಲೆ ಅಲ್ಲಿ ನಾವು ಇಂಟರ್‌ವೀನ್ ಆಗಿದ್ದೇವೆ. ಅಂದರೆ implead ಆಗಿದ್ದೇವೆ. ನಾವು ಯಾರೂ ಅಲ್ಲಿಗೆ ಹೋಗಿರಲಿಲ್ಲ. We have not knocked the doors of the Supreme Court to get justice to release water to Tamil Nadu. ಇಲ್ಲಿ ಆಗಿರುವುದೇನೆಂದರೆ ನೀವು ಹೇಳುತ್ತಿರುವುದು ಸರಿ ಇದೆ. That is true. The Cauvery Water Tribunal was constituted on the direction of the Supreme Court which is still working and final Judgment is not given by the Tribunal. The Tamil Nadu Government had filed an I.A. before the Supreme Court to release water from the KRS. ಹಾಗಾಗಿ, ನಾವು ಅಲ್ಲಿಗೆ ಹೋಗಬೇಕಾಗಿಯಿತೇ ವಿನ: ನಾವುಗಳು ಯಾರು ಸಹ ಅಲ್ಲಿಗೆ ಹೋಗಿರಲಿಲ್ಲ.

ಮುಂದು. . .

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಅವರು distress formula ಕೊಟ್ಟಿರುವುದರಿಂದ ಆ distress formula ಪ್ರಕಾರವಾಗಿಯೇ ಅದು ತೀರ್ಮಾನವಾಗಬೇಕು. ಅದಕ್ಕೆ ಸುಪ್ರೀಂ ಕೋರ್ಟ್ ಕೈ ಇಡುವಂತಿಲ್ಲ. Distress formula ಏನೆಂದರೆ, ಇಲ್ಲಿ ಜಡ್ಜ್‌ಮೆಂಟ್‌ನಲ್ಲಿಯೇ ಕೊಟ್ಟಿದ್ದಾರೆ, ಟ್ರಿಬ್ಯೂನಲ್‌ನಲ್ಲಿಯೇ ಕೊಟ್ಟಿದ್ದಾರೆ. In the Tribunal, they have given a Judgment that when there is a distress, ಏನು ಮಾಡಬೇಕೆಂದು ತಿಳಿಸಿದ್ದಾರೆ. ಹೀಗಾಗಿ ಸುಪ್ರೀಂ ಕೋರ್ಟ್ ಇದಕ್ಕೆ ಬರುವುದೇ ಇಲ್ಲ. Beyond that ಬರುವುದೇ ಇಲ್ಲ. ಇವತ್ತು ಟ್ರಿಬ್ಯೂನಲ್ ತಿಳಿಸಿರುವುದರಲ್ಲಿ ಭಾಗಶಃ ವಿಚಾರವನ್ನು ತೆಗೆದುಕೊಂಡು ಸುಪ್ರೀಂ ಕೋರ್ಟ್ ಅದರ ಬಗ್ಗೆ ಮಧ್ಯಪ್ರವೇಶ ಮಾಡುವುದಕ್ಕಾಗುವುದಿಲ್ಲ. ಎಲ್ಲಕ್ಕಿಂತ ಮೊದಲು ನಾವು ಅಲ್ಲಿಗೆ ಹೋಗಿದ್ದೇ ತಪ್ಪು. ಅವರು ಅರ್ಜಿ ಹಾಕಿದರೂ ಸಹ ನಾವು ಬರುವುದಿಲ್ಲ, ನೀವು ಇದನ್ನು ಟ್ರಿಬ್ಯೂನಲ್‌ಗೆ ಕಳುಹಿಸಿ ಎಂದು ಹೇಳಬೇಕಾಗಿತ್ತು. ನನ್ನ ಪ್ರಕಾರ ಅದೊಂದು ತಪ್ಪನ್ನು ಮಾಡಿಬಿಟ್ಟಿದ್ದೇವೆ. ಇನ್ನು ಮುಂದೆಯೂ ಇದನ್ನು ನಾವು ಕೇಳಬಹುದು.

ಕಾವೇರಿ ನದಿ ನೀರಿನ ಪ್ರಕರಣ, ನಮಗೆ ನೀರಿಲ್ಲ, ಆದರೂ ಬಿಡುತ್ತಿದ್ದೇವೆ ಎಂದರೆ ನನಗೆ ಶೇಕ್ಸ್‌ಪಿಯರ್ ಬರೆದಿರುವ 'ಮರ್ಚೆಂಟ್ ಆಫ್ ವೆನೀಸ್' ಎನ್ನುವ ಒಂದು ಡ್ರಾಮಾ ನೆನಪಾಗುತ್ತಿದೆ. ಆ ಡ್ರಾಮಾದಲ್ಲಿ ವ್ಯಾಪಾರಸ್ಥ ನೀನು ನಿನ್ನ ದೇಹದಲ್ಲಿ ಒಂದು ಪೌಂಡ್ ಮಾಂಸ ಕೊಡುವುದಾಗಿ

ತಿಳಿಸಿದ್ದೆ, ಕೊಡು ಎಂದಾಗ ಅವನು ಅದನ್ನು ಹೇಗೆ ತಾನೇ ಕೊಡುವುದಕ್ಕಾಗುತ್ತದೆ? ಆ ಪ್ರಕರಣ ನ್ಯಾಯಾಲಯದ ಮೆಟ್ಟಿಲು ಹತ್ತಿದಾಗ ಅಲ್ಲಿನ ನ್ಯಾಯಾಧೀಶರು ಏನು ತೀರ್ಪು ನೀಡುತ್ತಾರೆ ಎಂದರೆ, 'ಅವನು ಮಾಂಸವನ್ನೇನೋ ಕೊಡುತ್ತಾನೆ, ಆದರೆ ಅವನ ದೇಹದಿಂದ ಒಂದೇ ಒಂದು ತೊಟ್ಟು ರಕ್ತ ಹೊರಬರಬಾರದು, ಆ ರೀತಿ ನೀನು ಅವನ ದೇಹದ ಮಾಂಸವನ್ನು ತೆಗೆದುಕೊಂಡು ಹೋಗು' ಎಂದು ಹೇಳುತ್ತಾರೆ. ಹಾಗೆ ನಮ್ಮ ಕೊಳ್ಳದಲ್ಲಿ ಇಲ್ಲದಿರುವ ನೀರನ್ನು ತಮಿಳುನಾಡಿಗೆ ಕೊಡು ಎಂದರೆ ಹೇಗೆ ಕೊಡುವುದು? ಇದನ್ನು ನಾವು ಯಾವ ರೀತಿಯಾಗಿ ಸಮರ್ಥನೆ ಮಾಡಬೇಕಾಗಿತ್ತೋ ಆ ರೀತಿ ಮಾಡುವುದಕ್ಕಾಗಲಿಲ್ಲ, ಇದು ಒಂದು ವಿಚಾರವಾದರೆ ಮತ್ತೊಂದು ವಿಚಾರದಲ್ಲೇನಾಗಿದೆ ಎಂದರೆ, ಮೆಟ್ಟೂರು ಡ್ಯಾಮ್‌ನಲ್ಲಿ 'Zero Point' ಎಂದು ನಿಗದಿ ಮಾಡಿದ್ದಾರೆ. ಅಂದರೆ, 50 ಟಿ.ಎಂ.ಸಿ. ನೀರಿದ್ದರೂ ಕೂಡ it is a zero point ಎಂದು ಅರ್ಥ. ಆದರೆ ನಮ್ಮ ಡ್ಯಾಮ್‌ನಲ್ಲಿ ಎಷ್ಟು ನೀರಿದ್ದರೆ 'Zero Point' ಎನ್ನುವುದನ್ನು ನಿಗದಿ ಮಾಡಲಿಲ್ಲ. ಮೆಟ್ಟೂರು ಡ್ಯಾಮ್‌ನಲ್ಲಿ 50 ಟಿ.ಎಂ.ಸಿ. ನೀರು ನಿಂತಿದ್ದರೆ ಅವರು ನಮ್ಮನ್ನು ನೀರು ಕೇಳುವಂತಿಲ್ಲ. ನಾವು ಡಿಸ್ಟ್ರೆಸ್‌ನಲ್ಲಿದ್ದರೆ ಕೊಡುವಂತಿಲ್ಲ. ಅವರು ಏನು ಮಾಡುತ್ತಾರೆ ಎಂದರೆ, 50 ಟಿ.ಎಂ.ಸಿ. ನೀರನ್ನು ಮೆಟ್ಟೂರು ಜಲಾಶಯದಲ್ಲಿ ನಿಲ್ಲಿಸುವುದೇ ಇಲ್ಲ, ಸಮುದ್ರಕ್ಕೆ ಬಿಟ್ಟುಬಿಡುತ್ತಾರೆ. That is what happening. ಆ ರೀತಿ ನಮ್ಮ ಡ್ಯಾಮ್‌ನಲ್ಲಿ ಈಗ ಉದಾಹರಣೆಗೆ ಕೆ.ಆರ್.ಎಸ್.ನಲ್ಲಿ 22 ಟಿ.ಎಂ.ಸಿ. ಅಥವಾ ಅದಕ್ಕಿಂತ ಕೆಳಗಡೆ ಇದ್ದರೆ ನಾವು ನೀರು ಕೊಡುವುದಿಲ್ಲ, ಹೇಮಾವತಿಯಲ್ಲಿ 12 ಟಿ.ಎಂ.ಸಿ. ಅಥವಾ ಅದಕ್ಕಿಂತ ಕೆಳಗಡೆ ಇದ್ದರೆ ನಾವು ನೀರು ಕೊಡುವುದಿಲ್ಲ, ಅದೇರೀತಿ ಕಬಿನಿಯಲ್ಲಿ ಇಷ್ಟು ಅಡಿ ಎಂದು ನಿಗದಿಪಡಿಸಿ ಅದಕ್ಕಿಂತ ಕೆಳಗಡೆ ಇದ್ದರೆ ನಾವು ನೀರು ಕೊಡುವುದಿಲ್ಲ ಎನ್ನುವಂತಹ ಅಂಶ ಇದರಲ್ಲಿ ಬರಬೇಕಾಗಿತ್ತು, ಬರಲಿಲ್ಲ. ಇಷ್ಟಾಗಿಯೂ ಈ ವರ್ಷ ನಮ್ಮ ರಾಜ್ಯದಲ್ಲಿ ಎಷ್ಟು ಮಳೆ ಬಂದಿದೆ ಎಂದರೆ, ನಮಗೆ ಹಂಚಿಕೆ ಆಗಿರುವ ನೀರೇನಿದೆ, ಅದಕ್ಕೆ 25% ನಷ್ಟು ಮಾತ್ರವೇ ಬಂದಿರುವುದು. ಇನ್ನು 75% ನಷ್ಟು ಮಳೆ ಬಂದಿಲ್ಲ. ನಾವು ಆ ನೀರನ್ನು ಕೂಡಿಟ್ಟು ಅವರಿಗೆ ಕೊಡಬೇಕಾದಂತಹ ಪರಿಸ್ಥಿತಿ ಬಂದಿದೆ. ನಾವು ಏನು ಹೇಳಬೇಕಾಗಿತ್ತೆಂದರೆ, ನಮಗೆ 320 ಟಿ.ಎಂ.ಸಿ. ನೀರು ಏನು ಹಂಚಿಕೆಯಾಗಿತ್ತು, ಅದರಲ್ಲಿ 25% ನಷ್ಟು ನೀರು ಕೂಡ ಜಲಾಶಯದಲ್ಲಿಲ್ಲ. ಈಗ ನಾವು ಹಿಡಿದಿಟ್ಟುಕೊಂಡಿರುವ 25%ನಷ್ಟು ನೀರೇನಿದೆ ಅದು ನಮ್ಮ ಪಾಲಿನ ನೀರಾಗಿದ್ದು, ಅದನ್ನೇ ಅವರು ಕೇಳುತ್ತಿದ್ದಾರೆ. ಅವರ ಪರವಾಗಿ ಮಾತನಾಡುವ ಅಡ್ವೋಕೇಟ್ ಒಬ್ಬರು ಬೆಂಗಳೂರಿಗೆ ಏಕೆ ಕುಡಿಯುವುದಕ್ಕೆ ನೀರು ಕೊಡಬೇಕು, ನಾವು ನೀರು ಕೊಡುವುದಿಲ್ಲ ಎನ್ನುತ್ತಾರೆ. ಅವರಿಗೆ ಗೊತ್ತಿಲ್ಲ, ಬೆಂಗಳೂರು ಕೂಡ ಕಾವೇರಿ ಜಲಾನಯನ ಪ್ರದೇಶದಲ್ಲಿಯೇ ಇದೆ. ಅರ್ಕಾವತಿ, ವೃಷಭಾವತಿ, ಶಿಂಷಾ ಈ ನದಿಗಳೆಲ್ಲಾ ಹರಿದು ಹೋಗುವುದು ಇಲ್ಲಿಂದ, ಈ ಎಲ್ಲ ನದಿಗಳ ನೀರು ಸಹ ಕಾವೇರಿ ನದಿಗೆ ಹೋಗಿ ಸೇರುತ್ತಿದೆ ಎನ್ನುವುದು ಅವರಿಗೆ ಗೊತ್ತಿಲ್ಲ. 1896ರಲ್ಲಿ ಬೆಂಗಳೂರಿಗೆ ಹೆಸರಘಟ್ಟದಿಂದ ಕುಡಿಯುವ ನಿರನ್ನು ತರಲಾಗುತ್ತಿತ್ತು. ಅದು ಸಾಕಾಗುವುದಿಲ್ಲವೆಂದು 1935ರಲ್ಲಿ ತಿಪ್ಪಗೊಂಡನಹಳ್ಳಿಯಿಂದ ನೀರನ್ನು ತರಲಾರಂಭಿಸಿದೆವು. ಅದು ಕೂಡ ಸಾಕಾಗುತ್ತಿಲ್ಲ. 1974ರಲ್ಲಿ ಕಾವೇರಿ ನದಿ ನೀರನ್ನು ತರಲಾರಂಭಿಸಲಾಯಿತು. ಕಾವೇರಿ ಮೊದಲ ಹಂತ, ಎರಡನೇ ಹಂತ, ಮೂರನೇ ಹಂತದ ಕಾಮಗಾರಿಗಳೆಲ್ಲಾ ನಡೆದು ಈಗ ನಾವು ನಾಲ್ಕನೇ ಹಂತಕ್ಕೆ ಬಂದಿದ್ದೇವೆ. ಇಷ್ಟಾಗಿಯೂ ನಮಗೆ ನೀರು ಸಾಕಾಗುತ್ತಿಲ್ಲ. ಆದ್ದರಿಂದ ಅವರು ಯಾರೋ ತಿಳುವಳಿಕೆ ಇಲ್ಲದೆ ಆ ರೀತಿ ಹೇಳಿದ್ದಾರೆ. ನಾನೇನು ಆ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ತಿಳುವಳಿಕೆ ಇಲ್ಲದವರಿಗೆ ನಾವು ಏನು ಮಾಡುವುದಕ್ಕಾಗುತ್ತದೆ? ನನಗೆ ಒಂದೊಂದು ಸಲ ಅನಿಸುವುದೇನೆಂದರೆ, ನಮ್ಮ ಅಡ್ವೋಕೇಟ್‌ಗಳು ಎಷ್ಟು ಬುದ್ಧಿವಂತಿಕೆಯಿಂದ ಹೇಳಿದರೂ ಕೂಡ ಜಾಣ ಕಿವುಡುತನವನ್ನು ಪ್ರದರ್ಶಿಸುವಂತಹ ಜನ ಅವರಿಗೆ ಹೇಗೆ ಬೇಕೋ ಹಾಗೆ ತೀರ್ಪು ಕೊಟ್ಟುಬಿಟ್ಟರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಕೆಲವೊಮ್ಮೆ ಸದನದಲ್ಲಿ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ

ಪಾಯಿಂಟ್ ಆಫ್ ಆರ್ಡರ್ ಎಂದು ಎದ್ದು ನಿಲ್ಲುತ್ತೇವೆ. ಆ ಸಂದರ್ಭದಲ್ಲಿ ಸನ್ಮಾನ್ಯ ಸಭಾಪತಿಯವರು ಕುಳಿತುಕೊಳ್ಳಿ ಎಂದು ಪದೇ ಪದೇ ಹೇಳುತ್ತಾರೆ. ತಕ್ಷಣ ಕುಳಿತುಕೊಂಡರೆ ಮತ್ತೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಾರೆ, ಇಲ್ಲದಿದ್ದರೆ ಮತ್ತೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಆ ರೀತಿ ಅವರು ನೀರು ಬಿಡಿ ಎಂದು ಹೇಳಿದಾಗ ಸ್ವಲ್ಪ ಬಿಟ್ಟುಬಿಡಬೇಕಾಗಿತ್ತು. ಸ್ವಲ್ಪ ನೀರನ್ನು ಬಿಟ್ಟು, 'ಇನ್ನು ಬಿಡಲು ನೀರಿಲ್ಲ ಸ್ವಾಮಿ ಏನು ಮಾಡುವುದು' ಎಂದು ಹೇಳಬೇಕಾಗಿತ್ತು. ಇದು strategy. Not on record. Strategy ಏನೆಂದರೆ, ಅನಧಿಕೃತವಾಗಿ ಜಡ್ಜಸ್ ಹತ್ತಿರ ಮಾತನಾಡಿ ನೀರು ಬಿಡುತ್ತೇವೆ, ನೀವು ಬರೆಯಬೇಡಿ, ರೆಕಾರ್ಡ್ ಮಾಡಬೇಡಿ ಎಂದು ಹೇಳಿ ಒಂದಿಷ್ಟು ನೀರನ್ನು ಬಿಡಬೇಕಾಗಿತ್ತು. ಇಲ್ಲದಿದ್ದರೆ ಈ ರೀತಿಯಾಗುತ್ತದೆ, ಸುಮಾರು 40 ಸಾವಿರ ಕೋಟಿ ರೂಪಾಯಿಗಳಷ್ಟು ಮೌಲ್ಯದ ಆಸ್ತಿಪಾಸ್ತಿಗಳು ಕರ್ನಾಟಕ ರಾಜ್ಯದಲ್ಲೆಲ್ಲಾ ಸುಟ್ಟುಹಾಕಿಬಿಟ್ಟರು. ಏನಾದರೂ ಒಂದು ಬುದ್ಧಿವಂತಿಕೆಯನ್ನು ಮಾಡಬೇಕಲ್ಲವೆ. ರಾಜ್ಯ ಆಳುವವರು ಬುದ್ಧಿವಂತಿಕೆ ಮಾಡಬೇಕು. ಈಗ ಮಾಡುವುದಕ್ಕಾಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಉಗ್ರಪ್ಪನವರು ಅದರ ಬಗ್ಗೆ ಚೆನ್ನಾಗಿ ಬೆಳಕು ಚೆಲ್ಲುತ್ತಾರೆ. ಇವತ್ತು ಕೂಡ ಮೇಕೆದಾಟು ಯೋಜನೆಗೆ ಅವರು ಯಾವುದೇ ಗಡಿಬಿಡಿ ಮಾಡದೆ ಹೋದರೆ, ಆ ಯೋಜನೆಯಿಂದ ನಿರಂತರವಾಗಿ ಅವರಿಗೆ ನೀರು ಹೋಗುತ್ತಿರುತ್ತದೆ. ನಮಗೆ ವಿದ್ಯುತ್ ಬರುತ್ತದೆ, ಅವರಿಗೆ ನೀರು ಹೋಗುತ್ತದೆ. ಅಷ್ಟೇ ಅಲ್ಲ, ಕನ್ನಂಬಾಡಿ ಕಟ್ಟೆಗೆ 130 ಅಡಿಗೆ ಏನು ಡಿಸೈನ್ ಮಾಡಿರುವುದರಿಂದ ಅದನ್ನು ಈಗಿರುವ 124 ಅಡಿಗಳಿಂದ ಇನ್ನು 6 ಅಡಿಗಳಷ್ಟು ಹೆಚ್ಚಿಸಿದರೆ ಆ ಜಲಾಶಯದಲ್ಲಿ 60 ಟಿ.ಎಂ.ಸಿ.ಗಳಷ್ಟು ಹೆಚ್ಚು ನೀರು ಸಂಗ್ರಹವಾಗುತ್ತದೆ. ಅದನ್ನು ನಿರ್ಮಾಣ ಮಾಡಿಕೊಂಡರೆ, ಮಳೆ ಬಂದು ನೀರು ತುಂಬಿಕೊಂಡರೆ ಬೇಕಾದಾಗಲೆಲ್ಲಾ ನೀರು ಬಿಡಬಹುದು, ಆ ರೀತಿ ಜಲಾಶಯದ ಎತ್ತರವನ್ನು ಹೆಚ್ಚಿಸಿದರೆ ಮುಳುಗಡೆಯಾಗುವಂತಹ ಜಮೀನನ್ನು ಸಹ ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆ. ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿಯೇ ಅಷ್ಟು ಎತ್ತರದ ಜಲಾಶಯವನ್ನು ನಿರ್ಮಿಸಿದರೆ ಎಷ್ಟು ಜಮೀನು ಮುಳುಗಡೆಯಾಗುತ್ತದೆಯೋ ಆ ಜಮೀನು ಈಗಾಗಲೇ acquire ಆಗಿಬಿಟ್ಟಿದೆ. That is in the custody of the Government. ಇವತ್ತು ಕೂಡ 124 ಅಡಿಗಳಷ್ಟಿರುವ ಜಲಾಶಯದ ಎತ್ತರವನ್ನು 130 ಅಡಿಗಳಿಗೆ ಹೆಚ್ಚಿಸಿದರೆ ಜಲಾಶಯದಲ್ಲಿ ಸಾಕಷ್ಟು ನೀರು ಸಂಗ್ರಹವಾಗುತ್ತದೆ. ಅವರಿಗೆ ಬೇಕಾದಾಗ ಬಿಡುವುದಕ್ಕೂ ಆಗುತ್ತದೆ. ಅದಕ್ಕೆ ಅವರ ಕಡೆಯಿಂದಲೇ ಹಣವನ್ನು ಪಡೆದುಕೊಂಡು ನಿರ್ಮಾಣ ಮಾಡಬೇಕು. ಈ ಸಂದರ್ಭದಲ್ಲಿ ಮೇಕೆದಾಟು ಯೋಜನೆ ಬಗ್ಗೆ ಏನಾದರೂ ಮಾಡಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ಕೇಂದ್ರ ಸರ್ಕಾರದ ದೇಣಿಗೆಯನ್ನೇ ಪಡೆದು ಮೇಕೆದಾಟು ಜಲವಿದ್ಯುತ್ ಯೋಜನೆಯನ್ನು ರೂಪಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದರೆ ನಾವು ಏನು ಸಹಾಯ ಮಾಡಬಹುದೋ ಅದನ್ನು ನಾವು ಮಾಡುತ್ತೇವೆ. ಈ ನಿರ್ಣಯದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಅದೇನೆಂದರೆ ಸಂತ್ರಸ್ತ ರೈತರಿಗೆ ರಾಜ್ಯದಲ್ಲಿ ಒಂದು ಎಕರೆಗೆ 25 ಸಾವಿರ ರೂಪಾಯಿಗಳ ಪರಿಹಾರವನ್ನು ನಾವು ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿಬಿಟ್ಟರೆ ರಾಜ್ಯದ ಜನ ನೆಮ್ಮದಿಯಾಗಿರುತ್ತಾರೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ತಿಳಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ...

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಶ್ರೀಕಂಠೇಗೌಡರೇ, ದಯಮಾಡಿ ಒಂದೇ ನಿಮಿಷ. ಮಾನ್ಯ ಸಭಾಪತಿಯವರೇ, ಸರ್ಕಾರ ಒಂದು ನಿರ್ಣಯವನ್ನು ತಂದಿದ್ದರೆ ಚೆನ್ನಾಗಿತ್ತು ಎಂದು ನಾನು ಬೆಳಿಗ್ಗೆ ಹೇಳಿದ್ದು ಕೂಡ ಇದೇ ಉದ್ದೇಶದಿಂದ. ಸರ್ಕಾರ ಈಗ ಒಂದು ನಿರ್ಣಯವನ್ನು ತಂದಿದೆ. ಇದರಲ್ಲಿ 23ನೇ ತಾರೀಖಿನಂದು ತಂದಿದ್ದಂತಹ ನಿರ್ಣಯದಲ್ಲಿ

ಕುಡಿಯುವ ನೀರಿನ ಬಗ್ಗೆ ನಮೂದು ಮಾಡಿದ್ದನ್ನು ಇದರಲ್ಲಿ ಕೂಡ ನಮೂದು ಮಾಡಿದ್ದೀರಿ. ಇದರ ಜೊತೆಗೆ ನೀವು ಮಾಡಿರುವಂತಹ ಒಂದು ಒಳ್ಳೆಯ ಕೆಲಸವೆಂದರೆ, "ದಿನಾಂಕ:23.09.2016ರಂದು ಈ ಸದನವು ನಿರ್ಣಯಿಸಿದಂತೆ ಸರ್ಕಾರವು ಕುಡಿಯುವ ನೀರಿನ ಅವಶ್ಯಕತೆಗೆ ನೀರಿನ ಲಭ್ಯತೆ ಖಚಿತ ಪಡಿಸಿಕೊಂಡು ರೈತರ ಬೆಳೆಗಳಿಗೆ ನೀರು ಬಿಡುಗಡೆಗೊಳಿಸುವ ಬಗ್ಗೆ..." ಎನ್ನುವಲ್ಲಿಯವರೆಗೆ ಸರಿ, ಇದನ್ನು ಕೂಡ ಒಪ್ಪುತ್ತೇವೆ. ಅದರ ನಂತರ "ಈ ಸದನವು ನಿರ್ಣಯಿಸುತ್ತದೆ" ಇಷ್ಟು ಮಾತ್ರ ಆಗಬೇಕಾಗಿತ್ತು. ಆದರೆ ಅದರ ಜೊತೆಗೆ ಏನು ಮಾಡಿದ್ದೀರಿ ಎಂದರೆ, "ಹಾಗೂ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದು ಈ ಸದನವು ನಿರ್ಣಯಿಸುತ್ತದೆ" ಎಂದು ಸೇರಿಸಿದ್ದೀರಿ.

**ಶ್ರೀ ಸಂದೇಶ್ ನಾಗರಾಜ್:–** ಅದು ಆಮೇಲೆ, ಅದನ್ನು ಗುಟ್ಟಾಗಿ ಮಾತನಾಡಿಕೊಳ್ಳಿ. ಸದನದಲ್ಲಿ ಪ್ರೆಸ್‌ನವರಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಪ್ರೆಸ್ ಅಲ್ಲ, ಇದು ಈಗ ಇಡೀ ರಾಜ್ಯಕ್ಕೆ ಹೋಗುತ್ತದೆ. ಇದು ನಮ್ಮಿಬ್ಬರ ನಡುವಿನ ಗುಟ್ಟಲ್ಲ, ಇದರಲ್ಲಿ ಯಾವುದೇ ಗುಟ್ಟಿಲ್ಲ. ಇದರಲ್ಲಿ ಹೆಣ್ಣು–ಗಂಡು ಕೊಟ್ಟು ತೆಗೆದುಕೊಳ್ಳುವಂಥದ್ದೇನೂ ಇಲ್ಲ. ಇಲ್ಲಿ ಸರ್ಕಾರದವರು ನಿರ್ಣಯವನ್ನೇನು ತಂದಿದ್ದಾರೆ, ಅದಕ್ಕೋಸ್ಕರವೇ ಬೆಳಿಗ್ಗೆಯೇ ಈ ನಿರ್ಣಯವನ್ನು ತಂದಿದ್ದರೆ ಚೆನ್ನಾಗಿತ್ತು ಎನ್ನುವ ಮಾತನ್ನು ನಾನು ಬಹಳ ಸ್ಪಷ್ಟವಾಗಿ ತಿಳಿಸಿದ್ದೇನೆ. ಈಗಲೂ ನಾನು ಹೇಳುತ್ತೇನೆ, ಇಲ್ಲಿ ತುಂಬಾ ಸ್ಪಷ್ಟವಾಗಿ ಉಳಿದಿದ್ದೆಲ್ಲಾ ಹೇಳಿದ್ದೀರಿ. ಕುಡಿಯುವ ನೀರಿನ ಬಗ್ಗೆ ನಮೂದು ಮಾಡಿದ್ದೀರಿ, ಬೆಳೆಗಳಿಗೆ ನೀರು ಕೊಡುವ ಬಗ್ಗೆಯೂ ನಮೂದು ಮಾಡಿದ್ದೀರಿ. "ಹಾಗು ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು" ಎಂದು ಹೇಳುತ್ತಿದ್ದೀರಿ. ಯಾವ ಕಾರಣಕ್ಕೂ ಈ ಸಾಲನ್ನು ನಾವು ಒಪ್ಪುವುದಿಲ್ಲ. 'ರಾಜ್ಯದ ಹಿತದೃಷ್ಟಿ' ಎಂದರೆ ಏನು? ಕುಡಿಯುವ ನೀರು ಮತ್ತು ಬೇಸಾಯಕ್ಕೆ ನೀರು ಇವೆರಡನ್ನು ನಮ್ಮ ರಾಜ್ಯದ ರೈತರು ಕೇಳುತ್ತಿದ್ದಾರೆ. ನೀವು ತಮಿಳುನಾಡಿಗೂ ನೀರು ಬಿಡಬಹುದು, ಬೇಕಾದಲ್ಲಿ ನೀರು ಬಿಡಬಹುದು, ಏನು ಬೇಕಾದರೂ ಆಗುತ್ತದೆ ಇದರಲ್ಲಿ. ರಾಜ್ಯದ ಹಿತದೃಷ್ಟಿಯಿಂದ ಏನು ಬೇಕಾದರೂ ನಿರ್ಣಯ ತೆಗೆದುಕೊಳ್ಳಲು ನಾವು ನಿಮಗೆ ಹೇಗೆ ಅಧಿಕಾರ ಕೊಡುವುದಕ್ಕಾಗುತ್ತದೆ? "ಮೊದಲನೆಯದಾಗಿ ಕುಡಿಯುವ ನೀರಿಗೆ ಮತ್ತು ಎರಡನೆಯದಾಗಿ ಬೆಳೆಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ರೈತರ ಬೆಳೆಗಳಿಗೆ ನೀರು ಬಿಡುಗಡೆಗೊಳಿಸುವ ಬಗ್ಗೆ ಈ ಸದನವು ನಿರ್ಣಯಿಸುತ್ತದೆ."

**ಶ್ರೀ ಕೆ.ಎಸ್.ಈಶ್ವರಪ್ಪ, ವಿರೋಧಪಕ್ಷದ ನಾಯಕರು:–** ಇದನ್ನು ನಾನು ಈ ತಿದ್ದುಪಡಿ ಮುಖಾಂತರ ನಿಮಗೆ ತಿಳಿಸುತ್ತಿದ್ದೇನೆ. ಇದರ ಬಗ್ಗೆ ಚರ್ಚೆಯಾಗಲಿ. ಅಂತಿಮವಾಗಿ ಇದನ್ನು ತೀರ್ಮಾನ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಈ ಸಾಲಿನಲ್ಲಿರುವ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂಬುದನ್ನು ಡಿಲೀಟ್ ಮಾಡಬೇಕು ಎಂಬ ಸಲಹೆಯನ್ನು ನಾನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೆ, ಕಾವೇರಿ ನಮ್ಮೆಲ್ಲರ ಜೀವ ಜಲ. ನಮ್ಮ ಬದುಕು ಮತ್ತು ಭವಿಷ್ಯವೂ ಆಗಿದೆ. ನಾನು ಆಗಲೇ ಹೇಳಿದಂತೆ, ನನಗೆ ಬುದ್ಧಿ ಬಂದಾಗಿನಿಂದಲೂ ಈ ಕಾವೇರಿ ಚಳುವಳಿಯಲ್ಲಿ ನನ್ನನ್ನು ನಾನು ನಿರಂತರವಾಗಿ ತೊಡಗಿಸಿಕೊಂಡಿರುತ್ತೇನೆ. ಬಹುಶಃ 45–50 ವರ್ಷಗಳ ಸುದೀರ್ಘ ಕಾಲದ ನನ್ನ ಹೋರಾಟದ ಬದುಕು ಇದರೊಟ್ಟಿಗೆ ಆರಂಭಗೊಂಡಿತು. ಇದು ಎಂದಿಗೆ ಕೊನೆಗೊಳ್ಳುವುದು ಎಂಬ ಆತಂಕದಲ್ಲಿ ನಾನಷ್ಟೆ ಅಲ್ಲ, ಇಡೀ ಕಾವೇರಿ ಕಣಿವೆಯ ಮೂರೂವರೆ ಕೋಟಿ ಜನರು ಇದ್ದಾರೆ. ಮೊದಲಿಗೆ ದೇಶದ ಪ್ರಧಾನಮಂತ್ರಿಗಳಿಗೆ, ಮಾಜಿ ಪ್ರಧಾನಿಗಳಾದ ಶ್ರೀ ದೇವೇಗೌಡರು ಹಾಗೂ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರಿಗೆ ಕಾವೇರಿ ಕಣಿವೆಯ ಜನರ ಪರವಾಗಿ ನನ್ನ

ನಮಸ್ಕಾರಗಳನ್ನು ಹೇಳಲಿಚ್ಛಿಸುತ್ತೇನೆ. 84ರ ಇಳಿವಯಸ್ಸಿನಲ್ಲಿ ತಮ್ಮ ಅಪಾರವಾದ ಅನುಭವವನ್ನು ಇಟ್ಟುಕೊಂಡು, ಎಲ್ಲರ ನಿರೀಕ್ಷೆಗೂ ಮೀರಿ ಮೊದಲು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ನೇರವಾಗಿ ನಾಲ್ಕು ಜಲಾಶಯಗಳಿಗೆ ಹೆಲಿಕಾಪ್ಟರ್ ಮೂಲಕ ಖುದ್ದು ಸಮೀಕ್ಷೆಯನ್ನು ನಡೆಸಿ ತಲಸ್ಪರ್ಶಿ ಅಂಕಿ ಅಂಶಗಳನ್ನು ಪಡೆದು, ನಂತರ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದರು. ನಂತರ ನೀರು ಬಿಡಲಿಕ್ಕೆ ಮುಖ್ಯಮಂತ್ರಿಗಳಿಗೆ ನಾನೇ ಹೇಳಿದ್ದೆನು ಎಂದು ಹೇಳುವ ಮೂಲಕ ಅವರ ತಲೆಕಾಯುವ ಕೆಲಸವನ್ನು ಮಾಡಿದ್ದಾರೆ. ಇಡೀ ತೀರ್ಮಾನವು ವ್ಯತಿರಿಕ್ತವಾಗಿ ಬಂದಾಗ ತಮ್ಮ ಪ್ರಾಣವನ್ನು ಬಲಿ ಕೊಡಲಿಕ್ಕೆ ತಯಾರಿದ್ದೇನೆ ಎನ್ನುವ ಮೂಲಕ ಉಪವಾಸಕ್ಕೆ ಕುಳಿತು ದೇಶದ ಪ್ರಧಾನಮಂತ್ರಿಯವರ ಗಮನವನ್ನು ಸೆಳೆದು, ಕಾವೇರಿ ನಿರ್ವಹಣಾ ಮಂಡಳಿಯ ರಚನೆಯಿಂದ ನಮ್ಮನ್ನು ಪಾರು ಮಾಡಿದ ಕೀರ್ತಿಗೆ ಶ್ರೀ ದೇವೇಗೌಡರು ಪಾತ್ರರಾಗಿದ್ದಾರೆ. ಅವರಿಗೆ ನಿಜವಾಗಿಯೂ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸುತ್ತೇನೆ. ಕಾವೇರಿಯ ವಿವಾದಕ್ಕೆ 150 ವರ್ಷಗಳ ಇತಿಹಾಸವಿದೆ. ಮುಂಚೆ ಇದು ವಿವಾದವಾಗಿರಲಿಲ್ಲ. 1892ರ ಒಪ್ಪಂದ ನಮಗೆ ಅಂತಹ ಆಘಾತಕಾರಿಯಾದುದಾಗಿರಲಿಲ್ಲ. ಕನ್ನಂಬಾಡಿ ಕಟ್ಟೆಯನ್ನು ಕಟ್ಟುವ ವಿಚಾರ ಪ್ರಸ್ತಾಪವಾದ ಮೇಲೆ ವಿವಾದ ಗಂಭೀರವಾದ ಸ್ವರೂಪವನ್ನು ಪಡೆದುಕೊಳ್ಳುತ್ತಾ ಬಂದಿತು. ಬಹುಶಃ 1892ರ ಒಪ್ಪಂದ ಅಂದಿನ ಮೈಸೂರಿಗೆ ಅಪಾಯಕಾರಿಯೂ ಆಗಿರಲಿಲ್ಲ. ಕನ್ನಂಬಾಡಿ ಕಟ್ಟೆಯನ್ನು ಕಟ್ಟಬೇಕು ಎಂದು ಹೊರಟಾಗ ಮದ್ರಾಸ್ ಪ್ರಾಂತ್ಯದ ಮೂಲಕ ತಮಿಳುನಾಡಿನವರ ತಗಾದೆ ಪ್ರಾರಂಭವಾಯಿತು. ಆಗ ಒಂದು ಮಂಡಳಿಯ ರಚನೆಯಾಯಿತು.

**(ಈ ಹಂತದಲ್ಲಿ ಶ್ರೀ ಡಿ.ಎಸ್.ವೀರಯ್ಯನವರು ಪೀಠವನ್ನು ಅಲಂಕರಿಸಿದರು.)**

1910ರ ವಿಚಾರ. ಅಂದಿನ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿಗಳಾಗಿದ್ದ ಶ್ರೀ ಹೆಚ್.ಡಿ.ಗ್ರಿಫಿನ್‌ಸನ್ ಅವರನ್ನು ಒಬ್ಬ ಸದಸ್ಯರನ್ನಾಗಿ ಮತ್ತು ಭಾರತದ ಅಂದಿನ ನೀರಾವರಿ ಇನ್ಸ್‌ಪೆಕ್ಟರ್ ಜನರಲ್ ಆಗಿದ್ದಂತಹ ಶ್ರೀ ಎಂ.ನೆದರ್‌ಸೋಲ್ ಅವರನ್ನು ಮತ್ತೊಬ್ಬ ಸದಸ್ಯರನ್ನಾಗಿ ಒಳಗೊಂಡ ಒಂದು ಮಂಡಳಿಯ ರಚನೆಯಾಯಿತು. ಆ ಮಂಡಳಿ ನಾಲ್ಕಾರು ವರ್ಷಗಳ ಕಾಲ ಸುದೀರ್ಘವಾದ ಅಧ್ಯಯನವನ್ನು ಮಾಡಿ, ವಿಶ್ಲೇಷಣೆಯನ್ನು ಮಾಡಿ 1916ರಲ್ಲಿ ಒಂದು ವರದಿಯನ್ನು ಕೊಡುತ್ತದೆ. ಆ ವರದಿ ಮೈಸೂರಿನ ಪರವಾಗಿದೆ ಎನ್ನುವ ಅಂಶ ತಮಿಳುನಾಡಿನವರ ಗಮನಕ್ಕೆ ಬರುತ್ತದೆ. 1914ರ ಆ ತೀರ್ಪನ್ನು 1916ರಲ್ಲಿ ಭಾರತ ಸರ್ಕಾರ ಅಂಗೀಕರಿಸುತ್ತದೆ. ಆ ಕುರಿತು ಅಂದಿನ ಮದ್ರಾಸ್ ಪ್ರೆಸಿಡೆನ್ಸಿಯ ಕಾರ್ಯದರ್ಶಿ ಅಂದಿನ ಭಾರತ ಸರ್ಕಾರದ ಮೇಲೆ ಒತ್ತಡವನ್ನು ತಂದು 1924ರ ಒಪ್ಪಂದವನ್ನು ಮಾಡಿಸುತ್ತಾರೆ. ಆ ಒಪ್ಪಂದದ ಬಗ್ಗೆ ನಾನು ಹೆಚ್ಚೇನು ಹೇಳಬೇಕಾಗಿಲ್ಲ. ಮದ್ರಾಸ್ ಪ್ರೆಸಿಡೆನ್ಸಿ ತನ್ನ ಅಧೀನ ಸಂಸ್ಥಾನದೊಡನೆ ಮಾಡಿಸಿಕೊಂಡಂತಹ ಒಂದು ಅಮಾನವೀಯ ಒಪ್ಪಂದ. ಅಂದು ನಮಗೆ ಆದ ಗದಾ ಪ್ರಹಾರ, ಅನ್ಯಾಯ ಇನ್ನೂ ನಿಂತಿಲ್ಲ. ಅಂದು ನಮಗೆ ಪ್ರಾರಂಭವಾದ ದುಗುಡ, ನೋವು ಮತ್ತು ಆ ತೀರ್ಪಿನ ಮೇಲೆ ನಮಗಿರುವ ಆಕ್ರೋಶ ಇನ್ನೂ ಆರಿಲ್ಲ. ಬಹುಶಃ ಈ ದಿಸೆಯಲ್ಲಿ ಇಂದು ನಾವು ನಿರ್ಣಾಯಕವಾದ ಹಂತವನ್ನು ಮುಟ್ಟುವಂತಹ ಸ್ಥಿತಿ ಸೃಷ್ಟಿಯಾಗಿ ಹೋಗಿದೆ. ಕಾವೇರಿಯ ಹುಟ್ಟು ಪಶ್ಚಿಮಘಟ್ಟಗಳ ತಲಕಾವೇರಿಯಲ್ಲಿ ಆಗುತ್ತದೆ. ಅದರ ಹರಿವಿನ ಉದ್ದ ಸುಮಾರು 802 ಕಿ.ಮೀ. ಆ 802 ಕಿ.ಮೀ. ಹರಿವಿನಲ್ಲಿ ಹೆಚ್ಚು ಭಾಗ ಹರಿಯುವಂತಹದ್ದು ಕರ್ನಾಟಕದಲ್ಲಿ ಅಂದರೆ 24 ಕಿ.ಮೀ. ತಮಿಳುನಾಡಿಗಿಂತ ಹೆಚ್ಚು ಭಾಗ ಕರ್ನಾಟಕದಲ್ಲಿ ಹರಿಯುತ್ತದೆ. ಕರ್ನಾಟಕದಿಂದ ಕಾವೇರಿಗೆ ಒಟ್ಟು ನೀರಿನ ಸಂಗ್ರಹದ ಪ್ರಮಾಣ ಶೇ.53.9 ಭಾಗ. ಇದು ಕರ್ನಾಟಕದ ಕೊಡುಗೆ, ಕರ್ನಾಟಕದ ಪಾಲು. ತಮಿಳುನಾಡಿನ ಪಾಲು ಶೇ. 31.6 ಅಷ್ಟೆ. ದುರಂತವೆಂದರೆ ನೀರಿನ ಬಳಕೆಯ ಹಂಚಿಕೆಯಲ್ಲಿ ತಮಿಳುನಾಡಿಗೆ ಇವತ್ತು 53 ಭಾಗ ಹೋಗಿದೆ. ಕರ್ನಾಟಕಕ್ಕೆ 30 ಭಾಗ ಮಾತ್ರ ಬಂದಿದೆ. 14 ಭಾಗ ಕೇರಳಕ್ಕೆ ಹೋಗಿದೆ. ಶೇ.53 ಭಾಗ ನೀರಿನ ಒಟ್ಟು ಸಂಗ್ರಹದ ಕೊಡುಗೆಯನ್ನು ನೀಡುವ ಕರ್ನಾಟಕಕ್ಕೆ ನೀರಿನ ಬಳಕೆಯಲ್ಲಿ ಪಾಲು ಸಿಕ್ಕಿರುವಂತಹದ್ದು ಶೇ.30 ಭಾಗ ಮಾತ್ರ. 270 ಟಿ.ಎಂ.ಸಿ. ಮಾತ್ರ.

419 ಟಿ.ಎಂ.ಸಿ.ಯನ್ನು ತಮಿಳುನಾಡಿಗೆ ಹಂಚಿಕೆ ಮಾಡಿದ್ದಾರೆ. ಅವರ ಒಟ್ಟು 20 ವರ್ಷಗಳ ಸರಾಸರಿಯನ್ನು 740 ಟಿ.ಎಂ.ಸಿ. ಎಂದು ಲೆಕ್ಕ ಹಾಕುತ್ತಾರೆ. 50 ವರ್ಷಗಳ ಹಿನ್ನೆಲೆಯನ್ನು ತೆಗೆದುಕೊಂಡರೆ ಸರಾಸರಿ ಎನ್ನುವಂತಹದ್ದು 670 ಟಿ.ಎಂ.ಸಿ. ಮಾತ್ರ. ಇತ್ತೀಚಿನ ವರ್ಷಗಳಲ್ಲಿ ಯಾವತ್ತೂ 740 ಟಿ.ಎಂ.ಸಿ. ಸಂಗ್ರಹವಾದದ್ದೇ ಇಲ್ಲ. ಇಡೀ ಕಾವೇರಿ ನೀರಿನ ಸಂಗ್ರಹವು ಪಶ್ಚಿಮ ಘಟ್ಟಗಳಲ್ಲಿ ಬೀಳುವ ಮಳೆಯನ್ನು ಅವಲಂಬಿಸಿರುತ್ತದೆ. ಮಳೆ ಬೀಳುವ ಪ್ರಮಾಣದ ಮೇಲೆ ಏನಾದರೂ ವ್ಯತ್ಯಯಗಳಾದರೆ ಸಂಗ್ರಹದಲ್ಲೂ ವ್ಯತ್ಯಯಗಳಾಗುತ್ತದೆ, ಹಂಚಿಕೆಯಲ್ಲೂ ವ್ಯತ್ಯಯವಾಗುತ್ತದೆ. ಈ ದಿಶೆಯಲ್ಲಿ 1924ರ ಒಪ್ಪಂದದ ನಂತರ ತಮಿಳುನಾಡು ಸಾಕಷ್ಟು ಅಣೆಕಟ್ಟುಗಳನ್ನು ನಿರ್ಮಾಣ ಮಾಡಿತು. ಆ ಅಣೆಕಟ್ಟುಗಳನ್ನು ಪಟ್ಟಿ ಮಾಡುತ್ತಾ ಹೋಗುವುದಾದರೆ ಮೆಟ್ಟೂರು ಜಲಾಶಯ 1934ರಲ್ಲಿ ನಿರ್ಮಾಣಗೊಳ್ಳುತ್ತದೆ. ಅಪ್ಪರ್ ಅಣೆಕಟ್ಟನ್ನು 1966ರಲ್ಲಿ ಕಟ್ಟಲಾಗಿದೆ. ಗ್ರಾಂಡ್ ಅಣೆಕಟ್ಟು, ಲೋಯರ್ ಕೊಲ್ಲಡ, ಲೋಯರ್ ಭವಾನಿ, ಕೊಡಿವೆರಿ ಅಣೆಕಟ್ಟು, ಚಿತ್ರಚಾವಡಿ ಅಣೆಕಟ್ಟು, ಅಮರಾವತಿ ಅಣೆಕಟ್ಟು ಮತ್ತು ಪಲ್ಲುಪಾಳೆಯಂ ಅಣೆಕಟ್ಟು ಹೀಗೆ ಒಟ್ಟು 9 ಅಣೆಕಟ್ಟುಗಳನ್ನು ಈ ಒಪ್ಪಂದ ಮುಗಿಯುವುದಕ್ಕೆ ಮುಂಚೆಯೇ ಕಟ್ಟಲಾಗುತ್ತದೆ. ಆದರೆ ನಾವು ಯಾವುದೇ ಒಂದು ಸಣ್ಣ ಕಾಮಗಾರಿಯನ್ನು ಮಾಡುವುದಕ್ಕೆ ಯಾವ ಸಂದರ್ಭದಲ್ಲಿಯೂ ಬಿಡುವುದಿಲ್ಲ. ಎಲ್ಲಾ ಹಂತಗಳಲ್ಲಿಯೂ ತಗಾದೆಯನ್ನು ತೆಗೆಯುತ್ತಾ ಹೋಗುತ್ತದೆ. ಹೇಗೆ ಕಾವೇರಿ ಮತ್ತು ತಮಿಳುನಾಡಿನ ವಿಚಾರದಲ್ಲಿ ಕರ್ನಾಟಕಕ್ಕೆ ವಿವಾದವಿದೆಯೋ ಅಂತಹುದೇ ಒಂದು ವಿವಾದ ಕೇರಳ ಮತ್ತು ತಮಿಳುನಾಡಿನ ನಡುವೆ ಇತ್ತು. ಅದು ಮುಲ್ಲಾ ಪೆರಿಯಾರ್ ವಿವಾದ. ಪೆರಿಯಾರ್ ನದಿಗೆ ಮತ್ತು ಮುಲ್ಲಾ ನದಿಗೆ ಸೇರಿ ಒಂದು ದೊಡ್ಡ ಅಣೆಕಟ್ಟನ್ನು ಕಟ್ಟಿದ್ದಾರೆ. 37 ಟಿ.ಎಂ.ಸಿ. ಸಂಗ್ರಹವಾಗತಕ್ಕಂತಹ ಅಣೆಕಟ್ಟೆ ಅದಾಗಿದೆ. ಈ ಕುರಿತು ತಮಿಳುನಾಡು ಮತ್ತು ಕೇರಳಕ್ಕೆ 1888ರಲ್ಲಿ ಒಪ್ಪಂದವಾಗಿದೆ. ನಮ್ಮದು 1924ರಲ್ಲಿ ಆದದ್ದು, ಅವರದ್ದು 1888ರಲ್ಲಿ ಆದದ್ದು. ಸ್ವಾತಂತ್ರ್ಯಾನಂತರ ತಮಿಳುನಾಡು ಕೇರಳದ ಜೊತೆಯಲ್ಲಿ ಕ್ಯಾತೆಯನ್ನು ತೆಗೆದು ಸುಪ್ರೀಂಕೋರ್ಟಿಗೆ ಹೋಗುತ್ತದೆ. ಸುಪ್ರೀಂ ಕೋರ್ಟಿನಲ್ಲಿ ನಿರಂತರವಾಗಿ ನಡೆದ ಈ ವಿಚಾರಕ್ಕೆ 2014ರಲ್ಲಿ ತೀರ್ಮಾನ ಬರುತ್ತದೆ. ಸುಪ್ರೀಂ ಕೋರ್ಟಿನಿಂದ ಬಂದ ತೀರ್ಮಾನವೇನೆಂದರೆ ಈ ವಿಚಾರ ಅಂತರರಾಜ್ಯ ಜಲವಿವಾದಕ್ಕೆ ಸಂಬಂಧಪಟ್ಟಂತಹದು. .......................... ಅಡಿಯಲ್ಲಿ 262, 363ರ ವಿಧಿಯ ಅನ್ವಯ ತಮಿಳುನಾಡಿನ ಅರ್ಜಿಯನ್ನು ವಜಾಗೊಳಿಸಲಾಗಿದೆ. ಇಂದು ಈ ಮುಲ್ಲಾ ಪೆರಿಯಾರ್ ವಿವಾದ ಸುಪ್ರೀಂಕೋರ್ಟಿನಿಂದ ಹೊರಗುಳಿದಿದೆ. ಮತ್ತೆ ಆ ಕುರಿತು ತಮಿಳುನಾಡಿನವರು ತಗಾದೆಯನ್ನು ತೆಗೆಯುವುದನ್ನೇ ಬಿಟ್ಟಿದ್ದಾರೆ. ಕೇರಳ ಮತ್ತು ತಮಿಳುನಾಡಿನವರ ಮುಲ್ಲಾ ಪೆರಿಯಾರ್ ವಿವಾದ ಸುಪ್ರೀಂಕೋರ್ಟಿನಿಂದ ಹೊರಗುಳಿದ ಮೇಲೆ ಕಾವೇರಿ ಏಕೆ ಒಳಗೆ ಬರುತ್ತದೆ? 262, 363ರ ವಿಧಿಯಲ್ಲಿ ಅದೇ ಮಾದರಿಯಲ್ಲಿ ಕಾವೇರಿ ವಿಷಯದಲ್ಲೂ ಏಕೆ ಮಾಡಬಾರದು ಎಂದು ಅನೇಕ ಕಾನೂನು ತಜ್ಞರು ಪ್ರಸ್ತಾಪ ಮಾಡುತ್ತಿದ್ದಾರೆ ಹಾಗೂ ಆ ಕುರಿತು ಲೇಖನಗಳನ್ನು ಬರೆಯುತ್ತಿದ್ದಾರೆ. ಈ ಮುಲ್ಲಾ ಪೆರಿಯಾರ್ ಹಾದಿಯಲ್ಲಿ ನೀವು ಮುಂದಿನ ದಿನಗಳಲ್ಲಿ ತೀರ್ಮಾನವನ್ನು ಕೈಗೊಳ್ಳತಕ್ಕಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಮಾಡದಿದ್ದಲ್ಲಿ ನಾವು ದೊಡ್ಡ ನೋವನ್ನು ಅನುಭವಿಸಬೇಕಾಗುತ್ತದೆ ಎಂದು ನಾನು ಸರ್ಕಾರಕ್ಕೆ ಈ ಮೂಲಕ ಹೇಳಬಯಸುತ್ತೇನೆ. ಇನ್ನು ಸುಪ್ರೀಂ ಕೋರ್ಟು ನಿರಂತರವಾಗಿ 30 ದಿವಸಗಳಲ್ಲಿ ಅಂದರೆ ಒಂದು ತಿಂಗಳಿನಲ್ಲಿ ಒಂದಲ್ಲ, ಎರಡಲ್ಲ, ಮೂರಲ್ಲ, ಒಟ್ಟು ಆರು ತೀರ್ಮಾನಗಳನ್ನು ನೀಡಿದೆ. ಇಡೀ ದೇಶದಲ್ಲಿ ಅಷ್ಟೇ ಅಲ್ಲ, ಇಡೀ ಜಗತ್ತಿನಲ್ಲಿಯೇ ಈ ರೀತಿ ತೀರ್ಮಾನ ನೀಡಿರುವುದು ಇದೇ ಮೊದಲು. ಈ ಕುರಿತು ನೀವು ಏನೇನೋ ಮಾತನಾಡಬೇಡಿ ಎಂದು ನಾವೆಲ್ಲ ಒಂದು ಚೌಕಟ್ಟನ್ನು ಹಾಕಿಕೊಂಡಿದ್ದೇವೆ. ಆದರೆ ಈ ವಿವಾದವನ್ನು ಕುರಿತು ಸುಪ್ರೀಂ ಕೋರ್ಟಿನ ಮಾಜಿ ನ್ಯಾಯಮೂರ್ತಿಯಾದಂತಹ Markandeya Katju ಅವರು ವ್ಯಾಪ್ತಿ ಮೀರಿ ಆದೇಶವನ್ನು ನೀಡಲಾಗಿದೆ ಎಂದು ಹೇಳುತ್ತಾರೆ. ಕಾವೇರಿ ವಿವಾದಕ್ಕೆ "ಕಾಟ್ಜು ಸೂತ್ರ" ಅವರು ಸುಪ್ರೀಂ ಕೋರ್ಟಿನ ನಿವೃತ್ತ

ನ್ಯಾಯಾಧೀಶರು ಕಾವೇರಿಯ ತೀರ್ಮಾನಗಳೇನಿವೆ, "ದ್ವಿಸದಸ್ಯ" ಪೀಠದ ತೀರ್ಮಾನದ ಬಗ್ಗೆ ಹೇಳುತ್ತಾರೆ. ನಾನು ಹೆಸರನ್ನು ಹೇಳಬಯಸುವುದಿಲ್ಲ. ಈ ದ್ವಿಸದಸ್ಯ ಪೀಠದ ತೀರ್ಮಾನಗಳು ಸುಪ್ರೀಂ ಕೋರ್ಟಿನ ವ್ಯಾಪ್ತಿಯನ್ನು ಮೀರಿದ್ದಾಗಿದೆ, ಬಯಸಿದರೆ ನಾನೇ ಈ ವಿವಾದವನ್ನು ಕೋರ್ಟಿನಿಂದ ಹೊರಗೆ ಇತ್ಯರ್ಥ ಮಾಡುವುದಕ್ಕೆ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವುದಕ್ಕೆ ತಯಾರಿದ್ದೇನೆ. ತಮಿಳು ನಾಡಿನಲ್ಲಿ ರಾಮಸ್ವಾಮಿ ಎಂಬ ನೀರಾವರಿ ತಜ್ಞರಿದ್ದಾರೆ ಅವರೇ ಈ ಕಮಿಟಿಯ ಜೊತೆ ಬರಲಿ. ಎರಡೂ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಒಪ್ಪಿದರೆ ನಾನು ಈ ತೀರ್ಮಾನವನ್ನು ಕೋರ್ಟಿನ ಹೊರಗೆ ಇಟ್ಟು ಬಗೆಹರಿಸುವುದಕ್ಕೆ ತಯಾರಿದ್ದೇನೆ ಎನ್ನುವಂತಹ ಮಾತನ್ನು ಮಾರ್ಕಂಡೇಯ ಕಾಟ್ಜು ಎನ್ನುವಂತಹ ನಿವೃತ್ತ ಸುಪ್ರೀಂ ಕೋರ್ಟಿನ ನ್ಯಾಯಾಧೀಶರು ಇವತ್ತು ಹೇಳಿಕೆಯನ್ನು ಮಾಡುತ್ತಾರೆ. ಬಹುಶಃ ಇವತ್ತು ಮಾನ್ಯ ಪ್ರಧಾನ ಮಂತ್ರಿಗಳಿಗೆ ಅತ್ಯಂತ ಆತ್ಮೀಯರಾಗಿರುವಂತಹ ಕೇರಳ ಮಾದರಿಯ ವಾದವನ್ನೇ ಮಾಡಬೇಕು ಎನ್ನುವಂಥ ಲೇಖನವನ್ನು ಶ್ರೀ ಎಂ.ಪಿ.ಶಂಕರ್ ಎನ್ನುವಂತ ಹಿರಿಯ ವಕೀಲರೊಬ್ಬರು ಬರೆದಿದ್ದಾರೆ. ಮಾನ್ಯ ಸಭಾ ನಾಯಕರೆ ಆ ಲೇಖನ ಇಲ್ಲಿದೆ. ಅವರು ಮುಲ್ಲಾ-ಪೆರಿಯಾರ್ ವಿವಾದ ಹೇಗೆ ಕೋರ್ಟಿನಿಂದ ಹೊರಗೆ ಉಳಿಯಿತು ಎನ್ನುವ ಬಗ್ಗೆ ಲೇಖನವನ್ನು ಬರೆದಿದ್ದಾರೆ. ಈ ಲೇಖನವನ್ನು ತೆಗೆದುಕೊಳ್ಳುವುದಾದರೆ ಸಂಪೂರ್ಣವಾದಂತಹ ಮಾಹಿತಿ ಈ ಲೇಖನದಲ್ಲಿ ಸಿಗುತ್ತದೆ. ಇನ್ನು ರಾಜೇಂದ್ರ ಸಿಂಗ್ ಎನ್ನುವಂತ ಒಬ್ಬ ನೀರಾವರಿ ತಜ್ಞ ಈ ದೇಶದಲ್ಲಿ ಒಂದು ದೊಡ್ಡ ಸಾಧನೆಯನ್ನು ಮಾಡಿದ್ದಾರೆ. ರಾಜಸ್ತಾನ ನೀರಿಗಾಗಿ ಪರದಾಡುವಂತಹ ಸಂದರ್ಭ ಸೃಷ್ಟಿಯಾಗಿತ್ತು. ಬಹುಶಃ ಅವರು ಒಂದು ಸಂಸ್ಥೆಯನ್ನು ಕಟ್ಟಿಕೊಂಡರು. ಅವರು ಮಾಡಿದಂತಹ ಸಾಧನೆ ಇಡೀ ದೇಶಕ್ಕೆ ಅಷ್ಟೇ ಅಲ್ಲ, ಇಡೀ ಜಗತ್ತಿಗೆ ಮಾದರಿ ಆಗುವಂತಹ ಒಂದು ಸಾಧನೆಯಾಗಿದೆ. ಎಷ್ಟರ ಮಟ್ಟಿಗೆ ಮಾದರಿ ಎಂದರೆ, ಇವತ್ತಿನ ದಿವಸ ರಾಜಸ್ತಾನದಲ್ಲಿ ಬತ್ತಿ ಹೋಗಿದ್ದಂತಹ ನದಿ ಹರಿಯುತ್ತಿದೆ. ಕುಸಿದು ಹೋಗಿದ್ದಂತಹ ಅಂತರ್ಜಲ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗಿ ನೀರು ಸಿಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ಅವರು ಮಾಡಿರುವಂಥದ್ದು 12,500 ಸಣ್ಣಪುಟ್ಟ ಅಣೆಕಟ್ಟುಗಳನ್ನು ಕಟ್ಟಿದ್ದಾರೆ. ನಾವು ಚೆಕ್ ಡ್ಯಾಂ ಎಂದು ಕರೆಯುತ್ತೇವೆ. ಸಣ-ಪುಟ್ಟ ಕೆರೆಗಳು, ಸಣ್ಣ-ಪುಟ್ಟ ಕಟ್ಟೆಗಳು, ಸಣ್ಣ-ಪುಟ್ಟ ಕೊಳಗಳು. ಇವುಗಳನ್ನು ನಿರ್ಮಾಣ ಮಾಡಿ ರಾಜಸ್ತಾನದಲ್ಲಿ ನೀರನ್ನು ತರಿಸಿರುವಂತಹ ಪ್ರಯತ್ನ ಮಾಡಿದ್ದಾರೆ. ನೀರಾವರಿ ತಜ್ಞರಾದಂತಹ ರಾಜೇಂದ್ರ ಸಿಂಗ್ ಅವರು ಮಂಡ್ಯಕ್ಕೆ ಬಂದು ಹೇಳುತ್ತಾರೆ. ಇವತ್ತು ಕಾವೇರಿ ವಿಚಾರದಲ್ಲಿ tribunal ಕೊಟ್ಟಿರುವಂತಹ ತೀರ್ಮಾನವೇನಿದೆ ಅದು ಅನ್ಯಾಯದ ತೀರ್ಮಾನ. ಅದು ಕಾನೂನು ಮೀರಿದ ತೀರ್ಮಾನ. ಆ ತೀರ್ಮಾನವನ್ನು ಕೈ ಬಿಡಬೇಕು. ಇವತ್ತು ಕೋರ್ಟು ಮತ್ತು tribunal ನಿಂದ ಹೊರಗಡೆ ಕುಳಿತು, ಕೇಂದ್ರ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಎರಡೂ ರಾಜ್ಯಗಳು ಸೇರಿ ನನ್ನಂಥವರನ್ನು ಕರೆದು ತೀರ್ಮಾನ ಮಾಡುವುದಕ್ಕೆ ಸಾಧ್ಯವಿದೆ. ಪರಂತು ಯಾವುದೇ ನ್ಯಾಯಾಲಯದಿಂದ ಈ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ ಎಂಬ ಮಾತನ್ನು ರಾಜೇಂದ್ರ ಸಿಂಗ್ ಎನ್ನುವಂತಹ ಒಬ್ಬ ಸುಪ್ರಸಿದ್ಧ ನೀರಾವರಿ ತಜ್ಞ, ಪ್ರಧಾನ ಮಂತ್ರಿಯವರಿಗೆ ಬಹಳ ಹತ್ತಿರವಿರುವಂತಹ ಮನುಷ್ಯ ಇವತ್ತು ರಾಜಸ್ತಾನದಿಂದ ಮಂಡ್ಯಕ್ಕೆ ಬಂದು, ಕಾವೇರಿ ಕಣಿವೆಯ ಬಗ್ಗೆ ಅಧ್ಯಯನ ಮಾಡಿ ಕೊಡುವ ಹೇಳಿಕೆ ಇದಾಗಿದೆ. ಹಾಗಾಗಿ ಇವತ್ತು ಎಲ್ಲಾ ದೃಷ್ಟಿಯಿಂದ ನಮ್ಮ ಆತಂಕ ಎಲ್ಲಿ ಅಡಕವಾಗಿದೆ ಎಂದರೆ, ನಾವು ನೀವು ಹೇಳಿರುವಂತಹ 192 ಟಿಎಂಸಿ ನೀರನ್ನು ಬಿಡುವುದಕ್ಕೆ ಅಡ್ಡಿಯು ಇಲ್ಲ, ವಿರೋಧವು ಇಲ್ಲ. ಆದರೆ, ನೀವು ಹಾಕಿರುವಂತಹ ಗೆರೆ ಏನು? ಏನೆಂದರೆ, ಪ್ರತಿ ತಿಂಗಳು ಇಷ್ಟು ನೀರನ್ನು ಬಿಡಬೇಕು ಎಂಬುದು. ಇದರ ಬಗ್ಗೆ ಒಂದು ಅಂಕಿ-ಅಂಶಗಳನ್ನು ನೋಡಬಹುದು. ಜೂನ್ ತಿಂಗಳಿನಲ್ಲಿ ಮಳೆಯೇ ಪ್ರಾರಂಭ ಆಗುವುದಿಲ್ಲ ಆದರೂ 10 ಟಿ.ಎಂ.ಸಿ. ನೀರು ಕೊಡಬೇಕು. ಈ ಸಲ ಜುಲೈ ತಿಂಗಳಿನಲ್ಲಿ ನಮಗೆ ಮಳೆ ಬರಲೇ ಇಲ್ಲ. ಆದರೂ 34 ಟಿ.ಎಂಸಿ. ನೀರು ಕೊಡಬೇಕು. ಆಗಸ್ಟ್ ತಿಂಗಳಿನಲ್ಲಿ ಸ್ವಲ್ಪ ಮಳೆ ಬಿತ್ತು ಆಗಲೂ ಅವರಿಗೆ 50 ಟಿಎಂಸಿ ನೀರು ಕೊಡಬೇಕು. ಸೆಪ್ಟಂಬರ್ ತಿಂಗಳಿನಲ್ಲಿ ಪುನಃ ನೀರಿಗೆ ಹಾಹಾಕಾರ

ಆದರೂ 40 ಟಿಎಂಸಿ ನೀರು ಅವರಿಗೆ ಕೊಡಬೇಕು. ಅಕ್ಟೋಬರ್ ತಿಂಗಳಿನಲ್ಲಿ 22 ಟಿಎಂಸಿ ನೀರು, ನವೆಂಬರ್ ತಿಂಗಳಿನಲ್ಲಿ 15 ಟಿಎಂಸಿ ನೀರು, ಡಿಸೆಂಬರ್ ತಿಂಗಳಿನಲ್ಲಿ 8 ಟಿಎಂಸಿ ನೀರು, ಜನವರಿ ತಿಂಗಳಿನಲ್ಲಿ 3 ಟಿಎಂಸಿ ನೀರು, ಫೆಬ್ರವರಿ ತಿಂಗಳಿನಲ್ಲಿ ಬಿಸಿಲು ಆರಂಭವಾಗಿರುತ್ತದೆ ಅಂದರೆ ಬೇಸಿಗೆ ಕಾಲದಲ್ಲಿಯೂ ಎರಡೂವರೆ ಟಿಎಂಸಿ ನೀರು ಕೊಡಬೇಕು. ಮಾರ್ಚ್ ತಿಂಗಳಿನಲ್ಲಿ ನಮಗೆ ಕುಡಿಯುವುದಕ್ಕೆ ನೀರಿಲ್ಲ, ಆದರೂ ಅವರಿಗೆ ಎರಡೂವರೆ ಟಿಎಂಸಿ ನೀರು ಕೊಡಬೇಕು. ಏಪ್ರಿಲ್ ತಿಂಗಳಿನಲ್ಲಿ ಉರಿಬಿಸಿಲು ಆಗಲೂ ಎರಡೂವರೆ ಟಿಎಂಸಿ ನೀರು ಹಾಗೂ ಮೇ ತಿಂಗಳಿನಲ್ಲಿ ಎರಡೂವರೆ ಟಿಎಂಸಿ ಕೊಡಬೇಕು. ಒಟ್ಟು 192 ಟಿಎಂಸಿ ನೀರನ್ನು ನಮ್ಮಿಂದ ಹರಿಸುತ್ತೇವೆ. ಮಹಾರಾಣಿಯವರು ತಮ್ಮ ಮೈಮೇಲಿನ ಒಡವೆಗಳನ್ನು ಅಡವಿಟ್ಟು ಕಟ್ಟಿದಂತಹ ಅಣೆಕಟ್ಟುಗಳಿಂದ ಈ ರಾಜ್ಯದ ಜನತೆಯ ತೆರಿಗೆ ಹಣದಿಂದ ಕಟ್ಟಿದಂತಹ ಅಣೆಕಟ್ಟುಗಳಿಂದ ತಮಿಳು ನಾಡಿಗೆ ನೀರನ್ನು ಹರಿಸಬೇಕು ಎನ್ನುವಂಥದ್ದು ಎಷ್ಟರ ಮಟ್ಟಿಗೆ ನ್ಯಾಯ ಎನ್ನುವಂಥದ್ದು ಇವತ್ತು ನಮ್ಮನ್ನು ಕಾಡುತ್ತಿರುವಂತಹ ಒಂದು ದೊಡ್ಡ ಪ್ರಶ್ನೆ. ಇವತ್ತು ಮಾನ್ಯ ರಾಮಚಂದ್ರಗೌಡರು ಬಹಳ ಚೆನ್ನಾಗಿ ಹೇಳಿದರು, ಅವರು ಹೇಳಿದಂತಹ ಮಾತನ್ನು ನಾನು ಒಪ್ಪಿದೆ. ತಮಿಳುನಾಡಿನವರು ಬೇಕಾದರೆ ಇನ್ನೂ ಒಂದು ಡ್ಯಾಂ ಕಟ್ಟಿಕೊಳ್ಳಲಿ. ನಮ್ಮದೇನು ಅಡ್ಡಿಯೂ ಇಲ್ಲ, ತಕರಾರು ಇಲ್ಲ. ನೀವು ಬೇಕಾದರೆ ಹೊಗೆನಿಕಲ್ ಫಾಲ್ಸ್ ಬಳಿ ಅಣೆಕಟ್ಟನ್ನು ಕಟ್ಟಿಕೊಳ್ಳುವುದಾದರೆ ಕಟ್ಟಿಕೊಳ್ಳಿ. ಅಥವಾ ಇನ್ನು ಎಲ್ಲಿ ಕಟ್ಟಬೇಕು ಎನ್ನಿಸುತ್ತದೆ ಅಲ್ಲಿ ಕಟ್ಟಿಕೊಳ್ಳಿ. ಕೇಂದ್ರ ಸರ್ಕಾರದಿಂದ ಬೇಕಾದರು ಹಣವನ್ನು ಪಡೆದುಕೊಳ್ಳಿ. ಏಕೆಂದರೆ, ಇವತ್ತು ಮದ್ರಾಸಿನ ಹೆಣ್ಣು ಮಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಏನೆಂದರೆ, ತಮಿಳರೆ, ನಿಮಗೆ ಸ್ವಾಭಿಮಾನ ಇಲ್ಲವೆ? ಪದೇ ಪದೇ ಕರ್ನಾಟಕದ ಮುಂದೆ ಹೋಗಿ ಭಿಕ್ಷೆ ಬೇಡುತ್ತೀರಿ? ಅವರು ಕಟ್ಟಿದ ಅಣೆಕಟ್ಟುಗಳಿಂದ ನೀರು ಬೇಕು ಎಂದು ಏಕೆ ಕಾಡಿ–ಬೇಡಿ ಪಡೆಯುತ್ತೀರಿ? ಕಳೆದ ವರ್ಷ ನೂರು ಪಟ್ಟು ಹೆಚ್ಚು ಮಳೆ ಸುರಿಯಲಿಲ್ಲವೆ? ನೂರಾರು ಟಿಎಂಸಿ ನೀರು ಸಮುದ್ರ ಸೇರಲಿಲ್ಲವೆ? ಆ ನೀರನ್ನು ಹಿಡಿದಿಟ್ಟುಕೊಳ್ಳುವಂತಹ ಒಂದು ಸಣ್ಣ ಪ್ರಯತ್ನವೇನಾದರು ನೀವು ಮಾಡಿದಿರಾ? ಕರ್ನಾಟಕದವರ ಮುಂದೆ ಭಿಕ್ಷೆ ಬೇಡುವ ಬದಲು ನಿಮ್ಮ ಮನೆಯ ಮುಂದೆ ಒಂದು ಹೊಂಡ ತೆಗೆಯಿರಿ, ಒಂದು ಗುಂಡಿ ತೆಗೆಯಿರಿ, ಒಂದು ಭಾವಿ ತೆಗೆಯಿರಿ ಎಂದು ತಮಿಳುನಾಡಿನ ಒಬ್ಬ ಹೆಣ್ಣು ಮಗಳು ಹೇಳಿದಂತಹ ಮಾತುಗಳಿವು. ಇವತ್ತು ನಿರೀಕ್ಷೆಗೂ ಮೀರಿ ತಮಿಳುನಾಡಿನಲ್ಲಿ ಮಳೆ ಆಗಿದೆ. ಅವರಿಗೆ ಯಾವತ್ತೂ ಮಳೆ ಕೈ ಕೊಟ್ಟಿಲ್ಲ. ಮಳೆ ಕೈ ಕೊಟ್ಟಿರುವಂತಹ ಸಂದರ್ಭಗಳೇ ಅಲ್ಲಿ ಇಲ್ಲ. ವರ್ಷಗಳೇ ಇಲ್ಲ. ಆದರೆ ನಮಗೆ ತೀವ್ರವಾದಂತಹ ಅಭಾವ ಹತ್ತಾರು ವರ್ಷಗಳಲ್ಲಿ ಆಗಿದೆ. ಅವರಿಗೆ ಈಶಾನ್ಯ ಮಾರುತ ಇದೆಯಲ್ಲ ಅದು ಯಾವತ್ತೂ ಕೈ ಕೊಟ್ಟಿಲ್ಲ. ಕೈ ಕೊಡುವುದೇ ಇಲ್ಲ. ಅಲ್ಲಿ ಮಳೆ ಬಂದಾಗ ಪ್ರತಿ ಸಲವು ನೂರಾರು ಟಿಎಂಸಿ ನೀರು ಸಮುದ್ರ ಸೇರುತ್ತದೆ ಹೊರತು ಅವರು ಯಾವತ್ತೂ ನೀರಿನ ಹಾಹಾಕಾರವನ್ನು ಎದುರಿಸಿಯೇ ಇಲ್ಲ. ಆದರೆ ನಮಗೆ ನೀರಿನ ಹಾಹಾಕಾರವಿದೆ. ಏಕೆ ಹಾಹಾಕಾರವಿದೆ? ನಮ್ಮ ಪಶ್ಚಿಮಘಟ್ಟ ಇವತ್ತು ಹಾಳಾಗಿ ಹೋಗುತ್ತಿದೆ. ದಿನಬೆಳಗಾದರೆ ಅರಣ್ಯದ ಮೇಲೆ ಹಲ್ಲೆ ಮಾಡುವವರ ಸಂಖ್ಯೆ ಹೆಚ್ಚಾಗಿ ಹೋಗಿದೆ. ಇವತ್ತು ಕೇರಳದ ವಿದ್ಯುಚ್ಛಕ್ತಿಗಾಗಿ ನಾವು ಒಂದು ಲಕ್ಷ ಮರಗಳನ್ನು ಕಡಿಯುವುದಕ್ಕೆ ತುದಿಗಾಲಿನಲ್ಲಿ ನಿಂತಿದ್ದೇವೆ. ರೈಲಿನಲ್ಲಿಯೇ ಓಡಾಡಬೇಕೆಂಬ ಹುಚ್ಚಿಗಾಗಿ ಇವತ್ತು ಸಾವಿರಾರು ಮರಗಳನ್ನು ಕಡಿಯುವುದಕ್ಕೆ ತಯಾರಿದ್ದೇವೆ. ಮಳೆ ಬೀಳದೆ ಹೋದರೆ ನೀರಿನ ಸಂಗ್ರಹ ಎಲ್ಲಿ ಆಗುತ್ತದೆ? ಪಶ್ಚಿಮಘಟ್ಟದ ದಟ್ಟಣೆಯನ್ನು ಇನ್ನೂ ಹೆಚ್ಚು ಮಾಡದೆ ಹೋದರೆ ನೀರು ಎಲ್ಲಿ ಬರುತ್ತದೆ? ಇಡೀ ಜಗತ್ತಿಗೆ ನೀರಿನ ಮೂಲ ಮಳೆ ಒಂದೆ. ಮಳೆಯ ನೀರನ್ನು ಎಷ್ಟರ ಮಟ್ಟಿಗೆ ಸಂಗ್ರಹ ಮಾಡಿಕೊಳ್ಳುತ್ತೇವೆಯೋ, ಮಳೆ ಬೀಳುವ ವಾತಾವರಣವನ್ನು ಹೇಗೆ ನಿರ್ಮಾಣ ಮಾಡುತ್ತೇವೆಯೋ ಅದರ ಮೇಲೆ ನಮ್ಮೆಲ್ಲರ ಭವಿಷ್ಯ ಅಡಕವಾಗಿದೆ. ಅದಕ್ಕಾಗಿ ನಮ್ಮ ಪ್ರಯತ್ನವೇನು? ಪಶ್ಚಿಮಘಟ್ಟಗಳ ರಕ್ಷಣೆಗೆ ನಮ್ಮ ಪ್ರಯತ್ನ ಏನು? ಮಳೆಯ ನೀರನ್ನು ಸಂಗ್ರಹ ಮಾಡುವುದಕ್ಕೆ ನಮ್ಮ ಪ್ರಯತ್ನ ಏನು? ಇವತ್ತು ನಮಗೂ ಹಾಗೂ ತಮಿಳು ನಾಡಿಗೆ ಇರುವಂತಹ

ವ್ಯತ್ಯಾಸ ಸುಮಾರು 20 ರಿಂದ 25 ಟಿಎಂಸಿ ನೀರಿಗಾಗಿ ಹೋರಾಟ ಅಷ್ಟೆ. 30 ಟಿಎಂಸಿ ನೀರು ಸಂಗ್ರಹವಾಗುವಷ್ಟು ಡ್ಯಾಂನ್ನು ನಾವು ಮೇಕೆದಾಟುವಿನಲ್ಲಿ ಕಟ್ಟುತ್ತೇವೆ ಎನ್ನುವುದಾದರೆ ಏಕೆ ಕ್ಯಾತೆ ತೆಗೆಯಬೇಕು? ನೀವು ಹೊಗೆನಿಕಲ್ ಫಾಲ್ಸ್‌ನಿಂದ ಕುಡಿಯುವುದಕ್ಕಾಗಿ ನೀರನ್ನು ತೆಗೆದುಕೊಂಡಿರಲ್ಲ ಅದನ್ನು ನಮ್ಮನ್ನು ಕೇಳಿ ತೆಗೆದುಕೊಂಡಿರಾ? ನಮ್ಮನ್ನು ಕೇಳಿ ನೀರನ್ನು ಡ್ರಾ ಮಾಡುತ್ತಿದ್ದೀರಾ? ಬೆಂಗಳೂರು ಕಾವೇರಿಯ ಕಣಿವೆ ಪ್ರದೇಶದಲ್ಲಿ ಇಲ್ಲ ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಹಾಗಾದರೆ ಮದ್ರಾಸ್ ಕೃಷ್ಣ ಕಣಿವೆಯ ಪ್ರದೇಶದಲ್ಲಿದೆಯೇ? ನಾವು 5 ಟಿಎಂಸಿ ನೀರನ್ನು ಕೊಡುತ್ತಿಲ್ಲವೆ? ದೆಹಲಿ ಯಮುನ ನದಿಯ ಕಣಿವೆಯಲ್ಲಿದೆ. ಬಾಕ್ರಾ ನದಿಯಿಂದ ದೆಹಲಿಗೆ ನಾವು ನೀರು ಕೊಡುತ್ತಿಲ್ಲವೆ? ಕುಡಿಯುವ ನೀರು ಪ್ರತಿಯೊಬ್ಬ ನಾಗರೀಕನ ಮೂಲಭೂತ ಹಕ್ಕು. ಅದನ್ನು ಯಾರೂ ಪ್ರಶ್ನೆ ಮಾಡುವುದಕ್ಕೂ ಬರುವುದಿಲ್ಲ, ಕಸಿದುಕೊಳ್ಳುವುದಕ್ಕೂ ಸಹ ಬರುವುದಿಲ್ಲ ಎಂಬುದು ಈ ನೆಲದ, ಈ ಜಗತ್ತಿನ ನಿಯಮ. ನೂರಾರು ಸುಪ್ರೀಂ ಕೋರ್ಟಿನ ತೀರ್ಮಾನಗಳು ಆ ರೀತಿ ಬಂದಿವೆ. ಹಾಗಾದರೆ ಇವತ್ತು ಕುಡಿಯುವ ನೀರಿನ ಬಗ್ಗೆ ಅಧಿಕಾರಿಗಳು ಹೇಳುತ್ತಾರೆ ಯಗಚಿ ನದಿಯಿಂದ ಚಿಕ್ಕಮಗಳೂರು, ಶಿವಮೊಗ್ಗಕ್ಕೆ ಕುಡಿಯುವ ನೀರನ್ನು ಕೊಡುವುದಕ್ಕೆ ಆರಂಭವಾದರೆ ಹೇಮಾವತಿ ನದಿಯಿಂದ ಹಾಸನ, ಮತ್ತು ಅಲ್ಲಿಯ ತಾಲ್ಲೂಕುಗಳಿಗೆ ಕೊಡುವ ನೀರು ಮೈಸೂರು ಜಿಲ್ಲೆ, ಚಾಮರಾಜನಗರ ಜಿಲ್ಲೆ, ಮಂಡ್ಯ ಜಿಲ್ಲೆ ಹಾಗೂ ಮಂಡ್ಯ ಜಿಲ್ಲೆಯ ಎಲ್ಲಾ ಹಳ್ಳಿಗಳು, ರಾಮನಗರ, ಮಹಾನಗರ ಬೆಂಗಳೂರಿನಲ್ಲಿರುವಂತಹ 1 ಕೋಟಿ 10 ಲಕ್ಷ ಜನರಿಗೆ ನೀರು, ತುಮಕೂರು, ಕೋಲಾರ ಸೇರಿದಂತೆ ಸುಮಾರು 12 ಜಿಲ್ಲೆಗಳ ಜನರಿಗೆ ಕೊಡುವುದಕ್ಕೆ ಸುಮಾರು 71 ಟಿಎಂಸಿ ನೀರು ಬೇಕಾಗಿದೆ. ಇವತ್ತು ಟ್ರಿಬ್ಯುನಲ್ ಕೊಟ್ಟಿರುವಂಥದ್ದು ಕೇವಲ 17 ಟಿಎಂಸಿ ನೀರು ಮಾತ್ರ. ಇದು ಬೆಂಗಳೂರಿಗೂ ಸಾಲದೆ ಇರುವಂತಹ ನೀರು. ಆದರೆ ಕುಡಿಯುವ ನೀರಿಗೆ ಕೊಡಬೇಕು ಎನ್ನುವುದು ಈ ಜಗತ್ತಿನ ನಿಯಮ. ಈ ಪ್ರಕೃತಿಯ ನಿಮಯ. ಆದರೆ ಎಲ್ಲಿ? ಈ ಮೊದಲು ನಮ್ಮ ಜಿಲ್ಲೆಯಲ್ಲಿ ಒಂದು ದಿವಸಕ್ಕೆ 7 ಲಕ್ಷ 85 ಸಾವಿರ ಲೀಟರ್ ಹಾಲು ಉತ್ಪತ್ತಿ ಆಗುತ್ತಿತ್ತು. ಆದರೆ ಇವತ್ತಿನ ದಿವಸ 50 ರಿಂದ 60 ಸಾವಿರ ಲೀಟರ್ ಹಾಲಿನ ಸಂಗ್ರಹ ಕಡಿಮೆ ಆಗಿದೆ. ಮಳೆಗಾಲಕ್ಕೆ 8 ಲಕ್ಷ ಮೀರಬೇಕಾಗಿತ್ತು. ಹಾಸನದಲ್ಲಿಯೂ ಸಹ ಅದೇ ಪರಿಸ್ಥಿತಿ ಇದೆ. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿಯೂ ಸಹ ಅದೇ ರೀತಿಯಾದಂತ ಪರಿಸ್ಥಿತಿ ಇದೆ. ಇವತ್ತು ದನಕರುಗಳಿಗೆ ಮೇವಿಲ್ಲ. ಹಸಿರು ಮೇವನ್ನು ಕೊಡದೆ ಹೋದರೆ ಸಮೃದ್ಧವಾಗಿ ಹಾಲು ಬರುವುದಿಲ್ಲ. ಕ್ಷೀರೋತ್ಪತ್ತಿ ಆಗುವುದಿಲ್ಲ. ಒಂದು ಆಳವಾದ ಸತ್ಯ ಹೇಳುತ್ತೇನೆ, ಮಂಡ್ಯ ಜಿಲ್ಲೆಯಲ್ಲಿ ಏಕೆ ನೋವು ಮಡುವುಗಟ್ಟಿದೆ ಎಂದರೆ, ಮಾನ್ಯ ರಾಮಚಂದ್ರಗೌಡರೆ, ನಮ್ಮಲ್ಲಿ ಎರಡು ಬೆಳೆಗಳನ್ನು ಬೆಳೆಯುತ್ತೇವೆ. ಐಯ್ಯಿನ್ ಬೆಳೆ ಮತ್ತು ಕಾರ್ ಬೆಳೆ. ಮುಂಗಾರು ಮಳೆಗೆ ಬೆಳೆಯುವ ಮೂರೂವರೆ ತಿಂಗಳ ಬೆಳೆ ಐಯ್ಯಿನ್ ಬೆಳೆ ಭತ್ತದ ಬೆಳೆ. ಬೇಸಿಗೆ ಬೆಳೆ ಅಂದರೆ ಅಕ್ಟೋಬರ್ ತಿಂಗಳ ನಂತರ ಬೆಳೆಯುವ ಬೆಳೆ ಕಾರ್ ಬೆಳೆ. ಕಳೆದ ಸಲ ನಾವು ಕಾರ್ ಬೆಳೆಯನ್ನೇ ಬೆಳೆದಿಲ್ಲ. ಈ ಸಲ ಐಯ್ಯಿನ್ ಬೆಳೆಗೂ ನೀರಿನ ಹಾಹಾಕಾರವಾಗಿದೆ. ನಾಟಿ ಮಾಡುವವರು ಮಾಡಿದ್ದಾರೆ ಇನ್ನು ಕೆಲವರು ನಾಟಿಯನ್ನೇ ಮಾಡಿಲ್ಲ. ಅದಕ್ಕಾಗಿ ನಾನು ನಿಮಗೆ ಅಂಕಿ-ಅಂಶಗಳನ್ನು ಹೇಳುತ್ತಿದ್ದೇನೆ. ಇವತ್ತು ಒಂದಿಷ್ಟು ಭತ್ತ ಬೆಳೆದು ನಿಂತಿದೆ. ಈಗಾಗಲೇ ಕಬ್ಬನ್ನು ಕಾರ್ಖಾನೆಗಳು ಅರೆಯುವುದಕ್ಕೆ ಪ್ರಾರಂಭ ಮಾಡಿವೆ. ಅದನ್ನು ನುರಿಸುವುದಕ್ಕೆ ಇನ್ನೂ ಮೂರ್‍ನಾಲ್ಕು ತಿಂಗಳ ಕಾಲಾವಕಾಶ ಬೇಕು. ಬೆಳೆದು ನಿಂತಿರುವಂತಹ ಕಬ್ಬನ್ನು ಉಳಿಸಬೇಕಲ್ಲವೆ? ಆ ರೈತ ಬದುಕಬೇಕಲ್ಲವೆ? ಅವುಗಳನ್ನು ನುರಿಸಲಿಕ್ಕೆ ಮೂರುವರೆ, ನಾಲ್ಕು ತಿಂಗಳ ಕಾಲಾವಕಾಶ ಬೇಕು. ಬೆಳೆದು ನಿಂತ ಆ ಕಬ್ಬನ್ನು ಉಳಿಸಬೇಕಲ್ಲ, ಆ ರೈತ ಬದುಕಬೇಕಲ್ಲ, ಇಡೀ ರಾಜ್ಯದಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯ ಆತ್ಮಹತ್ಯೆ ಆಗಿದೆ ಅಂದರೆ ಅದು ಮಂಡ್ಯ ಜಿಲ್ಲೆಯಲ್ಲಿ. ಕಾವೇರಿ ಕಣಿವೆಯಲ್ಲಿ 150ಕ್ಕೂ ಹೆಚ್ಚು ಜನ ಇವತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನು ಎಷ್ಟು ಜನರನ್ನು ನಾವು ಬಲಿ ಕೊಡೋಣ. ಇವತ್ತು ಈ ಸರ್ಕಾರಕ್ಕೆ, ಇದೊಂದೇ ಸರ್ಕಾರ ಅಲ್ಲ, ಕಾವೇರಿ ಬಗ್ಗೆ ತಮಿಳುನಾಡಿನಷ್ಟು ಕಾಳಜಿ ನಮಗೆ ಏಕೆ ಇಲ್ಲ

ಎನ್ನುವಂತಹ ಪ್ರಶ್ನೆ ನನ್ನದು ಮಾತ್ರವಲ್ಲ, ಕಾವೇರಿ ಕಣಿವೆ ಜನರ ಪ್ರಶ್ನೆ. ಇವತ್ತು ತಮಿಳುನಾಡಿನಲ್ಲಿ ಕಾವೇರಿ ಸೆಲ್ ಇದೆ, ಪ್ರತಿನಿತ್ಯ, ಪ್ರತಿಕ್ಷಣ ಕಾವೇರಿಯ ಎಲ್ಲಾ ಅಂಕಿ–ಅಂಶಗಳು ಅವರ ಹತ್ತಿರ ಇರುತ್ತವೆ. ಕಾವೇರಿಯ ಬಗ್ಗೆ ಎಲ್ಲಾ ಎಚ್ಚರಿಕೆಗಳನ್ನು ತೆಗೆದುಕೊಳ್ಳುತ್ತಾರೆ. ಕಾವೇರಿಯ ವಾದವನ್ನು ಹೇಗೆ ಮಾಡಬೇಕು, ಹೋರಾಟವನ್ನು ಹೇಗೆ ಮಾಡಬೇಕು. 325 X 24 hours ಕೆಲಸ ಮಾಡುತ್ತಾರೆ. ನಮ್ಮಲ್ಲಿ ಇದಕ್ಕೆ ಒಂದು Legal Cell ಇದೆಯಾ? ಅಲ್ಲಿ Legal Cell ಇದೆ, ಅಲ್ಲಿ ಎಲ್ಲಾ ಕಡೆ Legal Cell ಅಧ್ಯಕ್ಷರೇ ಹೋಗುತ್ತಾರೆ, ಕಾವೇರಿ ಸೆಲ್ ಅಧ್ಯಕ್ಷರೆ ಹೋಗುತ್ತಾರೆ, ಇಲ್ಲಿ ಏನಿದೆ? ಯಾವ ತಯಾರಿ ಇದೆ, ವಿವಿಧ ರೀತಿಯ ತಯಾರಿ ಮಾಡಬೇಕಾದ ಈ ಕಾವೇರಿ ಜಲ ಸಮರಕ್ಕೆ ಅಗತ್ಯವಾಗಿ ಬೇಕಾದ ನಮ್ಮ ಸಿದ್ಧತೆ ಏನಿದೆ ಅದರ ಬಗ್ಗೆ ಕಾಳಜಿ ಏಕೆ ಇಲ್ಲ? ಈ ಕುರಿತು ಅಗತ್ಯವಾದ ಸಿದ್ಧತೆಯನ್ನು ನೀವು ಏಕೆ ಮಾಡಿಕೊಳ್ಳುತ್ತಿಲ್ಲ. ನಾವು ಏತಕ್ಕೆ ಒಬ್ಬೊಬ್ಬರನ್ನೇ ನಂಬಿ ಕೂರುತ್ತಿದ್ದೇವೆ. ಏತಕ್ಕೆ ಅವರು ಹೇಳಿದ ಹಾಗೆಲ್ಲಾ ಕೇಳುತ್ತಿದ್ದೇವೆ. ಇವತ್ತು 63 ಟಿ.ಎಂ.ಸಿ.ಯನ್ನು ಹರಿಯ ಬಿಟ್ಟಿದ್ದೇವೆ. 55 ಟಿ.ಎಂ.ಸಿ. ಅವರಿಗೆ ಸೇರಿದೆ, 7 ರಿಂದ 8 ಟಿ.ಎಂ.ಸಿ.ಯನ್ನು ಅಷ್ಟೇ ನಾವು ಬಳಸಿಕೊಂಡಿದ್ದೇವೆ, ಉಳಿದಂತೆ ಕಾವೇರಿ ಕಣಿವೆ ಜನ ಮಳೆ ನೀರನ್ನು ಅವಲಂಬಿಸಿ ನಾವು ಕೆಲಸ ಮಾಡಿದ್ದೇವೆ. ನೀವು ಹೇಳಿದ ಹಾಗೆ 25% ಅಲ್ಲ ಅದೂ ಕಡಿಮೆ, ಕುಡಿಯುವ ನೀರಿನ ಭಾಗ ಸೇರಿಸಿಕೊಂಡು ಹೇಳುತ್ತಿದ್ದೀರಿ ಅಷ್ಟೇ. ಆದರೆ ನ್ಯಾಯಯುತವಾಗಿ ಸಂಕಷ್ಟದ ಸೂತ್ರದ ಅಡಿಯಲ್ಲಿ ಸಿಗಬೇಕಾದ ಶೇಕಡ 15 ರಿಂದ 20ರಷ್ಟು ಭಾಗ ಅಷ್ಟೇ ನಮಗೆ ಸಿಕ್ಕಿದೆ. ತಮಿಳುನಾಡು ಹೋದ ವರ್ಷ 35 ಟಿ.ಎಂ.ಸಿ. ನೀರಿದ್ದಂತಹ ಸಂದರ್ಭದಲ್ಲಿ ಕ್ಯಾತೆ ತೆಗೆಯಲಿಲ್ಲ. ಆದರೆ ಇವತ್ತು ಕ್ಯಾತೆ ತೆಗೆಯಿತು. ಏಕೆಂದರೆ ನೀವು ಅವರ ವಿಚಾರದಲ್ಲಿ ಸುಪ್ರೀಂಕೋರ್ಟ್‌ಗೆ ಹೋದಿರಿ, ಆ ಒಂದು ರಾಜಕೀಯ ದ್ವೇಷ ಕೂಡ ಇದರಲ್ಲಿ ಅಡಕವಾಗಿದೆ. ಆವೊತ್ತು ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಕರುಣಾನಿಧಿಯವರನ್ನು ಮಾತನಾಡಿಸಿ ಕೇಳುತ್ತಾರೆ. ಏಕೆ ನಾವು ಮೇಕೆದಾಟಿನಲ್ಲಿ ಡ್ಯಾಮ್ ಕಟ್ಟಬಾರದು ಎಂದು ಕೇಳಿದ್ದಕ್ಕೆ, ಮಾನ್ಯ ದೇವೇಗೌಡರವರೆ ಅಲ್ಲಿ ಡ್ಯಾಂ ಅನ್ನು ಕಟ್ಟುವುದಕ್ಕೆ ನಮ್ಮದೇನು ಅಡ್ಡಿಯಿಲ್ಲಪ್ಪಾ, ಆದರೆ ಕುಮಾರಿ. ಜಯಲಲಿತಾ ಅವರು ಬಿಡಬೇಕಲ್ಲ ಎನ್ನುತ್ತಾರೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೆ, ನಮ್ಮಲ್ಲಿ ಅಂತರ್‌ಜಲವೆ ಬರುವುದಿಲ್ಲ, ಅಂತರ್‌ಜಲ ಇವತ್ತು ಇಡೀ ರಾಜ್ಯದಲ್ಲಿ ಒಂದು ಸಾವಿರ ಅಡಿಗಿಂತ ಮೀರಿ ಕೆಳಗೆ ಹೋಗಿದೆ, ನಾನು ನಮ್ಮ ತೋಟದಲ್ಲೆ ಆರು ಬಾವಿ ತೆಗೆಸಿದ್ದೇನೆ. ಆ ಮೂರು ಬೋರ್‌ವೆಲ್‌ಗಳ ಪೈಕಿ ಮೂರು ಬೋರ್‌ವೆಲ್‌ಗಳು ಮಾತ್ರ ಕೆಲಸ ಮಾಡುತ್ತಿವೆ. ಅವುಗಳಲ್ಲಿ ಕೂಡ ನೀರು 1100 ರಿಂದ 1200 ಅಡಿ ಆಳಕ್ಕೆ ಹೋಗಿದೆ. ಹೀಗಾಗಿ ಅಣೆಕಟ್ಟಿನಲ್ಲಿ ನೀರನ್ನು ನಾವು ಖಾಲಿ ಮಾಡುತ್ತಲೇ ಇದ್ದರೆ, ಅಂತರ್‌ಜಲ ಎಲ್ಲಿ ವೃದ್ಧಿಯಾಗುತ್ತದೆ. ಇವತ್ತು ಹೆಸರುಘಟ್ಟ ಕೆರೆಯಲ್ಲಿ ನೀರಿಲ್ಲ, ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ನೀರಿಲ್ಲ, ಯಾವ ಟ್ಯಾಂಕ್‌ನಲ್ಲೂ, ಯಾವ ಕೆರೆಗಳಲ್ಲೂ ನೀರಿಲ್ಲ. ಇದು ನಮಗೆ ಬಹಳ ಪ್ರಮುಖವಾದದ್ದು, ಅವರು ಈ ಬಗ್ಗೆ ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡುತ್ತಿದ್ದಾರೆ.

**ವೈಸ್ ಛೇರ್ಮನ್:–** ಮಾನ್ಯ ಸದಸ್ಯರೇ, ತಾವು ಬಹಳ ಸವಿವರವಾಗಿ ಬೆಳಕು ಚೆಲ್ಲುತ್ತಾ ಇದ್ದೀರಿ.

**ಶ್ರೀ ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೆ, ಸವಿವರವಾಗಿ ಅಲ್ಲ, ಈ ದೇಶಕ್ಕೆ ನಮ್ಮ ಮಂಡ್ಯದ ಜನರು ಏಕೆ ಚಳುವಳಿಯನ್ನು ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ನೀಡಬೇಕಾಗುತ್ತದೆ. ಇದು ನಮ್ಮ ಕಥೆ ಅದನ್ನು ಇಲ್ಲಿ ಹೇಳುತ್ತೇನೆ. ನಾನು ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಭಾಗದಿಂದ ಬಂದವನು, ನಾವು ಏಕೆ ಚಳುವಳಿಯನ್ನು ಮಾಡುತ್ತಿದ್ದೇವೆಂದು ಈ ದೇಶಕ್ಕೆ ಮಾಹಿತಿಯನ್ನು ಕೊಡಬೇಕಲ್ಲ, ಇಲ್ಲವಾದಲ್ಲಿ ಎಲ್ಲರೂ ಏಕೆ ಮಂಡ್ಯದವರು ಚಳುವಳಿಯನ್ನು ಮಾಡುತ್ತಾರೆಂದು ಕೇಳಬಹುದು. ಬೆಳಿಗ್ಗೆ ಎದ್ದರೆ ನಿಮಗೇನು ಕೆಲಸವಿಲ್ಲವೆ ಎಂದು ನೀವು

ಕೇಳುತ್ತಿರಲ್ಲ, ನಾವು ನಿಜವಾದ ಫಲಾನುಭವಿಗಳು, ಅದರಲ್ಲೂ ಕನ್ನಂಬಾಡಿ ಕಟ್ಟೆಯ ಶಿಂಷಾ ಚಾನಲ್, ವಿಶ್ವೇಶ್ವರಯ್ಯ ಚಾನಲ್ ಇದೆ, ಆ ಕಟ್ಟಕಡೆಯ ನಾಲಾ ಬಯಲಿನವನು ನಾನು, ನೀರನ್ನು ಕೊಟ್ಟು, ಮಳೆ ಬಿದ್ದರೆ ಮಾತ್ರ ನಾವು ನಾಟಿ ಮಾಡುವುದು. ಒಂದೊಂದು ಸಲ ಎರಡು ವರ್ಷಕ್ಕೆ, ಮೂರು ವರ್ಷಕ್ಕೆ ಒಂದು ಬೆಳೆ ಸಿಗುತ್ತೇ ಅಷ್ಟೆ ನಮಗೆ. ಒಂದು ಸಲ ನಮ್ಮ ಊರಿನ ಹುಡುಗ ಒಬ್ಬ ಅಪ್ಪನ ಹತ್ತಿರ ಜಗಳ ಮಾಡಿ ಯಜಮಾನಿಕೆ ತೆಗೆದುಕೊಂಡ, ಅವನ ಅಪ್ಪನ ಮೇಲೆ ಚಾಲೇಂಜಾಗಿ ಚೆನ್ನಾಗಿ ಬೆಳೆದು ಬಿಟ್ಟ, ಮೆದೆ ಹಾಕಿದ, ಅಪ್ಪನನ್ನು ಕರೆದುಕೊಂಡು ಹೋಗಿ ನೋಡಪ್ಪ ಎಷ್ಟು ಉದ್ದ ಮೆದೆ ಹಾಕಿದ್ದೇನೆಂದ, ಅದಕ್ಕೆ ಅವನ ಅಪ್ಪ ಅವನನ್ನು ಮನೆಗೆ ಕರೆದುಕೊಂಡು ಬಂದು ಲೇ ಮಗನೆ, ನೀನು ಬೆಳೆದಿರುವ ಭತ್ತ ಬೆಂಗಳೂರಿನ ಒಂದು ಮೂಲೆಯಲ್ಲಿರುವ ಇಷ್ಟು ಜನಕ್ಕೆ ಉಣ್ಣಲಿಕ್ಕೆ ಸಾಕಾಗುವುದಿಲ್ಲ ಎಂದ. ಅಂದರೆ ನಾವು ಬೆಳೆಯುವ ಭತ್ತ ನಮಗೆ ಅಲ್ಲ ಸಭಾಪತಿಗಳೆ, ಈ ನಾಡಿನ ಜನತೆಗೆ, ಈ ನಾಡಿನ ಜನರಿಗೆ ಅನ್ನ ಹಾಕಲಿಕ್ಕೆ, ಇದನ್ನು ಮೂಲಭೂತವಾಗಿ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಬೆಳೆದ ಬೆಳೆಯನ್ನು ನಾವು ಉಣ್ಣುವವರಲ್ಲ, ನಾವು ಉಣ್ಣುವಂತಹವರಿಗೆ ಕೊಡ ಮಾಡುವ ಜನ, ನೀವು ಕೆರೆಗಳೆಲ್ಲವೂ ಕೇಳಿದ್ರಿ ಬತ್ತಿ ಹೋಗಿದೆ ಎಂದು ಹೇಳಿದಿರಿ. ಇವತ್ತು ಕೆ.ಆರ್.ಎಸ್.ನ back water ಇದೆಯಲ್ಲ, ಯಡಿಯೂರಪ್ಪನವರು ಹುಟ್ಟಿದ ಭೂಕನಕೆರೆ ಹೋಬಳಿಯ ರಾಜೇನಹಳ್ಳಿ ಎನ್ನುವ ಒಂದು ಗ್ರಾಮ ಪಂಚಾಯಿತಿಯಲ್ಲಿ 700 ಬೋರ್‌ವೆಲ್‌ಗಳು ಬತ್ತಿ ಹೋಗಿವೆ. ಕುಮಾರಸ್ವಾಮಿ ಎನ್ನುವಂತಹ ನನ್ನ ಗೆಳೆಯ ನಾಲ್ಕೂವರೆ ಎಕರೆಯಲ್ಲಿ ವ್ಯವಸಾಯ ಮಾಡುತ್ತಾನೆ, ಅವನ ನಾಲ್ಕು ಬೋರ್‌ವೆಲ್‌ಗಳು ಬತ್ತಿ ಹೋಗಿವೆ, ಮತ್ತೆ ಮೂರು ಬೋರ್‌ವೆಲ್ ಹಾಕಿಸುತ್ತಾನೆ ಆದರೆ ನೀರು ಬರಲಿಲ್ಲ. ಕೆ.ಆರ್.ಎಸ್.ನ ಡ್ಯಾಂನ back water area ಹಳ್ಳಿಗಳಲ್ಲೂ ನೀರಿಲ್ಲ, ಆದರೆ ತಮಿಳುನಾಡಿನಲ್ಲಿ ಏನಾಗಿದೆ? ಅಲ್ಲಿ ಅಂತರ್‌ಜಲ ಉಕ್ಕಿ ಹರಿಯುತ್ತಿದೆ, ಐದಾರು ಅಡಿ ಆಳ ತೆಗೆದರೆ ನೀರು ಬರುತ್ತದೆ. ನೂರಾರು ಟಿ.ಎಂ.ಸಿ. ಅಂತರ್‌ಜಲ ತಮಿಳುನಾಡಿನಲ್ಲಿದೆ, ಆದರೆ ಬಳಕೆಗೆ ಮುಂದಾಗುತ್ತಿಲ್ಲ. ಯಥೇಚ್ಚವಾದ ಮಳೆ ಇದೆ, ನೀರಿನ ಸಂಗ್ರಹ ಇದೆ, ಅಂತರ್‌ಜಲ ಇದೆ, ಅವರು ಯಾವುದರ ಬಳಕೆಗೂ ಮುಂದಾಗುತ್ತಿಲ್ಲ, ರಾಜಕೀಯ ದ್ವೇಷ, ತೀಟೆ ಮತ್ತು ಸಂದರ್ಭವನ್ನು ನೋಡಿ ತೀರ್ಪುಗಳನ್ನು ತೆಗೆದುಕೊಳ್ಳುವಂತಹುದು, ಮೇಲಾಟವನ್ನು ಆಡುವಂತಹುದು, ಕರ್ನಾಟಕದ ಜನರನ್ನು ಗೋಳು ಹುಯ್ದುಕೊಳ್ಳುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ನೀರು ನಮ್ಮಲ್ಲಿ ಇದ್ದರೆ ಯಾವತ್ತಾದರೂ ಅವರಿಗೆ ನಾವು ಬಿಡುತ್ತೇವೆ. ನಮಗೆ ಅಲ್ಲಿಂದ ಇಲ್ಲಿಗೆ ನೀರನ್ನು ಹೊತ್ತುಕೊಂಡು ಬರಲಿಕ್ಕೆ ಆಗುತ್ತದೆಯೇ. ನಮ್ಮ ಕಷ್ಟವನ್ನು ಕೇಳುವವರು ಯಾರು? ಹಾಗಾಗಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಸರ್ಕಾರದಲ್ಲಿರುವ ತಾವುಗಳು ಏನು ಮಾಡುತ್ತೀರೋ ಗೊತ್ತಿಲ್ಲ. ಮಾನ್ಯ ಸಭಾನಾಯಕರೇ ಟ್ರಿಬ್ಯುನಲ್ ಹೇಳಿದೆ ಅಥವಾ ಅದು ಮುಂದೆ ಏನು ಹೇಳುತ್ತದೆಯೋ ಬಿಡುತ್ತದೆಯೋ ಇಲ್ಲವೇತಾವು ಅಥವಾ ಇನ್ನು ಯಾರಾದರೂ ಮಾನ್ಯ ಪ್ರಧಾನ ಮಂತ್ರಿಗಳನ್ನು ಒಪ್ಪಿಸುತ್ತೀರೋ, ಮುಖ್ಯಮಂತ್ರಿಗಳನ್ನು ಒಪ್ಪಿಸುತ್ತೀರೋ ಒಪ್ಪಿಸಿ ಮೇಕೆದಾಟು ಪ್ರದೇಶದಲ್ಲಿ ಜಲಾಶಯವನ್ನು ಮಾಡಿಯೇ ತೀರಬೇಕು. ಅದುದರಿಂದ ಏನಾದರೂ ಆಗಲಿ ಮತ್ತು ತಮಿಳುನಾಡಿನವರಿಗೆ ಒಂದು ಸವಾಲನ್ನು ನೀಡುತ್ತೇನೆ. ನೀವು ಒಂದು ಅಣೆಕಟ್ಟನ್ನು ಕಟ್ಟಿಕೊಳ್ಳಲಿ. ಹದಿನೇಳು ಸಾವಿರ ಕೋಟಿ ರೂಪಾಯಿ ಹಣವನ್ನು ಮಾನ್ಯ ದೇವೇಗೌಡರು ಪ್ರಧಾನಿಗಳಾಗಿದ್ದಾಗ ಕೃಷ್ಣೆಗೆ ಕೊಡಲಿಲ್ಲವೆ, ಇದಕಿಂತ ದೊಡ್ಡ ಜ್ವಲಂತ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕಿಂತ ದೊಡ್ಡ ಜವಾಬ್ದಾರಿ ಪ್ರಧಾನಮಂತ್ರಿಗಳಿಗೆ ಇನ್ನೇನಿದೆ, ನಮಗೂ ಕೊಡಲಿ, ಅವರಿಗೂ ಕೊಡಲಿ, ಎರಡು ಅಣೆಕಟ್ಟುಗಳನ್ನು ಕಟ್ಟೋಣ ಹಾಗೂ ಶಾಶ್ವತವಾಗಿ ಈ ಸಮಸ್ಯೆಗೆ ಪರಿಹಾರ ಹಾಡೋಣ. ನಾವು ಜನರ ಕಣ್ಣೀರನ್ನು ಅಳಿಸೋಣ, ಪಶ್ಚಿಮ ಘಟ್ಟಗಳನ್ನು ಗಟ್ಟಿ ಮಾಡೋಣ. ಆದರೆ ವಿಶ್ವೇಶ್ವರಯ್ಯನವರು ಒಂದು ಮಾತು ಹೇಳಿದರು, ಕನ್ನಂಬಾಡಿ ಕಟ್ಟೆ ಕಟ್ಟಿದೆವು ಎಂದು ಹೇಳಿ ಕೆರೆಗಳನ್ನು ಮುಚ್ಚಬೇಡ್ರಪ್ಪ ಎಂದು ಹೇಳಿದ್ದರು ಆವತ್ತು ಮಂಡ್ಯ ಜಿಲ್ಲೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕೆರೆಗಳಿದ್ದವು ಈಗ ಉಳಿದಿರುವುದು 400 ರಿಂದ 500 ಕೆರೆಗಳು ಮಾತ್ರ, ಆ ಶಾಶ್ವತವಾದ ಜೀವ ಜಲ, ಕೆರೆಗಳನ್ನು

ಉಳಿಸಿಕೊಳ್ಳಬೇಕಾದಂತಹ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶನ ಮಾಡಬೇಕಾಗಿದೆ, ಅಣೆಕಟ್ಟುಗಳನ್ನು ಕಟ್ಟುವ ಮುಂಚೆ ಇಡೀ ಹಳೆ ಮೈಸೂರಿನಲ್ಲಿ ಕೆರೆಗಳ ದೊಡ್ಡ ಜಾಲವೇ ಇತ್ತು, ಇಡೀ ಕರ್ನಾಟಕದಲ್ಲಿ ಈ ಒಂದು ಜಾಲ ಇತ್ತು. ಆ ಕರೆಗಳನ್ನು ಒತ್ತುವರಿ ಮಾಡಿಕೊಳ್ಳುವ, ಅತಿಕ್ರಮ ಮಾಡುವ, ಹೂಳು ತೆಗೆಯದಿರುವಂತಹ ಕೆಲಸಗಳು ಆಗಿಹೋಗಿವೆ. ಇವತ್ತು ಆ ಎಲ್ಲಾ ಕೆರೆಗಳಿಗೆ ಜೀವ ಕೊಡುವಂತಹ ಕೆಲಸ ಮಾಡಬೇಕು. ಮರು ನಿರ್ಮಾಣವನ್ನು ಮಾಡಬೇಕು, ಮಳೆ ನೀರನ್ನು ಸಂಗ್ರಹಿಸಿಟ್ಟುಕೊಳ್ಳಬೇಕು, ಅಗತ್ಯ ಬಿದ್ದಾಗ, ಹೆಚ್ಚು ನೀರು ಇದ್ದಾಗ ಕನ್ನಂಬಾಡಿಯಿಂದ ಆ ಕೆರೆಗಳಿಗೆ ನೀರನ್ನು ತುಂಬಿಸುವಂತಹ ಕೆಲಸವನ್ನು ಮಾಡಬೇಕು. ಪಶ್ಚಿಮಘಟ್ಟದ ಅರಣ್ಯವನ್ನು ಕಾಪಾಡಿಕೊಳ್ಳುವಂತಹ ಒಂದು ಜಾಗೃತಿಯ ಆಂಧೋಲನವನ್ನು ನಾವು ಮಾಡಬೇಕಾಗಿದೆ. ಬಹುಶಃ ಈ ಎಲ್ಲಾ ದಿಸೆಯಲ್ಲಿ ಇವತ್ತು ಸರ್ಕಾರ ಹೆಜ್ಜೆಯನ್ನು ಇಡಬೇಕು. ದೊಡ್ಡ ಜವಾಬ್ದಾರಿ ನಮ್ಮ ಸರ್ಕಾರದ ಮೇಲೆ ಇದೆ, ಕೇಂದ್ರದ ಮೇಲೂ ಇದೆ, ನಾಗರಿಕರನ್ನು ರಕ್ಷಣೆ ಮಾಡತಕ್ಕಂತಹುದು, ಬದುಕನ್ನು ರಕ್ಷಣೆ ಮಾಡತಕ್ಕಂತಹುದು, ಮುಂದಿನ ತಲೆಮಾರಿಗೆ ನೀರನ್ನು ಉಳಿಯುವಂತೆ ನೋಡಿಕೊಳ್ಳುವಂತಹುದು, ಈ ನೂರಾರು ವರ್ಷಗಳ ಕಾವೇರಿ ಜಲದ ವಿಚಾರವಾಗಿ ಒಂದು ಇತಿಶ್ರೀಯನ್ನು ಹಾಡತಕ್ಕಂತಹ ವಿಚಾರದಲ್ಲಿ, ಮಾನ್ಯ ನರೇಂದ್ರಮೋದಿಯವರು ನಿಲ್ಲುತ್ತಾರೋ, ಮಾನ್ಯ ದೇವೇಗೌಡರು ನಿಲ್ಲುತ್ತಾರೋ, ಮಾನ್ಯ ಸಿದ್ದರಾಮಯ್ಯನವರು ನಿಲ್ಲುತ್ತಾರೋ, ಅಥವಾ ಮತ್ತೆ ಯಾರು ನಿಲ್ಲುತ್ತಾರೋ ಅದು ನಮ್ಮ ಕಾವೇರಿ ಕಣಿವೆ ಜನರಿಗೆ ಗೊತ್ತಿಲ್ಲ. ನಮಗೆ ನೀರು ಬೇಕಷ್ಟೆ, ನಮಗೆ ರಕ್ಷಣೆ ಬೇಕಷ್ಟೆ, ನಮ್ಮ ಬದುಕಿನ ರಕ್ಷಣೆ ಬೇಕಷ್ಟೆ. ಒಂದು ವೇಳೆ ನೀವೇನಾದರೂ ಸರ್ಕಾರಕ್ಕೆ ಕೊಟ್ಟಂತಹ ಅಧಿಕಾರದಲ್ಲಿ ನೀರನ್ನು ಅಲ್ಲಿಗೆ ಹರಿಸುವುದಾದರೆ, ನಮ್ಮ ಬೆಳೆಗೆ ನೀವು ಪರಿಹಾರವನ್ನು ನಿರ್ಣಯ ಮಾಡಿಯೇ ಅವರಿಗೆ ನೀರನ್ನು ಹರಿಸಬೇಕು ಎನ್ನುವಂತಹುದು ಕಾವೇರಿ ಕಣಿವೆ ಜನರ ಆಗ್ರಹ ಅದು ನನ್ನ ಆಗ್ರಹವಲ್ಲ. ನೀವು ಕುಡಿಯಲಿಕ್ಕೆ ನೀರು ತೆಗೆದುಕೊಂಡರೆ ನಮ್ಮ ವಿರೋಧವಿಲ್ಲ. ಆದರೆ ನಾವು ಬದುಕಲಿಕ್ಕೆ ಅನ್ನ ಬೇಕಲ್ಲ, ನಾವು ಬದುಕಲಿಕ್ಕೆ ಆಹಾರವನ್ನು ಕೊಂಡುಕೊಳ್ಳಬೇಕಲ್ಲ, ಬೆಳೆಯದೇ ಹೋದಾಗ ನಮ್ಮನ್ನು ರಕ್ಷಣೆ ಮಾಡಿಕೊಳ್ಳಲಿಕ್ಕೆ ನೀವು ಪರಿಹಾರ ಕೊಡಬೇಕಲ್ಲ, ಈ ದಿಸೆಯಲ್ಲಿ ಕೂಡ ನೀವು ನಿರ್ಣಯ ಮಾಡಬೇಕಾಗುತ್ತದೆ, ಒಂದು ವೇಳೆ ನಮ್ಮ ಬೆಳೆಗಳ ರಕ್ಷಣೆಯನ್ನು ಮೀರಿ ಇನ್ನೂ ಮತ್ತೂ ನೀರು ಹರಿಸುತ್ತೇವೆ ಎನ್ನುವುದಾದರೆ ನಮಗೆ ಪರಿಹಾರದ ರಕ್ಷಣೆಯನ್ನು ನೀವು ಘೋಷಣೆ ಮಾಡಬೇಕಾಗುತ್ತದೆ. ಈ ಎಲ್ಲಾ ದಿಸೆಯಲ್ಲಿ ಕಾವೇರಿಯನ್ನು ರಕ್ಷಣೆ ಮಾಡತಕ್ಕಂತಹ ಮಹತ್ತರ ಜವಾಬ್ದಾರಿಯನ್ನು ಒಂದು ಐತಿಹಾಸಿಕ ನಿರ್ಧಾರ ಕೊಡುವಂಥ ಈ ಸಂದರ್ಭದಲ್ಲಿ ನೀವೆಲ್ಲಾ ಅತ್ಯಂತ ಜವಾಬ್ದಾರಿಯಿಂದ ನಡೆಯುವುದು ಮುಖ್ಯವಾಗುತ್ತದೆ. ನಾಗರೀಕ ಸರ್ಕಾರದ ಆ ಜವಾಬ್ದಾರಿಯನ್ನು ನೀವು ನಿರ್ವಹಿಸಬೇಕು, ಕಾವೇರಿಯನ್ನು ಉಳಿಸಬೇಕು, ಕಾವೇರಿ ಕಣಿವೆಯ ಜನರ ರಕ್ಷಣೆ ಮಾಡಬೇಕು. ಇದು ಕಾವೇರಿಗೆ ಅಷ್ಟೆ ಅಲ್ಲ. ಮಹದಾಯಿ ಏನು ಇದೆ ಆ ಮಹದಾಯಿ ನದಿ ಕೂಡ ಕರ್ನಾಟಕದಲ್ಲಿ ಹುಟ್ಟುವಂತಹುದೆ, ಹರಿಯುವುದು ಕರ್ನಾಟಕದಲ್ಲೇ. ಇವತ್ತು ನಾಲ್ಕೈದು ಟಿ.ಎಂ.ಸಿ.ಯನ್ನು ಕೇರಳದವರು ಮೀನನ್ನು ಸಾಕಲಿಕ್ಕೆ ಬಳಸಿಕೊಳ್ಳುವುದು ಬಿಟ್ಟರೆ, ಇನ್ನೂ 200–205 ಟಿ.ಎಂ.ಸಿ. ನೀರು ಸಮುದ್ರಕ್ಕೆ ಹರಿದು ಹೋಗುತ್ತದೆ. ಕುಡಿಯುವ ನೀರಿಗೆ ಮಹದಾಯಿಯಿಂದ ಅವಕಾಶ ಮಾಡಿಕೊಡಿ ಎಂದರೆ, ಏನು ತೀಟೆ ಅದು, ಕೃಷ್ಣದಲ್ಲಿ ಏನು ತೀಟೆ, ಎಲ್ಲಾ ವಿಚಾರಗಳಲ್ಲೂ ಈ ರಾಜ್ಯಕ್ಕೆ ಆಗುತ್ತಿರತಕ್ಕಂತಹ ಅನ್ಯಾಯ ಅದೇ. ಅದು ಕಾವೇರಿ ಇರಲಿ, ಕೃಷ್ಣ ಇರಲಿ, ಮಹದಾಯಿಯೆ ಇರಲಿ. ನಿರಂತರವಾಗಿ ನಮ್ಮ ಮೇಲೆ ಪ್ರಹಾರ ಮತ್ತು ಅನ್ಯಾಯವಾಗುತ್ತಿದೆ. ಅದಕ್ಕಾಗಿ ಒಂದೊಂದು ಹಂತದಲ್ಲೂ ಈ ನಿರಂತರ ಅನ್ಯಾಯವನ್ನು ಎದುರಿಸುತ್ತಾ, ಒಕ್ಕೂಟ ವ್ಯವಸ್ಥೆಯಲ್ಲಿ ನೀವು ಏಕೆ ಇದ್ದೀರಿ ಎಂದು ಜನಸಾಮಾನ್ಯರು ಪ್ರಶ್ನೆಯನ್ನು ಮಾಡುತ್ತಿದ್ದಾರೆ ಹೊರತು, ಪ್ರಶ್ನೆ ಮಾಡುತ್ತಿರುವುದು ನಾವಲ್ಲ. ಒಕ್ಕೂಟ ವ್ಯವಸ್ಥೆಯಲ್ಲಿ ಯಾವತ್ತಿಗಾದರೂ ನೀವು ನ್ಯಾಯ ಕೊಡಿಸಬೇಕಲ್ಲ? ಒಕ್ಕೂಟ ವ್ಯವಸ್ಥೆಯಲ್ಲಿ ನಾವು ಬದುಕಬೇಕಲ್ಲ, ಬಾಳಬೇಕಲ್ಲ, ಅಲ್ಲಿ ನಿರಂತರವಾಗಿ ಇಬ್ಬರೇ ಮುಖ್ಯಮಂತ್ರಿಗಳು ಜಯಲಲಿತಾ ಮತ್ತು ಕರುಣಾನಿಧಿ. ಅವರು ದೂರದೃಷ್ಟಿ ಕಾವೇರಿ ಆಟ

ಆಡುತ್ತಾರೆ. ಇಲ್ಲಿ ಮೂರು ವರ್ಷಕ್ಕೆ, ಎರಡು ವರ್ಷಕ್ಕೆ ಒಬ್ಬ ಮುಖ್ಯಮಂತ್ರಿ ಬರುತ್ತಾರೆ, ಕಾಳಜಿ, ಬದ್ಧತೆ ತೋರಿಸಲಿಕ್ಕೆ ಅವಕಾಶ ಎಲ್ಲಿದೆ? ಹಾಗಾಗಿ ಇವತ್ತು ನಿಮ್ಮೆಲ್ಲರಲ್ಲಿ ನಾನು ಕಾವೇರಿ ಕಣಿವೆ ಜನರ ಪರವಾಗಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ನೀವು ಏನು ಮಾಡುತ್ತೀರೋ ಗೊತ್ತಿಲ್ಲ, ನಮಗೆ ಕಾವೇರಿಯನ್ನು ರಕ್ಷಣೆ ಮಾಡಿಕೊಡಿ, ನಮ್ಮ ಬದುಕು ಮತ್ತು ಭವಿಷ್ಯವನ್ನು ರಕ್ಷಣೆ ಮಾಡಿಕೊಡಿ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಗಳೇ, ರಾಜ್ಯದ ಹಿತದ ದೃಷ್ಟಿಯಿಂದ ರಾಜ್ಯದ ಎಲ್ಲಾ ಪಕ್ಷಗಳ ಸಹಕಾರ ಪಡೆಯುವಲ್ಲಿ

**ವೈಸ್ ಛೇರ್ಮನ್:–** ಮಾನ್ಯ ಸದಸ್ಯರೆ ನನ್ನದೊಂದು ಮನವಿ. ಬಹಳ ಹೊತ್ತಿನಿಂದ ನಾವು ನಿರ್ಣಯಕ್ಕಾಗಿ ಕಾಯುತ್ತಿದ್ದೆವು. ಈಗಾಗಲೇ ಸದನದಲ್ಲಿ ನಿರ್ಣಯವನ್ನು ಮಂಡಿಸಲಾಗಿದೆ. ಈ ನಿರ್ಣಯದ ಸಾಧಕಬಾಧಕಗಳ ಬಗ್ಗೆ ಹೆಚ್ಚು ಒತ್ತನ್ನು ನೀಡಿ ಮಾತನಾಡಬೇಕೆಂದು ವಿನಂತಿಸುತ್ತೇನೆ. ವಿವರಕ್ಕೆ ಹೋಗುವುದಕ್ಕಿಂತ ಈ ವಿಚಾರದಲ್ಲಿ ಬಹಳ ಮಹತ್ವವಾದ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ನಿರ್ಣಯಕ್ಕೆ ಸೀಮಿತವಾಗಿ ಮಾತನಾಡುವುದು ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಇದಕ್ಕೆ ತಮ್ಮ ಸಹಕಾರವನ್ನು ಬಯಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಗಳೇ, ಮೊದಲನೆಯದಾಗಿ ರಾಜ್ಯದ ಹಿತದೃಷ್ಟಿಯಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಪಕ್ಷಗಳವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದರಲ್ಲಿಯೂ ಕಾವೇರಿಯ ನೀರನ್ನು ಉಳಿಸತಕ್ಕ ದೃಷ್ಟಿಯಿಂದ 2 ಸಲ ವಿಶೇಷವಾದ ಅಧಿವೇಶನಗಳನ್ನು ಕರೆಯಲಾಗಿದೆ. ಇದಕ್ಕೆ ಕಾರಣರಾದ ಮುಖ್ಯಮಂತ್ರಿಗಳನ್ನು ಮತ್ತು ಇನ್ನಿತರರನ್ನು ಅತ್ಯಂತ ಹೃದಯಪೂರ್ವಕವಾಗಿ ಅಭಿನಂದಿಸಬಯಸುತ್ತೇನೆ. ಡಾ||ಬಿ.ಆರ್.ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದ ರೀತ್ಯಾ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಒಕ್ಕೂಟದ ವ್ಯವಸ್ಥೆ ಉಳಿಯಬೇಕು ಎನ್ನುವ ಹಾಗಿದ್ದರೆ ಬಹುಶಃ ನಮ್ಮ ಸಂವಿಧಾನದ ರೀತ್ಯಾ legislature, judiciary, executive ತಮ್ಮ ತಮ್ಮ ಜವಾಬ್ದಾರಿಗಳನ್ನು ಅರಿತು ಕೆಲಸ ಮಾಡಬೇಕಾದ ಅವಶ್ಯಕತೆ ಇದೆ ಎಂದು ನಾವೆಲ್ಲರೂ ಸಹ ಭಾವಿಸಿದ್ದೇವೆ. ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುತ್ತೇವೆ ಎಂದು ನಾವೆಲ್ಲರೂ ಶಾಸಕರಾಗಬೇಕಾದರೆ ಮಂತ್ರಿಗಳಾಗಬೇಕಾದರೆ ನಾವೆಲ್ಲರೂ oath ತೆಗೆದುಕೊಂಡಿರುತ್ತೇವೆ. ಬಹುಶಃ ಆ oath ನ ರೀತ್ಯಾ ನಾವೆಲ್ಲರೂ ಸಹ ಎಷ್ಟರಮಟ್ಟಿಗೆ ನಡೆದುಕೊಳ್ಳುತ್ತಿದ್ದೇವೆ ಎನ್ನುವುದನ್ನು ನಾವು ಸೇರಿದಂತೆ judiciary ನಲ್ಲಿ ಇರುವವರು, executive ನಲ್ಲಿ ಇರುವವರು ಮತ್ತು parliament and legislature ನಲ್ಲಿ ಇರುವವರು ತಮ್ಮ ಆತ್ಮಾವಲೋಕನ ಮಾಡಿಕೊಳ್ಳತಕ್ಕ ಸಂದರ್ಭ ಇದು ಎಂದು ನಾನು ಭಾವಿಸಿದ್ದೇನೆ. ಬಹುಶಃ ಇವತ್ತಿನ ಇಶ್ಯೂಗೆ ಬರತಕ್ಕ ಸಂದರ್ಭದಲ್ಲಿ ಕಾವೇರಿ ಈಶ್ಯೂ 150 ವರ್ಷಗಳ ಇತಿಹಾಸದ ಹಿನ್ನಲೆಯಲ್ಲಿ ಹೊಂದಿರತಕ್ಕ ಇಶ್ಯೂ. 1892ರ ಅಗ್ರಿಮೆಂಟ್ 1924ರ ಅಗ್ರಿಮೆಂಟ್ ಈ ಎರಡು ಒಪ್ಪಂದಗಳನ್ನು ಮಾಡಿದವರು ಕಾವೇರಿ ಹುಟ್ಟುವ ತಲಕಾವೇರಿಯಿಂದ ಹಿಡಿದು ಕಾವೇರಿ ಕೊನೆಗೊಳ್ಳುವ ತಮಿಳುನಾಡು ಎಲ್ಲಿ ನೀರು ಸಮುದ್ರಕ್ಕೆ ಸೇರುತ್ತದೆ, ಈ ಎರಡು ಒಪ್ಪಂದಗಳು ಸಹ ಆಗಿರುವುದು ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ, ಆ ಬ್ರಿಟಿಷರ ಸಾಮಂತರ ರಾಜರಾಗಿದ್ದ ಮೈಸೂರಿನ ಮಹಾರಾಜರ ನಡುವೆ ಒಪ್ಪಂದ ಆಗಿದ್ದು, ಸ್ವಾತಂತ್ರ್ಯದ ನಂತರ ಈ ರಾಜ್ಯದ ಪ್ರಜೆಗಳ ಮೇಲೆ ಅದು ಎಷ್ಟರಮಟ್ಟಿಗೆ applicable? In fact, ಈ issue ಅನ್ನು 1990ರ ಸಾಲಿನಲ್ಲಿ ನಾವುಗಳೇ raise ಮಾಡಿದ್ದೆವು. Unfortunately ಈ Cauvery Tribunal Award ನಲ್ಲಿ tribunal ಈ ಎರಡು ಒಪ್ಪಂದಗಳ binding ಎಂದು finding ಕೊಟ್ಟಿದ್ದಾರೆ. It is an unfortunate

thing. ನಾನು ಇದನ್ನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಕಾವೇರಿ ನದಿಯ ಒಟ್ಟು ಜಲಾನಯನ ಪ್ರದೇಶ ಸುಮಾರು 81,155 ಚ.ಮೀ ನಷ್ಟಿದೆ. 81155 ಚ.ಮೀ ಇದರಲ್ಲಿ ಕನಾಟಕದಲ್ಲಿ 34,273 ಚ.ಮೀ ಪ್ರದೇಶದಲ್ಲಿ ಕಾವೇರಿ ನದಿ ಇದೆ. ತಮಿಳುನಾಡು ಮತ್ತು ಪಾಂಡುಚೇರಿಯ ಒಟ್ಟು ಕಾವೇರಿ ಜಲಾನಯನ ಪ್ರದೇಶ 44016 ಚ.ಮೀ ಇದೆ. ಕೇರಳದಲ್ಲಿ 2866 ಚ.ಕೀ ಇದೆ. ಈ ಒಟ್ಟು 81155 ಚ.ಮೀ ನಲ್ಲಿ ನಮ್ಮ ತಜ್ಞರ ರೀತ್ಯಾ 50% ಮಳೆಯ dependability. ಇದರ ಪ್ರಕಾರ ಸುಮಾರು 740 ಟಿಎಂಸಿ ನೀರು ಲಭ್ಯವಿದೆ ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ. ಬಹುಶಃ ಇದು ತಜ್ಞರ ಅಭಿಪ್ರಾಯ ಆಗಿರುವ ಹಿನ್ನಲೆಯಲ್ಲಿ 1971-72ರಲ್ಲಿ O.S.No.1 of 1971 and 1972 was filed by the farmers of Tamil Nadu seeking direction to the Union Government to constitute a tribunal. Rightly or wrongly, Article 262 of the Constitution of India is very very relevant. Article 262, clause (2) of Constitution ಏನು ಹೇಳುತ್ತದೆ ಎಂದರೆ ನಾನು ಇಲ್ಲಿ ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. It says,

> "Notwithstanding anything in this Constitution, Parliament may by law provide that neither the Supreme Court nor any other court shall exercise jurisdiction in respect of any such dispute or complaint as is referred to in clause (1)."

So by invoking the provisions of Article 262 of the Constitution, the Parliament has promulgated The Inter-State Water Disputes Act, 1956. ಆ ಕಾನೂನನ್ನು ಮಾಡಿದ್ದಾರೆ. 1990ರಲ್ಲಿ AIR 1990 SC, ಸುಪ್ರೀಮ್ ಕೋರ್ಟಿನ ಪೇಜ್ 1316 ಪ್ರಕಾರ ಯಾವ ತಮಿಳುನಾಡಿನ ಸಿಎನ್‌ವಿವಿಎನ್‌ಯುಪಿ ಸಂಗಮ್ ಎನ್ನುವ ರೈತರ ಸಂಘವನ್ನು ಮಾಡಿಕೊಂಡು ಅವರು ದಾವೆ ಹೋಡಿದ್ದರು. The Supreme Court has awarded a law in CNVVNUP Sangam v/s Union of India. They have made it very very clear. ಅಲ್ಲಿ ಏನು ಹೇಳುತ್ತಾರೆಂದರೆ,

> "The Inter-State Water Disputes Act, 1956 is a legislation passed under Article 262 of the Constitution of India. Section 11 of the Act <u>excludes the jurisdiction of the Supreme Court</u>…

**ವೈಸ್ ಛೇರ್ಮನ್:-** ಆರ್ಟಿಕಲ್ 262 ಕನ್ನಡದಲ್ಲಿರುವುದನ್ನು ನಾನು ಓದುತ್ತೇನೆ. ಕನ್ನಡದಲ್ಲಿ ಬಹಳ ಸ್ಪಷ್ಟವಾಗಿದೆ. ಸಂವಿಧಾನದ ಆರ್ಟಿಕಲ್ 262 ಕ್ಲಾಸ್ 2 " ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ 1ನೇ ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಅಂತಹ ವಿವಾದದ ಅಥವಾ ದೂರಿನ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಥವಾ ಇತರೆ ಯಾವುದೇ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸತಕ್ಕದಲ್ಲವೆಂದು ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದು.

**ಶ್ರೀ ವಿ.ಎಸ್.ಉಗ್ರಪ್ಪ:–** ಅದು ಅಂಬೇಡ್ಕರ್‌ರವರ ಸಂವಿಧಾನದ ಆರ್ಟಿಕಲ್ 262, ಸಬ್–ಕ್ಲಾಸ್ 2, ಅದರ ಮೇಲೆ 1990ನಲ್ಲಿ the Constitutional Bench has rendered a judgment. ಆ ಜಡ್ಜ್‌ಮೆಂಟ್‌ನಲ್ಲಿ ಏನು Head Note ಇದೆ ಎನ್ನುವುದನ್ನು ನಾನಿಲ್ಲಿ ಓದುತ್ತಿದ್ದೇನೆ. ಅದು ಹೇಳುವುದೇನೆಂದರೆ,

> "The Inter-State Water Disputes Act, 1956 is a legislation passed under Article 262 of the Constitution of India. Section 11 of the Act, excludes the jurisdiction of the Supreme Court in respect of water disputes referred to the tribunal."

Here is a case where the issue has been referred to the tribunal. Where is the jurisdiction to the Supreme Court as per the provisions of Article 262 as well as the provisions of Section 11? There is no jurisdiction to the Supreme Court at all.

**ವೈಸ್ ಚೇರ್ಮನ್:–** ಅದು ಬಹಳ ಸ್ಪಷ್ಟವಾಗಿದೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಯಾವ ಪ್ರಾಂತ್ಯ ಎಂದು ನಾನು ಹೇಳುತ್ತಿಲ್ಲ, ಆ ವಿಚಾರವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದವರೇ ಹೇಳುತ್ತಿದ್ದಾರೆ. But the Supreme Court can direct the Central Government to fulfil its statutory obligation under Section 4 of the said Act. Statutory obligation ಏನೆಂದರೆ, where there is a complaint. So if the Union Government fails to adjudicate by negotiation then only it has to be referred to the tribunal. ಹಾಗಾಗಿ ಇದನ್ನು ಬಿಟ್ಟರೆ, there is no jurisdiction to the Union Government to adjudicate any of the disputes in regard to the Inter-State Water Disputes Act. ಇವತ್ತು ರಾಜ್ಯದಲ್ಲಿ ಇಂತಹ ಸ್ಥಿತಿ ಇರಬೇಕಾದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದವರು ನಡೆದುಕೊಳ್ಳುವಂತಹ ರೀತಿ ಎಷ್ಟರಮಟ್ಟಿಗೆ ಸಾಧು ಮತ್ತು ಸಂವಿಧಾನ ರೀತಿಯಾದದ್ದು ಎನ್ನುವಂತಹ ಒಂದು ದೊಡ್ಡ ಪ್ರಶ್ನೆ ಇವತ್ತು ನಮ್ಮ ಮುಂದೆ ಇದೆ. ಈ ಹಿನ್ನೆಲೆಯಲ್ಲಿ ದಿನಾಂಕ: 02.06.1990ರಲ್ಲಿ ಒಂದು tribunal ಅನ್ನು ರಚನೆ ಮಾಡುತ್ತಾರೆ. ಜಸ್ಟೀಸ್ ಎನ್.ಪಿ. ಸಿಂಗ್‌ರವರು ಅಧ್ಯಕ್ಷರು ಹಾಗೂ ಎಂ.ಎಸ್.ರಾವ್‌ರವರು ಮತ್ತು ಸುಧೀರ್ ನಾರಾಯಣ್‌ರವರನ್ನು ಸದಸ್ಯರನ್ನಾಗಿ ನೇಮಿಸಿದ್ದಾರೆ. ಇವರುಗಳು ದಿನಾಂಕ: 25.06.1991ರಲ್ಲಿ ಮಧ್ಯಂತರ ತೀರ್ಪನ್ನು ನೀಡುತ್ತಾರೆ. ಆ ಮಧ್ಯಂತರ ತೀರ್ಪಿನ ಪ್ರಕಾರ 205 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಕರ್ನಾಟಕ ಸರ್ಕಾರದವರು ಬಿಡಬೇಕು. ಆ 205 ಟಿ.ಎಂ.ಸಿ. ನೀರಿನಲ್ಲಿ 199 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಮತ್ತು ಉಳಿದ 6 ಟಿ.ಎಂ.ಸಿ. ನೀರನ್ನು ಪುದುಚೇರಿ ರಾಜ್ಯಕ್ಕೆ ಬಿಡಬೇಕೆನ್ನುವುದು ಅಂದಿನ ಮಧ್ಯಂತರ ತೀರ್ಪಿನ ಆದೇಶ. ಆ ಆದೇಶವನ್ನು 10ನೇ ಡಿಸೆಂಬರ್ 1991 ರಿಂದಲೇ ಜಾರಿಗೆ ಬರಬೇಕೆಂದು ಆದೇಶ ಮಾಡುತ್ತಾರೆ. ಆಗ ತಮಿಳುನಾಡು ಸರ್ಕಾರದವರು ಓ.ಎಸ್.ಸಂಖ್ಯೆ:1/1992 ಅನ್ನು ಫೈಲ್ ಮಾಡಿ ಈ ಸ್ಕೀಮ್ ಅನ್ನು ಜಾರಿಗೆ ತರಬೇಕೆಂದು ಹೇಳಿ ಮಾನ್ಯ ಸರ್ವೋಚ್ಚ ನ್ಯಾಯಾಲಯದವರು ಕೇಂದ್ರ ಸರ್ಕಾರಕ್ಕೆ ನಿರ್ದೇಶನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾರೆ. Then in 1991, a scheme was evolved by the Union Government i.e., The Cauvery Water

Implementation of Interim Order of 1991 and all subsequent related orders of the tribunal scheme, 1991. ಕಾವೇರಿ ನದಿ ಪ್ರಾಧಿಕಾರವನ್ನು ರಚನೆ ಮಾಡಿ ಅದರಲ್ಲಿ ಮಾನ್ಯ ಪ್ರಧಾನ ಮಂತ್ರಿಯವರನ್ನು ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಮತ್ತು ಸಂಬಂಧಪಟ್ಟ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳನ್ನು ಸದಸ್ಯರನ್ನಾಗಿ ನೇಮಿಸಲಾಯಿತು. ಆ 1998ರ ಸ್ಕೀಮ್ ಪ್ರಕಾರ ಕಾವೇರಿ ನದಿ ಪ್ರಾಧಿಕಾರ ಅಧ್ಯಕ್ಷರನ್ನಾಗಿ ಮಾನ್ಯ ಪ್ರಧಾನ ಮಂತ್ರಿಯವರನ್ನು ನೇಮಕ ಮಾಡಲಾಯಿತು. ಪ್ರಾಧಿಕಾರ ರಚನೆಯಾದ ನಂತರ ಮಾನಿಟರಿಂಗ್ ಕಮಿಟಿಯನ್ನು ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ನೇಮಕ ಮಾಡಬೇಕೆಂದು ಹೇಳುತ್ತಾರೆ. ಮಾನಿಟರಿಂಗ್ ಕಮಿಟಿಗೆ ಅಧ್ಯಕ್ಷರನ್ನು ಸಂಯುಕ್ತ ಸರ್ಕಾರದ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯವರನ್ನು ಹಾಗೂ ಸಂಬಂಧಪಟ್ಟಂತಹ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ನೀರಾವರಿ ಇಲಾಖೆಯ ಮುಖ್ಯ ಇಂಜಿನೀಯರುಗಳು ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ಒತ್ತಾಯಿಸುತ್ತಾರೆ. ಇದರಂತೆ ಮಾನಿಟರಿಂಗ್ ಕಮಿಟಿಯನ್ನು ಜಾರಿಗೆ ತರುವಂತದ್ದು ಒಂದು ಕಡೆಯಾದರೆ, ಅಂತಿಮವಾಗಿ ಕಾವೇರಿ ನದಿ ಪ್ರಾಧಿಕಾರ 05.02.2007ರಲ್ಲಿ ಅಂತಿಮ ಆದೇಶವನ್ನು ನೀಡುತ್ತದೆ. ಅದರ ಪ್ರಕಾರ 419 ಟಿ.ಎಂ.ಸಿ. ನೀರನ್ನು ತಮಿಳುನಾಡು ರಾಜ್ಯಕ್ಕೆ, 270 ಟಿ.ಎಂ.ಸಿ. ನೀರನ್ನು ಕರ್ನಾಟಕ ರಾಜ್ಯಕ್ಕೆ, 30 ಟಿ.ಎಂ.ಸಿ. ನೀರನ್ನು ಕೇರಳ ರಾಜ್ಯಕ್ಕೆ, 7 ಟಿ.ಎಂ.ಸಿ. ನೀರನ್ನು ಪುದುಚೇರಿಗೆ ಮತ್ತು ಇನ್ನುಳಿದ 14 ಟಿ.ಎಂ.ಸಿ. ನೀರನ್ನು environmental hazards ಗಾಗಿ ಹಂಚಿಕೆ ಮಾಡುತ್ತಾರೆ. ಈ ರೀತಿ ತಮಿಳುನಾಡು ರಾಜ್ಯಕ್ಕೆ ಹಂಚಿಕೆ ಮಾಡಿದಂತಹ 419 ಟಿ.ಎಂ.ಸಿ. ನೀರನ್ನು ಹೇಗೆ ಬಳಕೆ ಮಾಡಬೇಕೆಂದು ಹೇಳಿದರೆ, 419 ಟಿ.ಎಂ.ಸಿ. ನೀರು ಕರ್ನಾಟಕ ರಾಜ್ಯದಿಂದ ಹೋಗುವಂತಹದ್ದಲ್ಲ. ಇದರಲ್ಲಿ ನಮ್ಮ ರಾಜ್ಯದಿಂದ ತಮಿಳುನಾಡಿಗೆ ಬಿಡುವಂತಹ ನೀರು 182 ಟಿ.ಎಂ.ಸಿ. + 10 ಟಿ.ಎಂ.ಸಿ. ನೀರನ್ನು environmental hazards ಗಾಗಿ ಬಿಡುವಂತದ್ದು. ಸದರಿ ನೀರನ್ನು ಯಾವಾಗ ಬಿಡಬೇಕು ಎನ್ನುವುದನ್ನು ವಾಲ್ಯೂಮ್ 5 ರ ಕೊನೆಯ ಪುಟದಲ್ಲಿ ಹೇಳುತ್ತಾರೆ. ಸಾಮಾನ್ಯ ವರ್ಷ(Normal Year) ಎಂದರೆ, ಕಾವೇರಿ ಜಲಾನಯನ ಪ್ರದೇಶಗಳ ಎಲ್ಲಾ ಕಣಿವೆಗಳಲ್ಲಿ ಅಂದರೆ ಸುಮಾರು 81,155 ಚದರ ಕಿಲೋ ಮೀಟರ್‌ಗಳಲ್ಲಿ ಸುಮಾರು 740 ಟಿ.ಎಂ.ಸಿ. ನೀರು ಮಳೆಯಿಂದಾಗಿ ಸಂಗ್ರಹಣೆಯಾದಾಗ ಅದು ಸಾಮಾನ್ಯ ವರ್ಷವೆಂದು ಮತ್ತು ಇಂತಹ ಸಾಮಾನ್ಯ ವರ್ಷಗಳಲ್ಲಿ ನಿಯತಕಾಲಿಕವಾಗಿ ಪ್ರತಿ ತಿಂಗಳು ಬಿಡಬೇಕೆಂದು ಈ ಆದೇಶದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. 'In a normal year, the Supervisory Committee has to release so much of water' ಎಂದು ಹೇಳಿರುವಂತಹದ್ದು, ಹಾಗಾಗಿ ನಾನು ಇದನ್ನು ಹೆಚ್ಚು ಬಳಸುವುದಕ್ಕೆ ಹೋಗುವುದಿಲ್ಲ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಕಾವೇರಿ ನದಿ ಪ್ರಾಧಿಕಾರದವರು 3000 ಕ್ಯೂಸೆಕ್ಸ್ ನೀರನ್ನು ಬಿಡಬೇಕೆಂದು ಹೇಳುತ್ತಿದ್ದಾರೆ, ಆದರೆ ಮಾನ್ಯ ಸರ್ವೋಚ್ಛ ನ್ಯಾಯಾಲಯದವರು 6000 ಕ್ಯೂಸೆಕ್ಸ್ ಎಂದು ಹೇಳುತ್ತಿದ್ದಾರೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ನಾವು ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಕೇಳಬೇಕಾಗುತ್ತದೆ. ಅದೇನೆಂದರೆ, ಸಂವಿಧಾನದ ಕಲಂ 262 ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಅನ್ವಯವಾಗುತ್ತದೋ ಅಥವಾ ಇಲ್ಲವೋ ಅಥವಾ Section 11 of The Inter-State Water Disputes Act ಅನ್ವಯವಾಗುತ್ತದೋ ಅಥವಾ ಇಲ್ಲವೋ ಎಂಬುದನ್ನು ಕೇಳಬೇಕಾಗುತ್ತದೆ. ಹೌದು, ಸಂವಿಧಾನದ ಕಲಂ 211 ಅನ್ವಯವಾಗುತ್ತದೆ. ಅದರ ಹಿನ್ನೆಲೆಯಲ್ಲಿ ಒಬ್ಬ ನ್ಯಾಯಾಧೀಶ ಒಂದು ಸಿನಿಮಾಗೆ ಹೋಗುತ್ತಾರೆಂದರೆ ಅದನ್ನು ನಾವು

ಹೇಳುವುದಕ್ಕಾಗುವುದಿಲ್ಲ. ಅದು ಅವರ ವೈಯಕ್ತಿಕ ನಡವಳಿಕೆ. ಆದರೆ ನಾನು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಈ ಸದನದ ಮೂಲಕ ಕೇಳುವುದೇನೆಂದರೆ, ತಾವುಗಳು ಕೂಡ ನಮ್ಮಗಳ ಹಾಗೆಯೇ ಸಂವಿಧಾನವನ್ನು ಎತ್ತಿ ಹಿಡಿಯುತ್ತೇವೆಂದು ಪ್ರಮಾಣವನ್ನು ಸ್ವೀಕರಿಸಿದ್ದೀರಿ, ಹಾಗೆಯೇ ತಾವುಗಳು ಕೂಡ you are the interpreters of the Constitution; you are the custodian of the Constitution. ನಿಮಗೆ ಸಂವಿಧಾನದ ಕಲಂ 262 ಮತ್ತು subsequent judgments rendered by the Hon'ble Supreme Court of India, whether they are applicable to you or not is the question. As per the provisions of Article 141, it makes it very clear that any judgment rendered by the Supreme Court of India, if it is a larger bench, it is applicable to the smaller benches as well as the High Courts and other courts. ಈ ಬಗ್ಗೆ ತಾವು ಏತಕ್ಕೆ ಗಮನ ಹರಿಸುತ್ತಿಲ್ಲವೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಕೇಳುವುದಕ್ಕೆ ಬಯಸುತ್ತೇನೆ.

**(ಗೊಂದಲ)**

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಈಗ ತಮಿಳುನಾಡು ಸರ್ಕಾರದವರು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಹೋದಾಗ ನಾವು ಕೇಳಬೇಕಾಗಿತ್ತು. ಅಲ್ಲೇ ಕರ್ನಾಟಕ ಸರ್ಕಾರದವರು ತಪ್ಪು ಮಾಡಿದ್ದು.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸದನಕ್ಕೆ ತಪ್ಪು ಮಾಹಿತಿ ಹೋಗುವುದು ಬೇಡ.

**ಶ್ರೀ ರಾಮಚಂದ್ರಗೌಡ:-** ತಮಿಳುನಾಡಿನವರು ನ್ಯಾಯಾಲಯಕ್ಕೆ ಹೋದಾಗ, ನಾವು you have no jurisdiction ಎಂದು ಹೇಳಬೇಕಾಗಿತ್ತು. ಹೇಳಲಿಲ್ಲ, ಅಲ್ಲಿಯೇ ನಾವು ತಪ್ಪು ಮಾಡಿರುವುದು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಗಳೆ, normal year ಎಂದರೆ 740 ಟಿಎಂಸಿ. ಯಾವಾಗ 740ಟಿಎಂಸಿ ನೀರು ಲಭ್ಯವಿಲ್ಲ ಎಂದಾಗ, ಏನೀ formula ಇದೆಯಲ್ಲಾ 192 i.e., 182+10. It is not applicable. Dismiss ಹೇಗೆ ಎನ್ನುವ ಬಗ್ಗೆ ಬೇರೆ formula ನೋಡಬೇಕಾಗುತ್ತದೆ. That has to be adjudicated only by the concern Committee, not by the Court. ಇದನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. 2002ರಲ್ಲಿ ಮಾಡಿದ ನಮ್ಮ ದೇಶದ National Water Policy ಇದೆ. ಇದರಲ್ಲಿ 'Uses of Water' ಬಗ್ಗೆ ವಿವರಿಸಿದ್ದಾರೆ. ಬಹಷ್ಟು ಜನ there is no water policy ಎಂದು ವಾದ ಮಾಡುತ್ತಾರೆ. In fact, there are two water policies; (1) National Water Policy-2002 and subsequently (2)National Water Policy-2012. 2002ರಲ್ಲಿ water is required for domestic agricultural, hydropower, thermal power etc., 2012 ಪಾಲಿಸಿಯಲ್ಲಿ domestic purposes ನಂತರ agricultural, hydropower, thermal power etc., ಮುಂತಾದವುಗಳಿಗೆ ಉಪಯೋಗಿಸಬಹುದೆಂದು ಹೇಳುತ್ತಾರೆ. 2002ರ ಪಾಲಿಸಿಯಲ್ಲಿ, water allocation

priorities ಪ್ರಕಾರ '*In the planning and operation of systems, water allocation priorities should be broadly as follows: (1) Drinking water (2) Irrigation (3) Hydro-power (4) Ecology (5) Agro-industries and non-agricultural industries and (6) Navigation and other uses'.* ಏಕೆ ನಮ್ಮ ಸುಪ್ರಿಮ್ ಕೋರ್ಟ್ ನ್ಯಾಯಾಧೀಶರಿಗೆ ಇದು ಅರ್ಥವಾಗುತ್ತಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಅತ್ಯಂತ ನೋವಿನಿಂದ ಈ ಮಾತನ್ನು ಹೇಳಬಯಸುತ್ತೇನೆ.

***(ಈ ಹಂತದಲ್ಲಿ ಮಾನ್ಯ ಸಭಾಪತಿಗಳು ಪೀಠವನ್ನು ಅಲಂಕರಿಸಿದರು)***

1996ರಲ್ಲಿ ಸುಪ್ರೀಂಕೋರ್ಟಿನವರು *B.L. Wadhera vs Union Of India & Ors* ಪ್ರಕರಣದಲ್ಲಿ Article 21ಗೆ ಸಂಬಂಧಿಸಿದಂತೆ, when the earlier agreements were executed between Britishers and Raja of Mysore, Constitution was not then. ನಂತರ ಸಂವಿಧಾನ ಬಂದಾಗ Article.21 ಮೇಲೆ ಸುಪ್ರೀಂಕೋರ್ಟ್‌ನವರು AIR 1996 SC Page:2969ರಲ್ಲಿ ತೀರ್ಪು ಕೊಡುತ್ತಾರೆ. ಎಲ್ಲವನ್ನು ನಾನು ಓದುವುದಿಲ್ಲ; right to life under Article.21 includes the right to enjoyment of a pollution free water. So, that means drinking water for a citizen is a fundamental right as ensign by the provisions of the Constitution. ಸಂವಿಧಾನದ ಮೂಲಭೂತವಾದ ಈ ಹಕ್ಕಿನ ಬಗ್ಗೆ ಏಕೆ ಸುಪ್ರಿಮ್ ಕೋರ್ಟ್‌ನವರಿಗೆ ಅರ್ಥವಾಗುತ್ತಿಲ್ಲ. ಇದು ನಮ್ಮ ಮುಂದೆ ಇರುವ ಪ್ರಶ್ನೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಂದು National Water Policy. ಎರಡನೆಯದು, ಸುಪ್ರಿಮ್ ಕೋರ್ಟ್‌ನವರೆ 1996ರಲ್ಲಿ ಕುಡಿಯುವ ನೀರು ಮೂಲಭೂತವಾದ ಹಕ್ಕು ಎಂದು ಒಂದು ತೀರ್ಪನ್ನು ಕೊಟ್ಟಿದ್ದಾರೆ. ಇವರೆಡನ್ನು ಗಣನೆಗೆ ತೆಗೆದುಕೊಂಡಿದ್ದರೆ ಬಹುಷ: ಸುಪ್ರೀಮ್ ಕೋರ್ಟ್‌ನವರು ಈ ರೀತಿಯ ಆದೇಶಗಳನ್ನು ನಮಗೆ ಕೊಡುತ್ತಿರಲಿಲ್ಲ ಎನ್ನುವುದು ನನ್ನ firm belief. ಇದರ ಜೊತೆಗೆ ಕರ್ನಾಟಕಕ್ಕೆ ಲಭ್ಯವಾಗುವ 270ಟಿಎಂಸಿ ನೀರಿನಲ್ಲಿ ಹದಿನೆಂಟು ಲಕ್ಷ ಐವತ್ತೇಂಟು ಸಾವಿರ ಎಕರೆ ಭೂಮಿಯಲ್ಲಿ ನಮ್ಮ ರೈತರು ಬೆಳೆಯನ್ನು ಬೆಳೆಯಬೇಕು. ನಮ್ಮ ರೈತರು ಬೆಳೆ ಬೆಳೆಯಬೇಕು ಎಂದರೆ 250.62 ಟಿಎಂಸಿ ನೀರು ಬೇಕು. ಇದರ ಜೊತೆಗೆ ಮೈಸೂರು, ಮಂಡ್ಯ, ಬೆಂಗಳೂರು, ಮಳ್ಳವಳ್ಳಿ ಮತ್ತು ಇತರೆ ಹಳ್ಳಿಗಳು ಇರಬಹುದು ಇವುಗಳಿಗೆ ಸುಮಾರು 30 ಟಿಎಂಸಿ ಎಷ್ಟು ಕುಡಿಯುವ ನೀರಿನ ಅವಶ್ಯಕತೆ ಇದೆ. ಇದನ್ನು ಗಮನಿಸುವವರು ಯಾರು? ಇಷ್ಟೆಲ್ಲಾ ನಮಗೆ requirement ಇದೆ. We can see that difference. ನಮ್ಮ ಬೆಳೆಗಳಿಗೆ ಇಲ್ಲಿ ನೀರು ಇಲ್ಲ. ಕುಡಿಯಲು ನೀರು ಇಲ್ಲ, ನಮ್ಮ ರೈತರ ಬೆಳೆಗೆ ನೀರು ಇಲ್ಲ. ಆದರೆ ತಮಿಳುನಾಡಿನಲ್ಲಿರುವ ಭವಾನಿ, ಮೆಟ್ಟೂರು ಡ್ಯಾಂಗಳಲ್ಲಿ ಇವತ್ತು 54 ಟಿಎಂಸಿ ನೀರು ಇದೆ. ಈ ನೀರನ್ನು ಅವರು ಕುಡಿಯಲು ಉಪಯೋಗಿಸುವುದಿಲ್ಲ. ಅವರ ಎರಡನೆ ಮತ್ತು ಮೂರನೇ ಬೆಳೆಗೆ ನೀರು. See their priorities. ಇದರ ಅರಿವು ನ್ಯಾಯಾಧೀಶರಿಗೆ ಮತ್ತು ವಕೀಲರಿಗೆ ಇರಬೇಕಾದ್ದು ಅತ್ಯಂತ ಅವಶ್ಯಕವಾಗಿದೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಉಗ್ರಪ್ಪನವರ ಮಾತಿನ ಸರಣಿಯನ್ನು ಕೇಳಿದರೆ ಆ ನಾರಿಮನ್‌ರವರಿಗೆ 76 ಕೋಟಿ ರೂ.ಗಳನ್ನು ಕೊಟ್ಟಿರುವುದು ದಂಡವಾಯಿತು. ಅವರ ಬದಲು ಮಾನ್ಯ ಉಗ್ರಪ್ಪನವರೆ ವಾದ ಮಾಡಿದ್ದರೆ ನಮ್ಮ ರಾಜ್ಯಕ್ಕೆ ನ್ಯಾಯ ಸಿಗುತ್ತಿತ್ತು ಎಂದು ನನ್ನಗನ್ನಿಸುತ್ತದೆ. ಇದನ್ನು ನಾನು ಸುಮ್ಮನೆ ಹೇಳುತ್ತಿಲ್ಲ. ಇದು ನನ್ನ ಕಾಂಪ್ಲಿಮೆಂಟ್.

**ಸಭಾಪತಿಗಳು:–** ಇದು passing remark. ಅದನ್ನು ಬಿಟ್ಟುಬಿಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಅವರಿಗೆ ಧನ್ಯವಾದಗಳನ್ನು ಹೇಳಬೇಕು ಎಂದರೆ ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ 50% dependability ಮೇಲೆ 740 ಟಿ.ಎಂ.ಸಿ ಏನು ಒಟ್ಟಾರೆ ಮಳೆ ಬರಬೇಕು, ಆದರೆ ಈ ಸಾರಿ ನಮ್ಮ ರಾಜ್ಯದಲ್ಲಿ ಮಳೆಯಾಗಿರುವುದು one-forth ಮಾತ್ರ. ಹೀಗೆ ಇರುವಾಗ ತಮಿಳುನಾಡಿನವರು ನಮಗೆ ಅಗಷ್ಟ್, ಸೆಪ್ಟಂಬರ್‌ನಲ್ಲಿ 50ಟಿಎಂಸಿ ನೀರನ್ನು ಕೊಡಬೇಕೆಂದು ಸುಪ್ರಿಮ್ ಕೋರ್ಟ್‌ಗೆ Interlocutory Application ಹಾಕುತ್ತಾರೆ. ಆ Interlocutory Application ಮೇಲೆ 2–9–2016ರಲ್ಲಿ ಮೊದಲ ಹಿಯರಿಂಗ್ ಬರುತ್ತದೆ. 5–9–2016... ನಮ್ಮ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು 'live and let live' policy adopt ಮಾಡಿಕೊಳ್ಳಬೇಕು. ಇದು ನಮ್ಮ ದೇಶದ ಸಂಸ್ಕೃತಿ ಅದನ್ನು ಇವರು ಅರ್ಥ ಮಾಡಿಕೊಳ್ಳಬೇಕು. ಬದುಕಿ–ಬದುಕಲು ಬಿಡಿ ಎನ್ನುವುದು ಈ ದೇಶದ ಸಂಸ್ಕೃತಿ. ಆದರೆ ಈ ರಾಜ್ಯದಲ್ಲಿ ಇಂದು ಬದುಕಲು ನೀರೆ ಸಿಗದಂತಹ ಸ್ಥಿತಿ ಇದೆ, ಇದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

Live and let live policy ಬಗ್ಗೆ ಹೇಳಬೇಕಾದರೆ, ultimately Court has to take into the consideration of ground realities. Ground realities ಪ್ರಕಾರ 54 ಟಿಎಂಸಿ ಭವಾನಿ ಮತ್ತು ಮೆಟ್ಟೂರ್ ಜಲಾಶಯಗಳಲ್ಲಿ ನೀರು ಇದೆ. ಆದರೆ ನಮ್ಮ ಹೇಮಾವತಿ, ಕೆಆರ್‌ಎಸ್, ಕಬಿನಿ, ಹಾರಂಗಿ, ಈ ನಾಲ್ಕು ಜಲಾಶಯಗಳಲ್ಲಿ ಇವತ್ತು ತೆಗೆದುಕೊಂಡರೂ ಕೂಡ ಕೇವಲ 34 ಟಿಎಂಸಿ ನೀರು ಮಾತ್ರ ಇದೆ. ಇದನ್ನು ಅರ್ಥ ಮಾಡಿಕೊಳ್ಳುವುದಿಲ್ಲವೆಂದರೆ ನಾವು ಏನು ಹೇಳುವುದಕ್ಕೆ ಆಗುತ್ತದೆ. ಹೀಗೆ 05.09.2015 ರ 'live and let live policy' ಎಂದು ಹೇಳಿ, ದಿನಾಂಕ 12.09.2013, ದಿನಾಂಕ 20.09.2016, ದಿನಾಂಕ 27.09.2016, ದಿನಾಂಕ 30.09.2016 ಗಳಲ್ಲಿ ನಮ್ಮ ರಾಜ್ಯದ ಮೇಲೆ ಆದೇಶಗಳನ್ನು ಮಾಡಿದ್ದಾರೆ. 20ನೇ ತಾರೀಖು ಸುಪ್ರೀಂ ಕೋರ್ಟ್‌ನವರು ಏನು ಹೇಳಿದ್ದಾರೆಂದರೆ, you have to constitute the Board. ಈ ಹಿಂದೆ ಬೋರ್ಡ್ ಮಾಡಬಾರದು ಎಂದು ಹೇಳಿ 2007 ರಲ್ಲಿ ಏನು ಅವಾರ್ಡ್ ಬಂದಿದೆ, ಆಗ ನಾಲ್ಕು ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಪುದುಚೇರಿ, ಕೇರಳ have filed Special Leave Petitions (SLPs) which are pending before Supreme Court. 2013ರಲ್ಲಿ when the matter was came up before the bench, Justice Lodha ಯಾರು ಆ ಪೀಠದ ಪ್ರಮುಖರು ಇದ್ರೋ, ಅವರು ಆದೇಶ ಮಾಡಿದ್ದಾರೆ. ನಮಗೆ ಅದನ್ನು ಮಾಡುವುದಕ್ಕೆ ಬರುವುದಿಲ್ಲ. ತ್ರಿಸದಸ್ಯ ಪೀಠದ ಮುಂದೆ ಬೋರ್ಡ್ ಸ್ಥಾಪನೆ ಮಾಡುವುದರ ಬಗ್ಗೆ ಪುನರ್ ಪರಿಶೀಲನೆಯ ಅರ್ಜಿ ಇದೆ. ಅದು 18ನೇ ಅಕ್ಟೋಬರ್ 2016 ರಂದು ಅಂತಿಮ ತೀರ್ಮಾನಕ್ಕೆ ಬರುವುದಿದೆ. ನಮಗೆ ಅಧಿಕಾರವಿಲ್ಲವೆಂದು, ಆ ಅಂತಿಮ ತೀರ್ಮಾನದಲ್ಲಿ ಅವರು ಆದೇಶ ಮಾಡುತ್ತಾರೆಂದು ಅವರು ಹೇಳಬಹುದಾಗಿತ್ತು. There is an order by Justice Lodha. In spite of it, 20ನೇ ತಾರೀಖು there is no application for constitution of Board. There is no prayer from the lawyers.

**ಸಭಾಪತಿಯವರು:–** ಎರಡೂ ರಾಜ್ಯದ ವಕೀಲರುಗಳು ಈ ದ್ವಿಸದಸ್ಯ ಪೀಠದ ಮುಂದೆ ನೀರು ನಿರ್ವಾಹಣಾ ಮಂಡಳಿಯನ್ನು ಸ್ಥಾಪನೆ ಮಾಡಿ ಎಂದು ಕೇಳಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ತಾವು ಹೇಳಿದಂತೆ ಎರಡೂ ರಾಜ್ಯದ ವಕೀಲರುಗಳು ಈ ಪೀಠದ ಮುಂದೆ ಮಂಡಳಿಯನ್ನು ಮಾಡಿ ಎಂದು ಕೇಳಿರುವುದಿಲ್ಲ. ಆದರೂ You have to constitute Board within four weeks ಎಂದು suo-moto ಆದೇಶ ಮಾಡುತ್ತಾರೆ. Whether Supreme Court has power to grant a direction without a prayer from the concerned parties? ಇದನ್ನು ಏಕೆ ಹೇಳಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. It is never in the history of Indian Judiciary. ಹಾಗಾದರೆ, what is the motive behind this? ಸರಿಯೋ, ತಪ್ಪೋ? ನಾನು ಸಹಾ 30–32 ವರ್ಷಗಳ ಕಾಲ ವಕೀಲರ ವೃತ್ತಿಯಲ್ಲಿದ್ದವನು. ನ್ಯಾಯಾಲಯಗಳ ಬಗ್ಗೆ ಅತ್ಯಂತ ಗೌರವವನ್ನು ಇಟ್ಟುಕೊಂಡಿದ್ದೇನೆ. ಆದರೆ ಆ ಗೌರವವನ್ನು ಉಳಿಸಿಕೊಳ್ಳುವಂತಹ ಜವಾಬ್ದಾರಿಯೂ ಸಹ ಸುಪ್ರೀಂ ಕೋರ್ಟ್‌ನ ಪೀಠಗಳಲ್ಲಿ ಕುಳಿತಿರುವವರಿಗೆ ಇರಬೇಕಾಗುತ್ತದೆ. 'ಮೈ ಲಾರ್ಡ್' ಎಂದು ಹೇಳಿದ ತಕ್ಷಣ ಅವರು 'ಲಾರ್ಡ್' ಆಗುವುದಿಲ್ಲ. ಅವರ conduct ಆ ರೀತಿ ಇದ್ದಾಗ ಮಾತ್ರ 'ಮೈ ಲಾರ್ಡ್ಸ್' ಆಗುತ್ತಾರೆ ಹೊರತು, ಸುಮ್ಮನೆ ಸಂಪ್ರದಾಯಿಕವಾಗಿ 'Your Honour, My Lord' ಎಂದು ಹೇಳಿದ ತಕ್ಷಣ ಯಾರೂ ಸಹ 'ಲಾರ್ಡ್' ಆಗುವುದಕ್ಕೆ ಸಾಧ್ಯವಿಲ್ಲ. ಇದನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಅರ್ಥಮಾಡಿಕೊಳ್ಳಬೇಕೆಂದು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಎರಡನೆಯದಾಗಿ, ಇವರಿಗೆ ಇಷ್ಟು ಸಹ ಅರ್ಥವಾಗುವುದಿಲ್ಲವೇ? ಒಂದು ಕಡೆ Article.262 of Indian Constitution and also Section.11 of the Inter-state Water Dispute makes it very clear that Courts have no jurisdiction. Even the Hon'ble Supreme Court of India in many occasions has rendered judgments stating that Courts have no jurisdiction. ಹಾಗಾದರೆ ಏಕೆ ಈ ರೀತಿಯಾಗಿದೆ, ಇದರ ಹಿಂದೆ ಏನಿದೆ? ಯಾರು ತಮಿಳುನಾಡಿನ ಪರವಾಗಿ ವಕೀಲರಾಗಿದ್ದಾರೆ ಅವರು ಮತ್ತು ಪೀಠದಲ್ಲಿ ಇದ್ದಂತಹ ಜಡ್ಜ್ ಒಂದೇ ಕಛೇರಿಯಲ್ಲಿ ಸುಮಾರು 12–14 ವರ್ಷ ಒಟ್ಟಿಗೆ ಪ್ರ್ಯಾಕ್ಟೀಸ್ ಮಾಡಿರುತ್ತಾರೆ. ನಮ್ಮ ಸರ್ಕಾರದ ವಿರುದ್ಧ 2007 ರಲ್ಲಿ Krishna Basin ವಿಚಾರದಲ್ಲಿ ಟ್ರಿಬ್ಯುನಲ್ ಮುಂದೆ ಜಡ್ಜ್ ಆಗುವುದಕ್ಕೆ ಮುಂಚೆ ಜಸ್ಟಿಸ್ ಬ್ರಿಜೇಶ್ ಕುಮಾರ್‌ರವರು ಮಹಾರಾಷ್ಟ್ರ ರಾಜ್ಯದ ಪರ ವಕೀಲರಾಗಿದ್ದರು. Judicial Propriety ಬಗ್ಗೆ ನಾನು ಜಾಸ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರುಗಳಾದ GAJENDRAGADKAR, P.B. AIYYAR, T.L. VENKATARAMA DAS, S.K. ಇವರುಗಳು Manak Lal vs Dr. Prem Chand ಪ್ರಕರಣದಲ್ಲಿನ ಜಡ್ಜ್‌ಮೆಂಟ್ಸ್‌ನಲ್ಲಿ ಏನು ಹೇಳಿದ್ದಾರೆಂದರೆ, it is of the essence of judicial decisions and judicial administration that Judges should be able to act impartially, objectively and without any bias. That is more important. ಇದೆಲ್ಲವನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಆದರೆ ಉಳಿದ ಎರಡು ಜಡ್ಜ್‌ಮೆಂಟನ್ನು ಮಾತ್ರ ತಮ್ಮ ಮುಖಾಂತರ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಒಂದನೆಯದಾಗಿ, Justice P.D. Dinakaran vs Hon'ble Judges Inquiry Committee & Others, ಆ ಜಡ್ಜ್ ಮೇಲೆ ಇಂತಹ circumstances ನಲ್ಲಿ ಹಾಕಿರುವಂತಹ ಒಂದು ಕೇಸಿನಲ್ಲಿ AIR 2011 SC Page: 3711, G.S. Singhvi,

Chandramauli Kr. Prasad ರವರುಗಳು ನೀಡಿರುವಂತಹ ತೀರ್ಪು. ತೀರ್ಪಿನಲ್ಲಿ ಏನು ಹೇಳಿದ್ದಾರೆಂದರೆ, in the case we are concerned with the application of first of the two principles of natural justice recognized by the Traditional English Law i.e., 'Nemo debet esse judex in propria causa'. This principle consists of rule against the bias or interest is based on three maximum. What are those three? No man shall be a Judge in his own case. Second is, Justice should not only be done, but manifestly and undoubtedly be seem to be done. Third is, Judges like Caesar's wife should be above suspicion. Here is a case where Judges sitting on the bench they should be above suspicion. Here is a case where one Judge was a lawyer for Tamil Nadu. Here is a case where one Judge was a lawyer for Maharashtra against Karnataka and once upon a time he was a lawyer for Chief Minister of Tamil Nadu. ಈಗ Caesar's wife ಸಂಶಯಾತೀತಳಾಗಿರಬೇಕಲ್ಲವೇ, ನ್ಯಾಯಾಧೀಶರುಗಳು ಸಂಶಯಾತೀತರಾಗಿರಬೇಕಲ್ಲವೇ? ನಾನು ನಿಮ್ಮ ಮೂಲಕ ಕೇಳುವುದಕ್ಕೆ ಬಯಸುವುದೇನೆಂದರೆ, ultimately, we are all answerable to provisions of our Constitution. ನೀವು ಅಲ್ಲಿ 'ಮೈ ಲಾರ್ಡ್' ಎಂದು ಹೇಳಿದ ತಕ್ಷಣ 'ಲಾರ್ಡ್' ಆಗುವುದಿಲ್ಲ. Their conduct, their attitude should be above all. They should be impartial. ಆದರೆ ನೀವು Judicial Propriety demands to disclose your antecedents. Judicial Propriety demands very recently. ಯಾರೋ ಅವರ ಮನೆಗೆ ಬಂದರು ಎಂದು our own Chief Justice of Karnataka ತಮ್ಮ ಮುಂದೆ ಇದ್ದಂತಹ ಕೇಸನ್ನು not before me ಎಂದು very recently ಆದೇಶ ಮಾಡಿದ್ದರು. There are several instances where the Hon'ble High Court as well as Supreme Court of India has made several judgments stating that we are not going to take up this matter, let the matter be placed before some other Judge. ಅನೇಕರು ನಿಮ್ಮ ಲಾಯರ್ ಏನು ಮಾಡುತ್ತಿದ್ದರು ಎಂದು ವಾದ ಮಾಡುತ್ತಾರೆ. ನಿಜ. ನಮ್ಮ ಲಾಯರ್ಸ್ ಕೆಲವರಿಗೆ ತಾಕತ್ತು, ಧಮ್ಮು ಬೇಕಾಗುತ್ತದೆ. ಮತ್ತೆ ಅವರ ಮುಂದೆ ಹೋಗಿ ಮಧ್ಯಂತರ ಆದೇಶ ಕೇಳಿದರೆ ಎಲ್ಲಿ ನಮ್ಮನ್ನು ಅಪಾರ್ಥ ತಿಳಿದುಕೊಳ್ಳುತ್ತಾರೋ ಎಂದು ಹೇಳುವವರು ಇದ್ದಾರೆ. ನಾನು ಇದನ್ನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಆದರೆ ನನಗೆ ಅನಿಸಿದಂತೆ ಈ ಪ್ರಿನ್ಸಿಪಲ್ಸ್ ಏನಿವೆ, ಇದರ ಜೊತೆಗೆ ಇನ್ನೊಂದು Bhajanlal, Chief Minister of Haryana v/s Jindal Strips Limited and ors. 1994 (6 SC cases page 19), ಈ ಕೇಸ್‌ನಲ್ಲಿ ಜಸ್ಟೀಸ್ ಎಂ.ಎನ್. ವೆಂಕಟಾಚಲಯ್ಯನವರು ನಮ್ಮ ರಾಜ್ಯದವರೇ ಆಗಿದ್ದಾರೆ. ಜಸ್ಟೀಸ್ ಎಂ.ಎನ್. ವೆಂಕಟಾಚಲಯ್ಯನವರು ಮತ್ತು ಜಸ್ಟೀಸ್ ಎಸ್. ಮೋಹನ್‌ರವರು ಈ ರೀತಿಯಾಗಿ ಹೇಳುತ್ತಾರೆ; "The decision makers should have no interest by way of gain or detriment in the outcome of proceedings. Interest may take many forms." This is more important. "It may be direct or indirect. It may arise from a personal relationship or from a

relationship with the subject matter or from a close relationship or from a Tennessee one." Here is a case where they had a personal relationship, as colleagues, a lawyer who is appearing for Tamil Nadu. He was his colleague for more than 12 years. And the same Judge was a lawyer against Karnataka. Is it not a personal interest?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹುಶ: ಈ ಸದನದಲ್ಲಿ authority on law ನಂತೆ ಮಾನ್ಯ ಉಗ್ರಪ್ಪನವರು ಏನೆಲ್ಲಾ ನಡೆದಿದೆ ಎಂದು historical prospect ಅನ್ನು ಹೇಳಿಕೊಂಡು ಬಂದಿದ್ದಾರೆ. ಅದರಲ್ಲಿ ನಮ್ಮದ್ಯಾರದ್ದೂ ಅಭ್ಯಂತರ ಇಲ್ಲ. ನಾನು ತಮ್ಮ ಮೂಲಕ ವಿನಂತಿಸುವುದೇನೆಂದರೆ, ನಾವು ಅತ್ಯಂತ ಸಂಕೀರ್ಣ ಮತ್ತು ಸಂದಿಗ್ಧವಾದ ಕಾಲಘಟ್ಟದಲ್ಲಿ ಬಂದು ನಿಂತುಕೊಂಡಿದ್ದು, ಇವತ್ತು ಸರ್ಕಾರ ಏನು ಮಾಡಬೇಕು ಎಂದು ಹೇಳಿದರೆ ತುಂಬಾ ಚೆನ್ನಾಗಿರುತ್ತದೆ. ಇದನ್ನು ಹೇಳಬೇಕು. ಇಷ್ಟೆಲ್ಲಾ ಕಾನೂನು ತಿಳಿದುಕೊಂಡು, historically ಯಾರೆಲ್ಲಾ ಏನು ತಪ್ಪು ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿಕೊಂಡು ಬಂದಿರುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇವತ್ತು ಏನು ಮಾಡಬೇಕು ಎಂದು ಸೂಕ್ಷ್ಮವಾಗಿ ಹೇಳಿದರೆ ನಮ್ಮೆಲ್ಲರಿಗೂ ಸ್ವಲ್ಪ ಬೆಳಕು ತೋರಿಸಿದಂತೆ ಆಗುತ್ತದೆ. ಆದ್ದರಿಂದ ಎಲ್ಲರ ಪರವಾಗಿ ವಿನಂತಿ ಮಾಡುತ್ತೇನೆ. Historical prospective ಆದ ತಪ್ಪುಗಳ ಹಿನ್ನೆಲೆಯಲ್ಲಿ ಅದರ ಆಧಾರದಲ್ಲಿ ಇನ್ನು ಮುಂದೆ ಸರ್ಕಾರ ಏನು ಮಾಡಬೇಕು ಎಂದು ಇವತ್ತು ಹೇಳಿದರೆ ಅನುಕೂಲವಾಗುತ್ತದೆ. ಅವರು ಸೂಕ್ಷ್ಮವಾಗಿ ಇಷ್ಟು ಒಳ್ಳೆಯ ವಕೀಲರನ್ನು ಇಟ್ಟುಕೊಂಡು ಯಾರ್ಯಾರಿಗೋ ಕೇಸ್ ಕೊಟ್ಟುಬಿಟ್ಟರು ಎಂದು ಹೇಳಿದರು. ಅವರನ್ನೇ ಮಾಡಿದರೆ ಸಮಸ್ಯೆ ಬರುತ್ತಿರಲಿಲ್ಲ ಎಂದು ನನಗೆ ಅನಿಸುತ್ತಿದೆ.

**ಶ್ರೀ ಎಸ್. ರವಿ:–** ನಾನು ಆ ಬೇಸಿನ್‌ನಿಂದ ಬಂದಿದ್ದು, ಮಾನ್ಯ ಸದಸ್ಯರು ವಿಷಯದ ಬಗ್ಗೆ ಚೆನ್ನಾಗಿ ಮಾತನಾಡುತ್ತಿದ್ದಾರೆ, ಅವರು ಮಾತನಾಡುತ್ತಿರುವುದರಲ್ಲಿ ಸಾಕಷ್ಟು ಅನುಕೂಲವಾದ ವಿಚಾರಗಳು ಇವೆ. ಅವರು ಮಾತನಾಡಲಿ. ಅದರಲ್ಲಿ ವಿಚಾರ ಇದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಅವರು ಸರಿಯಾಗಿಯೇ ಮಾತನಾಡುತ್ತಿದ್ದಾರೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಬಹುಶ: ಇದೊಂದು ಕಡೆಯಾದರೆ ನಮ್ಮ ವಕೀಲರು ಯಾರಿದ್ದಾರೆ, ನಾರಿಮನ್ ರವರ ವಯಸ್ಸು ಮತ್ತು ವಿದ್ವತ್‌ಗೆ ನನ್ನ ಗೌರವ ಇದೆ. ನಮ್ಮ ರಾಜ್ಯದ ತಂಡದಲ್ಲಿ 21 ಜನರಿದ್ದು, ರೂ.76 ಕೋಟಿಗಳನ್ನು ಡ್ರಾ ಮಾಡಿದ್ದಾರೆ. ಇದನ್ನು ಇದೊಂದೇ ವರ್ಷದಿಂದ ಡ್ರಾ ಮಾಡಿಲ್ಲ. ನಾರಿಮನ್ ಸುಮಾರು 32 ವರ್ಷಗಳಿಂದ ವಕೀಲರಾಗಿದ್ದು, ಮಾನ್ಯ ಈಶ್ವರಪ್ಪನವರು ನೀರಾವರಿ ಮಂತ್ರಿಗಳಾಗಿದ್ದಾಗಲೂ ಅವರೇ ವಕೀಲರಾಗಿದ್ದರು. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗಲೂ ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ, ನಮ್ಮ ಕೋಳಿ ಕೂಗಿದರೆ ಮಾತ್ರ ಬೆಳಕು ಹರಿಯುತ್ತದೆ ಎನ್ನುವ ಪ್ರವೃತ್ತಿ ಬೇಡ. There are many competent lawyers who can argue. ನಾನು ಅತ್ಯಂತ ನೋವಿನಿಂದ ಹೇಳುವುದೇನೆಂದರೆ, ಈ ತಂಡದಲ್ಲಿ ಇರುವವರು ಎಷ್ಟು ಜನ evidence ನಡೆಸಿದ್ದಾರೆ? Other than water disputes other cases ಎಷ್ಟೆಷ್ಟು ಇವೆ ಎಂದು ಈ ಲಾಯರ್‌ಗಳಲ್ಲಿ ಕೆಲವರು ಹೇಳುತ್ತಾರೆಯೇ? ಅದು ಹೈಕೋರ್ಟ್ ಇರಲಿ, ಮುನಿಫ್ಸ್ ಕೋರ್ಟ್ ಇರಲಿ, ಸುಪ್ರೀಂಕೋರ್ಟ್ ಇರಲಿ. ಎಷ್ಟು ಹಿಂದೂ ಲಾ ನಲ್ಲಿ ಇದೆ, ಎಷ್ಟು ಸರ್ವೀಸ್ ಮ್ಯಾಟರ್‌ನಲ್ಲಿ ಇದೆ, ಸಂವಿಧಾನದ ವಿಷಯದಲ್ಲಿ ಇದೆ, ಚುನಾವಣೆ ವಿಷಯದಲ್ಲಿ ಇದೆ, ಟ್ಯಾಕ್ಸ್ ವಿಷಯದಲ್ಲಿ ಇದೆ, ಕ್ರಿಮಿನಲ್ ಮತ್ತು ಮ್ಯಾಟ್ರಿಮೋನಿಯಲ್ ವಿಷಯಗಳಲ್ಲಿ ಎಷ್ಟೆಷ್ಟು ನಡೆಸಿದ್ದಾರೆ ಎಂದು ಯಾರಾದರೂ ಹೇಳುತ್ತಾರೆಯೇ? ಈ ದೇಶದಲ್ಲಿ ನಾಲ್ಕೈದು ಪರ್ಸೆಂಟ್ ವಕೀಲರನ್ನು ಬಿಟ್ಟು ಇಡೀ ಲೈಫ್‌ನಲ್ಲಿ ರೂ.1 ಕೋಟಿ ದುಡಿಯುವುದಕ್ಕೆ ವಕೀಲರಿಗೆ ಬಹಳ ಕಷ್ಟ ಇದೆ. ನಾನು ಪ್ರಜಾವಾಣಿ ಪತ್ರಿಕೆಯನ್ನು ನೋಡಿದಾಗ ಅದರಲ್ಲಿ ಒಬ್ಬರು ರೂ.24 ಕೋಟಿ, ಒಬ್ಬರು ರೂ.13 ಕೋಟಿ, ಒಬ್ಬರು ರೂ.12 ಕೋಟಿ

ಮತ್ತೊಬ್ಬರು ರೂ.4 ಕೋಟಿ ಪಡೆದಿರುವ ಬಗ್ಗೆ ವರದಿಯಾಗಿದ್ದು, ಇದಕ್ಕೆ accountability ಇಲ್ಲವೇ? ಅವರು ತೆಗೆದುಕೊಳ್ಳಲಿ. Ultimately, there is a slab as per the provision of CPC. As per the provisions of law ವಕೀಲರು ಏನೇನು ಮಾಡಬೇಕು ಎಷ್ಟು ತೆಗೆದುಕೊಳ್ಳಬೇಕು ಎಂದಿದ್ದರೂ, ಹೌದು, ಕೆಲವು ಸಂದರ್ಭಗಳಲ್ಲಿ Senior Counsels ಗಳು ಆದಾಯ ತೆರಿಗೆಯನ್ನು ಪಾವತಿಸುತ್ತಾರೆ ಮತ್ತು even without filing vakalat they can do it ಎಂದು ಇದೆ. ಅದು ಬೇರೆ ವಿಷಯ. ಮಾನ್ಯ ಸಭಾಪತಿಯವರೇ, ನನಗೆ ಇನ್ನೂ ಅರ್ಥವಾಗುತ್ತಿಲ್ಲ. ತಮಿಳುನಾಡಿನವರು ಒಂದೊಂದು ಐ.ಎ. ಗೆ ಒಬ್ಬೊಬ್ಬ ವಕೀಲರನ್ನು ಬದಲಾವಣೆ ಮಾಡುತ್ತಾರೆ. ತಮಿಳುನಾಡಿನವರು ಒಂದೊಂದು ಸಂದರ್ಭದಲ್ಲಿ ಒಬ್ಬೊಬ್ಬ ವಕೀಲರನ್ನು ಇಡುತ್ತಾರೆ. And majority of the lawyers who are appearing ಬಹಳಷ್ಟು ಜನ ತಮಿಳುನಾಡಿನ ವಕೀಲರು ಣಠಿಇಜಟಿ ಆಗಿಯೋ or free of service who are from ತಂಜಾವೂರು ಬೆಲ್ಟ್‌ನಿಂದ ಬಂದಿರುವವರು majority free DV ಮಾಡಿದ್ದಾರೆ. ಆದರೆ ಇದನ್ನು ಎಲ್ಲರೂ ಮಾಡಿ ಎಂದು ನಾನು ಹೇಳುವುದಿಲ್ಲ. ಏಕೆಂದರೆ ಇದು it is against ethics. ನಾರಿಮನ್‌ರವರ ವಿದ್ವತ್ ಮತ್ತು ವಯಸ್ಸಿಗೆ ನಾನು ಎರಡೂ ಕೈಎತ್ತಿ ನಮಸ್ಕಾರ ಮಾಡುತ್ತೇನೆ. ಆದರೆ ನಮ್ಮ Advocates Act ಪ್ರಕಾರ ethics ಇದೆ. You may be an officer for the Court. Ultimately, your client is the man who pays you. It is your first duty to safeguard the interest of your client. You have to argue the version of your client. ಅದನ್ನು ಬಿಟ್ಟರೆ ಅವರಿಗೆ ಶಹಭಾಸ್‌ಗಿರಿ ಸಿಗುತ್ತದೆ. ಇದೊಂದು ವಿಚಾರ. ನನಗೆ ಈಗಲೂ ಒಬ್ಬ ವಕೀಲನಾಗಿ ಅರ್ಥಮಾಡಿಕೊಳ್ಳುವುದಕ್ಕೆ ಆಗಿಲ್ಲ. Any correspondence between client and the lawyer, it is a confidential issue. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಇಂತಹ ವಿಚಾರವನ್ನು ಕೋರ್ಟ್‌ನ ಗಮನಕ್ಕೆ ತನ್ನಿ ಎಂದು ಹೇಳಿದ್ದಾರೆ, ಅದನ್ನು ಗಮನಕ್ಕೆ ತರಬೇಕು. ಆದರೆ letter place ಮಾಡುವುದೇ? ಅದರ ಜೊತೆಗೆ ನಾನು ಸತ್ಯ ಹರಿಶ್ಚಂದ್ರನ ವಂಶಸ್ಥ ಎಂದು ತೋರಿಸಿಕೊಳ್ಳುವುದಕ್ಕೆ ಇವರು ಬರೆದಿರುವ ಪತ್ರವನ್ನು ಕೋರ್ಟ್ ಮುಂದೆ ಪ್ಲೇಸ್ ಮಾಡುತ್ತಾರೆ ಎಂದಾಗ ಅದಕ್ಕೆ ನಾನು ಏನು ಹೇಳಬೇಕು? ನಾನು ಇಲ್ಲಿ ಸದಸ್ಯ ಅಥವಾ ರಾಜಕೀಯ ಪಕ್ಷಕ್ಕೆ ಸೇರಿದ್ದೇನೆ ಎನ್ನುವುದಕ್ಕಿಂತ ಒಬ್ಬ ವಕೀಲನಾಗಿ ಹೇಳುತ್ತಿದ್ದೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹಳ ಪ್ರಸಿದ್ಧವಾದ ವಕೀಲನಿದ್ದು, ಅವನ ಮಗ ಸಹ ಒಳ್ಳೆಯ ವಕೀಲನಾಗುತ್ತಾನೆ. ವಕೀಲ ಆದ ನಂತರ ಅಪ್ಪನ ನಡೆಸುತ್ತಿದ್ದ ಒಂದು ಕೇಸ್‌ನಲ್ಲಿ ಮೊದಲನೆಯ ದಿವಸವೇ ಕೇಸ್ ಗೆದ್ದುಕೊಂಡು ಬರುತ್ತಾನೆ. ಆಗ ಅವರ ಅಪ್ಪ ಮಗನಿಗೆ ' ದಡ್ಡ ಕಣೋ, ನೀನು!' ಎಂದು ಹೇಳುತ್ತಾನೆ. ಅಪ್ಪ ಮಗನನ್ನು ಕುರಿತು ' ಈ ಕೇಸ್‌ನಿಂದಲೇ ನಿನ್ನನ್ನು ಓದಿಸಿದ್ದು, ಈ ಮನೆ ಕಟ್ಟಿದ್ದು ಕೇಸ್‌ನ ಹಣದಿಂದಲೇ, ಈ ಕೇಸ್ ಅನ್ನು drag on ಮಾಡುವುದು ಬಿಟ್ಟು ಏಕೆ ಗೆದ್ದುಕೊಂಡು ಬಂದೇ?' ಎಂದು ಕೇಳುತ್ತಾನೆ. ಆ ರೀತಿ ಕತೆ ಇದಾಗಿದೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನನ್ನ ಸ್ನೇಹಿತರು ಬಹಳ ಚೆನ್ನಾಗಿ ಹೇಳಿದರು. ಅಟಾರ್ನಿ ಜನರಲ್ ಇವತ್ತು ಅಫಿಡೇವಿಟ್ ಹಾಕಿರುವುದನ್ನು ನಾನು ಮೆಚ್ಚುತ್ತೇನೆ. ಸುಪ್ರೀಂಕೋರ್ಟ್‌ನ ಅಟಾರ್ನಿ ಜನರಲ್ ಅಫಿಡೇವಿಟ್ ಹಾಕಲಿ, ಹಾಕದಿರಲಿ, ಬೋರ್ಡ್ ರಚನೆ ಮಾಡುವುದಕ್ಕೆ ಆಗುತ್ತಿರಲಿಲ್ಲ. Because the provisions of section 6(A) sub clause (7) of the Interstate Water Dispute Act makes it very clear that there shall be Legislation by the Parliament. Will it possible to make a law within three days to time. ಸದನದಲ್ಲಿ ಬಳ್ಳಾರಿಯ ನಾಯಕರು ಹಾಜರಿದ್ದಾರೆ. 1953ರಲ್ಲಿ ತುಂಗಾಭದ್ರಾ ಅಣೆಕಟ್ಟನ್ನು

ಕಟ್ಟಲು ಬೋರ್ಡ್ ಮಾಡುವಾಗ an act was enacted. Thungabhadra Regulation Act of 1953 was passed by the Parliament.

**ಶ್ರೀ ವಿ.ಎಸ್.ಉಗ್ರಪ್ಪ (ಮುಂದು) :-** ಈ ಕಾಯ್ದೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಪಾಸಾಗಬೇಕು. ಅದರ ನಂತರ constitute ಮಾಡಬೇಕು. ಈ ಬೋರ್ಡ್‌ನಲ್ಲಿ ಪಾಸು ಮಾಡುವವರು ಯಾರ್‍ಯಾರು ಇರುತ್ತಾರೆಂದರೆ ಒಂಭತ್ತು ಜನ ಮತ್ತು ಅದರಲ್ಲಿ ಒಬ್ಬ ಕಾರ್ಯದರ್ಶಿ ಇರುತ್ತಾರೆ. 9 ಜನರ ಪೈಕಿ ಐದು ಜನ ಕೇಂದ್ರ ಸರ್ಕಾರದ ಪ್ರತಿನಿಧಿಗಳು ಇರುತ್ತಾರೆ. The permanent Chairman and two permanent members are appointed by the Central Government plus two members will be on part time and one representative from each state. ಅಂದರೆ ನಾಲ್ಕು ರಾಜ್ಯಗಳಿಂದ ನಾಲ್ಕು ಜನ ಇರುತ್ತಾರೆ. ಹೀಗೆ ಒಟ್ಟು ಈ ಒಂಬತ್ತು ಜನ ಇರುತ್ತಾರೆ. ಈ ಒಂಬತ್ತು ಜನರ ಜೊತೆ the board has to nominate a secretary. Totally there will be 10 members. ಆ ಹತ್ತರಲ್ಲಿ majority ಏನು ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ ಅದು ನಿರ್ಧಾರವಾಗುತ್ತದೆ. ಆದರೆ, ಇವರಿಗೂ ಸಹ ground reality ಯನ್ನು ಮಾಡಲು ಈ ಬೋರ್ಡ್‌ಗೂ ಬರುವುದಿಲ್ಲ, ಇದನ್ನು ನಾನು ಹೇಳುತ್ತಿಲ್ಲ ಈ ಅವಾರ್ಡ್‌ನಲ್ಲಿ ಹೇಳಲಾಗಿದೆ. This board again has to constitute a regulatory committee. The Principal Secretary of Water Resources Department will be the chairman of this committee. ಕೇಂದ್ರ ಸರ್ಕಾರದ ಬೇರೆ-ಬೇರೆ ಇಲಾಖೆಯವರು ಇರುತ್ತಾರೆ, ಅದರಲ್ಲಿ ನಮ್ಮ ರಾಜ್ಯದವರು ಒಬ್ಬರು ಇರುತ್ತಾರೆ. ಹೀಗೆ ಅದರಲ್ಲಿಯೂ ಒಂಬತ್ತು ಜನ ಇರುತ್ತಾರೆ.

**ಸಭಾಪತಿಯವರು:-** ಅದನ್ನು ಈಗ ಮಾಡಲು ಬರುವುದೇ ಇಲ್ಲವೆಂದು ಹೇಳಿದ ಮೇಲೆ ಈಗ ಅದರ ಬಗ್ಗೆ ಚರ್ಚೆ ಬೇಡ. ಬೇರೆ ವಿಚಾರ ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಗಳೆ, ಹೌದು. ಈ ಕಾನೂನನ್ನು ಮಾಡುವಂತಹ ಸಂದರ್ಭದಲ್ಲಿ ನಾನೇ ಅಟಾರ್ನಿ ಜನರಲ್ ಆಗಿರಬಹುದು, ತಾವೇ ಅಟಾರ್ನಿ ಜನರಲ್ ಆಗಿರಬಹುದು ಅಥವಾ ಮಾನ್ಯ ಈಶ್ವರಪ್ಪನವರೇ ಅಟಾರ್ನಿ ಜನರಲ್ ಆಗಿರಬಹುದು, ಮಾನ್ಯ ವಿ.ಸೋಮಣ್ಣನವರು ಆಗಿದ್ದರೂ ಕೂಡ ಆ affidavit ಅನ್ನು ಹಾಕಬೇಕಾಗುತ್ತದೆ. ಸುಪ್ರೀಂ ಕೋರ್ಟ್ ತೀರ್ಪಿನ 8ನೇ ಪುಟದಲ್ಲಿ ಏನು ಹೇಳುತ್ತಾರೆ ಎಂದರೆ,

> *"Mr. Rohatgi, learned Attorney General for India, on being asked with regard to the constitution of the "Cauvery Management Board" in respect of which directions were issued on 20th September, 2016, has responded that the Board can be constituted on or before 4th October, 2016."*

It was his admission. ಯಾಕೆ ಆಟಾರ್ನಿ ಜನರಲ್‌ಗೆ ಆವಾರ್ಡ್ ಗೊತ್ತಿರಲಿಲ್ಲ ಅಥವಾ Interstate Water dispute Act section 6A Sub Clause (7) ಗೊತ್ತಿರಲ್ಲಿಲ್ಲವೇ? ಅಥವಾ tribunal ನ award ಬಗ್ಗೆ ಗೊತ್ತಿರಲಿಲ್ಲ? ಈಗ ಶಹಭಾಷ್‌ಗಿರಿ ಹೇಳುವುದು ಅದು ಬೇರೆ ವಿಚಾರ. ಆದರೆ ಈ basic information ಇಲ್ಲದೇ

ಇರುವಂತಹವರು ಆಟಾರ್ನಿ ಜನರಲ್ ಆದರೆ ನಮ್ಮ ದೇಶದ ಗತಿ ಏನಾಗಬಹುದು? "ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ" ಅನ್ನುವಂತಹ ಪ್ರವೃತ್ತಿ ಆಟಾರ್ನಿ ಜನರಲ್‌ರವರಿಗಾಗಲೀ ಅಥವಾ ಮತ್ತೊಬ್ಬರಿಗಾಗಲೀ ಆಗುವುದು ಬೇಡ. ನಾನು ಇಷ್ಟೇ ಹೇಳುತ್ತೇನೆ. ಇದರಲ್ಲಿ ರಾಜಕಾರಣ ಬೆರೆಸುವುದಕ್ಕೆ ಹೋಗುವುದಿಲ್ಲ. ಇವತ್ತು ನಾವೆಲ್ಲರೂ ಸಹ ಇವತ್ತು ರಾಜ್ಯದ ಭಾಷೆ, ನೆಲ, ಜಲ ಮತ್ತು ಸಂಸ್ಕೃತಿ ವಿಚಾರ ಬಂದಾಗ ನಾವೆಲ್ಲರೂ ಒಟ್ಟಿಗೆ ಸೇರಿ ಹೋರಾಟ ಮಾಡಬೇಕು. ಆ ಒಂದು ಹೋರಾಟ ಮಾಡುವ ದಿಕ್ಕಿನಲ್ಲಿ ಪ್ರಯತ್ನಗಳು ನಡೆಯುತ್ತಿದೆ. ಈ ಸಂದರ್ಭದಲ್ಲಿ ಏನು resolution ಅನ್ನು ಸದನದ ಮುಂದೆ ತಂದಿದ್ದಾರೆ. ಅದು ಅತ್ಯಂತ ಸಮಯೋಚಿತವಾಗಿದೆ. ಆ ಹಿನ್ನೆಲೆಯಲ್ಲಿ ನಾನು ನಿಮ್ಮ ಮೂಲಕ ರಾಜ್ಯ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಮೊದಲನೆಯದಾಗಿ Article 137 of the Constitution ಪ್ರಕಾರ review petition ಹಾಕಬೇಕು. Review petition ಅನ್ನು ಈಗ ಹಾಕಿದ್ದಾರೆ ಮತ್ತೆ ಬರುತ್ತದೆ ಎಂದು ಹೇಳಿದ್ದಾರೆ. ಎರಡನೆಯದು ಅವರು ಏನಾದರೂ ಅದನ್ನು ಒಪ್ಪಿಕೊಳ್ಳಲಿಲ್ಲ ಅಂದರೆ under Article 32 of the Constitution curative petition ಅನ್ನು ಹಾಕಬೇಕಾಗುತ್ತದೆ. ಮೂರನೆಯದು ಯಾವುದಾದರೂ Public Interest Litigation (PIL) ಅಥವಾ ಇನ್ನೊಂದರಲ್ಲಿ ಹಾಕಬೇಕು. ಯಾಕೆಂದರೆ ಕುಡಿಯುವ ನೀರು ಅವಶ್ಯಕವಾಗಿದೆ. It is a fundamental right. Under Article 136 of the Constitution SLP (Special Leave Petition) ಹಾಕಲಿಕ್ಕೆ ಎಲ್ಲರಿಗೂ ಅವಕಾಶವಿದೆ. ನಾಲ್ಕನೆಯದು ಸಂವಿಧಾನದ ಅನುಚ್ಛೇದದ 143 ಕೆಳಗಡೆ ನಮ್ಮ ರಾಜ್ಯದ 225 ಜನ ಎಂಎಲ್‌ಎ, 75 ಜನ ಎಂಎಲ್‌ಸಿಯವರು ಮತ್ತು 28 ಜನ ಲೋಕಸಭಾ ಎಂಪಿಗಳು, 12 ಜನ ರಾಜ್ಯಸಭಾ ಎಂಪಿ ಗಳು ಈ 340 ಜನ ಪ್ರತಿನಿಧಿಗಳು ಸೇರಿ ರಾಷ್ಟ್ರಪತಿಗಳ ಹತ್ತಿರ ಹೋಗಿ ಪರೇಡ್ ಮಾಡಬೇಕು. ಅವರು Article 143 of the Constitution ಪ್ರಕಾರ ಸುಪ್ರೀಂ ಕೋರ್ಟ್‌ನ್ನು ಕೇಳಬೇಕು. 1) Whether Supreme Court has got power to entertain Interstate Water Dispute Act contrary to Article 262 and section 11 of the Interstate Water Dispute Act. 2) Whether the Supreme Court has got power to grant a prayer where there is no prayer, where there is no application. 3) Whether the Supreme Court has got power to direct the concerned state to release the water. ಈ issues ಮೇಲೆ ನಾವು ರಾಷ್ಟ್ರಪತಿಯವರನ್ನು approach ಮಾಡಿ ಅವರು ಸುಪ್ರೀಂ ಕೋರ್ಟ್‌ನ ಅಭಿಪ್ರಾಯವನ್ನು ಕೇಳಲು ಮುಂದಾಗಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ಇದರ ಜೊತೆಗೆ ನಮ್ಮಲ್ಲಿ ಅನೇಕ ಜನ ವಕೀಲರು ಇರುತ್ತಾರೆ ಹೋಗುತ್ತಾರೆ. ನಾನು ಅನೇಕ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ ಇವರಿಗೆ ಅಷ್ಟೇ ಅಲ್ಲ, ಹಿಂದಿನವರಿಗೂ ಸಹ ಹೇಳಿದ್ದೇನೆ. ಬಹುಶ: ನನಗೆ ಅನಿಸುತ್ತದೆ ನಮ್ಮ ರಾಜ್ಯದಲ್ಲಿ ಅನೇಕ ಜನ competent lawyers and retired judges ಇದ್ದಾರೆ. ಬಹುಶಃ ಕಾಲಹರಣ ವ್ಯಯ ಮಾಡದೇ ಒಂದು ನಾಲ್ಕೈದು ಜನ ಯಾರೂ Supreme Court or High Court's competent retired judges ಯಾರಿದ್ದಾರೆ, upcoming lawyers ಯಾರು ಇದ್ದಾರೆ. ಇವರ ನಾಲ್ಕು ಐದು ಜನರ ಒಂದು ಟೀಮ್‌ನ್ನು ಮಾಡಿ they should study the implications of water disputes as well as border issues. ಇದಕ್ಕೆ ವಿಶೇಷವಾದಂತಹ ಒಂದು ಸೆಲ್‌ನ್ನು ಮಾಡುವುದಕ್ಕೆ ಸರ್ಕಾರ ಕ್ರಮ ಜರುಗಿಸಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇದಾದ ಮೇಲೆ ಮೇಕೆದಾಟು ಪ್ರಾಜೆಕ್ಟ್

ಮಾಡುವ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತೇನೆ ಮತ್ತು ಕೊನೆಯದಾಗಿ, ಇದು ನಮ್ಮ ಕರ್ನಾಟಕ ವಿಧಾನಸಭೆ ಗುರುವಾರ 28 ನೇ ಡಿಸೆಂಬರ್ 1995ರ proceedings. ಆ relevant portion ಮಾತ್ರ ಹೇಳುತ್ತೇನೆ. ಇದು ಒಂದು ದೊಡ್ಡ resolution. *"ಅಂತರ್‌ರಾಜ್ಯದ ಜಲ ವಿವಾದದಂತಹ ಸೂಕ್ಷ್ಮ, ಗಂಭೀರ ಹಾಗೂ ವ್ಯಾಪಕ ಪರಿಣಾಮಗಳನ್ನು ಉಂಟು ಮಾಡುವ ವಿವಾದಗಳನ್ನು ಸಂಬಂಧಿಸಿದ ರಾಜ್ಯದ ಮುಖ್ಯಮಂತ್ರಿಗಳು ಕಲೆತು ಚರ್ಚಿಸಿ, ಸೌಹಾರ್ದಯುತವಾದ, ಸರ್ವ ಸಮ್ಮತವಾದ ನಿರ್ಣಯಕ್ಕೆ ಬರುವುದು. ಕಾರ್ಯ ಸಾಧುವು ಹಾಗೂ ಅಪೇಕ್ಷಣೆವಾದುದು ಎಂದು ಭಾವಿಸಿ, ಈ ವಿವೇಕಯುತವಾದ ನೀತಿಯನ್ನು ಇಲ್ಲಿಯವರೆಗೆ ಅನುಸರಿಸಿಕೊಂಡು ಬಂದಿರುವುದು ಇತ್ತೀಚಿನ ಇತಿಹಾಸ."* ಯಾಕೆಂದರೆ ನಮ್ಮ ದೇಶದ ಇತಿಹಾಸದಲ್ಲಿ ಐದು ಸಾರಿ ಪ್ರಧಾನ ಮಂತ್ರಿಗಳಾಗಿದ್ದಂತಹ ಶ್ರೀಮತಿ ಇಂದಿರಾಗಾಂಧಿಯವರು intervene ಆಗಿದ್ದಾರೆ. ಶ್ರೀ ರಾಜೀವ್‌ಗಾಂಧಿಯವರು intervene ಆಗಿದ್ದಾರೆ. ಅದೇ ರೀತಿ ಶ್ರೀ ನರಸಿಂಹರಾವ್ ಹಾಗೂ ಅಟಾಲ್ ಬಿಹಾರಿ ವಾಜಪೇಯಿಯವರು intervene ಆಗಿದ್ದಾರೆ. 2013 ರಲ್ಲಿ ಡಾ. ಮನ್‌ಮೋಹನ್ ಸಿಂಗ್‌ರವರು intervene ಆಗಿದ್ದಾರೆ. ಇಂತಹ ಭಾವನಾತ್ಮಕ ಹಾಗೂ ಜಟಿಲ ಸಮಸ್ಯೆಗಳನ್ನು ನ್ಯಾಯಲಯದ ವ್ಯಾಪ್ತಿಯ ಹೊರಗೆ ಬಗೆಹರಿಸುವುದು ಒಳ್ಳೆಯದು ಇದು ಹೇಳುತ್ತಾ concluding portion ನಲ್ಲಿ *"ರಾಜ್ಯ ರಾಜ್ಯಗಳ ನಡುವಿನ ಇಂತಹ ಗಂಭೀರವಾದ ವಿವಾದಗಳನ್ನು ಸರ್ವ ಸಮ್ಮತವಾಗಿ ಬಗೆಹರಿಸಲು ಪ್ರಧಾನ ಮಂತ್ರಿಗಳು ಸಂಬಂಧಿಸಿದ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು ಚರ್ಚಿಸಿ, ನ್ಯಾಯ ಸಮ್ಮತವಾದ ಹಾಗೂ ಸರ್ವ ಸಮ್ಮತವಾದ ತೀರ್ಮಾನವನ್ನು ತೆಗೆದುಕೊಳ್ಳುವುದು ಹೆಚ್ಚು ಸಮಂಜಸವು, ಕಾರ್ಯ ಸಾಧುವು ಎಂದು ಈ ಸಭೆಯೂ ಕೇಂದ್ರ ಸರ್ಕಾರವನ್ನು ಈ ನಿರ್ಣಯದ ಮೂಲಕ ಸರ್ವಾನುಮತದಿಂದ ಒತ್ತಾಯಿಸುತ್ತದೆ."* ಸನ್ಮಾನ್ಯ ಬಿ. ಎಸ್. ಯಡಿಯೂರಪ್ಪನವರು ಅವರು 1995 ರಲ್ಲಿ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿದ್ದಾಗ ಈ ನಿರ್ಣಯವನ್ನು ಮಂಡನೆ ಮಾಡಿದ್ದಾರೆ. ಇದೇ ರೀತಿಯ ನಿರ್ಣಯಗಳು ನಮ್ಮ ಸದನದಲ್ಲಿ, ಕೆಳಮನೆಯಲ್ಲಿಯೂ ಆಗಿದ್ದಾವೆ. ನಾನು ನಿಮ್ಮ ಮೂಲಕ ಕೈಮುಗಿದು ಬೇಡಿಕೊಳ್ಳಲು ಬಯಸುತ್ತೇನೆ. ಈ ದೇಶದ ಪ್ರಧಾನ ಮಂತ್ರಿಗಳು ಪಾಕಿಸ್ತಾನದವರಿಗೆ ಬುದ್ಧಿ ಕಲಿಸುವುದಕ್ಕೆ ಸಿಂಧೂ ನದಿ issue ವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಅತ್ಯಂತ ಸ್ವಾಗತಾರ್ಹವಾದುದು. ಆದರೆ ಈ ರಾಜ್ಯದ ಆರು ಕೋಟಿ ಕನ್ನಡಿಗರ ಸಮಸ್ಯೆ, ಅದು ಕಾವೇರಿ ನೀರಿನ ಸಮಸ್ಯೆ ಇರಬಹುದು. ಮಹದಾಯಿ ಸಮಸ್ಯೆ ಇರಬಹುದು. ಸನ್ಮಾನ್ಯ ಸಭಾಪತಿಯವರೇ, ಕಾವೇರಿ ನದಿ ನೀರಿನ ಹಂಚಿಕೆ ಸಮಸ್ಯೆ ಇರಬಹುದು, ಮಹದಾಯಿ ನದಿ ನೀರಿನ ಸಮಸ್ಯೆ ಇರಬಹುದು, ಆ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಆ ದಿನ ನಿರ್ಣಯವನ್ನು ಅಂಗೀಕರಿಸಿದ್ದಾರೆ. ಈ ದಿನ ಮಾನ್ಯ ಯಡಿಯೂರಪ್ಪನವರು ರಾಜ್ಯ ಭಾರತೀಯ ಜನತಾ ಪಕ್ಷದ ರಾಜ್ಯ ಅಧ್ಯಕ್ಷರಾಗಿದ್ದಾರೆ. ಅವರು ನಮ್ಮೆಲ್ಲರನ್ನು ಅವರ ನೇತೃತ್ವದಲ್ಲಿ ಕೇಂದ್ರಕ್ಕೆ ಕರೆದುಕೊಂಡು ಹೋಗಿ, ಮಾನ್ಯ ಪ್ರಧಾನ ಮಂತ್ರಿಗಳಿಗೆ 'ಈ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಹಿಂದಿನ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶ ಮಾಡಿದ್ದಾರೆ, ಅದೇ ರೀತಿಯಲ್ಲಿ ತಾವು ಸಹ ಮಧ್ಯ ಪ್ರವೇಶ ಮಾಡಿ ಈ ಸಮಸ್ಯೆಗೆ ಶಾಶ್ವತವಾದ ಪರಿಹಾರವನ್ನು ರೂಪಿಸುವುದಕ್ಕೆ, ಈ ವಿವಾದವನ್ನು ಸುಪ್ರೀಂ ಕೋರ್ಟಿನಿಂದ ಮತ್ತು ನ್ಯಾಯಾಧೀಕರಣದಿಂದ ಹೊರತಂದು ಇತ್ಯರ್ಥಪಡಿಸಬೇಕು' ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ನಾವೆಲ್ಲರೂ ಪಕ್ಷಾತೀತವಾಗಿ ಕೇಂದ್ರದ ಮೇಲೆ ಒತ್ತಡವನ್ನು ತರಬೇಕಾಗುತ್ತದೆ. ಈ ಜಟಿಲ ಸಮಸ್ಯೆಗೆ ಮಾನ್ಯ ಪ್ರಧಾನ ಮಂತ್ರಿಗಳು ಮಾತ್ರ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯ. ಅವರು ಆ ಕೆಲಸವನ್ನು ಮಾಡಬೇಕೆಂದು ನಮ್ಮ ರಾಜ್ಯದ ಜನತೆಯ ಪರವಾಗಿ ಒತ್ತಾಯವನ್ನು ಮಾಡುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಇಂತಹ ಕ್ಲಿಷ್ಟವಾಗಿರುವ ಸಂದರ್ಭ ಸುಮಾರು 10–20 ವರ್ಷಗಳಿಗೊಮ್ಮೆ ಬರುತ್ತಿರುತ್ತದೆ. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗಗಳ ಮಧ್ಯೆ ಇರುವಂತಹ ವಸ್ತುಸ್ಥಿತಿಯನ್ನು ಮತ್ತು ರಾಜ್ಯದ ಸೂಕ್ಷ್ಮ ವಿಚಾರಗಳನ್ನು ಯಾವ ರೀತಿಯಲ್ಲಿ ಕೈಗೆತ್ತಿಗೊಂಡರೆ ಸಫಲತೆಯನ್ನು ಕಾಣಬಹುದು ಎನ್ನುವುದಕ್ಕೆ ಕಾವೇರಿ ನದಿ ನೀರಿನ ಸಮಸ್ಯೆ ನಮ್ಮ ಮುಂದಿನ ಪೀಳಿಗೆಗೆ ಆಧಾರಸ್ತಂಭವಾಗಿದೆ. ಈ ರಾಜ್ಯದ ಜಟಿಲವಾದ ಅನೇಕ ಸಮಸ್ಯೆಗಳಲ್ಲಿ ಕಾವೇರಿ ನದಿ ನೀರಿನ ಹಂಚಿಕೆ ಸಮಸ್ಯೆಯೂ ಕೂಡ ಒಂದಾಗಿದೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಜನ ಬುದ್ಧಿಜೀವಿಗಳು ಬೆಳಕು ಚೆಲ್ಲಿದ್ದಾರೆ. ಈ ಸದನದಲ್ಲಿ ಮತ್ತು ಕೆಳಮನೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ದಿನ ಈ ಮನೆಯ ಸಭಾನಾಯಕರು ಒಂದು ನಿರ್ಣಯವನ್ನು ತಂದಿದ್ದಾರೆ. ಕೊನೆಯಲ್ಲಿ ಆ ನಿರ್ಣಯದ ಬಗ್ಗೆ ಕೆಲವೊಂದು ಸ್ಪಷ್ಟೀಕರಣವನ್ನು ಕೇಳುವಂತಹ ಪ್ರಯತ್ನವನ್ನು ಮಾಡುತ್ತೇನೆ. ಹೇಳಿದ್ದನ್ನೇ ಪದೇ ಪದೇ ಹೇಳುವುದು ಸಮಂಜಸವಾದುದ್ದಲ್ಲ. ಆದರೂ ಕೂಡ ರಾಜ್ಯದ ಮತ್ತು ನ್ಯಾಯಾಂಗದ ವ್ಯವಸ್ಥೆಯಲ್ಲಿ ಅನೇಕ ಸಂದರ್ಭಗಳಲ್ಲಿ ಎದುರಾಗುವ ಬಹುತೇಕ ಸಮಸ್ಯೆಗಳಿಗೆ ಸಾಮಾನ್ಯ ಜ್ಞಾನದಿಂದ ಪರಿಹಾರವನ್ನು ಕಂಡುಕೊಳ್ಳಬಹುದು. ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿಯೇಕೆ ಸಾಮಾನ್ಯ ಜ್ಞಾನದಿಂದ ಪರಿಹಾರವನ್ನು ಕಂಡುಕೊಳ್ಳಲಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ವಿರೋಧ ಪಕ್ಷದ ನಾಯಕರಾದ ಮಾನ್ಯ ಕೆ.ಎಸ್.ಈಶ್ವರಪ್ಪನವರು ಹಿರಿಯರಾಗಿರುವಂತಹ ಶ್ರೀ ರಾಮಚಂದ್ರಗೌಡರು ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಶ್ರೀ ವಿ.ಎಸ್.ಉಗ್ರಪ್ಪನವರು ಮತ್ತು ಮಾನ್ಯ ಎಂ.ಎ.ಗೋಪಾಲ್ ಸ್ವಾಮಿಯವರು ಈ ವಿಚಾರವಾಗಿ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಈ ಸಂದರ್ಭದಲ್ಲಿ ಸಂವಿಧಾನದ ಅನುಚ್ಛೇಧ 262ರ ಬಗ್ಗೆ ಅಥವಾ ಅನುಚ್ಛೇಧ 211ರ ಬಗ್ಗೆ ಚರ್ಚೆ ಮಾಡುವುದು ಅಪ್ರಸ್ತುತವಾಗಿದೆ. ಸಾಮಾನ್ಯ ಜನರ ಒಡನಾಡಿಯಾಗಿರುವ ಕಾವೇರಿಯ ವಿಚಾರವಾಗಿ ಈ ಒಕ್ಕೂಟದ ವ್ಯವಸ್ಥೆಯಲ್ಲಿ ಒಬ್ಬರ ಮೇಲೆ ಒಬ್ಬರನ್ನು ಎತ್ತಿ ಕಟ್ಟುವಂತಾಗಬಾರದು. ನಾವೆಲ್ಲರೂ ಅಖಂಡ ಭಾರತದ ಭವ್ಯ ಪ್ರಜೆಗಳಾಗಿದ್ದೇವೆ. ಕರ್ನಾಟಕ ಮತ್ತು ತಮಿಳುನಾಡಿನ ರಾಜ್ಯಗಳ ಮಧ್ಯೆ ಉದ್ಭವವಾಗಿರುವ ಈ ಜಟಿಲವಾಗಿರುವ ಸಮಸ್ಯೆ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಸಂವಿಧಾನದಲ್ಲಿ ಉಲ್ಲೇಖವಾಗಿರುವ ಕಾನೂನುಗಳನ್ನು ಜಾರಿಗೆ ತರುವ ನಿಟ್ಟಿನಲ್ಲಿ ಅವುಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ ಈ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತಿರಲಿಲ್ಲ.

ರಾಷ್ಟ್ರದ ಪ್ರಧಾನಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಹವಾಮಾನ ವೈಪರೀತ್ಯದ ಸಮಸ್ಯೆಯನ್ನು ಮನಗಂಡು ಇಡೀ ಭವ್ಯ ಭಾರತದ ಭವಿಷ್ಯವನ್ನು ಮನಗಂಡು ಪ್ಯಾರಿಸ್ ಒಪ್ಪಂದಕ್ಕೆ ಈ ದಿನ ಸಹಿ ಹಾಕಿದ್ದಾರೆ. ಹವಾಮಾನ ವೈಪರೀತ್ಯದಲ್ಲಿ ಯಾವ ಅಂಶಗಳನ್ನು ಸೇರಿಸಬೇಕೆನ್ನುವ ನಿಟ್ಟಿನಲ್ಲಿ ಆಲೋಚನೆಗಳು ನಡೆಯುತ್ತಿರುವಾಗ ಜಲನೀತಿಯನ್ನು ಸಹ ಅದರಲ್ಲಿ ಸೇರಿಸಿರುವುದು ಸ್ವಾಗತಾರ್ಹವಾಗಿದೆ. ಈ ಎಲ್ಲ ಸಮಸ್ಯೆಗಳ ಜೊತೆಯಲ್ಲಿ ಭಾರತೀಯರು ಭಾರತೀಯರಾಗಿ ಇರಬೇಕೇ? ಭಾರತೀಯರಲ್ಲಿ ಕೂಡ ಒಕ್ಕೂಟದ ವ್ಯವಸ್ಥೆಯನ್ನು ಹದಗೆಡಿಸುವ ಕೆಲಸಕ್ಕೆ ದೊಡ್ಡ ದೊಡ್ಡ ಕಾನೂನು ತಜ್ಞರು ಮೇಧಾವಿಗಳು ಸಾಮಾನ್ಯವಾದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಲ್ಲಿ ವಿಫಲರಾಗಿದ್ದಾರೆ. ಕಾವೇರಿ ನದಿ ಎಲ್ಲಿ ಹುಟ್ಟುತ್ತದೆ ಎಲ್ಲಿಂದ ಎಲ್ಲಿಗೆ ಹರಿಯುತ್ತದೆ, ಯಾವಯಾವ ರೀತಿಯಲ್ಲಿ ಒಡಂಬಡಿಕೆಯಾಗಿದೆ, ಬ್ರಿಟೀಷರ ಕಾಲದಲ್ಲಿ ಏನಾಗಿತ್ತು ಮತ್ತು ತದನಂತರದ ದಿನಗಳಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ಗಮನಹರಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಮೈಸೂರಿನಲ್ಲಿ ದಸರಾ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ 'ನಮ್ಮ ದುಡ್ಡು, ನಮ್ಮ ಶ್ರಮ, ನಮ್ಮದೇ ಜಾಗ, ಎಲ್ಲವೂ ನಮ್ಮದೇ ಆಗಿದ್ದರೂ ಸಹ ನಾವು ಇವತ್ತು ಅಪರಾಧಿಗಳ ಸ್ಥಾನದಲ್ಲಿ ನಿಂತಿದ್ದೇವೆ.' ಎನ್ನುವಂತಹ ಮಾತುಗಳನ್ನು ನೊಂದು ಹೇಳಿದ್ದಾರೆ. ನಮ್ಮ ಹಳ್ಳಿಗಳಲ್ಲಿ 'ಹರಿಯುವ ನೀರಿಗೆ ದೊಣ್ಣೆನಾಯಕನ

ಅಪ್ಪಣೆ ಬೇಕೇ?' ಎನ್ನುವ ಗಾದೆ ಮಾತಿದೆ. ಹರಿಯುವ ನೀರಿಗೆ ಮತ್ತು ಉಸಿರಾಡುವ ಗಾಳಿಗೆ ಯಾರದ್ದಾದರು ಅಪ್ಪಣೆಯನ್ನು ತೆಗೆದುಕೊಳ್ಳಬೇಕಾದರೆ, ಈ ರೀತಿ ಹೇಳುವುದು ಸಾಮಾನ್ಯವಾಗಿದೆ. ನಮ್ಮ ನದಿ ನೀರನ್ನು ನಾವು ಉಪಯೋಗಿಸಿಕೊಳ್ಳುವುದಕ್ಕೆ ಇನ್ನೊಬ್ಬರ ಮೇಲೆ ಅವಲಂಬಿತರಾಗಬೇಕು ಎನ್ನುವುದು ಎಷ್ಟರ ಮಟ್ಟಿಗೆ ಸರಿ? ಪ್ರಕೃತಿಯ ವ್ಯವಸ್ಥೆ ಯಾವ ರೀತಿಯಲ್ಲಿ ಬದಲಾವಣೆಯಾಗುತ್ತಿದೆ ಎನ್ನುವುದರ ಬಗ್ಗೆ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ಮುಂದಿನ ಪೀಳಿಗೆಗೆ ನಾವು ಯಾವ ಕೊಡುಗೆಯನ್ನು ನೀಡಬಹುದು ಎನ್ನುವುದರ ಬಗ್ಗೆಯೂ ಸಹ ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಒಂದೆರಡು ವಿಚಾರಗಳನ್ನು ಮಾತ್ರ ನಾನು ತಮ್ಮ ಮುಂದೆ ತರುವುದಕ್ಕೆ ಬಯಸುತ್ತಿದ್ದೇನೆ. ಕರ್ನಾಟಕ ಮತ್ತು ತಮಿಳುನಾಡಿನ ಮಧ್ಯೆ ಪುದುಚೇರಿ ಮತ್ತು ಕೇರಳ ರಾಜ್ಯಗಳಿವೆ. ಈ ಎರಡು ರಾಜ್ಯಗಳನ್ನು ಬಿಟ್ಟು ತಮಿಳುನಾಡಿನವರು ಕೇವಲ ಕರ್ನಾಟಕ ರಾಜ್ಯವನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು, ಅಣ್ಣ ತಮ್ಮಂದಿರ ರೀತಿಯಲ್ಲಿ ಬಾಳ್ವೆ ಮಾಡಬೇಕಾಗಿರುವ ನಮ್ಮಗಳ ಮಧ್ಯೆ ಯಾವ ಕಾರಣದಿಂದಾಗಿ ಈ ರೀತಿಯ ಅವ್ಯವಸ್ಥೆಯನ್ನುಂಟು ಮಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ದೇಶದ ಅಖಂಡತೆ ಮತ್ತು ಸಾರ್ವಭೌಮತೆಯಲ್ಲಿ ಮುಂದಿನ ಪೀಳಿಗೆಗೆ ಇದೊಂದು ದೊಡ್ಡ ಕೊಡಲಿ ಪೆಟ್ಟಾಗುವ ಸಂದರ್ಭ ಬಂದಿದೆ. ಇದನ್ನು ನಾವು ಬೇರು ಸಹಿತ ಕಿತ್ತೊಗೆಯಬೇಕಾಗಿದೆ. ಈ ರೀತಿ ಮಾಡಬೇಕಾದರೆ, ಈ ದೇಶದಲ್ಲಿ ಇರುವಂತಹ ಎರಡು ರಾಜ್ಯಗಳು ಸಹಮತವನ್ನು ವ್ಯಕ್ತಪಡಿಸಬೇಕಾಗಿದೆ. ಕಾನೂನಿನ ಚೌಕಟ್ಟಿನಲ್ಲಿ ಪ್ರತಿಯೊಂದು ವಿಚಾರಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಮಾನ್ಯ ಉಗ್ರಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಒಬ್ಬ ಬುದ್ಧಿಜೀವಿಯಾಗಿ, ಒಬ್ಬ ವಕೀಲನಾಗಿ ಈ ರಾಜ್ಯವನ್ನು ಪ್ರತಿನಿಧಿಸುವ ಸಂದರ್ಭದಲ್ಲಿ ತಾಂತ್ರಿಕವಾಗಿ ಇರುವಂತಹ ತೊಂದರೆಗಳು ಗೊತ್ತಿದ್ದರೂ ಸಹ ಕೆಲವರು ತಪ್ಪು ಮಾಡುತ್ತಾರೆ ಎನ್ನುವುದರ ಬಗ್ಗೆ ಮಾನ್ಯ ಉಗ್ರಪ್ಪನವರು ತಮ್ಮದೇ ಧಾಟಿಯಲ್ಲಿ ಕೆಲವು ವಿಚಾರಗಳನ್ನು ವಿಶ್ಲೇಷಣೆ ಮಾಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಾವುಗಳೇ ಈ ವಿಚಾರದ ಬಗ್ಗೆ ಈ ಸಮಸ್ಯೆಯ ಬಗ್ಗೆ ಇಷ್ಟೊಂದು ಅರ್ಥ ಮಾಡಿಕೊಳ್ಳಬೇಕಾದರೆ, ಈ ರಾಜ್ಯವನ್ನು ಪ್ರತಿನಿಧಿಸುತ್ತಿರುವ ವಕೀಲರು ಯಾರಿದ್ದಾರೆ ಅವರಿಗೆ ಬುದ್ಧಿ ಇರಲಿಲ್ಲವೇ? ಸುಮಾರು 20–21 ಜನ ವಕೀಲರ ತಂಡವನ್ನು ಇಟ್ಟುಕೊಂಡಿರುವವರಿಗೆ ಕರ್ನಾಟಕದ ಜನರಿಗೆ ಏನಾದರು ಒಳ್ಳೆಯದು ಮಾಡಬೇಕು, ರಾಜ್ಯದ ಹಿತವನ್ನು ಯಾವ ರೀತಿಯಲ್ಲಿ ಕಾಪಾಡಬೇಕು, ಈ ರಾಜ್ಯದ ಹಿತಕ್ಕೆ ಧಕ್ಕೆ ಬಂದಾಗ ಏನು ಮಾಡಬಹುದು ಎನ್ನುವುದರ ಬಗ್ಗೆ ಸಾಮಾನ್ಯ ಜ್ಞಾನದಿಂದ ಯೋಚನೆ ಮಾಡಿದ್ದರೆ ಇಂತಹ ಸಂದರ್ಭಗಳು ಬರುತ್ತಿರಲಿಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಈ ದೇಶದ ಸುಪ್ರೀಂ ಕೋರ್ಟಿನ ಒಂದು ಪೀಠದಲ್ಲಿ 25 ದಿನಗಳ ಅವಧಿಯಲ್ಲಿ ಸುಮಾರು 6 ಆದೇಶಗಳು ಹೊರಬಿದ್ದಿರುವುದು ನನ್ನ ಅನುಭವದಲ್ಲಿ ಮತ್ತು ಇತಿಹಾಸದಲ್ಲಿ ಕಂಡೇ ಇಲ್ಲವೆಂದು ಹೇಳಬೇಕಾಗುತ್ತದೆ. ನನಗೆ 66 ವರ್ಷ ವಯಸ್ಸಾಗಿದೆ ನನ್ನ ಅನುಭವದಲ್ಲಿ ಇಂತಹ ಪ್ರಸಂಗವನ್ನು ಎಂದು ಕೂಡ ನಾನು ನೋಡಿಲ್ಲ. ಹಿರಿಯರಾಗಿರುವ ಮಾನ್ಯ ಎಸ್.ಆರ್.ಪಾಟೀಲ್‌ರವರು ಇದರ ಬಗ್ಗೆ ಹೇಳಬೇಕಾಗುತ್ತದೆ. ಈ 6 ಆದೇಶಗಳಲ್ಲಿ ಒಂದೊಂದು ಒಂದೊಂದು ರೀತಿಯಾದ, ವಿಭಿನ್ನವಾಗಿರುವ ಆದೇಶಗಳನ್ನು ಹೊರಡಿಸಲಾಗಿದೆ. ಆ ಆದೇಶಗಳು ಯಾವ ರೀತಿಯಲ್ಲಿ ಇವೆಯೆಂದರೆ, ನಮ್ಮ ಹಳ್ಳಿಯ ಅರಳಿಕಟ್ಟೆಯಲ್ಲಿ ಕುಳಿತುಕೊಂಡು ಊರಿನ ಜನರು ಮಾಡುವ ನ್ಯಾಯ ಪಂಚಾಯಿತಿಯಲ್ಲಿ ಕೂಡ ಯಾವುದು ಯಾವ ರೀತಿ ಇದೆ ಎನ್ನುವುದನ್ನು ಆಲಿಸಿ ತದನಂತರ ತೀರ್ಪನ್ನು ನೀಡುವಂತಹ ಪದ್ಧತಿ ಇದೆ. ಆದರೆ, ನಮ್ಮ ಸುಪ್ರೀಂಕೋರ್ಟಿನ ಈ ಪೀಠ ಕರ್ನಾಟಕ ರಾಜ್ಯಕ್ಕೆ ಎನ್ನುವುದಕ್ಕಿಂತ ಹೆಚ್ಚಾಗಿ ಭವಿಷ್ಯದ ದಿನಗಳಲ್ಲಿ ಸುಪ್ರೀಂ ಕೋರ್ಟ್ ನೀಡುವ

ಅಂತಿಮ ತೀರ್ಮಾನ ಇದೇ ರೀತಿಯಲ್ಲಿ ಇದ್ದರೆ ಅದು ಎಷ್ಟು ಮಾರಕವಾಗುತ್ತದೆ ಎನ್ನುವ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ.

**ಶ್ರೀ ರಾಮಚಂದ್ರಗೌಡಃ–** ಸನ್ಮಾನ್ಯ ಸಭಾಪತಿಯವರೇ, ಹಳ್ಳಿಯ ಜಗಲಿಕಟ್ಟೆಯ ಮೇಲೆ ಆಗುವ ತೀರ್ಮಾನಗಳು ಮಾನವೀಯ ಆಧಾರದ ಮೇಲಾಗುತ್ತವೆ. ನ್ಯಾಯಾಲಯಗಳಲ್ಲಿ ನೀಡುವ ತೀರ್ಪುಗಳು ಕಾನೂನು, ಇಷ್ಟೇ ಇವೆರಡರ ನಡುವೆ ಇರುವ ವ್ಯತ್ಯಾಸ.

**ಶ್ರೀ ವಿ.ಸೋಮಣ್ಣ(ಮುಂದು):–** ಸನ್ಮಾನ್ಯ ಸಭಾಪತಿಯವರೇ, ಪೂರ್ವಗ್ರಹ ಪೀಡಿತ ಎಂದು ಹೇಳುವುದಕ್ಕಿಂತಲೂ ಗೌರವಾನ್ವಿತ ಸುಪ್ರೀಂ ಕೋರ್ಟ್‌ನವರು ಸೆಪ್ಟೆಂಬರ್ 5ನೇ ತಾರೀಖು, ಸೆಪ್ಟೆಂಬರ್ 12ನೇ ತಾರೀಖು, ಸೆಪ್ಟೆಂಬರ್ 20ನೇ ತಾರೀಖು, ಸೆಪ್ಟೆಂಬರ್ 27ನೇ ತಾರೀಖು, ಸೆಪ್ಟೆಂಬರ್ 30ನೇ ತಾರೀಖು ತದನಂತರ, ಅಕ್ಟೋಬರ್ 6ನೇ ತಾರೀಖು ಯಾವ ರೀತಿ ತೀರ್ಪು ಕೊಟ್ಟಿದ್ದಾರೆ? ಒಂದು ಸಾರಿ ತೀರ್ಪು ಕೊಟ್ಟ ಮೇಲೆ ಅದನ್ನು ಯಾವ ರೀತಿ ಕೇಳಬೇಕು ಅನ್ನುವುದಾದರೂ ಬೇಡವೇ? ತಾಂತ್ರಿಕವಾಗಿ ಪ್ರಾಯಶಃ ಇಂತಿಂಥಹ ತೊಂದರೆಗಳಿವೆ. ಈ ತೊಂದರೆಗಳನ್ನು ಯಾವರೀತಿ ನಿವಾರಣೆ ಮಾಡಬೇಕು ಎನ್ನುವುದಕ್ಕೆ ಮಾತನಾಡುವುದಕ್ಕೂ ಗೌರವಾನ್ವಿತ ಸುಪ್ರೀಂಕೋರ್ಟ್ ಅವಕಾಶ ಕೊಡದೇ ಇರತಕ್ಕಂಥ ಒಂದು ಸಂದರ್ಭ ಪ್ರಾಯಶಃ ಎಷ್ಟರ ಮಟ್ಟಿಗೆ ಸರಿ ಎನ್ನುವುದರ ಬಗ್ಗೆ ಅವರು ಚಿಂತನೆ ಮಾಡಬೇಕಾಗಿದೆ. 2007ನೇ ಇಸವಿಯಲ್ಲಿ ಟ್ರಿಬ್ಯೂನಲ್‌ನವರು ಒಂದು ತೀರ್ಪ ಕೊಟ್ಟಿದ್ದಾರೆ. ಆ ತೀರ್ಪಿನಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ಈ ನಾಲ್ಕು ರಾಜ್ಯಗಳಿಗೆ ಎಷ್ಟೆಷ್ಟು ನೀರು ಎನ್ನುವುದರ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಸವಿಸ್ತಾರವಾಗಿ ಚರ್ಚೆ ಮಾಡಿರುವುದರಿಂದ, ಅದನ್ನು ನಾನು ಪದೇ ಪದೇ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಆ ತೀರ್ಪು ಏನಿರುತ್ತದೆ ಅದರ ಮೇಲೆ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠದ ಮುಂದೆ ಮರುಪರಿಶೀಲನೆ ಅರ್ಜಿಯನ್ನು ಹಾಕಿರುವುದು ಇದೇ ತಿಂಗಳು 18ನೇ ತಾರೀಖು ಬರುತ್ತಿದೆ. ಇದರ ಬಗ್ಗೆ ಆ ನ್ಯಾಯಧೀಶರು ಮನಗೊಂಡಿದ್ದರೂ ಕೂಡ ದ್ವಿಸದಸ್ಯ ಪೀಠದಲ್ಲಿ ಕುಳಿತುಕೊಂಡಿದ್ದಂತಹ ನ್ಯಾಯಧೀಶರು ತೀರ್ಮಾನವನ್ನು ಮಾಡತಕ್ಕಂಥದ್ದು ಎಷ್ಟು ಸರಿ ಇದೆ? ಆ ಒಂದು ಸ್ಥಾನಕ್ಕೆ ಎಷ್ಟರ ಮಟ್ಟಿಗೆ ಚಿಂತನೆ ಇದೆ ಎನ್ನುವುದರ ಬಗ್ಗೆಯೂ ಕೂಡ ಅವರು ಯೋಚನೆ ಮಾಡಬೇಕಾಗಿದೆ ನಿಜ. ಮೊನ್ನೆ ದಿವಸ ಕಾವೇರಿ ನೀರಿನ ವಿಷಯದ ಬಗ್ಗೆ ನಡೆದಂತಹ ವ್ಯಾಜ್ಯದ ವಿಚಾರಣೆಯ ಸಮಯದಲ್ಲಿ ಗೌರವಾನ್ವಿತ ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠದ ನ್ಯಾಯಧೀಶರು ಕಾವೇರಿ ನಿರ್ವಹಣಾ ಮಂಡಳಿಯನ್ನು ನಾಲ್ಕು ದಿವಸಗಳಲ್ಲಿ ರಚನೆ ಮಾಡಬೇಕೆಂದು ಹೇಳಿದಾಗ, ಕೇಂದ್ರ ಸರ್ಕಾರದ ಪರವಾಗಿ ಒಬ್ಬ ಅಟಾರ್ನಿ ಜನರಲ್‌ರವರು ಆಯಿತು ಮಾಡುತ್ತೇವೆಂದು ಹೇಳುತ್ತಾರೆ. ಆದರೆ, ಅದನ್ನು ಎಲ್ಲೋ ಒಂದು ಕಡೆ ಯಾರು ಏನೇ ಹೇಳಬಹುದು, ಮತ್ತೊಂದು ಆಗಬಹುದು, ವಾಸ್ತವ ಸಂಗತಿಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ವಾಸ್ತವ ಸಂಗತಿಯಲ್ಲಿ ಯಾವ ರೀತಿ ಬೆಳಕನ್ನು ಚೆಲ್ಲಿದರೆ ಇದನ್ನು ಸರಿಪಡಿಸಬಹುದು ಅನ್ನುವುದಕ್ಕೆ ಚಿಂತನೆಯನ್ನು ಮಾಡಬೇಕಾಗಿದೆ. ಇದು ಸುಮಾರು ವರ್ಷದ ಖಾಯಿಲೆ. ಈ ಸುಮಾರು ವರ್ಷದ ಖಾಯಿಲೆಯನ್ನು ಪ್ರಾಯಶಃ ನಾವು ಬೇರು ಸಹಿತ ಕಿತ್ತು ಹಾಕಬೇಕಾದರೆ ಇದಕ್ಕೇನಾದರೂ ಒಂದು ಕಾಲ ಬರಬೇಕಾಗಿತ್ತು. ಅಂತಹ ಒಂದು ಕಾಲ ಇವತ್ತು ಸನ್ನಿಹಿತವಾಗುತ್ತಿದೆ. ಸೆಕ್ಷನ್ 6(ಎ)(7)ರಲ್ಲಿ ಏನು ಇವತ್ತು ಅಟಾರ್ನಿ ಜನರಲ್‌ರವರು ಗೌರವಾನ್ವಿತ ಸುಪ್ರೀಂಕೋರ್ಟ್‌ನ ಮುಂದೆ ಅರ್ಜಿಯನ್ನು ಸಲ್ಲಿಸಿ, ಬೋರ್ಡ್ ಮಾಡಬೇಕಾದರೆ ಲೋಕಸಭೆ ಮತ್ತು ರಾಜ್ಯಸಭೆ ಎರಡೂ ಸದನಗಳಲ್ಲಿ ಈ ನಿರ್ಣಯ ಪಾಸ್ ಆಗಬೇಕಾಗುತ್ತದೆ. ಆದ್ದರಿಂದ, ಅದನ್ನು ನಾವು ತಕ್ಷಣ ಮಾಡುವುದಕ್ಕಾವುದಿಲ್ಲ ಎನ್ನುವುದರ ಜೊತೆಯಲ್ಲಿ ಈ ಕೇಸು ತ್ರಿಸದಸ್ಯ ಪೀಠದ ಮುಂದೆ ಬಾಕಿ ಇದೆ. ತ್ರಿಸದಸ್ಯ ಪೀಠದ ಮುಂದೆ ಇನ್ನು ತೀರ್ಮಾನವಾಗಿಲ್ಲ. ಈ ಮಧ್ಯದಲ್ಲಿ ಇದನ್ನು ಮಾಡುವುದಕ್ಕೆ ನಮ್ಮಿಂದ ಆಗುವುದಿಲ್ಲವೆಂದು ಹೇಳಿ ಅವರು ಇವತ್ತು ಏನು ಕೊಡುತ್ತಾರೆ. ಇದಕ್ಕೆ ಕಾರಣ ಪ್ರಾಯಶಃ ಇವತ್ತಿನ ದೂರದೃಷ್ಟಿ. ವಿಶೇಷವಾಗಿ ಸನ್ಮಾನ್ಯ ದೇವೇಗೌಡರು

ಯಾವ ಯಾವ ರೀತಿ ನಡೆಯಿತು. ಏನು ನಡೆಯಿತು ಎಲ್ಲವನ್ನೂ ಕೂಡ ಚರ್ಚೆ ಮಾಡಿದ್ದೇವೆಂದು ಪದೇ ಪದೇ ಹೇಳುವುದರಲ್ಲಿ ಅರ್ಥವಿಲ್ಲ. ಅವರು ಉಪವಾಸ ಕುಳಿತುಕೊಂಡ ತಕ್ಷಣ ರಾಷ್ಟ್ರದ ಪ್ರಧಾನ ಮಂತ್ರಿಗಳು, ಸನ್ಮಾನ್ಯ ದೇವೇಗೌಡರವರ ಜೊತೆಯಲ್ಲಿ ಮಾತನಾಡುತ್ತಾರೆ. ಸನ್ಮಾನ್ಯ ಅನಂತಕುಮಾರ್‌ರವರನ್ನು ಮತ್ತು ಶ್ರೀ ಡಿ.ವಿ.ಸದಾನಂದಗೌಡರನ್ನು ಬೆಂಗಳೂರಿಗೆ ಕಳುಹಿಸುತ್ತಾರೆ. ಶ್ರೀ ಅನಂತಕುಮಾರ್‌ರವರು, ಶ್ರೀ ಜಗದೀಶ್ ಶೆಟ್ಟರ್ ನಾವೆಲ್ಲರೂ ಕೂಡ ಹೋಗಿ ಸುಮಾರು ಹೊತ್ತು ಸನ್ಮಾನ್ಯ ದೇವೇಗೌಡರವರ ಹತ್ತಿರ ಮಾತನಾಡಿದ್ದೇವೆ. ತದನಂತರ, ಮಾನ್ಯ ಮುಖ್ಯ ಮಂತ್ರಿಗಳು ಮಂತ್ರಿ ಪರಿಷತ್ತಿನ ಸಭೆಯನ್ನು ಮುಗಿಸಿ, ಸನ್ಮಾನ್ಯ ದೇವೇಗೌಡರನ್ನು ಭೇಟಿಯಾಗಿ ವಿನಂತಿಯನ್ನು ಮಾಡಿದ ಮೇಲೆ ಅವರು ಉಪವಾಸವನ್ನು ಅಂತ್ಯಗೊಳಿಸುತ್ತಾರೆ. ಮಾಜಿ ಪ್ರಧಾನ ಮಂತ್ರಿಗಳು ಪ್ರಾಯಶಃ ದೂರದೃಷ್ಟಿಯ ಚಿಂತಕರಾಗಿ, ಒಕ್ಕೂಟದ ವ್ಯವಸ್ಥೆಯಲ್ಲಿ ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆಯನ್ನು ವಹಿಸಬೇಕೆಂದು ರಾಜ್ಯದಲ್ಲಿ ನಾವು ಇಷ್ಟೆಲ್ಲವನ್ನು ಕೂಡ ಕೂಗಾಡಿದೆವು, ಏನೆಲ್ಲಾ ಮಾಡಿದೆವು. ಯಾವ ಕಾಲದಲ್ಲಿ ಯಾವ ರೀತಿ ಇದನ್ನು ಬಗೆಹರಿಸಬೇಕು ಎನ್ನುವುದಕ್ಕಿಂಥ ಹೆಚ್ಚಾಗಿ, ರಾಜ್ಯದ ಹಿತವನ್ನು ಕಾಪಾಡತಕ್ಕಂಥದ್ದಕ್ಕೆ ಪ್ರಾಯಶಃ ಇವತ್ತು ಏನು ಒಂದು ಸಂದೇಶವನ್ನು ಕೊಟ್ಟಿದ್ದಾರೆ. ನನಗೆ ಅನ್ನಿಸುತ್ತದೆ ಮುಂದಿನ ದಿನಗಳಲ್ಲಿ ಈ ಸಂದೇಶ ಕರ್ನಾಟಕ ರಾಜ್ಯ ಇರಬಹುದು, ತಮಿಳುನಾಡು ಇರಬಹುದು ಇವೆರಡಕ್ಕೂ ಕೂಡ ಒಂದು ರೀತಿಯ ಪೂರಕವಾದ ವ್ಯವಸ್ಥೆಯನ್ನು ತರಕ್ಕಂಥದ್ದಕ್ಕೆ ಈ ಅಖಂಡತೆಯನ್ನು ಉಳಿಸಿಕೊಂಡು ಹೋಗುವುದಕ್ಕೆ ಒಂದು ದೊಡ್ಡ ಸಂದೇಶವನ್ನು ಕೊಟ್ಟಿರತಕ್ಕಂಥದ್ದನ್ನು ಇವತ್ತು ನಾವು ಮೆಚ್ಚಬೇಕಾಗುತ್ತದೆ. ಇದರ ಜೊತೆಯಲ್ಲಿ ಏನು ಇವತ್ತು ತಮಿಳುನಾಡಿನ ಪರವಾಗಿ ಗೌರವಾನ್ವಿತ ಸುಪ್ರೀಂಕೋರ್ಟ್ ಒಂದೊಂದು ನಿಮಿಷಕ್ಕೆ ಒಂದೊಂದು ರೀತಿಯ ಆದೇಶಗಳನ್ನು ಕೊಡುವುದರ ಜೊತೆಯಲ್ಲಿ, ಈ ತಮಿಳುನಾಡಿನವರಿಗೆ ಎಷ್ಟರಮಟ್ಟಿಗೆ ನೀರು ಇದೆ ಎನ್ನುವುದಕ್ಕಿಂಥ ಮೆಟ್ಟೂರು ಡ್ಯಾಂ ಇರಬಹುದು, ಭವಾನಿ ಇರಬಹುದು, ಅದರ ಕೆಳಗಡೆ ಕಟ್ಟಿರತಕ್ಕಂಥ 7 ರಿಂದ 8 ಡ್ಯಾಂಗಳಿರಬಹುದು. ಈ ಎಲ್ಲಾ ಜಲಾಶಯಗಳಲ್ಲಿಯೂ ಕೂಡ ನೀರು ಬಹಳಷ್ಟು ಇದೆ. ಕರ್ನಾಟಕದ ರಾಜ್ಯದ ನೀರು ಮೆಟ್ಟೂರು ಡ್ಯಾಂ ಗೆ ಹೋದ ನಂತರ, ಮತ್ತೆ ನಾವು ಕರ್ನಾಟಕದ ಡ್ಯಾಂ ಗೆ ನಮಗೆ ಸಂಕಷ್ಟವೆಂದು ವಾಪಸ್ಸು ತೆಗೆದುಕೊಂಡು ಬರುವುದಕ್ಕೆ ಆಗುವುದಿಲ್ಲ. ಅದೇ ರೀತಿಯಲ್ಲಿ ಕೃಷ್ಣರಾಜ ಸಾಗರಕ್ಕೆ ಕಬಿನಿ ಜಲಾಶಯ, ಹಾರಂಗಿ ಜಲಾಶಯ, ಹೇಮಾವತಿ ಜಲಾಶಯ ಈ ಜಲಾಶಯಗಳಿಂದ ನಾವು ನೀರನ್ನು ತರಬಹುದು. ಇಂತಹ ಸಂದರ್ಭದಲ್ಲಿ ಸರ್ಕಾರ ಏಕ ಕಾಲದಲ್ಲಿ ಎಲ್ಲಾ ಜಲಾಶಯಗಳಿಂದ ನೀರನ್ನು ತಂದು ತಮಿಳುನಾಡಿಗೆ ಕೂಡ ಕೊಡತಕ್ಕಂಥದ್ದು ಯಾವ ರೀತಿ ಸಮಂಜಸ ಎನ್ನುವುದು ಒಂದು ಕಡೆಯಾದರೆ, ಇನ್ನೊಂದು ಪ್ರಕೃತಿಯ ವಿಕೋಪದಿಂದ, ಪ್ರಕೃತಿಯ ಮುನಿಸಿನಿಂದ, ಈ ಸಾರಿ ಆಗಿರತಕ್ಕಂಥ ಮಳೆಯ ವೈಪರೀತ್ಯದಿಂದ ತೊಂದರೆಯಾಗಿದ್ದರೂ ಕೂಡ, ನಮ್ಮ ಪಾಲಿನ ನೀರನ್ನೂ ಕೂಡ ತಮಿಳುನಾಡಿಗೆ ಕೊಟ್ಟಿದ್ದರೂ ಕೂಡ ಪ್ರಾಯಶಃ ಇದರ ಬಗ್ಗೆ ಸುಪ್ರೀಂಕೋರ್ಟ್‌ಗೆ ಹೋಗಿ, ಈ ನಿಟ್ಟಿನಲ್ಲಿ ತಮಿಳುನಾಡು ಕ್ಯಾತೆ ತೆಗೆಯತಕ್ಕಂಥ ಕೆಲಸ ಎಷ್ಟರಮಟ್ಟಿಗೆ ಸರಿ ಎನ್ನುವುದರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾವು ಅನೇಕ ವಿಚಾರಗಳನ್ನು ಕೈಗೊಳ್ಳತಕ್ಕಂಥ ಸಂದರ್ಭದಲ್ಲಿ 1874ನೇ ಇಸವಿಯಿಂದ ಬೆಂಗಳೂರು ನಗರಕ್ಕೆ ಕೆರೆಗಳಿಂದ ನೀರನ್ನು ಸರಬರಾಜು ಮಾಡುತ್ತಿದ್ದೆವು. 1933ರಲ್ಲಿ ಅರ್ಕಾವತಿ ಮತ್ತು ಕುಮದ್ವತಿಗೆ ತಿಪ್ಪಗೊಂಡನಹಳ್ಳಿಯಲ್ಲಿ ಒಂದು ಅಣೆಕಟ್ಟನ್ನು ಕಟ್ಟಿ ನೀರನ್ನು ತರುತ್ತಿದ್ದೆವು. ಬೆಂಗಳೂರು ಜಲಮಂಡಳಿ ವ್ಯಾಪ್ತಿ ಇವತ್ತು 580 ಕಿಲೋಮೀಟರ್‌ಗಳು ಮಾತ್ರ ಇದೆ. ಇದರಲ್ಲಿ ಹಳ್ಳಿಗಳನ್ನು ಕೂಡ ಸೇರಿಸಿಕೊಂಡರೆ, ಸುಮಾರು 800 ಚದರ ಕಿಲೋಮೀಟರ್ ಬೆಂಗಳೂರಿನ ವಿಸ್ತಾರವಾಗಿದೆ. 110 ಹಳ್ಳಿಗಳಿರಬಹುದು, ಹಳೆಯ 228 ಚದರ ಕಿಲೋಮೀಟರ್‌ಗಳನ್ನು ಸೇರಿಸಿಕೊಂಡಾಗ ಒಟ್ಟಾರೆಯಾಗಿ ಬೆಂಗಳೂರಿನಲ್ಲಿ ಒಂದು ಕೋಟಿಗೂ ಮೇಲ್ಪಟ್ಟು ಜನಸಂಖ್ಯೆ ವಾಸ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದ ಸುಮಾರು ಶೇ.32ರಷ್ಟು ಮೇಲ್ಪಟ್ಟು ಜನ ಬೆಂಗಳೂರು ನಗರವೊಂದರಲ್ಲೇ ವಾಸ ಮಾಡುತ್ತಿದ್ದಾರೆ. ಬೆಂಗಳೂರು ನಗರಕ್ಕೆ ಬೇರೆ

ಕುಡಿಯುವ ನೀರಿನ ಯೋಜನೆಗಳು ಎಲ್ಲಿಯೂ ಕೂಡ ನಮ್ಮ ಮುಂದೆ ಕಾಣುತ್ತಿಲ್ಲ. ಗೌರವಾನ್ವಿತ ಸುಪ್ರೀಂಕೋರ್ಟ್‌ನವರು, ಬೆಂಗಳೂರು ನಗರದ 1/3 ಭಾಗಕ್ಕೆ ಮಾತ್ರ ಕಾವೇರಿ ನೀರು ಕೊಡಬೇಕು. ಬಾಕಿ ಕಡೆಗೆ ನೀರನ್ನು ಕೊಡತಕ್ಕಂಥ ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ನಾನು ತಮ್ಮೂಲಕ ತಮಿಳುನಾಡು ಸರ್ಕಾರವನ್ನು ಕೇಳುವುದೇನೆಂದರೆ, ಧರ್ಮಪುರಿ ಜಿಲ್ಲೆ, ಕೃಷ್ಣಗಿರಿ ಜಿಲ್ಲೆ, ಕೊಯಮತ್ತೂರು ಜಿಲ್ಲೆ, ತಿರುಚಿ ಜಿಲ್ಲೆ, ತಂಜಾವೂರು ಜಿಲ್ಲೆ ಹೀಗೆ ತಮಿಳುನಾಡಿನ ಅನೇಕ ಜಿಲ್ಲೆಗಳಲ್ಲಿ ಏನಾದರೂ ನೀರನ್ನು ಕುಡಿಯುತ್ತಿದ್ದಾರೆ ಅದು ಕರ್ನಾಟಕ ರಾಜ್ಯದ ಕಾವೇರಿ ನೀರು. ಪ್ರಾಯಶಃ ನಾವು ಕೇವಲ ಚಾಮರಾಜನಗರಕ್ಕೆ ಮತ್ತು ಮೈಸೂರಿಗೆ ಸ್ವಲ್ಪ ಭಾಗ, ಮಂಡ್ಯಕ್ಕೆ ಸ್ವಲ್ಪ ಭಾಗ ಬಿಟ್ಟರೆ, ಬೆಂಗಳೂರಿಗೆ ಎಲ್ಲವೂ ಸೇರಿ ನನಗೆ ಅನ್ನಿಸುತ್ತಿದೆ ಕೇವಲ ನಾವು 23 ರಿಂದ 24 ಟಿ.ಎಂ.ಸಿ ನೀರನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಆದರೆ, ತಮಿಳುನಾಡಿನವರಿಗೆ ಯಾವುದೇ ಲೆಕ್ಕವಿಲ್ಲ, ಮತ್ತೊಂದಿಲ್ಲ, ಮೊಗದೊಂದಿಲ್ಲ ಪ್ರಾಯಶಃ ತಮಿಳುನಾಡಿನವರು ಧರ್ಮಪುರಿ ಜಿಲ್ಲೆಗೆ ಯಾರನ್ನು ಕೇಳಿ ನೀರನ್ನು ತೆಗೆದುಕೊಂಡಿದ್ದಾರೆ? ನಾವು ಇಲ್ಲಿ ಏನಾದರೂ ಒಂದು ಸಣ್ಣ ಯೋಜನೆಯನ್ನು ತೆಗೆದುಕೊಂಡರೂ, ನಮ್ಮ ರಾಜ್ಯದ ಒಂದು ಯಾವುದಾದರೂ ಸಣ್ಣ ಹಳ್ಳಿಗೆ ಕುಡಿಯುವುದಕ್ಕೆ ನೀರನ್ನು ಕೊಡಬೇಕಾದರೂ ಒಂದು ತಕರಾರು ಅರ್ಜಿಯನ್ನು ಕೋರ್ಟ್‌ನಲ್ಲಿ ಹಾಕುತ್ತಾರೆ. ಇಂತಹ ಸಂದರ್ಭದಲ್ಲಿ ಪ್ರಾಯಶಃ ಒಕ್ಕೂಟದ ವ್ಯವಸ್ಥೆಯಲ್ಲಿ ನಾವು ಬಾಳಬೇಕು ಎಂದಾಗ ತಮಿಳುನಾಡಿನವರು ಕಾರ್ಯವೈಖರಿಯನ್ನು ತಿದ್ದಿಕೊಳ್ಳತಕ್ಕಂಥ ಅವಶ್ಯಕತೆಗಳು ಕೂಡ ಇವತ್ತು ಇದೆ. ಬೆಂಗಳೂರು ನಗರಕ್ಕೆ ಕುಡಿಯುವುದಕ್ಕೆ ಈ ವರ್ಷದ ಜೂನ್ ತಿಂಗಳಿನಿಂದ ಮುಂದಿನ ಮೇ ತಿಂಗಳಿನವರೆಗೆ 12 ರಿಂದ 13 ಟಿ.ಎಂ.ಸಿ ನೀರು ಕೊರತೆಯಾಗುತ್ತದೆ. ಬೆಂಗಳೂರು ನಗರದ ಸುಮಾರು ಶೇ.40 ಕೆಲವು ಭಾಗಗಳಿಗೆ ಕಾವೇರಿ ನೀರನ್ನು ನಾವು ಕೊಡುವ ಪರಿಸ್ಥಿತಿಯಲ್ಲಿ ಇಲ್ಲ. ಇದೆಲ್ಲಾ ಬೆಳವಣಿಗೆಯ ಜೊತೆಯಲ್ಲಿ ಶೇ.32 ಜನಗಳಿಗೆ ಕಾವೇರಿ ನೀರನ್ನು ಕೊಡಬೇಕಾಗಿರುವುದರಲ್ಲಿ, ಕೇವಲ ಶೇ.20 ಜನರಿಗೆ ಮಾತ್ರ ಕಾವೇರಿ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿರುವುದು. ಇನ್ನುಳಿದಿರತಕ್ಕಂಥವರಿಗೆ ಬೋರ್‌ವೆಲ್‌ಗಳು ಮತ್ತೊಂದು ಮೊಗದೊಂದರಿಂದ ನೀರನ್ನು ಕೊಡುತ್ತಿದ್ದೇವೆ. ಸಿ.ಎಂ.ಸಿ.ಗಳ ವ್ಯಾಪ್ತಿಯ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲ. ಸುಮಾರು 120 ಹಳ್ಳಿಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ವಾಸ್ತವಾಂಶದ ಬಗ್ಗೆ ಸರ್ಕಾರ ಯೋಚನೆ ಮಾಡಿ, ಒಂದು ತೀರ್ಮಾನ ಮಾಡಬೇಕು. ನಮ್ಮಲ್ಲಿ ಹಿಂಗಾರು ಮಳೆ ಇಲ್ಲ. ಆದರೆ, ತಮಿಳುನಾಡಿನಲ್ಲಿ ಹಿಂಗಾರು ಮಳೆ ಪ್ರಾರಂಭವಾಗುತ್ತಿದೆ. ಬೆಂಗಳೂರಿಗೆ ಮಳೆಯಿಂದ ಬಂದಂತಹ ನೀರು ಕೂಡ ತಮಿಳುನಾಡಿಗೆ ಹೋಗುತ್ತಿದೆ, ಅದು ಕಾವೇರಿಗೆ ಹೋಗುವುದಿಲ್ಲ. ಶ್ರೀರಂಗಪಟ್ಟಣದ ಸುತ್ತಮುತ್ತ ಬಂದಂತಹ ಮಳೆ ನೀರು ಕೂಡ ತಮಿಳುನಾಡಿಗೆ ಹೋಗುತ್ತಿದೆ. ಇಷ್ಟೆಲ್ಲಾ ಮಧ್ಯೆದಲ್ಲೂ ಕೂಡ ನೀವು ಏನು 740 ಟಿ.ಎಂ.ಸಿ ನೀರು ಎನ್ನುವುದಕ್ಕಿಂತ ಹೆಚ್ಚಾಗಿ, ಒಟ್ಟಾಗಿ ಬರತಕ್ಕಂಥದ್ದಕ್ಕೆ 400ಕ್ಕೂ ಹೆಚ್ಚು ಟಿ.ಎಂ.ಸಿ.ಗೂ ಮೇಲ್ಪಟ್ಟು ನೀರನ್ನು ತಮಿಳುನಾಡಿನವರು ಉಪಯೋಗ ಮಾಡುತ್ತಿದ್ದರೂ ಕೂಡ, ಒಂದೊಂದು ಸಾರಿ ಆಗತಕ್ಕಂಥ ತೊಂದರೆಗಳನ್ನು ಅರ್ಥಮಾಡಿಕೊಂಡು, ತಾವು ಸಹಕಾರ ಮಾಡಬೇಕು ಎನ್ನುವುದನ್ನು ಬಿಟ್ಟು, ಪ್ರಾಯಶಃ ನಮ್ಮ ಬೆಳೆಗಳಿಗೆ ನೀರು ಇಲ್ಲ. ತಮಿಳುನಾಡಿನ ಕಾವೇರಿ ಕಣಿವೆಯಲ್ಲಿನ ಡ್ಯಾಂಗಳಲ್ಲಿ 50 ಟಿ.ಎಂ.ಸಿ ನೀರು, ಭವಾನಿ ಜಲಾಶಯ ಒಂದರಲ್ಲಿಯೇ 16 ಟಿ.ಎಂ.ಸಿ ಗೂ ಮೇಲ್ಪಟ್ಟು ನೀರು ಇದೆ. 40 ಟಿ.ಎಂ.ಸಿ. ಮೆಟ್ಟೂರು ಡ್ಯಾಂನಲ್ಲಿದೆ. ಇನ್ನು ಸಣ್ಣ ಸಣ್ಣ ಡ್ಯಾಂಗಳಲ್ಲಿ ಎಷ್ಟೆಷ್ಟು ನೀರಿದೆ ಎನ್ನುವುದಕ್ಕಿಂತ ಹೆಚ್ಚಾಗಿ, ನಮ್ಮ ರಾಜ್ಯದ ಕಾವೇರಿ ಕಣಿವೆಯಲ್ಲಿರುವ ಡ್ಯಾಂಗಳಲ್ಲಿ ಕುಡಿಯುವುದಕ್ಕೇ ನೀರು ಇಲ್ಲವೆಂದು ಬೆಳಿಗ್ಗೆ ನಮ್ಮ ಸಭಾ ನಾಯಕರು ಹೇಳುತ್ತಿದ್ದರು, ಈಗ ತುಮಕೂರು ಜಿಲ್ಲೆಯಲ್ಲಿ ಕುಡಿಯುವುದಕ್ಕೆ ಕೆರೆಗಳಲ್ಲಿ ನೀರಿಲ್ಲವೆಂದು ಹೇಳುತ್ತಿದ್ದರು. ನಾನು ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಈಗ ಏನು ಹೆಚ್ಚುವರಿಯಾಗಿ 7 ಟಿ.ಎಂ.ಸಿ. ನೀರಿದೆ ಅದರ ಬಗ್ಗೆ ಇವತ್ತಿನ ದಿವಸ ಸರ್ಕಾರ ತೆಗೆದುಕೊಂಡು ಬಂದಿರುವಂತಹ ನಿರ್ಣಯ ಏನಿದೆ ಅದನ್ನು ನೋಡಿದರೆ, ನನಗೆ ಎಲ್ಲೋ ಒಂದು ಕಡೆ ಅನುಮಾನ ಬರುತ್ತಿದೆ. ದಯಮಾಡಿ ತಾವು 27 ಟಿ.ಎಂ.ಸಿ. ನೀರನ್ನು ಹೊರತುಪಡಿಸಿ, ಇನ್ನುಳಿದಿರತಕ್ಕಂಥ 7 ಟಿ.ಎಂ.ಸಿ.

ನೀರನ್ನು ರಾಜ್ಯದಲ್ಲಿರತಕ್ಕಂತಹ ಮಂಡ್ಯ ಜಿಲ್ಲೆ, ಹಾಸನ ಜಿಲ್ಲೆ ಹಾಗೂ ತುಮಕೂರು ಜಿಲ್ಲೆ ಇರಬಹುದು, ಹೀಗೆ ಎಲ್ಲೆಲ್ಲಿ ಕಾವೇರಿ ಕಣಿವೆಯ ವ್ಯವಸ್ಥೆಗಳಿವೆ, ಆ ರೈತರಿಗೆ ನೀರನ್ನು ಕೊಡತಕ್ಕಂತಹ ಯೋಚನೆ ಮಾಡಿ, ಒಂದೇ ಒಂದು ಹನಿ ನೀರನ್ನು ತಮಿಳುನಾಡಿಗೆ ಬಿಡತಕ್ಕಂತಹ ಅವಶ್ಯಕತೆ ಇಲ್ಲವೆನ್ನುವುದನ್ನು ಕಾನೂನು ಹೇಳುತ್ತದೆ. 1994ರಿಂದ ನಾನೂ ಕೂಡ ಮಂತ್ರಿಯಾಗಿ, ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಶಾಸಕನಾಗಿ ಕೆಲಸ ಮಾಡಿದ್ದೇನೆ. ಸರ್ಕಾರಕ್ಕೆ ಎಲ್ಲಾ ಪಕ್ಷದವರು ಕೊಟ್ಟಂಥ ಮನ್ನಣೆಯಿಂದಾಗಿ ಪ್ರಾಯಶಃ ಈ ರಾಜ್ಯದ ಜನತೆಗೆ, ಮುಂದಿನ ದಿನಗಳಲ್ಲಿ ನಾವೆಲ್ಲರೂ ನಿಮ್ಮ ಜೊತೆ ಕಷ್ಟದಲ್ಲಿದ್ದೇವೆ ಎನ್ನುವ ಸಂದೇಶ ಕೊಟ್ಟಿರುವುದು ಸರಿಯಾಗಿದೆ. ಇದು ಸರಿಯಾಗಿದೆ ಎನ್ನುವುದನ್ನು ಅರಿತುಕೊಂಡು ಮಾನ್ಯ ಸಭಾನಾಯಕರು ಒಂದು ಸ್ಪಷ್ಟೀಕರಣ ಕೊಡಬೇಕು. ತಾವು ನಿರ್ಣಯದಲ್ಲಿ, **"**ಮೇಲ್ಕಂಡ ನಿರ್ಣಯದ ನಂತರ, ನಾಲ್ಕು ಜಲಾಶಯಗಳಲ್ಲಿನ ನೀರಿನ ಸಂಗ್ರಹ 27.60 ಟಿಎಂಸಿ ಯಿಂದ ಈ ದಿನದವರೆಗೆ 34.13 ಟಿಎಂಸಿಗಳಿಗೆ ಏರಿಕೆಯಾಗಿರುವುದನ್ನು ಈ ಸದನವು ಗಮನಿಸಿದೆ. ಕರ್ನಾಟಕದಲ್ಲಿನ ಕಾವೇರಿ ಕೊಳ್ಳದ ಪ್ರದೇಶದ ರೈತರು ಬೆಳೆದು ನಿಂತ ತಮ್ಮ ಬೆಳೆಗೆ ಅವಶ್ಯಕವಾದ ನೀರನ್ನು ಬಿಡಲು ಒತ್ತಾಯಿಸುತ್ತಿರುವುದನ್ನು ಕೂಡ ಈ ಸದನವು ಗಮನಿಸಿದೆ. ಮೇಲ್ಕಂಡ ಅಂಶಗಳನ್ನು ಗಮನದಲ್ಲಿಸಿರಿಸಿಕೊಂಡು ದಿನಾಂಕ 23.9.2016ರಂದು ಈ ಸದನವು ನಿರ್ಣಯಿಸಿದಂತೆ ಸರ್ಕಾರ ಕುಡಿಯುವ ನೀರಿನ ಅವಶ್ಯಕತೆಗೆ ನೀರಿನ ಲಭ್ಯತೆಯನ್ನು ಖಚಿತಪಡಿಸಿಕೊಂಡು ರೈತರ ಬೆಳೆಗಳಿಗೆ ನೀರು ಬಿಡುಗಡೆಗೊಳಿಸುವ ಬಗ್ಗೆ ಹಾಗೂ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದು ಈ ಸದನವು ನಿರ್ಣಯಿಸುತ್ತದೆ**"** ಎಂದು ಹೇಳಿದ್ದೀರಿ. ಒಂದು ಮಾತು ಸತ್ಯ. ಇಷ್ಟೆಲ್ಲಾ ಮಾಡಿ, ನಾವೇನೂ ತಪ್ಪು ಮಾಡದೇ, ನಮ್ಮ ದುಡ್ಡು, ನಮ್ಮ ಕಾಸು, ನಮ್ಮ ಅಣೆಕಟ್ಟು, ನಮ್ಮ ಜಾಗ, ವ್ಯಾಪ್ತಿ ಕೂಡ ನಮ್ಮದೇ ಆಗಿದ್ದರೂ 25-26 ದಿನದಿಂದ ಇಡೀ ರಾಜ್ಯದ ಆರೂವರೆ ಕೋಟಿ ಜನರ ಪೈಕಿ ಮೂರು-ಕಾಲು ಕೋಟಿ ವಾಸ ಮಾಡತಕ್ಕ ಈ ಜನರಿಗೆ ಪ್ರಾಯಶಃ ಒಂದು ರೀತಿಯ ಕಣ್ಣೀರನ್ನು ತಂದಿದ್ದೀರಿ ಎನ್ನುವುದಕಿಂತ ಹೆಚ್ಚಾಗಿ ರಕ್ತವನ್ನು ತಂದಿರುವಂಥ ಈ ಸಂದರ್ಭವನ್ನು ಅರ್ಥ ಮಾಡಿಕೊಳ್ಳಬೇಕು. ತಮಿಳುನಾಡಿನವರಿಗೆ ಗೊತ್ತಾಗಬೇಕು, ಕರ್ನಾಟಕದ ಕನ್ನಡಿಗರು ಸ್ವಾಭಿಮಾನಿಗಳು, ಎಲ್ಲರನ್ನು ಸಮಾನವಾಗಿ ಕೊಂಡೊಯ್ಯುವ ಜನರಾದ್ದರಿಂದ ಇಂಥವರಿಗೆ ನಾವು ತೊಂದರೆ ಕೊಟ್ಟಿರುವುದು ಎಷ್ಟರಮಟ್ಟಿಗೆ ಸರಿ ಎನ್ನುವುದು ಅರ್ಥವಾಗಬೇಕಾದರೆ, ನಾವೇನು ಈಗಾಗಲೇ ನೀರು ಬಿಡುವುದಿಲ್ಲವೆಂದು ಹೇಳಿದ್ದೇವೆಯೋ ಅದೇರೀತಿ ಒಂದು ಹನಿ ನೀರನ್ನೂ ಬಿಡಬಾರದು. ಆ 7 ಟಿಎಂಸಿ ನೀರನ್ನು ಯಾವ ಯಾವ ಜಿಲ್ಲೆಗಳಿಗೆ ನೀರಿಲ್ಲವೋ . . .ನಾನು ಮೊನ್ನೆ ಗುಬ್ಬಿಗೆ ಹೋಗಿದ್ದೆ . . .(**ಗೊಂದಲ**)

**ಸಭಾಪತಿಗಳು:-** ವಿವರಗಳಿಗೆ ಹೋಗಬೇಡಿ. ಮುಗಿಸಿ, 15 ನಿಮಿಷ ಆಯಿತು . . .

**ಶ್ರೀ ವಿ.ಸೋಮಣ್ಣ:-** ನಾನು ಮಾತನಾಡಲು ಪ್ರಾರಂಭ ಮಾಡಿ 15 ನಿಮಿಷವಾಗಿಲ್ಲ. ಬೇರೆಯವರು ಗಂಟೆಗಟ್ಟಲೆ ಮಾತನಾಡಿದ್ದಾರೆ . . .

**ಸಭಾಪತಿಗಳು:-** ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಾ ಅದನ್ನಾದರೂ ಹೇಳಿ? ನಾನು ಸಮಯ ನಿಗದಿ ಮಾಡಬೇಕು. ತಾವು ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ? ನೀವು ಕೇಳಿದಷ್ಟು ಸಮಯವನ್ನು ಕೊಡುತ್ತೇನೆ. ಇನ್ನು ನೀವು ಎಷ್ಟು ಹೊತ್ತು ಮಾತನಾಡುತ್ತೀರಿ?

**ಶ್ರೀ ವಿ.ಸೋಮಣ್ಣ:-**ಮಾನ್ಯ ಸಭಾಪತಿಗಳೆ, ನನಗೆ ಸ್ಲಿಪ್ ಡಿಸ್ಕ್ ಇದೆ, ಜಾಸ್ತಿ ಹೊತ್ತು ನಿಂತುಕೊಂಡು ಮಾತನಾಡುವುದಕ್ಕೆ ಆಗುವುದಿಲ್ಲ. . . .

**ಸಭಾಪತಿಗಳು:-** ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ? ನೀವೇ ಸಮಯವನ್ನು ಹೇಳಿ. 10 ನಿಮಿಷ ಮಾತನಾಡುತ್ತೀರೋ, 20 ನಿಮಿಷ ಮಾತನಾಡುತ್ತೀರೋ ದಯವಿಟ್ಟು ಹೇಳಿ.

**ಶ್ರೀ ವಿ.ಸೋಮಣ್ಣ**:-ಸಭಾನಾಯಕರು ಈಗ ಎದ್ದು ನಿಂತುಕೊಂಡು, ಆ 7 ಟಿಎಂಸಿ ನೀರಿನಲ್ಲಿ ಒಂದು ಇಂಚು ನೀರನ್ನೂ ಕೂಡ ತಮಿಳುನಾಡಿಗೆ ಬಿಡುವುದಿಲ್ಲ ಎಂದು ಹೇಳಿಬಿಟ್ಟರೆ ನಾನು ಮುಂದೆ ಮಾತನಾಡದೇ ಧನ್ಯವಾದ ಸಮರ್ಪಣೆ ಮಾಡಿ ಕುಳಿತುಕೊಂಡು ಬಿಡುತ್ತೇನೆ. . .

**ಸಭಾಪತಿಗಳು:-** ಎಷ್ಟು ಹೊತ್ತು ಮಾತನಾಡುತ್ತೀರಿ ಹೇಳಿ . . .

**ಶ್ರೀ ವಿ.ಸೋಮಣ್ಣ:-** 15 ನಿಮಿಷ ಮಾತನಾಡುತ್ತೇನೆ. 6.50 ಗಂಟೆಗೆ ಮುಗಿಸುತ್ತೇನೆ. ಎರಡು-ಮೂರು ವಿಚಾರಗಳ ಬಗ್ಗೆ ಸರ್ಕಾರದ ಗಮನಸೆಳೆಯ ಬಯಸುತ್ತೇನೆ. ಬೆಳೆಯುತ್ತಿರುವ ಬೆಂಗಳೂರು ನಗರಕ್ಕೆ ಮುಂದಿನ ದಿನಗಳಲ್ಲಿ ಸರ್ಕಾರ ಯಾವರೀತಿಯ ಕ್ರಿಯಾ ಯೋಜನೆಯನ್ನು ಮಾಡುತ್ತದೆ ತಿಳಿಸಬೇಕು. ಕುಡಿಯುವ ನೀರಿಗೆ ಶಾಶ್ವತವಾದ ಪರಿಹಾರ ಕೊಡುವುದಕ್ಕೆ ನಿಮ್ಮಲ್ಲಿರುವ ಚಿಂತನೆ ಏನು? ನನಗೆ ತಿಳಿದಮಟ್ಟಿಗೆ ನಮ್ಮ ವಕೀಲರ ಕಾರ್ಯವೈಖರಿ ಏನಿದೆ . . . . ಮಾನ್ಯ ಸಭಾಪತಿಗಳೆ, ಮಾನ್ಯ ದೇವೇಗೌಡರು, ಸನ್ಮಾನ್ಯ ಜೆ.ಹೆಚ್.ಪಟೇಲರು ಮತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಾನು ಸುಮಾರು ಬಾರಿ ಮಾನ್ಯ ನಾರಿಮನ್‌ರವರನ್ನು ಭೇಟಿ ಮಾಡಿದ್ದೆ. ಅವರೊಬ್ಬರು ವಕೀಲರು ಎಂದು ಹೇಳುವುದಕ್ಕಿಂತ ಹೆಚ್ಚಾಗಿ ಅವರಲ್ಲಿ ಅವರದೇ ಆದಂಥ ಒಂದು ದೃಷ್ಟಿಕೋನ ಇದೆ. ಅವರು ಒಂದು ಹಂತದಿಂದ ಮೇಲ್ಪಟ್ಟು ಹೋಗಿದ್ದಾರೆ. ಅವರನ್ನು, ಈ ರೀತಿ ಮಾಡಿ ಎಂದು ಹೇಳುವ ಕೆಲಸವನ್ನು ಇವತ್ತಿಗೂ ಕೂಡ ಯಾವ ರಾಜಕಾರಣಿ ಕೂಡ ಮಾಡಿಲ್ಲ. ಮಾಡುವ ಪರಿಸ್ಥಿತಿಯಲ್ಲೂ ಇಲ್ಲ. ಆವತ್ತಿನ ಅವರ ಕಾರ್ಯವೈಖರಿ ಇವತ್ತಿಗೂ ಕೂಡ ಮುಂದುವರೆದುಕೊಂಡು ಹೋಗುತ್ತಿದೆ. ಆದ್ದರಿಂದ ನಾನು ಈ ಸದನದಲ್ಲಿ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅದೇನೋ ಸೋಮನ ಹಳ್ಳಿಯ ಮುದುಕಿ ಕತೆಯಲ್ಲಿ ಬರುವ ಸನ್ನಿವೇಶದ ಹಾಗೆ ಇವರ ಅವಶ್ಯಕತೆ ಇಲ್ಲ. ಅನೇಕ ನುರಿತ ಖ್ಯಾತ ವಕೀಲರು, ತಮ್ಮದೇ ಆದ ದೃಷ್ಟಿಕೋನವನ್ನು ಹರಿಸುವವರು, ರಾಜ್ಯದ ಹಿತವನ್ನು ಕಾಪಾಡುವವರು, ಈ ರಾಜ್ಯದ ಆಗು-ಹೋಗುಗಳ ಬಗ್ಗೆ ಸವಿಸ್ತಾರವಾಗಿ ತಿಳಿದುಕೊಂಡಿರುವವರು ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಜನ ಇದ್ದಾರೆ. ಅಂಥವರನ್ನು ನೇಮಕ ಮಾಡಿಕೊಳ್ಳುವುದರ ಬಗ್ಗೆ ಆಲೋಚನೆ ಮಾಡುವುದು ಒಂದು ಕಡೆಯಾದರೆ, ಮತ್ತೊಂದು ಕಡೆ, ಇವತ್ತು ಕೆಲವು ಜನ ವಕೀಲರು ಹಣವನ್ನು ತೆಗೆದುಕೊಂಡು ಕೋರ್ಟಿಗೂ ಹೋಗಿರದೇ ಇರುವಂಥ ವ್ಯವಸ್ಥೆ ಏನಿದೆ ಇದು ಸುಮಾರು ವರ್ಷದಿಂದ ನಡೆದುಕೊಂಡು ಬಂದಿರುವಂಥ ಪೆಡಂಭೂತವಾಗಿದೆ. ಕರ್ನಾಟಕ ರಾಜ್ಯಕ್ಕೆ ಹಿನ್ನಡೆಯಾಗಿದ್ದರೆ, ನಮ್ಮ ಅಂಕಿಅಂಶಗಳ ಜೊತೆಯಲ್ಲಿ ಪ್ರಾಯಶಃ ಆಗಿಂದ್ದಾಗ್ಗೆ ಬಂದ ಸರ್ಕಾರಗಳ ಕಾರ್ಯವೈಖರಿಯಿಂದ ಅಂದರೆ, ಸರ್ಕಾರ ಹೇಳುವ ಮಾಹಿತಿಗಳನ್ನು ಅನುಸರಿಸಿ ಮುಂದೆ ಹೋಗುವ ಕೆಲಸವನ್ನು ವಕೀಲರು ಮಾಡದೇ, ವಕೀಲರು ಹೇಳುವಂಥದ್ದನ್ನು ಸರ್ಕಾರ ಕೇಳಿಕೊಂಡು ಮುಂದೆ ಹೋದ ಪರಿಸ್ಥಿತಿಯ ಹಿನ್ನೆಲೆಯ ಕಾರಣ ಎಂದು ಹೇಳಬೇಕಾಗುತ್ತದೆ, ಇವತ್ತು ಇಂತಹ ಸ್ಥಿತಿ ಸೃಷ್ಟಿಯಾಗಿದೆ. ಮಾನ್ಯ ಸಭಾಪತಿಗಳೆ, ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಚಾರ ಯಾವ ಬೆಂಚಿನ ಮುಂದೆ ಇಡಬೇಕು, ಇದಕ್ಕೆ ಕಾರಣಕರ್ತರು ಯಾರು, ಇದನ್ನು ಹೇಗೆ ಸರಿದೂಗಿಸಬೇಕು ಎನ್ನುವುದರ ಬಗ್ಗೆ ಅನೇಕ ಜನ ಮಾತನಾಡಿದ್ದಾರೆ. ಇಂತಹ ಸಂದರ್ಭದಲ್ಲಿ ನಮ್ಮ ವ್ಯವಸ್ಥೆಯನ್ನು ಬದಲಿಸಬೇಕಾದರೆ ಅದನ್ನು ನಾವು ಯಾವರೀತಿ ತೆಗೆದುಕೊಂಡು ಹೋಗಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಿದೆ. ಕೆಆರ್‌ಎಸ್ ಏನಾಗಿದೆ, ಕಬಿನಿ ಏನಾಗಿದೆ, ಹೇಮಾವತಿ ಏನಾಗಿದೆ, ಹಾರಂಗಿ ಏನಾಗಿದೆ, ಈ ಜಲಾಶಯಗಳ ಒಟ್ಟು ನೀರಿನ ಸಂಗ್ರಹ ಎಷ್ಟಿದೆ ಎನ್ನುವುದನ್ನು ನೋಡಿದಾಗ ಇಲ್ಲಿರುವ ನೀರಿನ ಪ್ರಮಾಣ ಮೆಟ್ಟೂರು ಡ್ಯಾಂ ಮತ್ತು ಭವಾನಿ ಡ್ಯಾಂನಲ್ಲಿರುವಂತಹ ನೀರಿನ ಪ್ರಮಾಣಕ್ಕಿಂತ ಕಡಿಮೆ ಇದೆ. ತಮಿಳುನಾಡಿನಲ್ಲಿ ಎಲ್ಲಿಂದ ಎಲ್ಲಿಗೆ ಹೋದರೂ, ದೃಷ್ಟಿ ಹಾಯಿಸಿದರೂ ಕೂಡ ಹಸಿರು ಕಂಗೊಳಿಸುತ್ತಿರುವುದನ್ನು ನೋಡುತ್ತೇವೆ. ಕೊಡಗಿನವರಿಗೆ ನಾವು ಇವತ್ತು ಅಭಿನಂದನೆ ಸಲ್ಲಿಸಬೇಕಿದೆ. ಆ ಜನರ ಯಾವುದೇ ಒಂದು ಭಾವನೆಗೆ ಸಂಬಂಧಪಟ್ಟಂತೆ

ನಾವು ದೃಷ್ಟಿಕೋನವನ್ನು ಇಟ್ಟುಕೊಂಡಿಲ್ಲ. ಅವರ ಹೃದಯ ವೈಶಾಲ್ಯತೆಯನ್ನು ನಾವು ಆನಂದದಿಂದ ಸ್ವೀಕಾರ ಮಾಡಬೇಕಿದೆ. ಕರ್ನಾಟಕದ ಜನ ಏನೂ ತಪ್ಪು ಮಾಡದೇ, ನಮ್ಮಲ್ಲಿರುವ ನೀರನ್ನು ತಮಿಳುನಾಡಿಗೆ ಬಳುವಳಿಯಾಗಿ ಕೊಟ್ಟು, ಅವರ ಹಿತವನ್ನು ಕಾಪಾಡಿ, ರಾಷ್ಟ್ರದ ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲರೂ ಕೂಡ ಒಂದೇ ಎನ್ನುವುದನ್ನು ತೋರಿಸಿ ದೊಡ್ಡತನವನ್ನು ಪ್ರದರ್ಶನ ಮಾಡಿದರೆ, ತಮಿಳುನಾಡಿನ ಸರ್ಕಾರ, ತಮಿಳುನಾಡು ನಡೆದುಕೊಳ್ಳುತ್ತಿರುವ ರೀತಿಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ಮಾಡಿದ್ದೇವೆ. ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಯಾವ್ಯಾವ ಕಾಲದಲ್ಲಿ ಏನೇನು ಆಗಬೇಕಿದೆಯೋ, ಈ ವಿಷಯವನ್ನು ಒಂದು ಹಂತಕ್ಕೆ ಬರಲು ಯಾರು ಕಾರಣರಾಗಿದ್ದಾರೋ ಇಂಥ ಜನರ ಬವಣೆಯನ್ನೂ ನೀಗಿಸಬೇಕಿದೆ. ಮಾನ್ಯ ಶ್ರೀಕಂಠೇಗೌಡರು ತುಂಬಾ ಚೆನ್ನಾಗಿ ಮಾತನಾಡಿದರು. ಮಂಡ್ಯ ಜಿಲ್ಲೆ ಇರಬಹುದು, ಮೈಸೂರಿನ ಕೆಲವು ಭಾಗಗಳಿರಬಹುದು ಅಥವಾ ಚಾಮರಾಜನಗರದ ಕೆಲವು ಭಾಗಗಳಿರಬಹುದು, ಹೀಗೆ ಕಬಿನಿ ವ್ಯಾಪ್ತಿಗೆ ಬರುವ ರೈತರು ಕಂಗಾಲಾಗಿದ್ದಾರೆ. ಸತ್ಯಕಾಲದಿಂದಲೂ ಕಾವೇರಿ ತಾಯಿ ಪಾಲಾರ್‌ವರೆಗೂ ಹರಿದು ಹೋಗುತ್ತಿದ್ದಾಳೆ. ಸುಮಾರು 80–85 ಕಿಲೋಮೀಟರ್ ವ್ಯಾಪ್ತಿಯಲ್ಲಿ ಏನು ನೀರು ಹರಿಯುತ್ತದೆಯೋ ಇಲ್ಲಿ ಕರ್ನಾಟಕದ ರೈತರಿಗೆ ಒಂದಿಂಚು ನೀರು ಕೂಡ ಉಪಯೋಗಕ್ಕೆ ಬಂದಿಲ್ಲ. ಆದರೆ, ಈ ನೀರು ಸೇರ್ಪಡೆಯಾಗುವ ತಮಿಳುನಾಡಿನ ಬಾರ್ಡರ್ ಪ್ರದೇಶಕ್ಕೆ ಹೋದರೆ, ಈ ನೀರು ಬಿಳಿಗುಂಡ್ಲುಗೆ ತಲುಪುವುದರ ಒಳಗೆ ಅಲ್ಲಿನ ರೈತರು ಎಷ್ಟು ಟಿಎಂಸಿ ನೀರನ್ನು ವ್ಯವಸಾಯಕ್ಕೆ ತೆಗೆದುಕೊಳ್ಳುತ್ತಿದ್ದಾರೆ, ಕುಡಿಯುವ ನೀರಿಗೆ ತೆಗೆದುಕೊಳ್ಳುತ್ತಿದ್ದಾರೆ, ಏನೆಲ್ಲಾ ಮಾಡುತ್ತಿದ್ದಾರೆ ಎನ್ನುವುದರ ಕಡೆ ಗಮನಹರಿಸಬೇಕು. ಕಾವೇರಿ ಹುಟ್ಟಿ ಹರಿಯುವ ಪ್ರದೇಶದ ಪಕ್ಕದಲ್ಲಿರುವ ಹನೂರು ತಾಲ್ಲೂಕು ಇರಬಹುದು, ಕೊಳ್ಳೇಗಾಲ ಇರಬಹುದು, ನಾಗಮಂಗಲ ಪ್ರದೇಶದಲ್ಲಿರಬಹುದು, ಇಲ್ಲಿ ಎಷ್ಟು ಪರ್ಸೆಂಟ್ ನೀರಾವರಿ ಇದೆ? ಮದ್ದೂರಿನ 2–3 ಹೋಬಳಿಗಳಿಗೆ ನೀರಾವರಿಯೇ ಇಲ್ಲ. ಪಾಂಡವಪುರದಲ್ಲಿ ಶೇಕಡ 40 ರಷ್ಟು ನೀರಾವರಿ ಇದೆ. ಆದರೆ ಅದೇ ತಂಜಾವೂರಿನಿಂದ ಹಿಡಿದು, ತಿರುಚ್ಚಿಯಿಂದ ಹಿಡಿದು . . ಕೊಯಂಬತ್ತೂರಿಗೂ ಕಾವೇರಿಗೂ ಏನು ಸಂಬಂಧ ಇದೆ? ಕೊಯಂಬತ್ತೂರಿಗೆ ಕಾವೇರಿ ನೀರನ್ನು ತೆಗೆದುಕೊಂಡು ಹೋಗಿದ್ದಾರೆ. ಹೊಸೂರಿಗೆ ಕುಡಿಯಲು ಕಾವೇರಿ ನೀರು ಸಿಗುತ್ತದೆ. ಆದರೆ ಬೆಂಗಳೂರಿಗೆ ನೀರು ಕುಡಿಯಲು ಕೇಳಿದರೆ ಕಾನೂನು ಹೇಳುತ್ತಾರೆ. ಬೆಂಗಳೂರಿನ ಪಕ್ಕದಲ್ಲಿರುವ ತಮಿಳು ನಾಡಿನ ಹೊಸೂರಿಗೆ ಕುಡಿಯಲು ಕಾವೇರಿ ನೀರು ಬರುತ್ತದೆ. ಬೆಂಗಳೂರು ಜನರಿಗೆ ಕುಡಿಯುವ ನೀರು ಕೇಳಿದರೆ ತಮಿಳುನಾಡಿನವರು ಕಾನೂನು ಹೇಳುತ್ತಾರೆ. ತಮಿಳುನಾಡಿಗೆ ಯಾವ ಕಾನೂನು? ಮೊನ್ನೆ ಆದ ಪ್ರಕೃತಿ ವಿಕೋಪದಿಂದ ಒಂದು ದೊಡ್ಡ ಸೂಚನೆಯನ್ನು ಕೊಟ್ಟರು. ಇಷ್ಟೆಲ್ಲಾ ಮಾಡಿದರೂ ನಾವು ನೀರನ್ನು ಬಿಡುಗಡೆ ಮಾಡುತ್ತಿದ್ದರೂ ನಿಮ್ಮ ತೊಂದರೆಗಿಂತ ಹೆಚ್ಚಾಗಿ ಕೂಡಿ ಬಾಳಿದರೆ ರಾಜ್ಯದ, ರಾಷ್ಟದ ಹಿತವನ್ನು ಯಾವರೀತಿ ಕಾಪಾಡಬೇಕು ಎನ್ನುವ ಭಾವನೆ ಇದೆ. ಈ ನಿಟ್ಟಿನಲ್ಲಿ ನಾವು ಕರ್ನಾಟಕ ಸಾಕಷ್ಟು ಸೋತಿದ್ದರೂ ತಮಿಳುನಾಡಿನವರ ಒಂದು ಅವ್ಯವಸ್ಥೆ ಏನಿದೆ ಇದನ್ನು ಸರಿ ಮಾಡಬೇಕಾದರೆ ಮಾನ್ಯ ಉಗ್ರಪ್ಪನವರು ಹೇಳಿದ ಹಾಗೆ ನಮ್ಮ ರಾಜ್ಯದ ಪರವಾಗಿ ವಾದವನ್ನು ಮಂಡಿಸಿರುತ್ತಿರುವಂತಹ ವಕೀಲರು ಸರಿಯಾದ ದಾರಿಯಲ್ಲಿ ತೆಗೆದುಕೊಂಡು ಹೋಗದೇ ಹೋದರೆ ಮತ್ತೆ ಅದೇ ಖಾಯಿಲೆಯೇ. ಮತ್ತೆ ಇದೇ ರೀತಿಯಾಗುತ್ತದೆ. ಅದು ಏಕೋ ಏನೋ ಯಾವ ಸರ್ಕಾರ ನಮ್ಮ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೂ ಕೂಡ ಎಲ್ಲರೂ ನಾರಿಮನ್ ರವರನ್ನೇ ಸೂಚಿಸುತ್ತಾರೆ. ನಾನು ಕೂಡ ಮಂತ್ರಿಯಾಗಿ, ಪಕ್ಷದ ಕಾರ್ಯದರ್ಶಿಯಾಗಿ ಹೋಗಿದ್ದೇನೆ. ನನಗೆ ತಿಳಿದ ಮಟ್ಟಿಗೆ ಒಂದು ಸಲ ಅವರ ಮನೆಗೆ ಹೋಗಿ ಬಂದವರು ಇನ್ನೊಂದು ಸಲ ಯಾರೂ ಅಲ್ಲಿಗೆ ಹೋಗುವುದೇ ಇಲ್ಲ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅವರದ್ದು ಉದ್ಧಟತನದ ಪರಮಾವಧಿ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಒಂದು ಒಳ್ಳೆಯ ಸಲಹೆಯನ್ನು ಕೊಟ್ಟರು. ಕರ್ನಾಟಕದಲ್ಲಿ ಬಹಳಷ್ಟು ಜನ ಬುದ್ಧಿಜೀವಿಗಳಿದ್ದಾರೆ. ಕರ್ನಾಟಕವನ್ನು ಅರಿತಿರುವ, ಇಡೀ ಇತಿಹಾಸವನ್ನು ಬಲ್ಲವರಿದ್ದಾರೆ. ಅವರು

ನಿವೃತ್ತ ನ್ಯಾಯಾಧೀಶರಿರಬಹುದು ಅಥವಾ ಮುಂದೆ ಬರುವ ಯುವ ವಕೀಲರ ತಂಡ ಇರಬಹುದು ಅವರನ್ನು ನೇಮಕ ಮಾಡುವುದು ಸಮಂಜಸವೆನಿಸುತ್ತದೆ. ಇದು ಯಾವ ಕಾಲಕ್ಕೆ ಅಂಕಿತವಾಗಬೇಕಾಗಿತ್ತು ಎಂಬುದಕ್ಕಿಂತ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕೇವಲ ಮೂರು ದಿವಸ ಎಂದು ಹೇಳಿ ಮತ್ತೆ ಅದೇ ಅಟಾರ್ನಿ ಜನರಲ್‌ರವರು ನ್ಯಾಯಾಲಯದ ಮುಂದೆ ನಮ್ಮಿಂದ ತಪ್ಪಾಗಿದೆ, ನಿಮಗೆ ಕಾನೂನಿನ ವ್ಯಾಪ್ತಿಯಲ್ಲಿಲ್ಲ, ಆದ್ದರಿಂದ ಅದನ್ನು ನಾವು ಮಾಡುವುದಕ್ಕೆ ಬರುವುದಿಲ್ಲ ಅದು ನಿಮ್ಮ ವ್ಯಾಪ್ತಿಯಲ್ಲ ಎಂದು ಹೇಳುವ ಯಾವುದಾದರೂ ಒಂದು ಧೀಮಂತಿಕೆ ಇದ್ದರೆ ಅದು ಪ್ರಧಾನಮಂತ್ರಿಯವರಾದ ಸನ್ಮಾನ್ಯ ನರೇಂದ್ರ ಮೋದಿ ಅವರ ಒಂದು ಸಂದೇಶವೇ ವಿನಃ ಅಟಾರ್ನಿ ಜನರಲ್‌ರವರು ಇದನ್ನು ಖಂಡಿತವಾಗಿಯೂ ಮಾಡುತ್ತಿರಲಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಆಡಳಿತವನ್ನು ಸರಿ ದಾರಿಯಲ್ಲಿ ಕೊಂಡೊಯ್ಯುವಂತಹ ಸರ್ಕಾರದ ಕಾರ್ಯವೈಖರಿಯನ್ನು ನಾವು ನೋಡಬೇಕಾದರೆ, ಆ ಸರ್ಕಾರದ ಮುಖ್ಯಸ್ಥರ ಸೂಚನೆಗಳಲ್ಲಿ ಬದಲಾವಣೆಯಾಗಿರುವುದನ್ನು ನೋಡಿದರೆ ನನಗನಿಸುತ್ತದೆ, ನಮ್ಮ ದೇಶದ ಪ್ರಧಾನಮಂತ್ರಿಯವರ ಸಮಯಪ್ರಜ್ಞೆ, ಅವರ ಸಂಕಲ್ಪ, ಅವರ ದೂರದೃಷ್ಟಿಯನ್ನು ನಾವು ಮೆಚ್ಚಿಕೊಳ್ಳಬೇಕಾಗುತ್ತದೆ. ಮಾನ್ಯ ಉಗ್ರಪ್ಪನವರು ತಿಳಿಸಿರುವ ಪ್ರಕಾರ ನಾವು ಇದಕ್ಕೆ ಕೊನೆಯ ರೂಪವೆಂದು ಇಲ್ಲಿಯವರೆಗೂ ಕಾವೇರಿ ವ್ಯವಸ್ಥೆಯಲ್ಲಿ ಅವತ್ತಿನ ಸಂದರ್ಭಕ್ಕೆ ತಕ್ಕಂತೆ ತಣ್ಣೀರಿಗೆ ಬಿಸಿನೀರು, ಬಿಸಿನೀರಿಗೆ ತಣ್ಣೀರು ಹಾಕಿಕೊಂಡೇ ಬಂದೆವು. ಇದಕ್ಕೆ ಸರಿಯಾದ ರೂಪವನ್ನು ಕೊಡುವ ಸಂದರ್ಭ ಇವತ್ತು ಬಂದಿದೆ. ನೀರು ಬಿಡಿ ಎಂದು ಹೇಳಿದರು. ಶ್ರೀ ಮನಮೋಹನ್ ಸಿಂಗ್ ರವರು ಪ್ರಧಾನಮಂತ್ರಿಯಾಗಿದ್ದ ಸಂದರ್ಭದಲ್ಲಿ ನಾನು ಆ ಸಭೆಗೆ ಹೋಗಿದ್ದೆ. ಶ್ರೀ ಅಟಲ್ ಬಿಹಾರಿ ವಾಜಪೇಯಿ ಯವರು ಪ್ರಧಾನಮಂತ್ರಿಯಾಗಿದ್ದ ಸಂದರ್ಭದಲ್ಲೂ ನಾವಿದ್ದೆವು. ಅನೇಕ ಸಂದರ್ಭಗಳಲ್ಲಿ ಈ ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲಾ ಪ್ರಧಾನ ಮಂತ್ರಿಗಳು ಕೂಡ ಸಮಯೋಚಿತವಾದ ತೀರ್ಮಾನಗಳನ್ನು ಮಾಡಿದ್ದರೂ ಈ ಸಮಸ್ಯೆಗೆ ಶಾಶ್ವತವಾದ ಪರಿಹಾರ ಕಂಡುಕೊಳ್ಳುವುದಕ್ಕಾಗಿಲ್ಲ. ಶಾಶ್ವತವಾದ ಪರಿಹಾರಕ್ಕೆ ಈ ದಿನ ಕಾಲ ಕೂಡಿ ಬಂದಿದೆ. ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ಧರಾಮಯ್ಯನವರು, ಮಾಜಿ ಪ್ರಧಾನಮಂತ್ರಿಯಾದ ಸನ್ಮಾನ್ಯ ಹೆಚ್.ಡಿ. ದೇವೇಗೌಡರು, ಕೇಂದ್ರ ಸರ್ಕಾರದ ಮಂತ್ರಿಯವರಾದ ಸನ್ಮಾನ್ಯ ಅನಂತ್‌ಕುಮಾರ್‌ರವರು ಕಾಕತಾಳೀಯವೆಂಬಂತೆ ಅಂದು ಸಂಜೆ ಬೆಂಗಳೂರಿಗೆ ಬಂದು ಅವರೆಲ್ಲರ ಜೊತೆಯಲ್ಲಿ ಚರ್ಚೆ ಮಾಡಿ ತೀರ್ಮಾನಗಳನ್ನು ಮಾಡಿರುವುದರ ಪ್ರತಿಫಲವಾಗಿ ಈ ವ್ಯವಸ್ಥೆಯನ್ನು ಸರಿ ಮಾಡುವುದಕ್ಕೆ ಈಗ ಕಾಲ ಪಕ್ವವಾಗಿದೆ ಎಂದು ನನಗನಿಸುತ್ತಿದೆ. ನಾನು ಸದನದ ಮುಖೇನ ಸರ್ಕಾರವನ್ನು ವಿನಂತಿಸಿಕೊಳ್ಳುವುದೇನೆಂದರೆ, 224 ಜನ ವಿಧಾನ ಸಭಾ ಸದಸ್ಯರು, 28 ಜನ ಲೋಕಸಭಾ ಸದಸ್ಯರು, 75 ಜನ ವಿಧಾನ ಪರಿಷತ್ ಸದಸ್ಯರು, 12 ಜನ ರಾಜ್ಯಸಭಾ ಸದಸ್ಯರು ರಾಷ್ಟ್ರದ ರಾಷ್ಟ್ರಪತಿಗಳನ್ನು ಭೇಟಿಯಾಗಬೇಕೆನ್ನುವ ವಿಚಾರವನ್ನು ನಾವು ಸ್ವಾಗತ ಮಾಡುತ್ತೇವೆ. ಅದೇ ನಿಟ್ಟಿನಲ್ಲಿ ಪ್ರಧಾನಮಂತ್ರಿಯವರನ್ನೂ ಕೂಡ ನಾವು ಭೇಟಿಯಾಗಬೇಕಾಗುತ್ತದೆ. ಆದ್ದರಿಂದ ಈ ಎರಡು ಕೆಲಸವನ್ನು ಮಾಡುವ ಜೊತೆಯಲ್ಲಿ ಸಾಮರಸ್ಯವನ್ನು ತರುವ ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಸಮಸ್ಯೆಗೆ ಅವರವರ ಕಾಲದಲ್ಲಿ ಅವತ್ತಿಗೆಷ್ಟು ಬೇಕೋ ಅಷ್ಟನ್ನು ಮಾತ್ರ ಮಾಡಿಕೊಂಡು ಬಂದರು. ಇವತ್ತು ಇದಕ್ಕೆ ಶಾಶ್ವತವಾದ ಪರಿಹಾರವನ್ನು ತೆಗೆದುಕೊಳ್ಳುವುದಕ್ಕೆ ಒಳ್ಳೆಯ ಕಾಲ ಬಂದಿದೆ. ಇಷ್ಟೆಲ್ಲಾ ಇದ್ದರೂ ನಾವೆಲ್ಲಾ ಇವತ್ತಿನವರೆಗೂ ನಿಮ್ಮ ಜೊತೆಯಲ್ಲಿದ್ದೇವೆ. ಆದರೆ ಇವತ್ತೇಕೆ ನೀವು ಈ ರೀತಿಯ ಒಂದು ನಿರ್ಣಯವನ್ನು ತಂದು ಏನೇನೋ ಮಾಡುತ್ತಿದ್ದೀರಿ? ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ನಿಮ್ಮ ನಿರ್ಣಯದಲ್ಲಿ ದಯಮಾಡಿ ಒಂದು ಮಾರ್ಪಾಡು ಮಾಡಬೇಕಾಗುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ರಾಷ್ಟ್ರದ ವ್ಯವಸ್ಥೆಯನ್ನು ಬದಲಿಸಬೇಕೆನ್ನುವ ದೃಷ್ಟಿಯಲ್ಲಿ ತಮಿಳುನಾಡು ಮತ್ತು ಕರ್ನಾಟಕ ಒಂದೇ ಎಂದು ಹೇಳುವುದಕ್ಕೆ ಒಂದು ಹೊಸ ಅಧ್ಯಾಯವನ್ನು ಪ್ರಾರಂಭ ಮಾಡಿರುವ ಪ್ರಧಾನ ಮಂತ್ರಿಯವರ ಸಂದೇಶದ ಜೊತೆಯಲ್ಲಿ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ತಾವು ಕೈಗೊಂಡಿರುವ ತೀರ್ಮಾನಗಳ ಜೊತೆಯಲ್ಲಿ ಎಲ್ಲಾ ಪಕ್ಷಗಳು ಒಟ್ಟಾಗಿ ಕೆಲಸ ಮಾಡಿದ್ದೇವೆ. ಆ

ನಿಟ್ಟಿನಲ್ಲಿ ದಯಮಾಡಿ ಸೂಕ್ತ ನಿರ್ಣಯವನ್ನು ತೆಗೆದುಕೊಂಡು 'ಬೆಳೆಗಳಿಗೆ ನೀರನ್ನು ಬಿಡುಗಡೆಗೊಳಿಸುವ ಬಗ್ಗೆ ಹಾಗು ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದು ಈ ಸದನವು ನಿರ್ಣಯಿಸುತ್ತದೆ' ಎನ್ನುವುದರ ಬದಲಿಗೆ ಪ್ರಾಯಶಃ ನನಗನಿಸುತ್ತದೆ, ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಉಳಿದಿರುವ 7 ಟಿಎಂಸಿ ನೀರನ್ನು ನಮ್ಮ ರಾಜ್ಯದ ರೈತರ ಬೆಳೆಗಳಿಗೆ ಬಿಡುಗಡೆ ಮಾಡುವುದಕ್ಕೆ ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆಂಬ ಒಂದು ಸಣ್ಣ ಬದಲಾವಣೆಯನ್ನು ಮಾಡಿಕೊಂಡು ಇವತ್ತಿನ ಈ ತೀರ್ಮಾನಗಳ ಜೊತೆಯಲ್ಲಿ ಒಕ್ಕೂಟದ ವ್ಯವಸ್ಥೆಯನ್ನು ತರಬೇಕೆಂದರೆ, ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಯನ್ನು ಹೊಡೆಯುವುದಕ್ಕಾಗುವುದಿಲ್ಲ. ಆದ್ದರಿಂದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಒಡಂಬಡಿಕೆ ವ್ಯವಸ್ಥೆಯಲ್ಲಿ ತೋರಿಸಿರುವ ಸರಿ ದಾರಿಯಲ್ಲಿ ಕೊಂಡೊಯ್ಯುವ ಕೆಲಸ ಮಾಡುವ ಜೊತೆಯಲ್ಲಿ ಪ್ರಧಾನ ಮಂತ್ರಿಯವರ ದೂರದೃಷ್ಟಿಯ ಚಿಂತನೆ ಏನಿದೆ ಇಡೀ ಭವ್ಯ ಭಾರತ ಭವಿಷ್ಯದ ಬೆಳವಣಿಗೆ ಏನಿದೆ ಆ ಬೆಳವಣಿಕೆಯಲ್ಲಿ ಕರ್ನಾಟಕವೂ ಒಂದು ಎಂದು ತೋರಿಸಿದ್ದಾರೆ. ಅದಕ್ಕೆ ನಾನು ಈ ಸದನದ ಮುಖೇನ ಸನ್ಮಾನ್ಯ ಪ್ರಧಾನ ಮಂತ್ರಿಯವರಿಗೆ, ಕೇಂದ್ರ ಸಚಿವ ಅನಂತ್‌ಕುಮಾರ್ ರವರಿಗೆ, ಮಾಜಿ ಪ್ರಧಾನಮಂತ್ರಿಯಾದ ಸನ್ಮಾನ್ಯ ಹೆಚ್.ಡಿ.ದೇವೇಗೌಡರಿಗೆ, ಸನ್ಮಾನ್ಯ ಮುಖ್ಯಮಂತ್ರಿಯವರಾದ ಸಿದ್ದರಾಮಯ್ಯನವರಿಗೆ ಅಭಿನಂದನೆಗಳನ್ನು ಸಲ್ಲಿಸುವುದರ ಜೊತೆಯಲ್ಲಿ ಒಕ್ಕೂಟದ ವ್ಯವಸ್ಥೆಯಲ್ಲಿ ಒಂದೇ ಒಂದು ಇಂಚು ನೀರನ್ನು ಕೂಡ ಇವತ್ತಿನ ಸಂದರ್ಭದಲ್ಲಿ ತಾವು ತಮಿಳುನಾಡಿಗೆ ಬಿಡಬಾರದು ಎಂದು ಒತ್ತಾಯಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಈ ಚರ್ಚೆಯನ್ನು ಮುಂದುವರೆಸಬೇಕೇ ಅಥವಾ ಅವರು ನಿರ್ಣಯವನ್ನು ಮಂಡಿಸುತ್ತಾರೆಯೇ? ಏಕೆಂದರೆ ಅವರಿಗೂ ನಿಮಗೂ ಚರ್ಚೆ ಇಲ್ಲ, ಸರ್ಕಾರಕ್ಕೂ ನಿಮಗೂ ಏನಾದರೂ ಇದ್ದರೆ ಹೇಳಿ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಅಟಾರ್ನಿ ಜನರಲ್ ರವರು ಅಫಿಡವಿಟ್ ಹಾಕಿದ್ದು ಅವರು ಮಾಡಿರುವ ತಪ್ಪುಗಳನ್ನು ತಿದ್ದುಕೊಂಡಿದ್ದೇ ವಿನಃ ಅದರಲ್ಲೇನೂ ...

**(ಗೊಂದಲ)**

**ಸಭಾಪತಿಯವರು:–** ಇದರ ಬಗ್ಗೆ ಚರ್ಚೆ ಮಾಡುತ್ತೀರಾ?

**ಶ್ರೀ ವಿ. ಸೋಮಣ್ಣ:–** ಇಂಥ ತಪ್ಪುಗಳು ತುಂಬಾ ಆಗಿವೆ.

**(ಗೊಂದಲ)**

**ಸಭಾಪತಿಯವರು:–** ಈ ಬಗ್ಗೆ ಈಗ ಇನ್ನೊಂದು ಗಂಟೆ ಚರ್ಚೆ ನಡೆಯುತ್ತದೆ. ರಾತ್ರಿ 8–9 ಗಂಟೆಯವರೆಗೂ ಬೇಕಾದರೆ ಚರ್ಚೆ ನಡೆಯಲಿ, ನಾನು ಕುಳಿತುಕೊಳ್ಳುವುದಕ್ಕೆ ತಯಾರಿದ್ದೇನೆ. ನಾನು ತಾವೆಲ್ಲರೂ ಸದನವನ್ನು ಮುಗಿಸಬೇಕೆಂದು ಅಭಿಪ್ರಾಯ ಪಟ್ಟಂತೆ ನಾನು ಮುಗಿಸುವುದಕ್ಕೆ ತಯಾರಾಗಿದ್ದೆ. ಈ ವಿಷಯದ ಬಗ್ಗೆ ಮುಖ್ಯ ಸಚೇತಕರು ಎತ್ತಿರುವ ವಿಷಯದ ಬಗ್ಗೆ, ಬೇರೆ ಬೇರೆ ವಿಷಯಗಳ ಬಗ್ಗೆ ಚರ್ಚೆಯಾಗಬೇಕೆಂದರೆ, ನನ್ನ ಭಿನ್ನಾಭಿಪ್ರಾಯವೇನೂ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಸಚೇತಕರು ಪ್ರಸ್ತಾಪ ಮಾಡಿರುವ ವಿಷಯ ಈಗಾಗಲೇ ದಾಖಲೆಗೆ ಹೋಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಬೆಳಿಗ್ಗೆ ನಾನು ಮಾತನಾಡುವ ಸಂದರ್ಭದಲ್ಲಿ ....

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈಗ ದಯವಿಟ್ಟು ನಾವು ಮಂಡ್ಯ ಜನ ನಾವು. ಲಿಸ್ಟ್‌ನಲ್ಲಿ ನಮ್ಮ ಹೆಸರಿದೆ.

**ಸಭಾಪತಿಯವರು:–** ಮುಂದೆ ನಿಮ್ಮದೇ ಹೆಸರಿದೆ. ನೀವು ಮಾತನಾಡುವುದಾದರೆ ಮಾತನಾಡಿ, ಟೈಂ ಕೊಡುತ್ತೇನೆ.

**ಶ್ರೀ ಸಂದೇಶ್ ನಾಗರಾಜ್:–** ನಾನು ನಿಮಗೆ ಗೌರವ ಕೊಡುತ್ತೇನೆ. ನೀವು ಹೇಳಿದರೆ ನಾನು ಮಾತನಾಡುತ್ತೇನೆ ಇಲ್ಲದಿದ್ದರೆ ಇಲ್ಲ. ನಮಗೇನೂ 15–20 ನಿಮಿಷ ಮಾತನಾಡುವ ಇಚ್ಛೆ ಇಲ್ಲ. ನೀವು ಮಾತನಾಡಿ ಎಂದರೆ ಮಾತನಾಡುತ್ತೇನೆ.

**ಸಭಾಪತಿಯವರು:–** ಸಂದೇಶ್ ನಾಗರಾಜ್ ರವರು ಈಗ ಕಾವೇರಿ ವಿಷಯದ ಬಗ್ಗೆ ಮಾತನಾಡುತ್ತಾರೆ.

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ನಾನು ಐದು ನಿಮಿಷ ಕೂಡ ತೆಗೆದುಕೊಳ್ಳುವುದಿಲ್ಲ, ಎರಡೇ ನಿಮಿಷದಲ್ಲಿ ನಾನು ಮಾತನಾಡಿ ಮುಗಿಸುತ್ತೇನೆ. ಮಂಡ್ಯದಲ್ಲಿ ವ್ಯವಸಾಯವನ್ನು, ಮೈಸೂರಿನಲ್ಲಿ ಉದ್ಯಮವನ್ನು ಮಾಡಿಕೊಂಡು ಕಳೆದ ಒಂದು ತಿಂಗಳಿನಿಂದ ನಾವು ಅನುಭವಿಸುತ್ತಿರುವುದು ಪರಮಾತ್ಮನೊಬ್ಬನಿಗೆ ಗೊತ್ತಿದೆ. ಕಾರಣ ಇಷ್ಟೇ, ಆ ಬಗ್ಗೆ ಇದುವರೆಗೆ ಎಲ್ಲರೂ ಮಾತನಾಡಿದ್ದಾರೆ, ಆದ್ದರಿಂದ ನಾನು ಏನೂ ಮಾತನಾಡುವುದಿಲ್ಲ. ಈ ದಿನ ಮಂಡಿಸಿರುವ ನಿರ್ಣಯಕ್ಕೆ ನಾನು ಬದ್ಧನಾಗಿದ್ದೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಯತ್ನಾಳ್‌ರವರು ಮಾತನಾಡಬೇಕೆಂದು ಹೇಳಿದರು. ಎಷ್ಟು ಹೊತ್ತು ಮಾತನಾಡುತ್ತೀರಿ?

**ಶ್ರೀ ಬಸವರಾಜ ಪಾಟೀಲ ಯತ್ನಾಳ್:–** ಮಾನ್ಯ ಸಭಾಪತಿಯವರೇ, ಐದು ನಿಮಿಷ ಮಾತನಾಡುತ್ತೇನೆ. ಕಾವೇರಿ ಬಗ್ಗೆ ವಿಶೇಷ ಅಧಿವೇಶನವನ್ನು ಕರೆದು ಕಾವೇರಿ ನೀರಿನ ಬಗ್ಗೆ ಗಂಭೀರವಾದ ಚರ್ಚೆಯನ್ನು ಈ ದಿನ ಮಾಡುತ್ತಿದ್ದೇವೆ. ನ್ಯಾಯಾಲಯದ ತೀರ್ಪು ಕರ್ನಾಟಕಕ್ಕೆ ಇವತ್ತಿನ ದಿವಸ ಒಂದು ಆಘಾತಕಾರಿಯಾದ ವಿಚಾರವಾಗಿದೆ. ತಾವು ಮೊದಲೇ ನ್ಯಾಯಮೂರ್ತಿಗಳ ಬಗ್ಗೆ, ನ್ಯಾಯಾಲಯಗಳ ಬಗ್ಗೆ ಮಾತನಾಡಬಾರದೆಂದು ಸೂಚಿಸಿದ್ದೀರಿ. ಆದರೆ ನ್ಯಾಯಾಲಯಗಳು, ನ್ಯಾಯಮೂರ್ತಿಗಳು ತಪ್ಪು ಮಾಡಿದಾಗ ಸದನದಲ್ಲಿ ಮಾತನಾಡದೇ ಸಾರ್ವಜನಿಕವಾಗಿ ಮಾತನಾಡಲು ಆಗುವುದಿಲ್ಲ. ಒಮ್ಮೊಮ್ಮೆ ನ್ಯಾಯಮೂರ್ತಿಗಳು ತಮ್ಮ ವ್ಯಾಪ್ತಿ ಮೀರಿ ಅನೇಕ ಸಂದರ್ಭಗಳಲ್ಲಿ ನ್ಯಾಯಾಲಯದಲ್ಲಿ ರಾಜಕಾರಣಿಗಳ ಬಗ್ಗೆ, ವ್ಯವಸ್ಥೆ ಬಗ್ಗೆ ಅನಾವಶ್ಯಕವಾಗಿ ಬಹಳ ಹಗುರವಾಗಿ ಮಾತನಾಡುತ್ತಾರೆ. ರಾಜಕಾರಣಿಗಳು ಎಂದರೆ ಕಳ್ಳರು, ಲೂಟಿಕೋರರು ಎಂದು ಬಹಳ ಹಗುರವಾಗಿ ಮಾತನಾಡುತ್ತಾರೆ. ಅಂದರೆ ಅವರಿಗೆ ಆ ರೀತಿ ಮಾತನಾಡುವುದಕ್ಕೆ ಸಂವಿಧಾನದಲ್ಲಿ ಏನಾದರೂ ಅಧಿಕಾರ ಇದೆಯೇ? ಹಿಯರಿಂಗ್ ಕೇಳಬೇಕು, ನ್ಯಾಯ ಕೊಡಬೇಕು ಅಷ್ಟೆ ಅವರ ಕೆಲಸ. ಅದರ ವ್ಯಾಪ್ತಿ ಬಿಟ್ಟು ಓಪನ್ ನ್ಯಾಯಾಲಯಗಳ ಕಟ್ಟಡ ಸಂಕೀರ್ಣಗಳ ಉದ್ಘಾಟನೆ ಸಂದರ್ಭದಲ್ಲೂ ಕೂಡ ರಾಜಕಾರಣಿಗಳ ಹೆಸರು ತೆಗೆದುಕೊಂಡು ಹಗುರವಾಗಿ ಮಾತನಾಡುವುದನ್ನು ಅನೇಕ ಕಡೆ ನೋಡಿದ್ದೇವೆ. ಇದರ ಅರ್ಥ ಏನು? ನಮ್ಮ ರಾಜ್ಯದ ಹಿತ, ನಮ್ಮ ದೇಶದ ಹಿತ, ನಮ್ಮ ಜನಾಂಗದ ಹಿತ ಬಂದಾಗ ನಾವೆಲ್ಲರೂ ಅವರ ಬಗ್ಗೆ ಎಲ್ಲಿಯೂ ಮಾತನಾಡಬಾರದು ಎಂದರೆ ಅವರೇನು ಆಕಾಶದಿಂದ ಅಥವಾ ಸ್ವರ್ಗಲೋಕದಿಂದ ಬಂದಿಲ್ಲ. ಅವರು ನಮ್ಮ ಹಾಗೆ ಮನುಷ್ಯರು. ನಮ್ಮ ಹಾಗೆ ನೀರು ಕುಡಿಯುತ್ತಾರೆ, ನಮ್ಮ ಹಾಗೆ ಉಪ್ಪು, ಖಾರ ತಿನ್ನುತ್ತಾರೆ. ಸುಪ್ರೀಮ್ ಕೋರ್ಟ್‌ನಲ್ಲಿರುವವರು ಈ ದೇಶದ ಸಂವಿಧಾನದ ಅತ್ಯಂತ ಶ್ರೇಷ್ಠವಾದ ವ್ಯವಸ್ಥೆಯಲ್ಲಿ ಕುಳಿತಂಥವರು. ಅನೇಕ ಸಲ ಎಷ್ಟೋ ಬಡವರು ಕೊಟ್ಟಂಥ ಅರ್ಜಿಗಳು ಬೋರ್ಡ್‌ಗೆ ಬರಬೇಕಾದರೆ ವರ್ಷಾನುಗಟ್ಟಲೆ ಕಾಯಬೇಕಾಗುತ್ತದೆ. ಈ ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ

ಹೋದರೆ ಬಡವರಿಗೆ ನ್ಯಾಯ ಸಿಗುವುದಿಲ್ಲ. ಇವತ್ತು ಕಾವೇರಿ ವಿಚಾರದಲ್ಲಿ ಒಂದೇ ತಿಂಗಳಿನಲ್ಲಿ ಆರು ಸಲ ಸುಪ್ರೀಮ್‌ಕೋರ್ಟ್‌ನವರು ಹಸ್ತಕ್ಷೇಪ ಮಾಡುತ್ತಾರೆ. ನ್ಯಾಯಮೂರ್ತಿಗಳು 30ನೇ ತಾರೀಖಿನಂದು ಪ್ರಜಾತಂತ್ರದ ಬಗ್ಗೆ, ನಮ್ಮ ದೇಶದ ವ್ಯವಸ್ಥೆ ಬಗ್ಗೆ ಇವತ್ತು ಯಾವ ರೀತಿ ಚುಚ್ಚಿ ಅಪಮಾನ ಮಾಡಿದ್ದಾರೆ ಎನ್ನುವುದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. We are passing this order despite the resolution passed by the Joint Houses of the Legislature of the State of Karnataka ಎಂದರೆ ಏನು? ಈ ರಾಜ್ಯದ ಆರು ಕೋಟಿ ಜನರ ಜನಪ್ರತಿನಿಧಿಗಳು ಇರುವಂತಹ ಒಂದು ಪವಿತ್ರವಾದ ಸದನ ತನ್ನ ರಾಜ್ಯದ ಜನರ ಭಾವನೆಯ ಬಗ್ಗೆ ತನ್ನ ವಿಚಾರವನ್ನು ವ್ಯಕ್ತಪಡಿಸುವುದನ್ನು ಮೀರಿ ಹೇಳಿದ್ದಾರೆ. ಅದಕ್ಕೆ ಏನು ಅರ್ಥ ಇಲ್ಲ, ಅಂದರೆ ಈ ಸದನ ಹೇಳಿದ್ದೆಲ್ಲಾ ಸುಳ್ಳು, ನೀವು ನೀರು ಬಿಡಿ ಎಂದು ಹೇಳುತ್ತಿದ್ದಾರೆ. ಒಂದು ಕಡೆ ಟ್ರಿಬ್ಯೂನಲ್‌ರವರು 3,000 ಕ್ಯೂಸೆಕ್ಸ್ ನೀರು ಬಿಡಿ ಎಂದು ಹೇಳುತ್ತಾರೆ. ಸುಪ್ರೀಮ್ ಕೋರ್ಟ್‌ನವರು 6,000 ಕ್ಯೂಸೆಕ್ಸ್ ನೀರು ಬಿಡಿ ಎಂದು ಹೇಳುತ್ತಾರೆ. ಈ ನ್ಯಾಯಮೂರ್ತಿಗಳು ಹಿಂದೆ ವಕೀಲ ವೃತ್ತಿಯನ್ನು ತಮಿಳುನಾಡಿನಲ್ಲಿ ಮಾಡಿದ್ದರು. ಇವತ್ತು ನಾನು ನಮ್ಮ ವಕೀಲರನ್ನು ಕೇಳುತ್ತಿದ್ದೇನೆ, ನಮ್ಮ ಕರ್ನಾಟಕವನ್ನು ಪ್ರತಿನಿಧಿಸುವಂತಹ ಕಾನೂನಿನ ವಕೀಲರೇನಿದ್ದಾರೆ, ಇವರು ಒಂದು ಕಾಲಕ್ಕೆ ತಮಿಳುನಾಡಿನ ಮುಖ್ಯಮಂತ್ರಿಗಳ ವಕೀಲರಾಗಿ ಕೆಲಸ ಮಾಡಿದಂಥವರು. ಮಹಾರಾಷ್ಟ್ರದ ಪರವಾಗಿ ಕೆಲಸ ಮಾಡಿದಂಥವರು. ನಿಜವಾಗಿಯೂ ಅವರಿಗೆ ಮೌಲ್ಯಗಳು, ನೀತಿಗಳು ಇದ್ದರೆ ಆ ನ್ಯಾಯಮೂರ್ತಿಗಳು ತಾವಾಗಿಯೇ ನಾವು ಇದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ, ಒಂದು ಕಾಲದಲ್ಲಿ ನಮಗೂ ಅವರಿಗೂ ಸಂಬಂಧ ಇದೆ ಎಂದು ಅದನ್ನು ಬಿಟ್ಟು ಕೊಡಬೇಕಾಗಿತ್ತು. ದುರಂತವೆಂದರೆ ಆರಾರು ಜಡ್ಜ್‌ಮೆಂಟ್‌ಗಳನ್ನು ಕೊಡುತ್ತಾರೆಂದರೆ ಇನ್ನು ಕರ್ನಾಟಕಕ್ಕೆ ಯಾವ ರೀತಿ ಅನ್ಯಾಯವಾಗುತ್ತಿದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ನಾವು ಯಾವ ರೀತಿ ಸುಪ್ರೀಮ್‌ಕೋರ್ಟ್‌ಗೆ ಗೌರವ ಕೊಡಬೇಕು ಎಂಬುದನ್ನು ಸುಪ್ರೀಮ್‌ಕೋರ್ಟ್‌ನಲ್ಲಿರುವಂಥವರು ಅರ್ಥ ಮಾಡಿಕೊಳ್ಳಬೇಕು. ಸಂವಿಧಾನದಲ್ಲಿ ನಾವೆಲ್ಲಾ ಒಕ್ಕೂಟ ವ್ಯವಸ್ಥೆಯಲ್ಲಿರುವಂಥವರು. ಒಂದು ರಾಜ್ಯದ ಜನರ ಕುಡಿಯುವ ನೀರಿನ್ನು ಕಸಿದುಕೊಂಡು ಒಂದು ರಾಜ್ಯಕ್ಕೆ ಭತ್ತ ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡುವಂತಹ ತೀರ್ಪು ಕೊಟ್ಟಾಗ ಇವತ್ತು ನ್ಯಾಯಾಲಯಗಳ ಬಗ್ಗೆ ಏನು ಗೌರವ ಇದೆ, ಆ ಗೌರವ ಹೋಗುವಂತಹ ಪರಿಸ್ಥಿತಿ ನಮ್ಮ ದೇಶದಲ್ಲಿ ಇದೆ. ಮಾನ್ಯ ಸಭಾಪತಿಯವರೆ, ಕಾವೇರಿ ವಿಚಾರದಲ್ಲಿ ಬೀದರ್‌ನಿಂದ ಹಿಡಿದು ಚಾಮರಾಜನಗರದವರೆಗೆ ನಾವೆಲ್ಲಾ ಒಂದಾಗಿದ್ದೇವೆ. ನಾವು ಇವತ್ತು ಬೀದರ್‌ನಿಂದ ಹಿಡಿದು ಎಲ್ಲಾ ಕಡೆಗಳಲ್ಲೂ ಕಾವೇರಿ ವಿಚಾರದಲ್ಲಿ ಹೋರಾಟಗಳು, ಪ್ರತಿಭಟನೆಗಳು, ಪ್ರತಿಕೃತಿ ದಹನಗಳಾಗಿವೆ. ಆದರೆ ದುರ್ದೈವವೆಂದರೆ ಈ ರಾಜ್ಯದ ಇತಿಹಾಸದಲ್ಲಿ ಕೃಷ್ಣಾ ನದಿ ವಿಚಾರ ಬಂದಾಗ, ಮಹಾದಾಯಿ ನದಿ ವಿಚಾರ ಬಂದಾಗ, ತುಂಗಾಭದ್ರಾ ವಿಚಾರ ಬಂದಾಗ, ಈ ಸದನಗಳು ಹಿಂದೆ ಇಷ್ಟು ಗಂಭೀರವಾಗಿ ನಡೆದುಕೊಂಡಿವೆಯೇ? ಕೃಷ್ಣೆಗೆ ಒಂದು ಕಾನೂನು, ಕಾವೇರಿಗೆ ಒಂದು ಕಾನೂನು, ಇದು ನಿಜವಾಗಿಯೂ ಒಳ್ಳೆಯದಲ್ಲ. ಇವತ್ತು ಜನರಲ್ಲಿ ಉತ್ತರ ಕರ್ನಾಟಕ ಎನ್ನುವಂತಹ ಭಾವನೆ ಏಕೆ ಅನಿವಾರ್ಯವಾಗಿ ಬರುತ್ತಿದೆ ಎಂದರೆ, ಕಾವೇರಿ ಬಗ್ಗೆ ಇಷ್ಟೆಲ್ಲಾ ಗಂಭೀರವಾಗಿ ಚರ್ಚೆ ಮಾಡುತ್ತಿದ್ದೇವೆ. ಎರಡು ಸಲ ವಿಶೇಷ ಅಧಿವೇಶನ ಕರೆದಿದ್ದೇವೆ, ಸಾಕಷ್ಟು ಸಲ ಸರ್ವಪಕ್ಷಗಳ ಸಭೆ ಕರೆದಿದ್ದೇವೆ. ಇವತ್ತು ಮಹಾದಾಯಿ ಬಗ್ಗೆ ಏಕೆ ಚರ್ಚೆ ಮಾಡುತ್ತಿಲ್ಲ? ಮಹಾದಾಯಿ ಬಗ್ಗೆ ಇವತ್ತು ಏಕೆ ನೀವು ಸರ್ವಪಕ್ಷ ಸಭೆ ಕರೆದಿಲ್ಲ, ವಿಶೇಷ ಅಧಿವೇಶನ ಏಕೆ ಕರೆಯುತ್ತಿಲ್ಲ? ಕಾವೇರಿ ಮತ್ತು ಕೃಷ್ಣೆ ಕರ್ನಾಟಕದ ಎರಡು ಕಣ್ಣುಗಳು ಎಂದು ಹೇಳುತ್ತೇವೆ. ಆದರೆ ಒಬ್ಬ ಜವಾಬ್ದಾರಿಯುತ ಮಂತ್ರಿಗಳು ಕಲಬುರಗಿಗೆ ಬಂದು ಕಾವೇರಿ ನಮಗೇನು ಸಂಬಂಧ ಎಂದು ಹೇಳುತ್ತಾರೆ. ಇದರ ಅರ್ಥ ಏನು? ಒಬ್ಬ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡುವಂತಹ ಸಂದರ್ಭದಲ್ಲಿ ಇಡೀ ಕರ್ನಾಟಕದ ಪ್ರತಿನಿಧಿಯಾಗಿ ಕೆಲಸ ಮಾಡಬೇಕಾಗುತ್ತದೆ. ಕೇಂದ್ರ ಸಚಿವರಾದರೆ ಇಡೀ ಭಾರತದ ಒಬ್ಬ

ಸಚಿವರಾಗಿ ಕೆಲಸ ಮಾಡಬೇಕಾಗುತ್ತದೆ. ನನ್ನ ಜಿಲ್ಲೆಗೆ ಕಾವೇರಿ ಕೊಡುವುದಿಲ್ಲವೆಂದರೆ ಬೀದರ್‌ನವರು ವಿಚಾರ ಮಾಡಬಾರದು ಎನ್ನುವ ಹೇಳಿಕೆಯನ್ನು ಕೊಡುತ್ತಾರೆ. ಇಂತಹ ಹೇಳಿಕೆಗಳು ನಿಜಕ್ಕೂ ನಮ್ಮ ರಾಜ್ಯದ ವ್ಯವಸ್ಥೆಯಲ್ಲಿ ಒಳ್ಳೆಯದಲ್ಲ. ಅದಕ್ಕೆ ನಾನು ರಾಜ್ಯ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇವತ್ತೇನು ಮೊದಲು ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಇದರ ಬಗ್ಗೆ ನಮಗೆ ಎಲ್ಲೋ ಒಂದು ಕಡೆ ಸಂಶಯ ಬಂದಿದೆ. ವಿಶೇಷ ಅಧಿವೇಶನ ಕರೆದು ನಮ್ಮ ಕಡೆಯಿಂದ ಹೌದು ಎನಿಸಿಕೊಂಡು ರಾತ್ರೋರಾತ್ರಿ ನೀರು ಬಿಡುವವರಿದ್ದಾರೆಂದು ನಮಗನಿಸುತ್ತಿದೆ. ಹಿಂದಿನ ಬಹಳಷ್ಟು ಮುಖ್ಯಮಂತ್ರಿಗಳು 'ಮುಖ್ಯಮಂತ್ರಿ ಸ್ಥಾನ ಹೋದರು ಪರವಾಗಿಲ್ಲ, ನೀರು ಬಿಡುವುದಿಲ್ಲ' ಎಂದು ಈ ರೀತಿಯ ಭಾವಾವೇಶದ ಮಾತುಗಳನ್ನಾಡಿ ರಾತ್ರೋರಾತ್ರಿ ಕಾವೇರಿ ಗೇಟ್ ತೆರೆದು ನೀರು ಕೊಟ್ಟಂಥವರು ಈ ರಾಜ್ಯದಲ್ಲಿ ಅನೇಕ ಮುಖ್ಯಮಂತ್ರಿಗಳಿದ್ದಾರೆ. ನಾನು ಸಭಾನಾಯಕರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಿರ್ಣಯದ ಕೊನೆಯ ಪ್ಯಾರಾದಲ್ಲಿ ಏನಿದೆ ಎಂದರೆ, "ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು" ಸೂಕ್ತ ನಿರ್ಣಯ ಎಂದರೆ ಏನು ಎಂಬುದನ್ನು ಸರ್ಕಾರ ಸ್ಪಷ್ಟವಾಗಿ ಹೇಳಬೇಕು, ಕರ್ನಾಟಕದ ರೈತರ ನೀರಾವರಿ ಸಲುವಾಗಿ ಮತ್ತು ಕುಡಿಯುವ ನೀರಿನ ಸಲುವಾಗಿಯೇ ಸೀಮಿತವಾಗಿ ಈ ನಿರ್ಣಯವಾಗಬೇಕೆ ವಿನಃ ನಮ್ಮನ್ನೆಲ್ಲಾ ಕರೆದು ನಮ್ಮ ಕಡೆಯಿಂದ ಒಪ್ಪಿಗೆ ತೆಗೆದುಕೊಂಡು ಇವತ್ತು ರಾತ್ರಿಯೇ ನೀರು ಬಿಡುವ ವ್ಯವಸ್ಥೆ ಮಾಡಿಕೊಂಡಿರಬಹುದು. ಏಕೆಂದರೆ, ಅವರಿಗೆ ಎಲ್ಲೋ ಒಂದು ಕಡೆ ಭಯ ಇದೆ.

**ಸಭಾಪತಿಯವರು:–** ತಮ್ಮ ಸಮಯ ಆಯಿತು, ಮುಗಿಸಿಬಿಡಿ. ತಾವು ಹೇಳಿರುವ ಸಮಯ ಆಗಿದೆ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:–** ಮಾತನಾಡುವವರಿಗೆ ನಾನು ಬೇಡ ಎನ್ನುವುದಿಲ್ಲ. ಆದರೆ, ಎಷ್ಟು ಸಮಯ ಮಾತನಾಡಬೇಕೆಂದು ನೀವೇ ನಿರ್ಣಯ ಮಾಡಿಕೊಳ್ಳಬೇಕು.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:–** ಮಾನ್ಯ ಸಭಾಪತಿಯವರೆ, ನಾನು ಹೇಳುವುದೇನೆಂದರೆ, ಕಾವೇರಿ ವಿಚಾರದ ಬಗ್ಗೆ ಆ ಭಾಗದ ಜನರ ರೈತರಿಗೆ ಬಹಳಷ್ಟು ಗಂಭೀರವಾದ ಪರಿಸ್ಥಿತಿ ಇರುವುದರಿಂದ ಸನ್ಮಾನ್ಯ ದೇವೇಗೌಡರು ಕೊನೆಯದಾಗಿ ನಿನ್ನೆ ಮಾಡಿದಂತಹ ಹೋರಾಟ ನಿಜಕ್ಕೂ ಶ್ಲಾಘನೀಯವಾದುದು. ಅದಕ್ಕಾಗಿ ಅವರಿಗೆ ನಾವು ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಈ ದೇಶದ ಪ್ರಧಾನ ಮಂತ್ರಿಯವರಾದ ಮಾನ್ಯ ನರೇಂದ್ರ ಮೋದಿಯವರಿಗೆ ಹೃತ್ಪೂರ್ವಕವಾದ ಅಭಿನಂದನೆಯನ್ನು ಈ ಸದನ ಸಲ್ಲಿಸಬೇಕಾಗುತ್ತದೆ. ಪ್ರಧಾನ ಮಂತ್ರಿ ಯಾರೇ ಇರಲಿ, ಶ್ರೀಮತಿ ಇಂದಿರಾಗಾಂಧಿ, ಶ್ರೀ ರಾಜೀವ್‌ಗಾಂಧಿ, ಶ್ರೀ ಅಟಲ್‌ಬಿಹಾರಿ ವಾಜಪೇಯಿಯವರು ಇದ್ದಂತಹ ಕಾಲ ಇರಬಹುದು, ನೀವು ಒಳ್ಳೆಯದು ಮಾಡಿದಾಗಲೂ ಕೂಡ ಅದೇನೋ ಆಗುತ್ತಿತ್ತು, ಅಲ್ಲಿ ಅಟಾರ್ನಿ ಜನರಲ್‌ರವರು ಮಾಡಿದ್ದೇನು, ಸಹಜವಾದಂಥದ್ದು ಈ ರೀತಿ ನಾವು ಎಲ್ಲೋ ಒಂದು ರೀತಿ ಕೇಂದ್ರ ಸರ್ಕಾರ ನಮ್ಮ ಸಹಾಯಕ್ಕೆ ಬರುವಾಗ ಅಲ್ಲಿನ ನಮ್ಮ ಕೇಂದ್ರ ಮಂತ್ರಿಗಳು ವಿಶೇಷವಾಗಿ ಮಾನ್ಯ ಅನಂತಕುಮಾರ್‌ರವರು ಪ್ರಯತ್ನ ಮಾಡಿ ಪ್ರಧಾನ ಮಂತ್ರಿಗಳ ಮನವೊಲಿಸಿ ಇವತ್ತೇನು ಕರ್ನಾಟಕಕ್ಕೆ ದೊಡ್ಡ ಆಘಾತಕಾರಿಯಾದಂತಹ ಈ ಒಂದು ರಚನೆಯನ್ನು....

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಸದನಕ್ಕೆ ತಪ್ಪು ಸಂದೇಶ ಹೋಗುತ್ತಿದೆ.

**ಸಭಾಪತಿಯವರು:–** ಮಧ್ಯೆ ಮಾತನಾಡಬೇಡಿ. ಅವರು ಏನು ಬೇಕಾದರೂ ಮಾತನಾಡಲಿ. It is not a debate between you two people. ಅವರು ಏನು ಹೇಳುತ್ತಾರೆ ಹೇಳಲಿ, ಅಷ್ಟೆ. ತಮಗೂ ಅವಕಾಶ ಕೊಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ನಿಮ್ಮ ಅಡ್ವೊಕೇಟ್ ಜನರಲ್‌ರವರು ತಪ್ಪು ಮಾಹಿತಿಯನ್ನು ಕೊಟ್ಟು ಬಂದಿದ್ದಾರೆ. ನೀವು ದಯವಿಟ್ಟು ಹಿಂದಕ್ಕೆ ಸರಿಯಿರಿ ಎಂದು ಹೇಳಿದವರು ಯಾರು ಎಂಬುದನ್ನಾದರೂ ಸರಿಯಾಗಿ ಹೇಳಬೇಕಲ್ಲವೆ?

**ಸಭಾಪತಿಯವರು:–** ನಿಮಗೆ ಅವಕಾಶ ಕೊಟ್ಟಿದ್ದಾಗ ಹೇಳಿದ್ದೀರಲ್ಲವೆ? ಮಾನ್ಯ ಯತ್ನಾಳ್‌ರವರೆ, ದಯವಿಟ್ಟು ಕುಳಿತುಕೊಳ್ಳಿ ತಮ್ಮ ಸಮಯ ಮುಗಿದಿದೆ. ಈಗ ಮಾನ್ಯ ವೀರಯ್ಯನವರು ಮಾತನಾಡುತ್ತಾರೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೆ, ಅವರು ಹೇಳಿದರೆಲ್ಲಾ....

**Mr. CHAIRMAN:-** It is not a point to be debated. No, I will not allow. No, no, sorry ಕುಳಿತುಕೊಳ್ಳಿ. ಈಗ ವೀರಯ್ಯನವರು ಮಾತನಾಡುತ್ತಾರೆ.

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಜಲ ವಿವಾದ, ನೀರಿನ ಹಂಚಿಕೆ ವಿವಾದ ಈ ದೇಶದಲ್ಲಿ ಹೊಸದೇನು ಇಲ್ಲ. ಬುದ್ಧನ ಕಾಲದಲ್ಲಿಯೂ ಕೂಡ ಇತ್ತು. ರೋಹಿಣಿ ನದಿಯ ಹಂಚಿಕೆ ವಿಷಯದಲ್ಲಿ ಅಲ್ಲಿನ ಸಾಖ್ಯರಿಗೆ ಮತ್ತು ಕೋಲಿ ಎನ್ನುವ ದೇಶಗಳ ನಡುವೆ ವ್ಯಾಜ್ಯ ಬಂದಿತ್ತು. ಯುದ್ಧ ಮಾಡಿ ಎಂದು ಸಾಖ್ಯದವರು ಬುದ್ಧನಿಗೆ ಪ್ರೇರೆಪಿಸಿದರು. ನೀರಿಗೋಸ್ಕರ ಯುದ್ಧ ಮಾಡಬಾರದು. ಯುದ್ಧ ಮಾಡಿದರೆ, ಎರಡೂ ದೇಶಗಳಿಗೂ ನಷ್ಟವಾಗುತ್ತವೆ ಎಂದು ಹೇಳಿ ಬುದ್ಧನು ಕಾಡಿಗೆ ಹೋದನು ಹೊರತು ಯುದ್ಧ ಮಾಡಲಿಲ್ಲ. ಹಾಗೆ ನಮ್ಮ ದೇಶದ ಗುಜರಾತ್ ರಾಜ್ಯದಲ್ಲಿನ ದಾಮೋದರ್ ಕಣಿವೆಯಲ್ಲಿ ಒಂದು ಸಾರಿ ಪ್ರವಾಹ ಬಂದರೆ, ಇಡೀ ಗುಜರಾತ್ ರಾಜ್ಯವು ಮುಳುಗಡೆಯಾಗುವಂತಹ ಪರಿಸ್ಥಿತಿ ಇತ್ತು. ಅಂತಹ ಸಂದರ್ಭದಲ್ಲಿ ಒಂದು ಅಣೆಕಟ್ಟನ್ನು ದಾಮೋದರ್ ಕಣಿವೆಗೆ ಕಟ್ಟಬೇಕಾಗಿತ್ತು. ತಮಗೆಲ್ಲರಿಗೂ ಗೊತ್ತಿರಲಿ, ಡಾ॥ಬಿ.ಆರ್.ಅಂಬೇಡ್ಕರ್ ರವರು ಲೋಕೋಪಯೋಗಿ ಖಾತೆಯನ್ನು ವಹಿಸಿದ್ದರು, ಗಣಿ ಖಾತೆಯನ್ನು ನಿರ್ವಹಿಸಿದ್ದರು, ಕಲ್ಲಿದ್ದಲು ಖಾತೆಯ ಮಂತ್ರಿಯಾಗಿದ್ದರು. ಕೇವಲ ಕಾನೂನು ಅಥವಾ ಕಾರ್ಮಿಕ ಮಂತ್ರಿಯಾಗಿರಲಿಲ್ಲ. ಅಂಬೇಡ್ಕರ್ ರವರು ಅಮೇರಿಕಾ ದೇಶಕ್ಕೆ ಹೋಗುತ್ತಾರೆ. ಆಗ ಅಲ್ಲಿನ ನಿಸ್ಕಿನ್ ಎಂಬ ನದಿಯು ಅದೇ ರೀತಿಯ ಸಮಸ್ಯೆಯನ್ನು ಎದುರಿಸುತ್ತಿತ್ತು. ಅಲ್ಲಿ ಅಂಬೇಡ್ಕರ್‌ರವರು ಅಧ್ಯಯನ ಮಾಡಿಕೊಂಡು ಬಂದು ದಾಮೋದರ್ ಕಣಿವೆಗೆ ಒಂದು ಅಣೆಕಟ್ಟನ್ನು ಕಟ್ಟುತ್ತಾರೆ. ಅದಕ್ಕೆ ಅಂಬೇಡ್ಕರ್ ರವರ ಹೆಸರು ಇಡಿ ಎಂದು ಹೇಳುತ್ತಾರೆ. ಆದರೆ, ಈ ದೇಶವು ಅಂಬೇಡ್ಕರ್ ರವರ ಹೆಸರನ್ನು ಇಡಲಿಲ್ಲ. ದಾಮೋದರ್ ಎಂಬುವವರು ನಮಗೆ ಗೊತ್ತು ಇಲ್ಲವೋ, ಅದೇ ಹೆಸರನ್ನೇ ಆ ಕಣಿವೆಗೆ ಮುಂದುವರೆಸುತ್ತಾರೆ. ನಾನು ಏಕೆ ಅಂಬೇಡ್ಕರ್‌ರವರ ಹೆಸರನ್ನು ಉಲ್ಲೇಖಿಸಿದ್ದೇನೆ ಎಂದರೆ, ನಾನು ಈಗ ತಾನೆ ಶ್ರೀ ಉಗ್ರಪ್ಪ ರವರು ಮಾತನಾಡುವಾಗ, ಸಂವಿಧಾನವನ್ನು ಉಲ್ಲೇಖಿಸಿದ್ದು, ಅದರಲ್ಲಿ ಅನುಚ್ಛೇದ 262 ರಲ್ಲಿ ನೀರು ಹಂಚಿಕೆ ಬಗ್ಗೆ ಸ್ಪಷ್ಟವಾಗಿದೆ. ನೀರಿನ ಹಂಚಿಕೆಯ ಬಗ್ಗೆ ದೇಶದ ಪ್ರಧಾನ ಮಂತ್ರಿಯವರಿಗೂ ಅಧಿಕಾರವಿಲ್ಲ. ಆದರೆ, ಸಂಸತ್ತಿಗೆ ಅಧಿಕಾರವಿದೆ ಹಾಗೂ ಸಂಸತ್ತು ಅದನ್ನು ನಿರ್ಣಯಿಸಬಹುದು. ಅಂತರ್ ರಾಜ್ಯಗಳ ನಡುವೆ ವಿವಾದಗಳು ಬಂದರೆ, ಅದನ್ನು ಯಾವ ರೀತಿ ನಿಭಾಯಿಸಬಹುದು ಹಾಗೂ ನಿವಾರಣೆ ಮಾಡಬಹುದೆಂದು ಅನುಚ್ಛೇದದಲ್ಲಿ ನಮೂದು ಇದೆ. ಅದನ್ನು ಶ್ರೀ ವಿ.ಎಸ್.ಉಗ್ರಪ್ಪ ರವರು ಉಲ್ಲೇಖಿಸಿದ್ದಾರೆ. ಅನುಚ್ಛೇದ 262(2) ರಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಈ ಜಲ ವಿವಾದ ಬರುವುದಿಲ್ಲ ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ. ಖಂಡಿತ ಸ್ಪಷ್ಟವಾಗಿದೆ. ಅಂಬೇಡ್ಕರ್ ರವರ ಸಂವಿಧಾನದಲ್ಲಿ ಸ್ಪಷ್ಟವಾಗಿ ನಮೂದಾಗಿದೆ. ಅದರಲ್ಲಿ ಯಾವುದೇ ambiguity ಇಲ್ಲ. ಹಿಂದೆ ಶ್ರೀ ಜೈಲ್‌ಸಿಂಗ್ ರಾಷ್ಟ್ರಪತಿಯಾಗಿದ್ದಾಗ, ಆಗಿನ ಪ್ರಧಾನ ಮಂತ್ರಿಗಳ ಮಧ್ಯೆ ವಿವಾದ ಬಂದಿದ್ದಾಗಲೂ ಕೂಡ

ಸರ್ವೋಚ್ಚ ನ್ಯಾಯಾಲಯಕ್ಕೆ ಹೋದಾಗ, ಸರ್ವೋಚ್ಚ ನ್ಯಾಯಾಲಯವು ಸಂವಿಧಾನದ ಅನುಚ್ಛೇದದಲ್ಲಿ ಸಮಸ್ಯೆಗೆ ಪರಿಹಾರವಿದೆ ನೀವುಗಳು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಿ ಎಂದು ತಿಳಿಸಿತ್ತು. ಆದ್ದರಿಂದ ಸಂವಿಧಾನದಲ್ಲಿ ನೀರಿನ ವಿವಾದವು ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲವೆಂದು ಸ್ಪಷ್ಟವಾಗಿ ನಮೂದಾಗಿದೆ. ಅದು ಈಗಲೂ ಕೂಡ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಇನ್ನು ಮುಂದಾದರೂ ಸಹ, ಸಂವಿಧಾನದ ಅನುಚ್ಛೇದ 262 ಕಲಂ (2) ಕ್ಲಾಸ್ (2) ಏನು ಇದೆ, ಅದನ್ನು ನಮ್ಮ ವಕೀಲರು ಏಕೆ ಪ್ರತಿಪಾದಿಸಬಾರದು? ಸಂಸತ್ತಿನಲ್ಲಿ ನಿರ್ಣಯ ತೆಗೆದುಕೊಳ್ಳಬೇಕು, ಸರ್ವೋಚ್ಚ ನ್ಯಾಯಾಲಯಕ್ಕೆ ಬರುವುದಿಲ್ಲ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ತಪ್ಪು ಮಾಹಿತಿ ದಾಖಲೆಗೆ ಹೋಗಬಾರದು.

**ಸಭಾಪತಿಗಳು:–** ಶ್ರೀ ರಾಮಚಂದ್ರಗೌಡರೆ ಚರ್ಚೆ ಮಾಡಬೇಡಿ ಬೇಡಿ, ಅವರ ಅಭಿಪ್ರಾಯ ಹೇಳಿದ್ದಾರೆ, ನಿಮಗೆ ಅವಕಾಶ ಬೇಕಾದರೆ ಕೊಡುತ್ತೇನೆ ಆಮೇಲೆ ಮತ್ತೆ ಮಾತನಾಡಿ. ಆಮೇಲೆ ಕೊಡುತ್ತೇನೆ. ಕುಳಿತುಕೊಳ್ಳಿ. ಮಧ್ಯೆದಲ್ಲಿ ಬಾಯಿ ಹಾಕಬೇಡಿ. ಆಮೇಲೆ ಹೇಳಿ. I have allowed him to speak. He will speak. ಅವರು ಏನು ಬೇಕಾದರೂ ಮಾತನಾಡಲಿ.

**ಶ್ರೀ ಡಿ.ಎಸ್.ವೀರಯ್ಯ:–** ಈಗ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ನಾವೇ ತೆಗೆದುಕೊಂಡು ಹೋಗಿದ್ದೇವೆ ಅಥವಾ ತಮಿಳುನಾಡು ತೆಗೆದುಕೊಂಡು ಹೋಯಿತೋ, ನಮ್ಮ ಸರ್ಕಾರದ ಪರವಾಗಿಯೂ ವಾದ ಮಾಡಿದ್ದೇವೆ ಹಾಗೂ ಇದರ ನಿರ್ಣಯ ಕೂಡ ಬಂದಿದೆ. ನೀರನ್ನು ಹರಿಸಿದ್ದೇವೆ ಹಾಗೂ ನಿಲ್ಲಿಸಿದ್ದೇವೆ. ಆದರೆ, ಈಗಾಗಲಾದರೂ ಎಚ್ಚೆತ್ತುಕೊಂಡು, ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅನುಚ್ಛೇದ 262(2) ನ್ನು ಪ್ರತಿಪಾದಿಸಿ, ಇದು ಕೇವಲ ಸಂಸತ್ತಿಗೆ ಇದೆ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾ, ಈಗ ತಂದಿರುವ ನಿರ್ಣಯವನ್ನು ಸೂಕ್ತ ತಿದ್ದುಪಡಿಯೊಂದಿಗೆ ಅನುಮೋದನೆಗಾಗಿ ಮಂಡಿಸಿ ಎಂದು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ರಾಮಚಂದ್ರಗೌಡರೆ ಹೇಳಿದ್ದನ್ನು ಕೇಳಬೇಡಿ, ನಿಮ್ಮ ಅಭಿಪ್ರಾಯ ಏನು ಇದೆ ಅದನ್ನು ಹೇಳಿ. I don't allow the discussion between it. ನಿಮಗೂ ಬಿಡಲಿಲ್ಲ. ಅವರು ಮಧ್ಯೆ ಮಾತನಾಡುವುದನ್ನು ಯಾರಿಗೂ ಬಿಡಲಿಲ್ಲ. ಈಗ ಮಾತನಾಡುತ್ತಿರಾ? ಯಾರು ಮಾತನಾಡುತ್ತೀರಾ? ಮಾತನಾಡಿ. ಮಾತನಾಡುವುದನ್ನು ನಾನು restrict ಮಾಡುವುದಕ್ಕೆ ತಯಾರಿಲ್ಲ. Time limit ಹಾಕಿಕೊಳ್ಳಿ ಎಂದು ಕೇಳುತ್ತಿದ್ದೇನೆ ಅಷ್ಟೆ. ಮಾತನಾಡಬೇಡಿ ಎಂದು ನಾನು ಯಾರಿಗೂ ಹೇಳುವುದಿಲ್ಲ.

**ಶ್ರೀ ರಾಮಚಂದ್ರಗೌಡ:–** ಏನೇ ಇದ್ದಾಗ್ಯೂ ಸರ್ವೋಚ್ಚ ನ್ಯಾಯಾಲಯವು ಅಥವಾ ಯಾವುದೇ ನ್ಯಾಯಾಲಯವು ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ. ಸಂಸತ್ತು ಕಾನೂನಿನ ಮುಖಾಂತರ ಮಾಡಬಹುದು. ಸಂಸತ್ತು ಕಾನೂನಿನ ಮುಖಾಂತರ ಮಾಡಿದರೆ ಮಾತ್ರ ಇರುತ್ತದೆ ಹೊರತು ಇಲ್ಲದಿದ್ದರೆ ಇಲ್ಲ.

**ಸಭಾಪತಿಯವರು:–** ತಮ್ಮ ಅಭಿಪ್ರಾಯ ಆಯಿತು. ಶ್ರೀ ಶರವಣ ರವರು ಮಾತನಾಡಲೇ ಇಲ್ಲ ಎಷ್ಟು ಹೊತ್ತು ಮಾತನಾಡುತ್ತೀರಾ ಶರವಣರವರೇ?

**ಶ್ರೀ ಶರವಣ:–** ಐದು ನಿಮಿಷ

**ಸಭಾಪತಿಯವರು:–** ಐದು ನಿಮಿಷ. ಗಡಿಯಾರ ನೋಡಿಕೊಂಡು ನೀವೇ ಮಾತನಾಡಿ. ನಿಮ್ಮೆದುರಿಗೆ ಇದೆ ಗಡಿಯಾರ.

**ಶ್ರೀ ವಿ.ಎಸ್.ಉಗ್ರಪ್ಪ:–** ಒಂದು ಸೆನ್‌ಟೆನ್ಸ್

**ಸಭಾಪತಿಯವರು:–** ಅವರದು ಮುಗಿಯಲಿ ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ನೀವು ನೀವೇ ಚರ್ಚೆ ಶುರು ಮಾಡಿದರೆ, ಅದು ಎಲ್ಲಿಗೆ ಹೋಗುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ರಾಮಚಂದ್ರ ಗೌಡರೆ, ಆ ಅನುಚ್ಛೇದ 260 ರಡಿ Interstate Water Dispute Act ನ್ನು ಸಂಸತ್ತು ಈಗಾಗಲೇ ಕಾನೂನು ಮಾಡಿದೆ.

**ಶ್ರೀ ಟಿ.ಎ.ಶರವಣ (ವಿಧಾನಸಭೆ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಇಡೀ ಒಂದು ತಿಂಗಳಿನಿಂದ ನಮ್ಮ ರಾಜ್ಯದಲ್ಲಿ ಜಲಾಶಯ ವಿಚಾರವಾಗಿ, ಕಾವೇರಿ ವಿಚಾರವಾಗಿ ಸಾಕಷ್ಟು ತೊಂದರೆಗಳನ್ನು ನಾವು ಅನುಭವಿಸುತ್ತಿದ್ದೇವೆ. ಒಂದು ಕಡೆ ಕಾನೂನು ಸುವ್ಯವಸ್ಥೆ, ಇನ್ನೊಂದು ಕಡೆ ರೈತರ ಸಂಕಷ್ಟ ಮೂರನೇಯದಾಗಿ ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಅಭಾವ. ಇದರಿಂದ ಇಡೀ ರಾಜ್ಯದಲ್ಲಿ ಕಾವೇರಿ ಭಾಗದ ಎರಡು ಕೋಟಿ ಮೂವತ್ತು ಲಕ್ಷದ ಜನ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಇವತ್ತು ಬ್ರಿಟೀಷರ ಕಾಲದಿಂದ ಬಂದಿರತಕ್ಕಂತಹ ನೀರಿನ ಸಮಸ್ಯೆಗೆ ಈಗಲೂ ಕೂಡ ನಮಗೆ ಪರಿಹಾರ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ವಿಶೇಷ ಅಧಿವೇಶನವನ್ನು ಕರೆದು ಒಂದು ಐತಿಹಾಸಿಕ ಮತ್ತು ಎಲ್ಲಾ ಪಕ್ಷದ ಐಕ್ಯತೆಯನ್ನು ತಂದಿರುವುದರಲ್ಲಿ ಯಶಸ್ವಿಯಾಗಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಇದಕ್ಕೆ ಕಾರಣಕರ್ತರಾದ ಈ ದೇಶದ ಪಿತಾಮಹ ಮಹಾತ್ಮಾ ಗಾಂಧೀಜಿಯವರು. ಆದರೆ, ಈ ರಾಜ್ಯದ ಕಾವೇರಿಯ ಪಿತಾಮಹ ಸನ್ಮಾನ್ಯ ದೇವೇಗೌಡರು ಎಂದು ಹೇಳಲಿಕ್ಕೆ ಬಯಸುತ್ತೇನೆ. ಅವರನ್ನು ಮೊಟ್ಟ ಮೊದಲನೆಯದಾಗಿ ನಾವು ಅಭಿನಂದನೆ ಮಾಡಲೇ ಬೇಕಾಗುತ್ತದೆ. ಏಕೆಂದರೆ, 84 ವರ್ಷದಲ್ಲಿಯೂ ಕೂಡ ಅವರು ಉಪವಾಸ ಸತ್ಯಾಗ್ರಹ ಮಾಡುತ್ತೇನೆಂದು ಹೇಳಿ ಒಂದು ಕಡೆ ನ್ಯಾಯಾಂಗ, ಇನ್ನೊಂದು ಕಡೆ ಕಾರ್ಯಾಂಗ, ಇನ್ನೊಂದು ಕಡೆ ಶಾಸಕಾಂಗ ಇವರುಗಳ ಮಧ್ಯದಲ್ಲೆ ಕುಳಿತುಕೊಂಡು ಉಪವಾಸ ಸತ್ಯಾಗ್ರಹ ಮಾಡಿ, ಮುಂದೆ ಮಾಧ್ಯಮದವರನ್ನು ಕೂಡ ಇಟ್ಟುಕೊಂಡು, ಅವರ ಹೊರಾಟ ಏನು ಇತ್ತು ನಾವು ಎಷ್ಟೆ ಮನವೊಲಿಸಿದರೂ ಕೂಡ ಕೇಳದೇ, ಅವರು ಉಪವಾಸ ಸತ್ಯಾಗ್ರಹ ಮಾಡಿ ಈ ದೇಶದ ತಂದೆಯಂತೆ ಇರುವ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ರವರು ಒಂದು ಕಣ್ಣು ತೆರೆಸುವಂತಹ ಕೆಲಸವನ್ನು ಇವತ್ತು ಮಾಡಿದ್ದಾರೆ. ಅಟಾರ್ನಿ ಜನರಲ್ ರವರು ಏನು ಇವತ್ತು ಅಫಿಡವಿಟ್‌ನ್ನು ಸಲ್ಲಿಸಿದ್ದಾರೆ ಅದಕ್ಕೋಸ್ಕರ ಅವರು ಮೌನಕ್ಕೆ ಶರಣಾಗಿದ್ದರೂ ಕೂಡ ಬಿ.ಜೆ.ಪಿ.ಯ ಸಂಸದರು ಮತ್ತು ಶಾಸಕರು ಇರಬಹುದು ಹಾಗೂ ಈ ದೇಶದ ಪ್ರಧಾನ ಮಂತ್ರಿಗಳು ತಡವಾದರೂ ಕೂಡ ಇವತ್ತು ನಮ್ಮ ರಾಜ್ಯದ ಉಳಿವಿಗಾಗಿ ಕಣ್ಣು ತೆರೆಯುವಂತಹ ಕೆಲಸವನ್ನು ಮಾಡಿದ್ದಾರೆ. ಅದಕ್ಕೋಸ್ಕರ ನಾನು ಅಭಿನಂದನೆಗಳನ್ನು ಸಲ್ಲಿಸಲು ಇಚ್ಛೆಪಡುತ್ತೇನೆ. ಒಂದು ಕಡೆ 2ನೇ ತಾರೀಖಿನಂದು ಸರ್ವೋಚ್ಚ ನ್ಯಾಯಾಲಯವು ನೀರು ಬಿಡಬೇಕೆಂದು ಹೇಳುತ್ತದೆ. 3ನೇ ತಾರೀಖಿನಂದು ನೀರು ಬಿಡುತ್ತೇವೆ. 5ನೇ ತಾರೀಖಿನಂದು ಎರಡನೇ ಆದೇಶ ಬರುತ್ತದೆ. 6ನೇ ತಾರೀಖಿನಂದು ಮತ್ತೆ ನೀರನ್ನು ಬಿಡುತ್ತೇವೆ. ಮೊದಲನೆಯದಾಗಿ ಒಂದು ಕಣ್ಣನ್ನು ಕೊಡು ಎಂದು ಹೇಳುತ್ತದೆ ನಾವು ಕೊಡುತ್ತೇವೆ. ಎರಡನೇದಾಗಿ ಇನ್ನೊಂದು ಕಣ್ಣನ್ನು ಕೊಡು ಎಂದು ಹೇಳುತ್ತದೆ ಅದನ್ನು ಕೊಡುತ್ತೇವೆ. ಮತ್ತೆ ನಮ್ಮ ಹೃದಯವನ್ನು ಕೊಡು ಎಂದು ಕೇಳಿದರೆ, ಜನರು ಹೇಗೆ ಬದುಕಬೇಕಾಗುತ್ತದೆ? ಹೃದಯ ಇಲ್ಲವೆಂದರೆ, ಬದುಕಲು ಸಾಧ್ಯವೇ? ಸಾಧಕ–ಬಾಧಕಗಳ ಬಗ್ಗೆ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾನೂ ಕೂಡ ಸನ್ಮಾನ್ಯ ಶ್ರೀ ಹೆಚ್.ಡಿ.ದೇವೆಗೌಡರ ಜೊತೆಯಲ್ಲಿ ನಾಲ್ಕು ಜಲಾಶಯಗಳನ್ನು ಹೆಲಿಕ್ಯಾಪ್ಟರ್‌ನಲ್ಲಿ ಹೋಗಿ ಸಮೀಕ್ಷೆ ಮಾಡಿದ್ದೇವೆ, ಕೆ.ಆರ್.ಎಸ್. ಇರಬಹುದು, ಕಬಿನಿ ಇರಬಹುದು, ಹಾರಂಗಿ ಇರಬಹುದು ಮತ್ತು

ಹೇಮಾವತಿ ಇರಬಹುದು ಎಲ್ಲವನ್ನೂ ಕೂಡ ನೋಡಿ ಬಂದಿದ್ದೇವೆ. ಆದರೆ, ಅಲ್ಲಿರತಕ್ಕಂತ ಸತ್ಯಾಂಶ ಬಹಳ ನೋವಿನ ಸಂಗತಿ. ಇವತ್ತು ಏನು ಸರ್ಕಾರ ಒಂದು ದೀರ್ಘವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ ಯಾವುದೇ ಕಾರಣಕ್ಕೂ ಕೂಡ ಒಂದು ಹನಿ ನೀರನ್ನು ಕೂಡ ತಮಿಳುನಾಡಿಗೆ ಬಿಡಬಾರದು. ಅದರಲ್ಲಿ ಇವತ್ತು ಏನು ಈ ಎರಡು ಸದನಗಳಲ್ಲಿ ತೀರ್ಮಾನ ತೆಗೆದುಕೊಂಡಿದ್ದೀವಿ ಇದರ ಒಂದು ಪಾವಿತ್ರತ್ಯೆಯನ್ನು ಕಾಪಾಡುವಂತಹ ಕೆಲಸವನ್ನು ಸಭಾನಾಯಕರು ಮಾಡಬೇಕಾಗುತ್ತದೆ. ಇವತ್ತು ಏನು ಒಂದು ನಿರ್ಣಯವನ್ನು ಕೊಟ್ಟಿದ್ದಾರೆ. ಅದರಲ್ಲಿ ಸೂಕ್ತ ಎಂದು ಹೇಳಿದ್ದೀರಿ ರಾಜ್ಯದ ಹಿತದೃಷ್ಟಿಯಿಂದ ಎಂದು ಹೇಳಿದ್ದೀರಿ. ನಿಜವಾಗಲೂ ಕೂಡ ಇದರ ಮರ್ಮ ಏನೆಂದು ನನಗೆ ಗೊತ್ತಾಗುತ್ತಿಲ್ಲ. ಇದನ್ನು ತಾವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸೂಕ್ತ ನಿರ್ಣಯ ಎಂದರೆ ಏನು? ದಯಮಾಡಿ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಇವತ್ತು ಕಾವೇರಿ ವಿಚಾರವಾಗಿ ನಿಮಗೆ ಒಂದು ಒಳ್ಳೆಯ ಅವಕಾಶವಿದೆ ಇದನ್ನು ಸರಿಯಾದ ರೀತಿಯಲ್ಲಿ ನ್ಯಾಯಾಂಗದ ಹೋರಾಟ ಒಂದು ಕಡೆ, ಇನ್ನೊಂದು ಕಡೆ ಶಾಸಕಾಂಗ, ಇಲ್ಲಿ ನಾವು ಏನು ತೀರ್ಮಾನ ತೆಗೆದುಕೊಳ್ಳುತ್ತೇವೆ ಅದನ್ನು ಯಾವುದಕ್ಕೂ ಬಗ್ಗದೇ ನಿಭಾಯಿಸುವಂತಹ ಕೆಲಸ ಮಾಡಬೇಕು ತಾವು ಎಲ್ಲಾ ನಿರ್ಣಯ ತೆಗೆದುಕೊಂಡು ನಾವು ನಿಮ್ಮ ಜೊತೆ ಯಾವಾಗಲೂ ಇರುತ್ತೇವೆ. ಈ ಒಂದು ಕಾವೇರಿ ಹೋರಾಟದಲ್ಲಿ ನಮ್ಮ ಶ್ರೀ ಹೆಚ್.ಡಿ.ದೇವೇಗೌಡರ ಸೂಚನೆಗೆ ಮೇರೆಗೆ ಅವರ ಮಾರ್ಗದರ್ಶನದ ಮೇರೆಗೆ ಇವತ್ತು ನೀವುಗಳ ಸಹಕಾರ ಕೊಡುತ್ತೀದ್ದಿರಿ. ಇವತ್ತು ಅವರ ಅಪೇಕ್ಷೆ ಕೂಡ ಇದೆ. ಶ್ರೀ ಫಾಲಿ ನಾರಿಮನ್ ಬಗ್ಗೆ ಎಲ್ಲರೂ ಚರ್ಚೆ ಮಾಡುತ್ತಿದ್ದರು. ದಯಮಾಡಿ ಶ್ರೀ ಫಾಲಿ ನಾರಿಮನ್‌ರವರ ಬದಲಾವಣೆಯಿಂದ ನಮಗೆ ಯಾವುದೇ ನ್ಯಾಯ ಸಿಗುವುದಿಲ್ಲ ಎನ್ನುವುದನ್ನು ನಾನು ಖಡಾ ಖಂಡಿತವಾಗಿ ಹೇಳಲಿಕ್ಕೆ ಬಯಸುತ್ತೇನೆ. ಶ್ರೀ ಫಾಲಿ ನಾರಿಮನ್ ಇರಬಹುದು, ಶ್ರೀ ಮೋಹನ್ ಖಟಾರಿಯಾ ರವರ ತಂಡ ಎನು ಇದೆ ಅದು ಹಾಗೇಯೆ ಕೆಲಸ ಮಾಡಬೇಕಾಗುತ್ತದೆ ಇಲ್ಲ ಎಂದರೆ ನಮಗೆ ಯಾವುದೇ ರೀತಿಯ ನ್ಯಾಯ ಸಿಗುವುದಿಲ್ಲ ಬದಲಾವಣೆ ಮಾಡುವುದರ ಪರಿಣಾಮ ನಾವು ಅನುಭವಿಸಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತಿನ ನಿರ್ಣಯದಲ್ಲಿ ಸೂಕ್ತ ಬದಲಾವಣೆ ತರಬೇಕಾಗುತ್ತದೆ ಅದರ ಬದಲಾಗಿ 7 ಟಿ.ಎಂ.ಸಿ. ನೀರನ್ನು ನಮ್ಮ ರಾಜ್ಯದ ರೈತರಿಗೆ ನಾವು ಬಿಡುತ್ತೇವೆ ಎಂದು ಹೇಳಿ ತಾವು ಬದಲಾವಣೆ ಮಾಡಬೇಕೆಂದು ಹೇಳಿ ಈ ಸರ್ಕಾರವನ್ನು, ಸಭಾನಾಯಕರನ್ನು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು. ಇನ್ನು ಯಾರಾದರೂ ಮಾತನಾಡುತ್ತೀರಾ? ಸಭಾನಾಯಕರು ಬೇಡ ಎಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಬೆಳಿಗ್ಗೆ ನಾನು ಮಾತನಾಡುವಂತಹ ಸಂದರ್ಭದಲ್ಲಿ ನಿರ್ಣಯವನ್ನು ಕೊಟ್ಟಿದ್ದರೆ ನಾನು ಈಗ ನಿಲ್ಲುವಂತಹ ಸಂದರ್ಭ ಬರುತ್ತಿರಲಿಲ್ಲ. ಈಗ ನಿರ್ಣಯನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಇವತ್ತು ಈ ವಿಚಾರವಾಗಿ ಇಡೀ ಕರ್ನಾಟಕ ರಾಜ್ಯ ಈ ಸರ್ಕಾರದ ಜೊತೆಯಲ್ಲಿ ಇದೆ. ಇಂತಹ ಸಂದರ್ಭದಲ್ಲಿ ಇವತ್ತಿನತನಕವೂ ಸಹ ಒಂದು ರೂಪಕ್ಕೆ ಬಂದು, ನಾವು ನೀರು ಬಿಡುವುದಿಲ್ಲ, ನೀರು ಬಿಡುವುದಿಲ್ಲ, ನೀರು ಬಿಡುವುದಿಲ್ಲವೆಂದು ನಿರ್ಣಯ ಮಾಡಿಕೊಂಡು, ಮೊನ್ನೆ ಕೂಡ ಕುಡಿಯುವ ನೀರಿಗೋಸ್ಕರ ನಾವು ಅನುಕೂಲ ಮಾಡಿಕೊಳ್ಳಬೇಕೆಂದು ನಾವು ನಿರ್ಣಯವನ್ನು ಮಾಡಿಕೊಂಡಿದ್ದೇವೆ. ಬೆಂಗಳೂರು ಮಹಾನಗರವೂ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿನ ಪಟ್ಟಣಗಳು ಹಾಗೂ ಹಳ್ಳಿಗಳ ಕುಡಿಯುವ ನೀರಿನ ಅವಶ್ಯಕತೆಗಳಿಗಾಗಿ ಮಾತ್ರ ಬಳಸಿಕೊಳ್ಳತಕ್ಕದ್ದೆಂದು ದಿನಾಂಕ: 23–09–2016 ರಂದು ಈ ಸದನವು ನಿರ್ಣಯಿಸಿತ್ತು. ಅದು ಸರಿ ಇದೆ.

ಇನ್ನು ಕೊನೆಯದಾಗಿ, ಸರ್ಕಾರವು ಕುಡಿಯುವ ನೀರಿನ ಅವಶ್ಯಕತೆಗೆ ನೀರಿನ ಲಭ್ಯತೆಯನ್ನು ಖಚಿತಪಡಿಸಿಕೊಂಡು ರೈತರ ಬೆಳೆಗಳಿಗೆ ನೀರು ಬಿಡುಗಡೆಗೊಳಿಸುವ ಬಗ್ಗೆ ಈ ಸದನವು ನಿರ್ಣಯಿಸುತ್ತದೆ. ಕುಡಿಯುವ ನೀರಿನ ಜೊತೆಗೆ ರೈತರಿಗೆ ಬೆಳೆಗೇನೋ ನೀರನ್ನು ಬಿಡುತ್ತೇವೆ ಎನ್ನುವಂತಹ ಅಂಶವನ್ನು ಮಾತ್ರ ವಿಷಯವನ್ನು ಇಲ್ಲಿಗೆ ತೆಗೆದುಕೊಂಡು ಬಂದು ಈ ಸದನ ನಿರ್ಣಯಿಸುತ್ತದೆ. ಆದ್ದರಿಂದ, ಈ ಕೆಲಸವನ್ನು ಮಾತ್ರ ದಯವಿಟ್ಟು ಮಾಡಿ. ಇಲ್ಲಿ ನೀವು ಏನು ಸೇರಿಸಿರುವುದನ್ನು drop ಮಾಡಬೇಕು. ಏನೆಂದರೆ, ಹಾಗೂ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದು ಹೇಳಲಾಗಿದೆ.

ಮಾನ್ಯ ಸಭಾಪತಿಯವರೆ, ಇದು ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದರೆ ಅರ್ಥ ತಮಿಳುನಾಡಿಗೆ ನೀರು ಬಿಡುವಂತಹ ಒಂದು ಯೋಚನೆ ಸರ್ಕಾರದ ಮುಂದೆ ಇದೆ. ಇದು ಬರುತ್ತದೆ. ನಿಮ್ಮ ಜೊತೆಯಲ್ಲಿ ಇಡೀ ಕರ್ನಾಟಕ ರಾಜ್ಯ ಇವತ್ತು ಶಾಂತಿಯಿಂದ ಇದೆ, ಈ ಒಂದು ನಿರ್ಣಯವನ್ನು ವಿಧಾನ ಪರಿಷತ್ತಿನಲ್ಲಿಯೂ ನೀವು ಪಾಸ್ ಮಾಡಿಕೊಂಡು ನಮ್ಮ ಒಪ್ಪಿಗೆ ಇದೆ ಎಂದು ತಿಳಿದುಕೊಂಡು, ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು ಎನ್ನುವಂತಹ ಒಂದು ನಿರ್ಣಯವನ್ನು ಪಾಸ್ ಮಾಡಿಕೊಂಡು ನೀರು ಬಿಟ್ಟರೆ ನಾನು ಒಂದು ಅಂಶವನ್ನು ಹೇಳುತ್ತೇನೆ, ನಾವು ಧರಣಿ ಮಾಡುವುದಿಲ್ಲ, ನಾವು ಸಭಾತ್ಯಾಗ ಮಾಡುವುದಿಲ್ಲ, ಈ ಸರ್ಕಾರದ ವಿರುದ್ಧ ಇಡೀ ರಾಜ್ಯ ಮತ್ತೆ ಎದ್ದು ಕುಳಿತುಕೊಳ್ಳಬೇಕಾಗುತ್ತದೆ ಎನ್ನುವಂತಹ ಎಚ್ಚರಿಕೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಯಾವುದೇ ಕಾರಣಕ್ಕೂ ಕೂಡ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು ಎನ್ನುವಂತಹ ಅಂಶ ಏನಿದೆ, ಇದನ್ನು ಕೈಬಿಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:–** ಈಗ ನಿರ್ಣಯದ ಮಂಡನೆ.

## ನಿರ್ಣಯ

ವಿಷಯ:– ಕಾವೇರಿ ನದಿ ನೀರಿನ ಸಮಸ್ಯೆ ಬಗ್ಗೆ.

– – –

**ಡಾ॥ ಜಿ. ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಬಹಳಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರವರ ಅನಿಸಿಕೆಗಳನ್ನು ಈ ರಾಜ್ಯದ ಅತ್ಯಂತ ಜ್ವಲಂತ ಸಮಸ್ಯೆಯಾಗಿರುವಂತಹ ಈ ಕಾವೇರಿ ಕೊಳ್ಳದ, ಕಾವೇರಿ ನದಿಯ ವಿವಾದದ ಬಗ್ಗೆ ತುಂಬಾ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಮತ್ತೆ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಇದು ಬಹಳ ಸೂಕ್ಷ್ಮವಾದ ವಿಚಾರ ಎನ್ನುವುದನ್ನು ಮಾತ್ರ ಸಭೆಯ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇದು ನ್ಯಾಯಾಲಯದಲ್ಲಿದೆ. ನಾವು ಏನೇ ಮಾತನಾಡಿದರೂ, ಏನೇ ತೀರ್ಮಾನ ಮಾಡಿದರೂ ನಮಗೆ ಆಗಿರತಕ್ಕಂತಹ ಅನ್ಯಾಯವನ್ನು ಸರಿಪಡಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದಲೇ ಮಾತನಾಡಬೇಕಾಗುತ್ತದೆ. ಹಾಗಾಗಿ, ಮಾನ್ಯ ಗೌರವಾನ್ವಿತ ಸದಸ್ಯರುಗಳು ಬಹಳ ಒಳ್ಳೆಯ observations ಮಾಡಿದ್ದಾರೆ. ನಾನು ಇಲ್ಲವೆಂದು ಹೇಳುವುದಿಲ್ಲ. ಅದರ ಜೊತೆಗೆ ಸಲಹೆಗಳನ್ನೂ ಸಹ ಕೊಟ್ಟಿದ್ದಾರೆ. ನಮಗೆ ಆಗಿರುವಂತಹ ಕಷ್ಟಗಳನ್ನೂ ಕೂಡ ಗಮನಕ್ಕೆ ತಂದಿದ್ದಾರೆ. ಸರ್ಕಾರ ಇದೆಲ್ಲವೂ ಸಹ ಗಮನಿಸಿದೆ. ಇದು ಸರ್ಕಾರಕ್ಕೆ ಗೊತ್ತಿಲ್ಲವೆಂದು ಅಲ್ಲ, ರಾಜ್ಯದ ಜನತೆಗೆ ಗೊತ್ತಿಲ್ಲವೆಂದು ಅಲ್ಲ ಅಥವಾ ಕಾವೇರಿ ಕೊಳ್ಳದ ಜನರಿಗೆ ಗೊತ್ತಿಲ್ಲವೆಂದು ಅಲ್ಲ. ಆದರೆ, ನಮಗೆ ಎಲ್ಲೋ ಒಂದು ಕಡೆ ಮುಂದೆ ನ್ಯಾಯ

ಸಿಗಬಹುದು ಎನ್ನುವಂತಹ ಆಸೆ ನಮಗೆ ಇದೆ. ಅಕ್ಟೋಬರ್ 18 ರಂದು ಬರತಕ್ಕಂತಹ ತೀರ್ಮಾನ ನಮಗೆ ಎಲ್ಲೋ ಒಂದು ಕಡೆ ಶಾಶ್ವತವಾದ ಪರಿಹಾರ ಸಿಗಬಹುದು ಎನ್ನುವಂತಹ ಆಶಾವಾದಿಗಳಾಗಿ ನಾವು ಇದ್ದೇವೆ. ಅದಕ್ಕಾಗಿ ಇಷ್ಟೊಂದು ಸರ್ಕಸ್. ಇಷ್ಟೊಂದು ಬಾರಿ ಸರ್ವ ಪಕ್ಷಗಳ ಸಭೆ. ಇಷ್ಟೆಲ್ಲಾ ನಮಗೆ ಸತತವಾಗಿ 6 ಆದೇಶಗಳು ನ್ಯಾಯಾಲಯದಿಂದ ಒಂದೇ ತಿಂಗಳಿನಲ್ಲಿ ಬಂದರೂ ಕೂಡ ನಾವು ಅದನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕೋ ಅಷ್ಟು ಗಂಭೀರವಾಗಿ ಸರ್ಕಾರ ತೆಗೆದುಕೊಂಡಿದೆ. ಮಾನ್ಯ ಶ್ರೀ ಸಿದ್ದರಾಮಯ್ಯನವರು ನನ್ನ ಸರ್ಕಾರ ಹೋದರೂ ಚಿಂತೆಯಿಲ್ಲ, ನಾನು ರಾಜ್ಯದ ಜನತೆಗೆ ನ್ಯಾಯವನ್ನು ಕೊಡಬೇಕೆನ್ನುವ ಹಿನ್ನೆಲೆಯಲ್ಲಿ ಕೆಲವು ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ತಮ್ಮೆಲ್ಲರ ಸಹಕಾರವನ್ನು ಬಯಸಿದ್ದಾರೆ. ಸರ್ಕಾರ ತಮ್ಮೆಲ್ಲರ ಸಹಕಾರವನ್ನು ಏತಕ್ಕೆ ಪದೇ ಪದೇ ಸರ್ವ ಪಕ್ಷಗಳ ಸಭೆ ಕರೆದು ತಮ್ಮ ಸಹಕಾರ ಬೇಕೆಂದು ಕೇಳುತ್ತಿರುವುದು, ಎಲ್ಲೋ ಒಂದು ಕಡೆ ರಾಜ್ಯದ ಜನತೆಗೆ ಒಂದು ಶಾಶ್ವತವಾದ ಪರಿಹಾರವಾಗಲಿ, ಎನ್ನುವ ಉದ್ದೇಶದಿಂದ ಮಾಡಿದ್ದಾರೆ. ಅದಕ್ಕಾಗಿ ನಾನು ತಮಗೆಲ್ಲರಿಗೂ ಅಭಿನಂದನೆಯನ್ನು ಈ ಸಂದರ್ಭದಲ್ಲಿ ಸಲ್ಲಿಸಲಿಕ್ಕೆ ಬಯಸುತ್ತೇನೆ. ನಾನು ವಿವರಕ್ಕೆ ಹೋಗುವುದಿಲ್ಲ. ಏಕೆಂದರೆ, ಈಗ ಚರ್ಚೆ ಮಾಡಲಿಕ್ಕೆ ಹೋದರೆ, ಮತ್ತೆ ಜಡ್ಜ್‌ಗಳ ಬಗ್ಗೆ ಆಗಿರಬಹುದು, ಕೊಟ್ಟಿರತಕ್ಕಂತಹ ತೀರ್ಪಿನ ಬಗ್ಗೆ ಆಗಿರಬಹುದು, ಈ ಬಗ್ಗೆ ಅಂಕಿ-ಅಂಶಗಳು ಎಲ್ಲರಿಗೂ ಗೊತ್ತಿದೆ. ಟ್ರಿಬ್ಯೂನಲ್ ಏನು ಆದೇಶ ಬಂದಿದೆ, ಏನು ಮಧ್ಯಂತರ ಆದೇಶ ಬಂತು, ಟ್ರಿಬ್ಯೂನಲ್‌ನಲ್ಲಿ ಅಂತಿಮವಾಗಿ ಏನು ಆದೇಶ ಬಂತು, ಇವೆಲ್ಲವುಗಳ ಬಗ್ಗೆ ನಮಗೆ ಮಾಹಿತಿ ಇದೆ. ಅದನ್ನು ಯಾವರೀತಿಯಲ್ಲಿ ನ್ಯಾಯಾಲಯಕ್ಕೆ ಒಪ್ಪಿಸಬೇಕಾಗಿತ್ತು, ಅದನ್ನು ಕೂಡ ಒಪ್ಪಿಸಿದ್ದೇವೆ. ಆದರೆ, ದುರದೃಷ್ಟವಶಾತ್ ಈ ರೀತಿಯ ತೀರ್ಪುಗಳು ಬಂದಿವೆ. ಅದಕ್ಕಾಗಿ ನಾನು ಈ ವಿಷಯದಲ್ಲಿ ಹೆಚ್ಚು ಚರ್ಚೆಗೆ ಹೋಗುವುದಿಲ್ಲ. ಬೆಳಿಗ್ಗೆ ನಾನು ಕೆಲವು ವಿಷಯಗಳನ್ನು ಬಹಳ ಸೂಕ್ಷ್ಮವಾಗಿ ಸದನದ ಗಮನಕ್ಕೆ, ತಮ್ಮೆಲ್ಲರ ಗಮನಕ್ಕೆ ತಂದಿದ್ದೇನೆ. ಸರ್ಕಾರದ ನಿರ್ಧಾರವನ್ನು ಕೂಡ ತಂದಿದ್ದೇನೆ. ಅದಕ್ಕಾಗಿ ವಿರೋಧ ಪಕ್ಷದ ನಾಯಕರನ್ನು ಸೇರಿಸಿಕೊಂಡು ತಮ್ಮೆಲ್ಲಾ ಗೌರವಾನ್ವಿತ ಸದಸ್ಯರುಗಳನ್ನು ಕೇಳಿಕೊಳ್ಳುವುದೇನೆಂದರೆ ನಾವು ಒಟ್ಟಾರೆ ತೀರ್ಮಾನವನ್ನು ತೆಗೆದುಕೊಳ್ಳೋಣ. ಇದರಲ್ಲಿ ಯಾವುದೂ ಮುಚ್ಚು-ಮರೆಯಿಲ್ಲ. ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, it is in the interest of the State. ಇದು ಯಾರ interest? ಇದು ನಮ್ಮ interest ನಿಂದ ಕೇಳುತ್ತಿದ್ದೇವೆಯೇ? ಶ್ರೀಯುತ ಸಿದ್ದರಾಮಯ್ಯನವರ interest ನಿಂದ ಕೇಳುತ್ತಿದ್ದೇವೆಯೇ? ಅಥವಾ ಕಾಂಗ್ರೆಸ್‌ನ interest ನಿಂದ ಕೇಳುತ್ತಿದ್ದೇವೆಯೇ? It is in the interest of the State. ತಾವು ಅದಕ್ಕೆ ಸಹಮತಿಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೆ, ನಾನು ಈ ನಿರ್ಣಯವನ್ನು ಸದನದ ಮುಂದೆ ಮಂಡಿಸುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲಾಯಿತು.</u>

**ಸಭಾಪತಿಯವರು:-** ಈಗಾಗಲೇ ಮಂಡಿಸಿರುವ ನಿರ್ಣಯವನ್ನು ನಾನು ಮತ್ತೊಮ್ಮೆ ಓದುವುದಕ್ಕೆ ಹೋಗುವುದಿಲ್ಲ.

**ಡಾ॥ ಜಿ.ಪರಮೇಶ್ವರ್(ಸಭಾನಾಯಕರು):-** ವಿರೋಧ ಪಕ್ಷದ ನಾಯಕರು ಇದನ್ನು ಅನುಮೋದನೆ ಮಾಡಬೇಕು.

**ಸಭಾಪತಿಯವರು:-** ಈಗಾಗಲೇ ನಿರ್ಣಯವನ್ನು ಮಂಡಿಸಿದಾಗ ಮಾತನಾಡಿದ್ದರೆ ಸಾಕು.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ನೀವು ನಿರ್ಣಯ ಮಂಡಿಸಿರುವುದರಿಂದ ಅದರಲ್ಲಿ ಒಂದು ವಾಕ್ಯವನ್ನು ಹೇಳಿದ್ದು, ರಾಜ್ಯದ ಹಿತದೃಷ್ಟಿಯಿಂದ ಮಾಡುತ್ತಿದ್ದೇವೆನ್ನುವುದನ್ನು ವಾಪಸ್ಸು ತೆಗೆದುಕೊಂಡರೆ ನಾವು ಆ ನಿರ್ಣಯಕ್ಕೆ ಬೆಂಬಲ ಕೊಡುತ್ತೇವೆ.

ಇಲ್ಲವೆಂದರೆ ಈ ನಿರ್ಣಯಕ್ಕೆ ಬೆಂಬಲ ಕೊಡುವುದಿಲ್ಲ. ಇದು ಸರ್ಕಾರದ ನಿರ್ಣಯ. ವಿರೋಧ ಪಕ್ಷದ ನಿರ್ಣಯವಲ್ಲ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮೊದಲನೆಯದಾಗಿ, ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ. ಎರಡನೆಯದಾಗಿ, ಕೊನೆಯಲ್ಲಿ ಹೇಳಿರುವ ಪ್ರಕಾರ ಇವತ್ತು ಅಲ್ಲ, ನಾಳೆ ನೀವು ನೀರು ಬಿಡುತ್ತೀರಿ ಎನ್ನುವ ಅನುಮಾನ ಎಲ್ಲರಿಗೂ ಇದೆ. ಅದಕ್ಕೆ ಹೆಚ್ಚು ಕಡಿಮೆ ಆದಲ್ಲಿ ನೀವೇ ಅದಕ್ಕೆ ಜವಾಬ್ದಾರರು. ನೀವೇ ಅನುಭವಿಸುತ್ತೀರಿ. ಆದ್ದರಿಂದ, ನೀವು ಒಳ್ಳೆಯ ತೀರ್ಮಾನ ತೆಗೆದುಕೊಳ್ಳಿ. ಇದುವರೆವಿಗೂ ನೀವು ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ಅದರಲ್ಲಿ ನಮಗೇನೂ ಸಂದೇಹ ಇಲ್ಲ. ಇದುವರೆವಿಗೂ ನೀವು ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ನಂಬಿಕೆಯನ್ನು ಉಳಿಸಿಕೊಂಡಿದ್ದೀರಿ. ಅದರಲ್ಲಿ ಎರಡನೆ ಮಾತಿಲ್ಲ. ಆದರೆ, ಇದರಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ನೀವೇ ಅನುಭವಿಸಬೇಕಾಗುತ್ತದೆ. ಈ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ.

**ಸಭಾಪತಿಯವರು:–** ಈ ನಿರ್ಣಯವನ್ನು ಮಂಡಿಸಲಾಗಿದ್ದು, ಅನುಮೋದಿಸಲಾಗಿದೆ. ಮತ್ತೊಮ್ಮೆ ಈ ನಿರ್ಣಯವನ್ನು ಓದುವುದು ಪರಿಪಾಠವಿಲ್ಲ. ಕಳೆದ ಬಾರಿ ನಿರ್ಣಯ ಬಹಳ ಸೂಕ್ಷ್ಮವಿದ್ದ ಕಾರಣಕ್ಕಾಗಿ ನಾನು ಅದನ್ನು ಓದಿದ್ದೆ. ಈ ನಿರ್ಣಯವನ್ನು ಮಂಡಿಸಲಾಗಿದೆ. ಈ ನಿರ್ಣಯವನ್ನು ಸದನದ ಮತಕ್ಕೆ ಹಾಕುತ್ತೇನೆ.

**(ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಯಿತು)**

**ಸಭಾಪತಿಯವರು:–** ಈಗ ಸದನವನ್ನು **"ರಾಷ್ಟ್ರಗೀತೆಯೊಂದಿಗೆ"** ಅನಿರ್ಧಿಷ್ಟ ಕಾಲ ಮುಂದೂಡುತ್ತಿದ್ದೇನೆ.

**(ಸದನವು ರಾತ್ರಿ 7 ಗಂಟೆ 20 ನಿಮಿಷಕ್ಕೆ ಅನಿಧಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)**